ಗುರುವಾರ, ಅಕ್ಟೋಬರ್ 24, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 295 | ಪುಟ 18

● www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ಪ್ರಾಚೀನ ಮಹಾಜನಪದಗಳ ಬಗ್ಗೆ ನಿಮಗೆ ತಿಳಿದಿದೆಯೇ?

ಆಳ-ಅಗಲ
ಭಾರತ-ಚೀನಾ ಒಪ್ಪಂದ ಗಡಿಯಲ್ಲಿ ನೆಲಸುವುದೇ ಶಾಂತಿ?

ಛೋಟಾ ರಾಜನ್‌ಗೆ ವಿಧಿಸಿದ್ದ ಜೀವಾವಧಿ ಶಿಕ್ಷೆ ಅಮಾನತು 11

ಇಸ್ರೇಲ್ ದಾಳಿ ಖಂಡಿಸಿದ ಬ್ರಿಕ್ಸ್ 10

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
80,081 ▼	24,435 ▼	₹82,500 (ಬೆಂಗಳೂರು) ▲	₹1.05 ಲಕ್ಷ (ಬೆಂಗಳೂರು) ▲	84.07

ಬಿಜೆಪಿ ತೊರೆದು 'ಕೈ' ಹಿಡಿದ ಯೋಗೇಶ್ವರ್ ● ಎಚ್‌ಡಿಕೆ–ಡಿಕೆಶಿ ಜಿದ್ದಾಜಿದ್ದಿಗೆ ಅಣಿಯಾದ ವೇದಿಕೆ

ರಂಗೇರಿದ ಚುನಾವಣಾ ಅಖಾಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚನ್ನಪಟ್ಟಣ ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿದ್ದ ಸಿ.ಪಿ. ಯೋಗೇಶ್ವರ್, ದಿಢೀರ್ ಕಾಂಗ್ರೆಸ್ ಪಕ್ಷಕ್ಕೆ ಜಿಗಿದಿದ್ದಾರೆ. ಇದರಿಂದಾಗಿ, ಉಪ ಚುನಾವಣೆ ರಾಜಕಾರಣಕ್ಕೆ ಬುಧವಾರ ಹೊಸ ತಿರುವು ಸಿಕ್ಕಿದೆ. ಈ ಬೆಳವಣಿಗೆಯು ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಮತ್ತು ಉಪಮುಖ್ಯ ಮಂತ್ರಿ ಡಿ.ಕೆ.ಶಿವಕುಮಾರ್ ಅವರ ರಾಜಕೀಯ ಜಿದ್ದಾಜಿದ್ದಿಗೆ ವೇದಿಕೆಯಾಗಿ ಪರಿಣಮಿಸಿದೆ.

'ಕೈ' ಪಾಳಯ ಸೇರಿದ ಸಿ.ಪಿ. ಯೋಗೇಶ್ವರ್‌ಗೆ ಟಿಕೆಟ್ ನೀಡಲಾಗಿದೆ. ಗುರುವಾರ ಅವರು ಕಾಂಗ್ರೆಸ್ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಲಿದ್ದಾರೆ.

ಉಪ ಚುನಾವಣೆ ನಡೆಯಲಿರುವ ಸಂಡೂರು ಕ್ಷೇತ್ರದಿಂದ ಸಂಸದ ಇ. ತುಕಾರಾಂ ಪತ್ನಿ ಅನ್ನಪೂರ್ಣ ಅವರಿಗೆ ಟಿಕೆಟ್ ನೀಡಲಾಗಿದೆ. ಆ ಪಕ್ಷದ ನಾಯಕರು, ಶಿಗ್ಗಾವಿ ಕ್ಷೇತ್ರದ ಹುರಿಯಾಳನ್ನು ಇನ್ನಷ್ಟೆ ಅಂತಿಮಗೊಳಿಸಬೇಕಿದೆ. ಮೂರೂ ಕ್ಷೇತ್ರಗಳನ್ನು ಗೆಲ್ಲಲು ಆಡಳಿತಾರೂಢ ಕಾಂಗ್ರೆಸ್ ಪಕ್ಷ ತನ್ನದೇ ಕಾರ್ಯತಂತ್ರ ರೂಪಿಸಿಕೊಂಡಿದೆ. ಈ ಕಾರಣಕ್ಕೆ ಯೋಗೇಶ್ವರ್ ಅವರನ್ನು ಸೆಳೆದು ಚನ್ನಪಟ್ಟಣದ ಅಖಾಡಕ್ಕಿಳಿಸಲು ಮುಂದಾಗಿರುವ ಕಾಂಗ್ರೆಸ್ ನಾಯಕರು, ಸಂಡೂರಿನಲ್ಲಿ 'ಕುಟುಂಬ' ರಾಜಕಾರಣಕ್ಕೆ ಮಣೆ ಹಾಕಿದ್ದಾರೆ.

7ನೇ ಪುಟ ನೋಡಿ

ಯೋಗೇಶ್ವರ್ ಅವರಲ್ಲಿ ಕಾಂಗ್ರೆಸ್ ರಕ್ತ ಹರಿಯುತ್ತಿದೆ. ಹೀಗಾಗಿ, ಯಾವುದೇ ಷರತ್ತುಗಳನ್ನು ವಿಧಿಸದೆ ಅವರು ಮರಳಿ ಗೂಡಿಗೆ ಬಂದಿದ್ದಾರೆ
ಡಿ.ಕೆ.ಶಿವಕುಮಾರ್
ಕೆಪಿಸಿಸಿ ಅಧ್ಯಕ್ಷ

ಹಳೆ ಮೈಸೂರು ಭಾಗದಲ್ಲಿ ಪಕ್ಷದ ಸಂಘಟನೆ ಯೋಗೇಶ್ವರ್ ಅವರನ್ನು ಅವಲಂಬಿಸಿರಲಿಲ್ಲ. ಅವರು ಬಿಟ್ಟು ಹೋಗಿದ್ದರಿಂದ ಪಕ್ಷಕ್ಕೆ ನಷ್ಟವೂ ಆಗಿಲ್ಲ, ಪರಿಣಾಮವೂ ಬೀರುವುದಿಲ್ಲ
ಬಿ.ವೈ.ವಿಜಯೇಂದ್ರ
ಅಧ್ಯಕ್ಷ, ಬಿಜೆಪಿ ರಾಜ್ಯ ಘಟಕ

ಶಿವಕುಮಾರ್ ಅವರು ಯೋಗೇಶ್ವರ್ ತಲೆ ಕೆಡಿಸಿದ್ದಾರೆ. ಮುಂದಿನ ದಿನಗಳಲ್ಲಿ ಹೇಗೆ ತುಳಿಯಬೇಕು ಎಂಬ ಯೋಜನೆಯನ್ನೂ ರೂಪಿಸಿರುತ್ತಾರೆ
ಆರ್.ಅಶೋಕ
ವಿರೋಧ ಪಕ್ಷದ ನಾಯಕ, ವಿಧಾನಸಭೆ

ಅಧಿಕಾರ ಎಲ್ಲಿ ಸಿಗುತ್ತದೆಯೋ ಯೋಗೇಶ್ವರ್ ಅಲ್ಲಿಗೆ ಹೋಗುತ್ತಾರೆ. ಚನ್ನಪಟ್ಟಣದಲ್ಲಿ ಸುರೇಶ್ ನಿಲ್ಲಿಸುವ ಧೈರ್ಯವಿಲ್ಲದೇ ಕಾಂಗ್ರೆಸ್ ನಾಯಕರು ಆಪರೇಷನ್ ಹಸ್ತ ನಡೆಸಿದ್ದಾರೆ
ನಿಖಿಲ್ ಕುಮಾರಸ್ವಾಮಿ
ಜೆಡಿಎಸ್ ಯುವ ಘಟಕದ ರಾಜ್ಯಘಟಕದ ಅಧ್ಯಕ್ಷ

ಶಿಗ್ಗಾವಿ 'ಲೆಕ್ಕಾಚಾರ'ದಲ್ಲಿ ಕಾಂಗ್ರೆಸ್

ಸಂಡೂರು ಟಿಕೆಟ್ ಅನ್ನು ಇ. ತುಕಾರಾಂ ಕುಟುಂಬಕ್ಕೆ ನೀಡಬಾರದು ಎಂಬ ಅಪಸ್ವರದ ಮಧ್ಯೆಯೂ, ಅವರ ಪತ್ನಿ ಅನ್ನಪೂರ್ಣ ಅವರನ್ನು ಕಣಕ್ಕಿಳಿಸಲಾಗಿದೆ.

ಆದರೆ, ಶಿಗ್ಗಾವಿ ಕ್ಷೇತ್ರದ ಟಿಕೆಟ್ ಅನ್ನು ಲಿಂಗಾಯತ ಸಮುದಾಯದವರಿಗೆ ನೀಡಬೇಕೇ, ಅಲ್ಪಸಂಖ್ಯಾತರನ್ನೇ (ಮುಸ್ಲಿಂ) ಮತ್ತೆ ಕಣಕ್ಕಿಳಿಸಬೇಕೇ ಎಂಬ ಗೊಂದಲ ಪಕ್ಷದಲ್ಲಿ ಮುಂದುವರಿದಿದೆ. ಈ ಕ್ಷೇತ್ರದಲ್ಲಿ ಕಳೆದ ನಾಲ್ಕು ಅವಧಿಯಲ್ಲಿ ಮುಸ್ಲಿಂ ಅಭ್ಯರ್ಥಿಯನ್ನು ಕಣಕ್ಕಿಳಿಸಿ ಗೆಲುವು ದಕ್ಕಿಸಿಕೊಳ್ಳಲು ಸಾಧ್ಯವಾಗದೇ ಇರುವುದರಿಂದ ಈ ಬಾರಿ ಲಿಂಗಾಯತ ಸಮುದಾಯಕ್ಕೆ ಮಣೆ ಹಾಕುವುದೇ ಸೂಕ್ತ ಎಂಬ ನಿರ್ಣಯಕ್ಕೆ ಕಾಂಗ್ರೆಸ್ ನಾಯಕರು ಬಂದಿದ್ದಾರೆ ಎನ್ನಲಾಗಿದೆ.

ಆದರೆ, ಸಚಿವ ಜಮೀರ್ ಅಹಮದ್ ಖಾನ್ ಸೇರಿದಂತೆ ಕಾಂಗ್ರೆಸ್‌ನ ಮುಸ್ಲಿಂ ನಾಯಕರು ಈ ಬಾರಿಯೂ ಮುಸ್ಲಿಂ ಅಭ್ಯರ್ಥಿಗೇ ಟಿಕೆಟ್ ನೀಡಬೇಕೆಂದು ಪಟ್ಟು ಹಿಡಿದಿದ್ದಾರೆ. ಈ ಜಟಾಪಟಿಯ ಕಾರಣಕ್ಕೆ ಟಿಕೆಟ್ ಘೋಷಣೆ ವಿಳಂಬವಾಗುತ್ತಿದೆ ಎಂದು ಕಾಂಗ್ರೆಸ್ ಮೂಲಗಳು ಹೇಳಿವೆ.

ಯಾಸೀರ್ ಅಹ್ಮದ್ ಖಾನ್ ಪಠಾಣ ಮತ್ತು ಸೈಯದ್ ಅಜ್ಜಂಪೀರ್ ಖಾದ್ರಿ ಟಿಕೆಟ್‌ಗಾಗಿ ಕಸರತ್ತು ನಡೆಸುತ್ತಿದ್ದಾರೆ. ಲಿಂಗಾಯತ ಸಮುದಾಯದ ಸಾದರ ಉಪ ಪಂಗಡಕ್ಕೆ ಸೇರಿದ ಭರತ್ ಬೊಮ್ಮಾಯಿ ಅವರನ್ನು ಎದುರಿಸಲು ಅದೇ ಸಮುದಾಯದ ಪಂಚಮಸಾಲಿ ಉಪ ಪಂಗಡದ ಅಭ್ಯರ್ಥಿಯನ್ನು ಕಣಕ್ಕಿಳಿಸುವ 'ಲೆಕ್ಕಾಚಾರ' ಕಾಂಗ್ರೆಸ್‌ನಲ್ಲಿದೆ. ಅದಕ್ಕೆ ಪೂರಕವಾಗಿ ಧಾರವಾಡ ಗ್ರಾಮೀಣ ಶಾಸಕ ವಿನಯ ಕುಲಕರ್ಣಿ ಅವರು ತಮ್ಮ ಪತ್ನಿ ಶಿವಲೀಲಾ ಅಥವಾ ಮಗಳು ವೈಶಾಲಿಗೆ ಟಿಕೆಟ್ ನೀಡುವಂತೆ ಬೇಡಿಕೆ ಇಟ್ಟಿದ್ದಾರೆ.

ನಿಖಿಲ್ ಸ್ಪರ್ಧೆಗೆ ಒತ್ತಡ?: ಇಂದು ನಿರ್ಧಾರ

ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ರಾಜಕೀಯ ಲೆಕ್ಕಾಚಾರ ದಿನೇದಿನೇ ಬದಲಾಗುತ್ತಿದ್ದು, ಯೋಗೇಶ್ವರ್ ಕಾಂಗ್ರೆಸ್ ಸೇರಿದ ನಂತರ ಮೈತ್ರಿ ಅಭ್ಯರ್ಥಿ ಯಾರಾಗಬೇಕು ಎನ್ನುವ ಲೆಕ್ಕಾಚಾರಗಳು ಮತ್ತೆ ಬಿರುಸು ಪಡೆದಿವೆ.

ಗೆದ್ದು ಕ್ಷೇತ್ರ ಉಳಿಸಿಕೊಳ್ಳಲೇಬೇಕಾದರೆ ಜೆಡಿಎಸ್ ವರಿಷ್ಠ ಎಚ್‌.ಡಿ. ದೇವೇಗೌಡರ ಕುಟುಂಬದವರು, ಅದರಲ್ಲೂ ಪಕ್ಷದ ಯುವ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಅವರನ್ನು ಕಣಕ್ಕೆ ಇಳಿಸುವ ಒತ್ತಡ ಹೆಚ್ಚುತ್ತಿದೆ. ಈ ಎಲ್ಲ ಬೆಳವಣಿಗೆಗಳ ಮಧ್ಯೆ ಅ.24ರಂದು ಬೆಳಿಗ್ಗೆ ಬೆಂಗಳೂರಿನಲ್ಲಿ ಪಕ್ಷದ ಮುಖಂಡರ ಸಭೆ ಕರೆಯಲಾಗಿದೆ. ಸಭೆಯ ನಂತರ ಅಭ್ಯರ್ಥಿ ಘೋಷಣೆ ಮಾಡಲಾಗುತ್ತದೆ ಎಂದು ಜೆಡಿಎಸ್ ಮೂಲಗಳು ಹೇಳಿವೆ.

ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ರಾಜೀನಾಮೆಯಿಂದ ತೆರವಾಗಿರುವ ಈ ಕ್ಷೇತ್ರದ ಅಭ್ಯರ್ಥಿ ಆಯ್ಕೆ ವಿಚಾರವನ್ನು ಬಿಜೆಪಿ ವರಿಷ್ಠರು, ಜೆಡಿಎಸ್‌ಗೆ ಬಿಟ್ಟುಕೊಟ್ಟಿದ್ದರು. ಮೈತ್ರಿ ಅಭ್ಯರ್ಥಿಯಾಗಿ ಕಣಕ್ಕೆ ಇಳಿಯಲು ಯೋಗೇಶ್ವರ್ ಸಾಕಷ್ಟು ಒತ್ತಡ ಹಾಕಿದ್ದರು. ಜೆಡಿಎಸ್‌ನಿಂದ ಯೋಗೇಶ್ವರ್ ಅವರನ್ನೇ ಕಣಕ್ಕೆ ಇಳಿಸಲು, ಕುಮಾರಸ್ವಾಮಿ ಒಪ್ಪಿಕೊಂಡಿದ್ದರು. ಅದನ್ನು ನಿರಾಕರಿಸಿದ್ದ ಯೋಗೇಶ್ವರ್, ದಿಢೀರ್ ಬೆಳವಣಿಗೆಯಲ್ಲಿ ಕಾಂಗ್ರೆಸ್‌ಗೆ ಜಿಗಿದಿದ್ದಾರೆ.

ಈ ಬೆಳವಣಿಗೆ ಬೆನ್ನಲ್ಲೇ, ಜೆಡಿಎಸ್ ವರಿಷ್ಠರು ಚನ್ನಪಟ್ಟಣದ ಮುಖಂಡರು, ಪ್ರಮುಖ ಕಾರ್ಯಕರ್ತರ ಜತೆ ಬುಧವಾರ ದಿನವಿಡೀ ಮಾತುಕತೆ ನಡೆಸಿದರೂ, ಅಭ್ಯರ್ಥಿ ಆಯ್ಕೆಯ ವಿಷಯದಲ್ಲಿ ಒಮ್ಮತಕ್ಕೆ ಬರಲು ಸಾಧ್ಯವಾಗಿಲ್ಲ. ಯೋಗೇಶ್ವರ್ ಕಾಂಗ್ರೆಸ್‌ನಿಂದ ಕಣಕ್ಕೆ ಇಳಿಯುತ್ತಿದ್ದು, ಅವರ ಸ್ವಂತ ಬಲದ ಜತೆಗೆ, ಕಾಂಗ್ರೆಸ್ ಮತಗಳೂ ಧ್ರುವೀಕರಣಗೊಳ್ಳುತ್ತವೆ. ಹೀಗಾದಲ್ಲಿ, ಚನ್ನಪಟ್ಟಣ ಕ್ಷೇತ್ರದ ಜೆಡಿಎಸ್ ಘಟಕದ ಅಧ್ಯಕ್ಷ ಜಯಮುತ್ತು ಅವರನ್ನು ಕಣಕ್ಕೆ ಇಳಿಸುವುದು ಹೆಚ್ಚು ಲಾಭ ತರುವುದಿಲ್ಲ. ಅದರ ಬದಲಿಗೆ ದೇವೇಗೌಡರ ಕುಟುಂಬದವರೇ ಸ್ಪರ್ಧಿಸಿದರೆ ಪೈಪೋಟಿ ನೀಡಬಹುದು. ಬಿಜೆಪಿಯೂ ಬೆನ್ನಿಗಿರುತ್ತದೆ. ಇಲ್ಲದಿದ್ದರೆ ಪಕ್ಷದ ಕಾರ್ಯಕರ್ತರಲ್ಲೇ ಗುಂಪುಗಾರಿಕೆ ತಲೆದೋರುವ ಸಾಧ್ಯತೆ ಇದೆ ಎಂದು ಚನ್ನಪಟ್ಟಣದ ಮುಖಂಡರು ವರಿಷ್ಠರಿಗೆ ಮನವರಿಕೆ ಮಾಡಿದ್ದಾರೆ.

5 ವರ್ಷಗಳಲ್ಲಿ ಇದೇ ಮೊದಲ ಬಾರಿಗೆ ಭಾರತ, ಚೀನಾ ದ್ವಿಪಕ್ಷೀಯ ಮಾತುಕತೆ

ಗಡಿ ಒಪ್ಪಂದಕ್ಕೆ ಮೋದಿ, ಷಿ ಒಪ್ಪಿಗೆ

ಕಜಾನ್ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಮತ್ತು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು ಸರಿಸುಮಾರು ಐದು ವರ್ಷಗಳ ಅವಧಿಯಲ್ಲಿ ಇದೇ ಮೊದಲ ಬಾರಿಗೆ ದ್ವಿಪಕ್ಷೀಯ ಮಾತುಕತೆ ನಡೆಸಿದರು.

ಭಾರತ ಮತ್ತು ಚೀನಾ ದೇಶಗಳು ಪ್ರಬುದ್ಧವಾಗಿ ವರ್ತಿಸಿ, ಪರಸ್ಪರರ ಬಗ್ಗೆ ಗೌರವ ತೋರುವ ಮೂಲಕ ಶಾಂತಿಯುತ ಹಾಗೂ ಸ್ಥಿರ ಸಂಬಂಧವನ್ನು ಹೊಂದಬಹುದು ಎಂಬ ವಿಚಾರವಾಗಿ ಇಬ್ಬರೂ ನಾಯಕರು ಸಹಮತ ವ್ಯಕ್ತಪಡಿಸಿದರು.

ಲಡಾಖ್‌ನ ಗಡಿ ವಿವಾದ ಪರಿಹರಿಸುವುದಕ್ಕೆ ಸಂಬಂಧಿಸಿದ ಒಪ್ಪಂದವನ್ನು ಇಬ್ಬರೂ ಅನುಮೋದಿಸಿದರು. ಬ್ರಿಕ್ಸ್ ಶೃಂಗಸಭೆಯ ಸಂದರ್ಭದಲ್ಲಿ ನಡೆದ ದ್ವಿಪಕ್ಷೀಯ ಮಾತುಕತೆ ವೇಳೆ ಮೋದಿ ಅವರು, ಗಡಿ ವಿಚಾರ ಕುರಿತ ಭಿನ್ನಾಭಿಪ್ರಾಯಗಳು ಎಲ್‌ಎಸಿ ಶಾಂತಿ ಮತ್ತು ಸೌಹಾರ್ದ ವಾತಾವರಣವನ್ನು ಹಾಳುಗೆಡವಲು ಅವಕಾಶ ಕೊಡಬಾರದು ಎಂಬುದನ್ನು ಒತ್ತಿಹೇಳಿದರು.

ಷಿ ಜಿನ್‌ಪಿಂಗ್ ಮತ್ತು ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ದ್ವಿಪಕ್ಷೀಯ ಮಾತುಕತೆ ನಡೆಸಿದರು — ಪಿಟಿಐ ಚಿತ್ರ

ಭಾರತ ಮತ್ತು ಚೀನಾದ ಗಡಿಗೆ ಸಂಬಂಧಿಸಿದ ವಿಶೇಷ ಪ್ರತಿನಿಧಿಗಳು ವಿವಾದ ಪರಿಹರಿಸುವಲ್ಲಿ ಹಾಗೂ ಗಡಿಯಲ್ಲಿ ಶಾಂತಿ ಮತ್ತು ಸೌಹಾರ್ದವನ್ನು ಕಾಪಾಡುವಲ್ಲಿ ಮಹತ್ವದ ಪಾತ್ರ ಹೊಂದಿದ್ದಾರೆ ಎಂದು ಇಬ್ಬರೂ ನಾಯಕರು ಹೇಳಿದರು.

ವಿಶೇಷ ಪ್ರತಿನಿಧಿಗಳು ಬೇಗನೆ ಸಭೆ ನಡೆಸಿ, ತಮ್ಮ ಪ್ರಯತ್ನವನ್ನು ಮುಂದುವರಿಸಬೇಕು ಎಂದು ಮೋದಿ ಹಾಗೂ ಷಿ ಅವರು ಸೂಚನೆ ನೀಡಿದರು ಎಂದು ಭಾರತದ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಅವರು ಸಭೆಯ ನಂತರ ಸುದ್ದಿಗಾರರಿಗೆ ತಿಳಿಸಿದರು.

10ನೇ ಪುಟ ನೋಡಿ

ಒಳಪುಟಗಳಲ್ಲಿ

35 ವರ್ಷದ ರಾಜಕೀಯ ಅನುಭವವಿದೆ' ಪ್ರಿಯಾಂಕಾ ನಾಮಪತ್ರ 6

ಮೊಬೈಲ್ ಫೋನ್ ಟವರ್‌ಅನ್ನೇ ಕದ್ದರು!

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಮೊಬೈಲ್ ಫೋನ್ ಕಳ್ಳತನ ಆಗುವುದು ಸಹಜ. ಆದರೆ, ಕಳ್ಳರು ಇಲ್ಲಿ ಅಳವಡಿಸಿದ್ದ ಮೊಬೈಲ್‌ಫೋನ್ ನೆಟ್‌ವರ್ಕ್ ಟವರ್ ಕಳವು ಮಾಡಿದ್ದಾರೆ.

ಶಿವಮೊಗ್ಗದ ಟಿಪ್ಪು ನಗರದ ಖಾಲಿ ಜಾಗದಲ್ಲಿ ಖಾಸಗಿ ಟೆಲಿಕಾಂ ಸಂಸ್ಥೆ 2008ರಲ್ಲಿ ಟವರ್ ಅಳವಡಿಸಿತ್ತು. ಕೋವಿಡ್ ನಂತರ ಆ ಟವರ್‌ನ ನಿರ್ವಹಣೆ ಮಾಡಲು ಸಾಧ್ಯವಾಗಿರ-ಲಿಲ್ಲ ಎನ್ನಲಾಗಿದೆ.

ಈಚೆಗೆ ಸಂಸ್ಥೆಯ ಸಿಬ್ಬಂದಿ ಸ್ಥಳಕ್ಕೆ ಬಂದು ನೋಡಿದಾಗ ಅಲ್ಲಿ ಟವರ್ ಇರಲಿಲ್ಲ. ಈ ಬಗ್ಗೆ ಅವರು ನ್ಯಾಯಾಲಯದಲ್ಲಿ ಖಾಸಗಿ ದೂರು ದಾಖಲಿಸಿದ್ದಾರೆ. ನ್ಯಾಯಾಲಯದ ಸೂಚನೆಯಂತೆ ತುಂಗಾ ನಗರದ ಠಾಣೆಯಲ್ಲಿ ದೂರು ದಾಖಲಾಗಿದೆ.

ಕಳವಾಗಿರುವ ಟವರ್‌ನ ಬಿಡಿಭಾಗಗಳ ಅಂದಾಜು ಮೌಲ್ಯ ₹ 46.30 ಲಕ್ಷ ಎಂದು ಟೆಲಿಕಾಂ ಸಂಸ್ಥೆಯ ಸಿಬ್ಬಂದಿ ದೂರಿನಲ್ಲಿ ಉಲ್ಲೇಖಿಸಿದ್ದಾರೆ. ತುಂಗಾ ನಗರ ಠಾಣೆ ಪೊಲೀಸರು ಪ್ರಕರಣದ ತನಿಖೆ ಕೈಗೆತ್ತಿಕೊಂಡಿದ್ದಾರೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಜಾಹೀರಾತು

ಮಂಡಿನೋವಿಗೆ ಸರ್ಜರಿ ಇಲ್ಲದೇ ಚಿಕಿತ್ಸೆ

10,000ಕ್ಕೂ ಹೆಚ್ಚು ಮಂದಿಗೆ ನೋವು ಮುಕ್ತ ಜೀವನವನ್ನು ಅಲಿವಿಯೇಟ್ ನೀಡಿದೆ

ಮೊಣಕಾಲಿನ ಸಂಧಿವಾತಕ್ಕೆ ಸ್ಟೆಮ್ ಸೆಲ್ ಚಿಕಿತ್ಸೆ (ಪುನರುತ್ಪಾದಕ ಚಿಕಿತ್ಸೆ) ಅಂಗಾಂಶ ಗುಣಪಡಿಸುವಿಕೆಯನ್ನು ಉತ್ತೇಜಿಸಲು ಮತ್ತು ಸಂಧಿವಾತದಿಂದ ಪ್ರಭಾವಿತವಾಗಿರುವ ಮೊಣಕಾಲಿನ ಜಂಟಿ ಉರಿಯೂತವನ್ನು ಕಡಿಮೆ ಮಾಡಲು ಕಾಂಡಕೋಶಗಳ ವಿಶಿಷ್ಟ ಗುಣಲಕ್ಷಣಗಳನ್ನು ಬಳಸಿಕೊಳ್ಳುತ್ತದೆ. ಈ ಚಿಕಿತ್ಸೆಯ ಗುರಿಯು ನೋವನ್ನು ಹಂತ ಹಂತವಾಗಿ ಉಪಶಮನಗೊಳಿಸುವುದು, ಜಂಟಿ ಕಾರ್ಯವನ್ನು ಇನ್ನಷ್ಟು ಉತ್ತೇಜಿಸುವುದು ಮತ್ತು ಸಂಧಿವಾತದ ಪ್ರಗತಿಯನ್ನು ನಿಧಾನಗೊಳಿಸುವುದು ಆಗಿರುತ್ತದೆ.

ಮೊಣಕಾಲು ನೋವಿನ ಉಪಶಮನಕ್ಕೆ ಕಾಂಡಕೋಶಗಳ ಚುಚ್ಚುಮದ್ದು

ಈ ಚಿಕಿತ್ಸೆಯನ್ನು ಏಕೆ ಆಯ್ಕೆ ಮಾಡುವುದು?
- 60 ನಿಮಿಷದ ವಿಧಾನ
- ಆಸ್ಪತ್ರೆ ವಾಸವಿಲ್ಲ
- 48 ಗಂಟೆಗಳಲ್ಲಿ ನಿಮ್ಮ ಕೆಲಸಕ್ಕೆ ತೆರಳಬಹುದು

ಮೊಣಕಾಲಿನ ಸಂಧಿವಾತದ ವಿಷಯದಲ್ಲಿ, ಹಾನಿಗೊಳಗಾದ ಜಂಟಿ ಅಥವಾ ಕ್ಷೀಣಿಸಿದ ಅಂಗಾಂಶಗಳನ್ನು ಪುನರುತ್ಪಾದಿಸುವಲ್ಲಿ ಕಾಂಡಕೋಶಗಳು ಮಹತ್ವದ ಪಾತ್ರವನ್ನು ವಹಿಸುತ್ತವೆ.

ಸ್ಟೆಮ್ ಸೆಲ್ ಚಿಕಿತ್ಸೆಯ ವಿಧಾನವು ಹೀಗಿದೆ:

1. ಕಾಂಡಕೋಶಗಳ ಕೊಯ್ಲು:

ಈ ಪ್ರಕ್ರಿಯೆಯು ಕಾಂಡಕೋಶಗಳ ಸಂಗ್ರಹದೊಂದಿಗೆ ಪ್ರಾರಂಭವಾಗುತ್ತದೆ. ಮೂಳೆ ಮಜ್ಜೆ ಅಥವಾ ಅಡಿಪೋಸ್ (ಕೊಬ್ಬು) ಅಂಗಾಂಶ ಸೇರಿದಂತೆ ದೇಹದ ವಿವಿಧ ಸ್ಥಳಗಳಿಂದ ಈ ಕೋಶಗಳನ್ನು ಪಡೆಯಬಹುದು.

2. ಕಾಂಡಕೋಶಗಳನ್ನು ಸಂಸ್ಕರಿ–ಸುವುದು ಮತ್ತು ಕೇಂದ್ರೀಕರಿಸುವುದು:

ಕೊಯ್ಲು ಮಾಡಿದ ನಂತರ, ಆಧುನಿಕ ವಿಧಾನಗಳನ್ನು ಬಳಸಿಕೊಂಡು, ಕಾಂಡಕೋಶಗಳನ್ನು ಇತರ ಘಟಕಗಳಿಂದ ಬೇರ್ಪಡಿಸಲಾಗುತ್ತದೆ.

3.ಮೊಣಕಾಲು ಜಂಟಿಗೆ ಚುಚ್ಚುಮದ್ದು

ನಂತರ ಸಂಸ್ಕರಿಸಿ ಕೇಂದ್ರೀಕರಿಸಿದ ಕಾಂಡಕೋಶಗಳನ್ನು ನೇರವಾಗಿ ಪೀಡಿತ ಮೊಣಕಾಲಿನ ಜಂಟಿಗೆ ಚುಚ್ಚಲಾಗುತ್ತದೆ. ಈ ಚುಚ್ಚುಮದ್ದನ್ನು ಸಾಮಾನ್ಯವಾಗಿ ಅಲ್ಟ್ರಾಸೌಂಡ್ ಅಥವಾ ಫ್ಲೋರೋಸ್ಕೋಪಿಯಂತಹ ಆಧುನಿಕ ಇಮೇಜಿಂಗ್ ತಂತ್ರಗಳಿಂದ ಗಮನಿಸಿ ಮಾರ್ಗದರ್ಶಿಸಲಾಗುತ್ತದೆ. ಇದನ್ನು ಬಳಸುವುದರಿಂದ, ಮೊಣಕಾಲಿನ ಪೀಡಿತ ಪ್ರದೇಶದಲ್ಲಿ ಕಾಂಡಕೋಶಗಳನ್ನು ನಿಖರವಾಗಿ ಇರಿಸಲಾಗುತ್ತದೆ, ಇದರಿಂದಾಗಿ ನೋವು ಕ್ರಮೇಣ ಉಪಶಮನಗೊಳ್ಳುತ್ತದೆ.

ಬಹುಪಾಲು ಜನರಿಗೆ ಸಂಧಿವಾತ ನೋವನ್ನು ಸರ್ಜರಿ ಇಲ್ಲದೇ ಉಪಶಮನಗೊಳಿಸುವ ಭರವಸೆ ಅಲಿವಿಯೇಟ್ ನೀಡುತ್ತದೆ. 45–60 ವರ್ಷ ವಯಸ್ಸಿನ ಆರಂಭಿಕ ಹಂತಗಳಲ್ಲಿ ಸಂಧಿವಾತ ರೋಗ ಲಕ್ಷಣಗಳನ್ನು ಹೊಂದಿರುವ ಜನರು, ನಂತರದ ವರ್ಷಗಳಲ್ಲಿ ತೀವ್ರವಾದ ಹಾನಿಯನ್ನು ತಡೆಗಟ್ಟಲು ಅಲಿ–ವಿಯೇಟ್ ಕ್ಲಿನಿಕ್‌ನಲ್ಲಿ ಸಹಾಯ ಪಡೆಯುವುದು ಉತ್ತಮ.

ಕೂಡಲೇ ಕೆಳಗಿನ ಸಂಖ್ಯೆಗಳಿಗೆ ಕರೆ ಮಾಡಿಮತ್ತು ನಮ್ಮ ವೈದ್ಯರೊಂದಿಗೆ ಅಪಾಯಿಂಟ್‌ಮೆಂಟ್ ಪಡೆಯಿರಿ.

ಬೆನ್ನು, ಕುತ್ತಿಗೆ, ಭುಜ, ಕಾಲು, ಪಾದ, ಕೆಳಬೆನ್ನು, ಕ್ಯಾನ್ಸರ್ ಮತ್ತಿತರ ನೋವಿಗೂ ಕೂಡ ಅಲಿವಿಯೇಟ್‌ನಲ್ಲಿ ಪರಿಣಾಮಕಾರಿ ಚಿಕಿತ್ಸೆ.

ಅಲಿವಿಯೇಟ್

ಕ್ಲಿನಿಕ್ಕುಗಳು ಬೆಂಗಳೂರಿನಲ್ಲಿ ಇಲ್ಲವೆ:
ಪೀಣ್ಯಾ ದಾಸರಹಳ್ಳಿ
ಸದಾಶಿವನಗರ
ವೈಟ್ಫೀಲ್ಡ್
ಜಯನಗರ
ಇಂದಿರಾನಗರ

CALL NOW 81475 50855 080 23614888

ಕಿತ್ತೂರು ರಾಣಿ ಚನ್ನಮ್ಮ ಜಯಂತಿಯಲ್ಲಿ ಸಚಿವ ಶಿವರಾಜ ತಂಗಡಗಿ

‘ಯುವ ಪೀಳಿಗೆಗೆ ಚನ್ನಮ್ಮನ ಐತಿಹ್ಯದ ಅರಿವು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರಾಣಿ ಚನ್ನಮ್ಮ ಅವರು ಒಂದು ಸಮಾಜಕ್ಕೆ ಸೇರಿದವರಲ್ಲ. ಎಲ್ಲ ಸಮಾಜಗಳನ್ನು ಕಟ್ಟುವ ಕೆಲಸ ಮಾಡಿದ ವೀರ ವನಿತೆ. ಇಂತಹವರ ಜಯಂತಿ ಆಚರಿಸುವ ಮೂಲಕ ಇತಿಹಾಸವನ್ನು ಯುವ ಪೀಳಿಗೆಗೆ ತಿಳಿಸಲಾಗುತ್ತಿದೆ’ ಎಂದು ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಹೇಳಿದರು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಬುಧವಾರ ಆಯೋಜಿಸಲಾಗಿದ್ದ ಕಿತ್ತೂರು ರಾಣಿ ಚನ್ನಮ್ಮ ಜಯಂತಿ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಚನ್ನಮ್ಮ ಶೌರ್ಯ, ಧೈರ್ಯ, ತ್ಯಾಗ, ರಾಜನೀತಿ, ಮಾತೃವಾತ್ಸಲ್ಯ, ಸದ್ಗುಣಗಳ ಖಣಿ. ಕನ್ನಡದ ಹೆಣ್ಣುಮಕ್ಕಳ ಪ್ರತಿನಿಧಿ. ಇಂದು ಕಿತ್ತೂರು ರಾಣಿ ಚನ್ನಮ್ಮ ಜಯಂತಿ ಆಚರಣೆ ಮಾಡಲಾಗುತ್ತಿದ್ದರೂ, ವಾಸ್ತವವಾಗಿ ಇದು ಕಿತ್ತೂರು ಸಂಸ್ಥಾನ ಬ್ರಿಟಿಷರ ವಿರುದ್ಧ ವಿಜಯೋತ್ಸವ ಸಾಧಿಸಿದ ದಿನವಾಗಿದೆ’ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ಕಿತ್ತೂರು ರಾಣಿ ಚನ್ನಮ್ಮ ಪ್ರತಿಮೆಗೆ ಪುಷ್ಪ ನಮನ ಸಲ್ಲಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವ ಶಿವರಾಜ ಎಸ್‌. ತಂಗಡಗಿ, ಸಾಹಿತಿ ಲೀಲಾದೇವಿ ಆರ್‌. ಪ್ರಸಾದ್‌, ಬೇಲಿ ಮಠದ ಶಿವರುದ್ರ ಸ್ವಾಮೀಜಿ ಮತ್ತು ಅಂಬೇಡ್ಕರ್ ಕ್ರಾಂತಿ ಸೇನೆ ಅಧ್ಯಕ್ಷ ಕ್ರಾಂತಿ ರಾಜು ಇದ್ದರು ಪ್ರಜಾವಾಣಿ ಚಿತ್ರ

‘ಬ್ರಿಟಿಷ್ ಕಲೆಕ್ಟರ್ ಥ್ಯಾಕರೆ ವಿರುದ್ಧ ಕಿತ್ತೂರು ರಾಣಿ ಚನ್ನಮ್ಮ ಜಯ ಸಾಧಿಸಿದ ದಿನ ಅಕ್ಟೋಬರ್ 23. ಇದೇ ದಿನ ಥ್ಯಾಕರೆಯ ಮರಣವೂ ಆಯಿತು. ಚನ್ನಮ್ಮ ಬ್ರಿಟಿಷರ ಮೇಲೆ ವಿಜಯ ಸಾಧಿಸಿದ ಈ ಐತಿಹಾಸಿಕ ದಿನವನ್ನೇ ಕಿತ್ತೂರ ರಾಣಿ ಚನ್ನಮ್ಮನ ಜಯಂತಿ ಎಂದು ಆಚರಿಸಲು 2017ರಲ್ಲಿ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ನಿರ್ಧರಿಸಿತ್ತು. ಚನ್ನಮ್ಮ ಜಯಸಾಧಿಸಿ ಇಂದಿಗೆ 200 ವರ್ಷಗಳು ಪೂರ್ಣಗೊಂಡಿವೆ. ಹಾಗಾಗಿ ಈ ದಿನ ಮತ್ತು ಈ ಸಮಾರಂಭಕ್ಕೆ ವಿಶೇಷವಾದ ಮಹತ್ವ ಇದೆ’ ಎಂದರು.

ಬೇಲಿ ಮಠದ ಶಿವರುದ್ರ ಸ್ವಾಮೀಜಿ ಮಾತನಾಡಿ, ‘ಇಲಿಯಾಗಿ ಬಹುಕಾಲ ಪರಾಧೀನತೆಯಲ್ಲಿ ಬಾಳುವುದಕ್ಕಿಂತ ಹುಲಿಯಂತೆ ಸ್ವತಂತ್ರವಾಗಿ ಬದುಕಬೇಕು’ ಎಂಬ ನುಡಿಗೆ ಅನ್ವರ್ಥವಾಗಿ ಭಾರತ ದೇಶದ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಾ, ಬ್ರಿಟಿಷರಿಗೆ ನರಕದರ್ಶನ ಮಾಡಿಸಿದ ಮಹಾತಾಯಿ, ಕನ್ನಡದ ಕುಲನಾರಿ ಕಿತ್ತೂರು ರಾಣಿ ಚನ್ನಮ್ಮ’ ಎಂದು ಹೇಳಿ ಇತಿಹಾಸದ ದಿನಗಳನ್ನು ಮೆಲುಕು ಹಾಕಿದರು.

ವೀರಶೈವ ಲಿಂಗಾಯತ ಅಭಿವೃದ್ಧಿ ನಿಗಮದ ಅಧ್ಯಕ್ಷ ವಿಜಯಾನಂದ ಕಾಶಪ್ಪನವರ್, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಮಾನಸ, ಮಾಜಿ ಸಚಿವೆ ಲೀಲಾದೇವಿ ಆರ್. ಪ್ರಸಾದ್, ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜ ಮೂರ್ತಿ, ಗಡಿ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಸಿ. ಸೋಮಶೇಖರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಕಾರ್ಯದರ್ಶಿ ಅಜಯ್ ನಾಗಭೂಷಣ್, ನಿರ್ದೇಶಕಿ ಧರಣೀದೇವಿ ಮಾಲಗತ್ತಿ ಉಪಸ್ಥಿತರಿದ್ದರು.

ದಕ್ಷಿಣಕ್ಕೆ 2ನೇ ವಿಮಾನ ನಿಲ್ದಾಣ: ಮನವಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ದೇಶಿತ ಎರಡನೇ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಬೆಂಗಳೂರು ದಕ್ಷಿಣ ಭಾಗದಲ್ಲಿ ನಿರ್ಮಿಸಬೇಕು ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮತ್ತು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ ಅವರಿಗೆ ರಾಮನಗರ, ಮಂಡ್ಯ ಹಾಗೂ ಮೈಸೂರು ಭಾಗದ ಜನಪ್ರನಿಧಿಗಳು ಮನವಿ ಸಲ್ಲಿಸಿದ್ದಾರೆ.

ಶಾಸಕರಾದ ಎಚ್‌.ಎ. ಇಕ್ಬಾಲ್ ಹುಸೇನ್, ಎಚ್‌. ಸಿ. ಬಾಲಕೃಷ್ಣ, ಪಿ.ಎಂ. ನರೇಂದ್ರಸ್ವಾಮಿ, ಎ.ಬಿ.ರಮೇಶ್ ಬಂಡಿಸಿದ್ದೇಗೌಡ, ಕೆ.ಎಂ. ಉದಯ್, ಪಿ. ರವಿಕುಮಾರ್, ಶಿವಣ್ಣ, ಎನ್. ಶ್ರೀನಿವಾಸ್, ವಿಧಾನ ಪರಿಷತ್ ಸದಸ್ಯರಾದ ಎಸ್. ರವಿ, ದಿನೇಶ್ ಗೂಳಿಗೌಡ, ಪುಟ್ಟಣ್ಣ ಮತ್ತು ಮಂಡ್ಯ ಲೋಕಸಭಾ ಕಾಂಗ್ರೆಸ್ ಅಭ್ಯರ್ಥಿ ಸ್ಟಾರ್ ಚಂದ್ರು (ವೆಂಕಟರಮಣೆ ಗೌಡ) ಅವರು ಈ ಬೇಡಿಕೆ ಇಟ್ಟಿದ್ದಾರೆ.

‘ಬೆಂಗಳೂರಿನ ಉತ್ತರ ಭಾಗದಲ್ಲಿರುವ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಸಂಚರಿಸುವ ಪ್ರಯಾಣಿಕರ ಪೈಕಿ ಅರ್ಧದಷ್ಟು ಪ್ರಯಾಣಿಕರು ದಕ್ಷಿಣ ಭಾಗದವರೇ ಆಗಿದ್ದಾರೆ. ಎಲೆಕ್ಟ್ರಾನಿಕ್ ಸಿಟಿ, ಬೊಮ್ಮನಹಳ್ಳಿ, ಬನ್ನೇರುಘಟ್ಟ ರಸ್ತೆ, ಜಯನಗರ, ಜೆ.ಪಿ. ನಗರ, ಕನಕಪುರ ರಸ್ತೆ, ಮೈಸೂರು ರಸ್ತೆ, ಮಾಗಡಿ ರಸ್ತೆ ಸೇರಿದಂತೆ ಬೆಂಗಳೂರು ದಕ್ಷಿಣ ಭಾಗದ ಪ್ರಯಾಣಿಕರು ಹೆಚ್ಚಿನ ಸಂಖ್ಯೆಯಲ್ಲಿ ಪ್ರಯಾಣಿಸುತ್ತಿರುವುದರಿಂದ ಎರಡನೇ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಬೆಂಗಳೂರು ದಕ್ಷಿಣ ಭಾಗದಲ್ಲಿ ನಿರ್ಮಿಸಿದರೆ ಈ ಭಾಗದ ಜನತೆಗೆ ಅನುಕೂಲ ಆಗುವುದರ ಜತೆಗೆ ಇಲ್ಲಿ ವಾಣಿಜ್ಯ ಚಟುವಟಿಕೆಗಳೂ ಗರಿಗೆದರಲಿದೆ’ ಎಂದು ಮನವಿಯಲ್ಲಿ ಉಲ್ಲೇಖಿಸಿದ್ದಾರೆ.

‘ಸದಾ ಸಂಚಾರ ದಟ್ಟಣೆಯ ತುಮಕೂರು ರಸ್ತೆಗಿಂತ ಮೈಸೂರು ರಸ್ತೆಯ ಸಂಚಾರ ದಟ್ಟಣೆ ತೀರ ವಿರಳ. ಬೆಂಗಳೂರು- ಮೈಸೂರು ಹೆದ್ದಾರಿಯಿಂದ ಮೈಸೂರು ರಸ್ತೆಯ ಸಂಚಾರ ದಟ್ಟಣೆ ಇಳಿಮುಖವಾಗಿದೆ. ಈ ಎಲ್ಲ ಅಂಶಗಳನ್ನು ಆಧಾರವಾಗಿ ಇಟ್ಟುಕೊಂಡು ಉದ್ದೇಶಿತ ಎರಡನೇ ಅಂತರರಾಷ್ಟ್ರೀಯ ವಿಮಾನ ನಿಲ್ದಾಣವನ್ನು ಬೆಂಗಳೂರು ದಕ್ಷಿಣ ಭಾಗದಲ್ಲಿ ನಿರ್ಮಿಸುವ ಕುರಿತು ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ, ಅನುಮೋದನೆ ನೀಡಬೇಕು’ ಎಂದೂ ಕೋರಿದ್ದಾರೆ.

ಬಾಳಾಸಾಹೇಬ, ಚಾಂದಿನಿಗೆ ಹಂಪನಾ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಡೋಜ ಕಮಲಾ ಹಂಪನಾ ಸಾಹಿತ್ಯ ವೇದಿಕೆ ನೀಡುವ ‘ಕಮಲಾ ಹಂಪನಾ ಪ್ರಶಸ್ತಿ’ಗೆ ಸಂಶೋಧಕ ಬಾಳಾಸಾಹೇಬ ಲೋಕಾಪುರ ಹಾಗೂ ಕವಯಿತ್ರಿ ಚಾಂದಿನಿ ಆಯ್ಕೆಯಾಗಿದ್ದಾರೆ.

ಬಾಳಾಸಾಹೇಬ

ಚಾಂದಿನಿ

ಪ್ರಶಸ್ತಿಯು ತಲಾ ₹ 10 ಸಾವಿರ ನಗದು ಹಾಗೂ ಪ್ರಶಸ್ತಿ ಫಲಕವನ್ನು ಒಳಗೊಂಡಿದೆ. ವೇದಿಕೆಯ ಸಹಯೋಗದಲ್ಲಿ ಕರ್ನಾಟಕ ಲೇಖಕಿಯರ ಸಂಘವು ಇದೇ 28ರಂದು ಜೆ.ಸಿ. ರಸ್ತೆಯ ನಯನ ಸಭಾಂಗಣದಲ್ಲಿ ಸಂಜೆ 4 ಗಂಟೆಗೆ ಸಮಾರಂಭ ಹಮ್ಮಿಕೊಂಡಿದೆ.

ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್ ಪ್ರಶಸ್ತಿ ಪ್ರದಾನ ಮಾಡಲಿದ್ದಾರೆ. ಸಾಹಿತಿ ಹಂ.ಪ. ನಾಗರಾಜಯ್ಯ ಅಧ್ಯಕ್ಷತೆ ವಹಿಸುತ್ತಾರೆ ಎಂದು ಪ್ರಕಟಣೆ ತಿಳಿಸಿದೆ.

26ಕ್ಕೆ ನಿಮ್ಹಾನ್ಸ್‌ನಲ್ಲಿ ನಡಿಗೆ

ಬೆಂಗಳೂರು: ಮಾನಸಿಕ ಆರೋಗ್ಯ ಹಾಗೂ ರೋಗಿಗಳ ಬಗ್ಗೆ ಇರುವ ತಪ್ಪು ಕಲ್ಪನೆಗಳನ್ನು ಹೋಗಲಾಡಿಸಲು ರಾಷ್ಟ್ರೀಯ ಮಾನಸಿಕ ಆರೋಗ್ಯ ಮತ್ತು ನರವಿಜ್ಞಾನ ಸಂಸ್ಥೆಯು (ನಿಮ್ಹಾನ್ಸ್) ಇದೇ 26ಕ್ಕೆ ‘ವಾಕಿಂಗ್ ಟೂರ್ ಆಫ್ ನಿಮ್ಹಾನ್ಸ್’ ಅಭಿಯಾನ ಹಮ್ಮಿಕೊಂಡಿದೆ.

ಬೆಳಿಗ್ಗೆ 8.45ಕ್ಕೆ ಸಂಸ್ಥೆಯ ಡಾ.ಎಂ.ವಿ. ಗೋವಿಂದಸ್ವಾಮಿ ಕೇಂದ್ರದಲ್ಲಿ ನಡಿಗೆ ಪ್ರಾರಂಭವಾಗಲಿದೆ. 300 ಎಕರೆ ವಿಸ್ತೀರ್ಣ ಹೊಂದಿರುವ ನಿಮ್ಹಾನ್ಸ್ ಕ್ಯಾಂಪಸ್‌ನ ವಿಶೇಷತೆಗಳನ್ನು ಸಂಸ್ಥೆಯ ವೈದ್ಯರು ಪರಿಚಯ ಮಾಡಿಸಲಿದ್ದಾರೆ. ಸಂಸ್ಥೆಯು 2019ರಿಂದ ಈ ಅಭಿಯಾನ ನಡೆಸುತ್ತಿದೆ.

ಆನೆ ತೊಳೆಯುತ್ತಿದ್ದ ಕಾವಾಡಿ ಕೆರೆಯಲ್ಲಿ ಮುಳಗಿ ಸಾವು

ಪ್ರಜಾವಾಣಿ ವಾರ್ತೆ

ಆನೇಕಲ್: ಬನ್ನೇರುಘಟ್ಟ ಜೈವಿಕ ಉದ್ಯಾನದ ಆನೆ ಕ್ಯಾಂಪ್ ಸೀಗೆಕಟ್ಟೆ ಬಳಿ ಬುಧವಾರ ಕೆರೆಯಲ್ಲಿ ಆನೆ ಸ್ನಾನ ಮಾಡಿಸುತ್ತಿದ್ದ ಕಾವಾಡಿಯೊಬ್ಬರು ನೀರಿನಲ್ಲಿ ಮುಳಗಿ ಮೃತಪಟ್ಟಿದ್ದಾರೆ.

ಮೈಸೂರು ಜಿಲ್ಲೆಯ ಹುಣಸೂರಿನ ಗೋಪಾಲ್ (20) ಮೃತ ಕಾವಾಡಿ. ಗೋಪಾಲ್ ಒಂದೂವರೆ ವರ್ಷದಿಂದ ಸಂಪತ್ ಎಂಬ 10 ವರ್ಷದ ಆನೆ ನೋಡಿಕೊಳ್ಳುತ್ತಿದ್ದರು.

ಮೈ ತೊಳೆಯಲು ಕೆರೆಗೆ ಕರೆದೊಯ್ದಿದ್ದ ಆನೆ ದಡದಿಂದ ಏಕಾಏಕಿ ಮಧ್ಯಕ್ಕೆ ಹೋಗಿದೆ. ಆನೆ ಮೇಲಿದ್ದ ಗೋಪಾಲ್ ನೀರಿಗೆ ಬಿದ್ದಿದ್ದಾರೆ. ಈಜು ಬಾರದೆ ನೀರಿನಲ್ಲಿ ಮುಳಗುತ್ತಿದ್ದನ್ನು ನೋಡಿದ ಆತನ ಅಣ್ಣ ಕೃಷ್ಣಕುಮಾರ್ ಮತ್ತು ಮಾವುತ ಸಂಜೇಶ್ ಇಬ್ಬರೂ ಸೇರಿ ಗೋಪಾಲ್‌ನನ್ನು ರಕ್ಷಿಸಲು ಯತ್ನಿಸಿದ್ದಾರೆ. ಆದರೆ ಗೋಪಾಲ್ ಕೆರೆಯಲ್ಲಿ ಮುಳುಗಿದ್ದಾರೆ.

ಕೂಡಲೇ ಉದ್ಯಾನದ ಸಿಬ್ಬಂದಿ ಬನ್ನೇರುಘಟ್ಟ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ. ಮುಳುಗು ತಜ್ಞರು, ಅಗ್ನಿಶಾಮಕದಳದ ಸಿಬ್ಬಂದಿ ಮೂರು ತಾಸು ಕಾರ್ಯಾಚರಣೆ ನಡೆಸಿ ಮೃತದೇಹ ಹೊರತೆಗೆದರು. ಮರಣೋತ್ತರ ಪರೀಕ್ಷೆಗೆ ವಿಕ್ಟೋರಿಯಾ ಆಸ್ಪತ್ರೆಗೆ ರವಾನಿಸಲಾಗಿದೆ.

ಘನತ್ಯಾಜ್ಯ ವಿಲೇವಾರಿ: ವರದಿ ಸಲ್ಲಿಕೆಗೆ ಗಡುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ವ್ಯಾಪ್ತಿಯ ದಾಸರಹಳ್ಳಿ ವಲಯದಲ್ಲಿ ಘನತ್ಯಾಜ್ಯ ವಿಲೇವಾರಿ ಹಾಗೂ ಕೆರೆಗಳ ಒತ್ತುವರಿ ತೆರವಿಗೆ ಕೈಗೊಂಡ ಕ್ರಮಗಳ ಕುರಿತು ಡಿ.20ರೊಳಗೆ ವರದಿ ಸಲ್ಲಿಸುವಂತೆ ಬಿಬಿಎಂಪಿ ಅಧಿಕಾರಿಗಳಿಗೆ ಲೋಕಾಯುಕ್ತ ನ್ಯಾಯಮೂರ್ತಿ ಬಿ.ಎಸ್. ಪಾಟೀಲ ನಿರ್ದೇಶನ ನೀಡಿದ್ದಾರೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಘನತ್ಯಾಜ್ಯ ವಿಲೇವಾರಿ, ಕೆರೆಗಳ ಸಂರಕ್ಷಣೆ ಮತ್ತು ಅಭಿವೃದ್ಧಿಯನ್ನು ಖಾತ್ರಿ ಪಡಿಸಿಕೊಳ್ಳುವಿಕೆಗೆ ಸಂಬಂಧಿಸಿದಂತೆ ಸ್ವಯಂ ಪ್ರೇರಿತ ದೂರು ದಾಖಲಿಸಿಕೊಂಡಿದ್ದ ಲೋಕಾಯುಕ್ತರು, ಈ ಬಗ್ಗೆ ವಿಚಾರಣೆ ನಡೆಸುತ್ತಿದ್ದಾರೆ. ಪಾಲಿಕೆಯ ಎಂಟು ವಲಯಗಳಲ್ಲಿ ದಾಸರಹಳ್ಳಿಯ ವಲಯದ ವಿಚಾರಣೆಯು ಸೋಮವಾರ ನಡೆದಿದ್ದು, ಕಸದ ಸಂಗ್ರಹ, ಆಟೊ ರಿಕ್ಷಾ ಟಿಪ್ಪರ್ ಬಳಕೆ ಸೇರಿ ವಿವಿಧ ಮಾಹಿತಿಗಳನ್ನು ಒಳಗೊಂಡ ವರದಿ ಸಲ್ಲಿಕೆಗೆ ನಾಲ್ಕು ವಾರಗಳ ಗಡುವನ್ನು ಪಾಲಿಕೆ ಅಧಿಕಾರಿಗಳಿಗೆ ನೀಡಲಾಗಿದೆ.

ಯಾವ ಮನೆಯಿಂದ? ಯಾವ ಆಟೊ ರಿಕ್ಷಾ ಟಿಪ್ಪರ್‌ಗಳು ಕಸ ಸಂಗ್ರಹಿಸುತ್ತಿವೆ? ಎಂಬ ವಿವರವನ್ನು ಸಲ್ಲಿಸಬೇಕು. ಘನತ್ಯಾಜ್ಯ ನೀಡದೇ ಇರುವ ಮನೆ ಮಾಲೀಕರಿಗೆ, ಎಲ್ಲೆಂದರಲ್ಲಿ ಕಸ ಬಿಸಾಡುವುದರಿಂದ ಆರೋಗ್ಯದ ಮೇಲಾಗುವ ದುಷ್ಪರಿಣಾಮದ ಬಗ್ಗೆ ಜಾಗೃತಿ ಮೂಡಿಸುವ ಕಾರ್ಯಕ್ರಮ ನಡೆಸಬೇಕು ಎಂದು ಸೂಚಿಸಲಾಯಿತು.

ಹೆಚ್ಚಿನ ಆಟೊ ರಿಕ್ಷಾ ಟಿಪ್ಪರ್‌ಗಳ ಅವಶ್ಯಕತೆಯ ಬಗ್ಗೆ ಯೋಜನಾ ವರದಿ, ವಲಯದ ವ್ಯಾಪ್ತಿಯಲ್ಲಿ ಬರುವ 10 ಕೆರೆಗಳ ಸ್ಥಿತಿಗತಿ ಬಗ್ಗೆ ವಿಸ್ತ್ರತ ವರದಿಯನ್ನು ನಾಲ್ಕು ವಾರಗಳೊಗೆ ಸಲ್ಲಿಸಬೇಕು. ಬೀದಿ ನಾಯಿಗಳ ಕಾಟದಿಂದ ಜನರ ರಕ್ಷಣೆಗೆ ತೆಗೆದುಕೊಂಡ ಕ್ರಮದ ಬಗ್ಗೆ ವರದಿ ನೀಡಬೇಕು. ಬೀದಿ ನಾಯಿಗಳಿಗೆ ಆಹಾರ ಒದಗಿಸುವುದು, ಚುಚ್ಚು ಮದ್ದು ನೀಡುವುದು, ಬೀದಿ ನಾಯಿಗಳ ಸಂತತಿಯನ್ನು ನಿಯಂತ್ರಿಸುವ ಕಾರ್ಯಕ್ರಮಗಳ ಮಾಹಿತಿಯನ್ನು ವರದಿ ಒಳಗೊಂಡಿರಬೇಕು ಎಂದು ನಿರ್ದೇಶನ ನೀಡಲಾಯಿತು.

ಬಿ.ಎಸ್. ಪಾಟೀಲ

ದಾಸರಹಳ್ಳಿ ವಲಯದ ವ್ಯಾಪ್ತಿಯಲ್ಲಿರುವ ಕೆರೆಗಳಿಗೆ ತ್ಯಾಜ್ಯ ನೀರು ಹರಿಯದಂತೆ ಕ್ರಮವಹಿಸಬೇಕು ಎಂದು ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಗಳು, ಕೆರೆಗಳ ವಿಭಾಗದ ಕಾರ್ಯಪಾಲಕ ಎಂಜಿನಿಯರ್‌ಗಳಿಗೆ ಸೂಚಿಸಲಾಯಿತು.

ಕೈಗಾರಿಕೆಗಳು ವಿಷಯುಕ್ತ ಅನಿಲವನ್ನು ವೈಜ್ಞಾನಿಕ ರೀತಿಯಲ್ಲಿ ಸಂಸ್ಕರಿಸದೆ ಹೊರ ಬಿಡುತ್ತಿವೆ. ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗದಂತೆ ಕ್ರಮವಹಿಸಲು ಸಂಬಂಧಿಸಿದ ಪರಿಸರ ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರಿಯನ್ನು ಪ್ರಕರಣದಲ್ಲಿ ಎದುರುದಾರರನ್ನಾಗಿ ಸೇರ್ಪಡೆಗೊಳಿಸುವಂತೆ ಕಚೇರಿಗೆ ಆದೇಶಿಸಿ, ಅವರಿಂದ ವರದಿಯನ್ನು ಪಡೆಯಬೇಕು ಎಂದು ಸೂಚಿಸಲಾಯಿತು.

ನಗರದಲ್ಲಿ ಇಂದು

‘ಮಾಹಿತಿ ಹಕ್ಕು ದಿನಾಚರಣೆ’ ಐದನೇ ವಾರ್ಷಿಕೋತ್ಸವ: ಸಾನಿಧ್ಯ: ಚಂದ್ರಶೇಖರ ಶಿವಾಚಾರ್ಯ ಸ್ವಾಮೀಜಿ, ಜ್ಞಾನಪ್ರಕಾಶ ಸ್ವಾಮೀಜಿ, ಉದ್ಘಾಟನೆ: ಎನ್. ಸಂತೋಷ ಹೆಗ್ಡೆ, ಅತಿಥಿ: ಡಿ. ರೂಪಾ ಮೌದ್ಗಿಲ್, ಅಧ್ಯಕ್ಷತೆ: ರಮೇಶ್ ಕುಣಿಗಲ್, ಉಪಸ್ಥಿತಿ: ಚನ್ನಯ್ಯ ಎಂ. ವಸ್ತ್ರದ್, ಓಂಕಾರಪ್ಪ, ಆಯೋಜನೆ: ರಾಜ್ಯ ಮಾಹಿತಿ ಹಕ್ಕು ಮತ್ತು ಸಾಮಾಜಿಕ ಕಾರ್ಯಕರ್ತರ ವೇದಿಕೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಬೆಳಿಗ್ಗೆ 10.30

‘ವಾಮನ ಚರಿತ್ರೆ’ ಯಕ್ಷಗಾನ ಪ್ರದರ್ಶನ: ಹಿಮ್ಮೇಳ: ಕೊಳಗಿ ಕೇಶವ ಹೆಗಡೆ, ಕಾರ್ತಿಕ ಧಾರೇಶ್ವರ, ಚಿನ್ಮಯ ಹೆಗಡೆ ಅಂಬಾರಗೋಡ್ಲು, ಮುಮ್ಮೇಳ: ಉಮಾಕಾಂತ ಭಟ್ ಕೆರೇಕೈ, ಉಜಿರೆ ಅಶೋಕ ಭಟ್, ಶಶಾಂಕ ಅರ್ನಾಡಿ, ಆಯೋಜನೆ: ಕುರಿಯ ವಿಠಲ ಶಾಸ್ತ್ರಿ ಸಾಂಸ್ಕೃತಿಕ ಪ್ರತಿಷ್ಠಾನ, ಸ್ಥಳ: ಹಿಂದೂ ಧಾರ್ಮಿಕ ಸಭಾಭವನ, ಪಾಪರೆಡ್ಡಿ ಪಾಳ್ಯ, ನಾಗರಬಾವಿ, ಸಂಜೆ 5

'ಪ್ರೊ. ಸತೀಶ್ ಧವನ್ ಸ್ಮಾರಕ ದತ್ತಿ ಉಪನ್ಯಾಸ: ಎಸ್. ಸೀತಾರಾಮು, ಉಪಸ್ಥಿತಿ: ಎಂ. ನಾಗರಾಜ್, ಎಂ. ಲಕ್ಷ್ಮಣ, ಆಯೋಜನೆ ಮತ್ತು ಸ್ಥಳ: ದಿ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರ್ಸ್, ಡಾ.ಬಿ.ಆರ್. ಅಂಬೇಡ್ಕರ್ ವೀಧಿ, ಸಂಜೆ 5.30

42ನೇ ಬಹುಭಾಷಾ ಸಂಗೀತ ಸ್ಪರ್ಧೆಯ ಉದ್ಘಾಟನೆ: ಚೇತನ್ ಜಯಸಿಂಗ್ ಪಾಟೀಲ್ ಔಟಿ, ಅಧ್ಯಕ್ಷತೆ: ನರಸಿಂಹ ನಾಯ್ಕ್, ಆಯೋಜನೆ:ಭಾರತ್ ಎಲೆಕ್ಟ್ರಾನಿಕ್ಸ್ ಲಲಿತಕಲಾ ಸಂಘ, ಸ್ಥಳ: ರಾಷ್ಟ್ರಕವಿ ಕುವೆಂಪು ಕಲಾಕ್ಷೇತ್ರ, ಜಾಲಹಳ್ಳಿ, ಸಂಜೆ 6

‘ದುರ್ಯೋಧನ ವಿಲಾಪ’ ಕುರಿತು ಉಪನ್ಯಾಸ: ಎಚ್.ಸಿ. ಮಲ್ಲೇಶ್, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ್ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ಹರಿನಾಮ ಸಂಕೀರ್ತನೆ: ಗಾಯನ: ಮಾನಸ, ಪಿಟೀಲು: ಸುಬೋಧ ಎಂ. ಶ್ರೀವತ್ಸ, ಮೃದಂಗ: ಆರ್. ಎಸ್. ಪ್ರಶಾಂತ್, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಒಂದನೇ ಮುಖ್ಯರಸ್ತೆ, ಪವಮಾನಪುರ, ಸಂಜೆ 7

ಭರತನಾಟ್ಯ ಪ್ರದರ್ಶನ: ಸಮುದ್ಭವ ಕಲೆ ಮತ್ತು ಸಂಸ್ಕೃತ ಸಂಸ್ಥೆಯ ವಿದ್ಯಾರ್ಥಿಗಳು, ನಿರ್ದೇಶನ: ಪ್ರಿಯಾ ಗಣೇಶ್, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಐದನೇ ಬಡಾವಣೆ ಜಯನಗರ, ಸಂಜೆ 7.30

ಕಾ.ತ.ಚಿಕ್ಕಣ್ಣ ಅವರ ‘ಸಮಗ್ರ ಸಾಹಿತ್ಯ ಸಂಪುಟಗಳ’ ಬಿಡುಗಡೆ: ಹಂ.ಪ. ನಾಗರಾಜಯ್ಯ, ಬರಗೂರು ರಾಮಚಂದ್ರಪ್ಪ, ಬಂಜಗೆರೆ ಜಯಪ್ರಕಾಶ್, ಅಧ್ಯಕ್ಷತೆ: ಎಚ್. ಎಂ. ರೇವಣ್ಣ, ಆಶಯ ನುಡಿ: ಜಾಣಗೆರೆ ವೆಂಕಟರಾಮಯ್ಯ, ಆಯೋಜನೆ: ಬಿ.ವಿ ಕಾರಂತ ಇಂಡಿಯನ್ ಆಕ್ಟಿಂಗ್ ಅಕಾಡೆಮಿ ಟ್ರಸ್ಟ್, ಜನಮನ ಪ್ರತಿಷ್ಠಾನ, ಸಿರವರ ಕಲ್ಚರಲ್ ಅಕಾಡೆಮಿ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ 5



ಹಂ.ಪ. ನಾಗರಾಜಯ್ಯ

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ಆಮಂತ್ರಣ ಪತ್ರಿಕೆಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ನಿವೃತ್ತಿ
ಮುಂಬೈ ಪೊಲೀಸ್‌ನ ಬಾಂಬ್ ಪತ್ತೆ ಮತ್ತು ನಿಷ್ಕ್ರಿಯ ದಳದ ಶ್ವಾನಗಳಾದ ಆಸ್ಕರ್ ಮತ್ತು ಮೈಲೊ ಸೇವೆಯಿಂದ ನಿವೃತ್ತಿಗೊಂಡಿದ್ದು ಸಿಬ್ಬಂದಿ ಜೊತೆ ಬುಧವಾರ ಕಾಣಿಸಿಕೊಂಡಿದ್ದು ಹೀಗೆ

ನಾಗೇಂದ್ರ ಜಾಮೀನು ರದ್ದು ಕೋರಿ ಇ.ಡಿ ಅರ್ಜಿ 7
‘ಎಕ್ಸ್’ ವಿರುದ್ಧ ಕೇಂದ್ರ ಸರ್ಕಾರ ಚಾಟಿ 11
‘ಡಾನಾ’ಗೆ ಒಡಿಶಾ, ಪಶ್ಚಿಮ ಬಂಗಾಳ ಸಜ್ಜು 11
ವಾಯು ಮಾಲಿನ್ಯ: ಕೇಂದ್ರದ ಬಗ್ಗೆ ಅತೃಪ್ತಿ 10

ದುರಂತ ಸ್ಥಳದಲ್ಲಿ ಕೆಲಸಗಾರರ ಕುಟುಂಬಸ್ಥರ ಆಕ್ರಂದನ, ಕಣ್ಣೀರು • 35 ಗಂಟೆ ರಕ್ಷಣಾ ಕಾರ್ಯ

ಕುಸಿದ ಕಟ್ಟಡ; ಕಸಿದ ಬದುಕು

• ಆದಿತ್ಯ ಕೆ.ಎ.

ಬೆಂಗಳೂರು: ‘ಹೊಟ್ಟೆಪಾಡಿಗಾಗಿ ಊರು ತೊರೆದು ಬಂದಿದ್ದೆವು. ವಯಸ್ಸಾದ ತಂದೆ–ತಾಯಿ, ಪುಟ್ಟ ಮಕ್ಕಳನ್ನು ಸಾಕಲು ಹಗಲಿರುಳು ದುಡಿಯುತ್ತಿದ್ದೆವು. ಮಂಗಳವಾರ ಬೆಳಿಗ್ಗೆ ಕರೆ ಮಾಡಿ ರಾತ್ರಿ ಊಟಕ್ಕೆ ಬರುವಂತೆ ಗೆಳೆಯ ಕೋರಿದ್ದ. ಆದರೆ, ಸಂಜೆ ವೇಳೆಗೆ ಅವನೇ ಇಲ್ಲ’ ಎಂದು ಕಟ್ಟಡ ಕುಸಿತದಿಂದ ಸಂಭವಿಸಿದ ದುರಂತದಲ್ಲಿ ಮೃತಪಟ್ಟ ತಿರುಪಾಲಿ ಅವರನ್ನು ನೆನೆದು ಸ್ನೇಹಿತ ರಮೇಶ್ ಕುಮಾರ್ ಕಣ್ಣೀರಾದರು.

ಬಾಬು ಸಾ ಪಾಳ್ಯದ ಅಂಜನಾದ್ರಿ ಎನ್‌ಕ್ಲೇವ್‌ನಲ್ಲಿ ಬುಡಮೇಲಾಗಿ ಉರುಳಿಬಿದ್ದ ಕಟ್ಟಡದ ಅವಶೇಷಗಳ ಎದುರು ಉಳಿದವರಾದರೂ ಬದುಕಿ ಬರಲೆಂದು ಬಿಹಾರ, ಆಂಧ್ರಪ್ರದೇಶದ ವಿವಿಧ ಊರುಗಳು ಹಾಗೂ ರಾಜ್ಯದ ಯಾದಗಿರಿಯ ಕಾರ್ಮಿಕರ ಕುಟುಂಬಸ್ಥರು ಬುಧವಾರ ಕಾದು ಕುಳಿತಿದ್ದರು. ರಕ್ಷಣಾ ಸಿಬ್ಬಂದಿ ಒಂದೊಂದಾಗಿ ಮೃತದೇಹ ಹೊರಕ್ಕೆ ತೆಗೆಯುತ್ತಿದ್ದಂತೆಯೇ ಅವರ ಭರವಸೆ, ಆಸೆಗಳು ಕ್ಷಣದಿಂದ ಕ್ಷಣಕ್ಕೆ ಕ್ಷೀಣಿಸುತ್ತಿದ್ದವು. ಆಕ್ರಂದನ ಮುಗಿಲು ಮುಟ್ಟಿತ್ತು.

‘ಕಳೆದ ವಾರ ಇದೇ ಕಟ್ಟಡದಲ್ಲಿ ನಾನೂ ಟೈಲ್ಸ್ ಕೆಲಸಕ್ಕೆಂದು ಬಂದಿದ್ದೆ. ಈ ವಾರ ಬಂದಿರಲಿಲ್ಲ. ಬೇರೆ ಮೇಸ್ತ್ರಿಯೊಂದಿಗೆ ಕೆಲಸಕ್ಕೆ ತೆರಳಿದ್ದೆ. ನಾನೂ ಬಂದಿದ್ದರೆ ಕಥೆ ಮುಗಿಯುತ್ತಿತ್ತು’ ಎನ್ನುತ್ತಾ ರಮೇಶ್ ಅವರು ಭಾವುಕರಾದರು.

‘ತಿರುಪಾಲಿ ಕುಟುಂಬಕ್ಕೆ ಈ ವಿಷಯವನ್ನು ಹೇಗೆ ತಿಳಿಸಲಿ’ ಎಂದು ಗೋಳಾಡುತ್ತಿದ್ದ ರಮೇಶ್ ಅವರನ್ನು ಉಳಿದವರು ಸಂತೈಸುತ್ತಿದ್ದರು. ರಕ್ಷಣಾ ಸಿಬ್ಬಂದಿ ತಮಗಾಗಿ ತಂದಿದ್ದ ಕುಡಿಯುವ ನೀರನ್ನೇ ನೀಡಿ ಸಮಾಧಾನ ಪಡಿಸಿದರು. ಅಷ್ಟಾದರೂ ರಮೇಶ್ ಅವರ ಕಣ್ಣಾಲಿಗಳು ತೇವಗೊಳ್ಳುತ್ತಲೇ ಇದ್ದವು.

ಜೊತೆಯಲ್ಲೇ ಹಲವು ವರ್ಷದಿಂದ ಕೆಲಸ ಮಾಡುತ್ತಿದ್ದವರನ್ನು ಕಳೆದುಕೊಂಡ ದುಃಖದಲ್ಲಿ ಸಹ ಕಾರ್ಮಿಕರಿದ್ದರು. ಮೇಲಿನ ಅಂತಸ್ತಿನಲ್ಲಿ ಕೆಲಸ ಮಾಡುತ್ತಿದ್ದ ಸೋಲೊ ಪಾಸ್ವಾನ್‌ಗಾಗಿ ಸ್ನೇಹಿತ ಮೋಹನ್ ಕುಮಾರ್ ಹುಡುಕಾಟ ನಡೆಸುತ್ತಿದ್ದರು. ಕಟ್ಟಡ ಕುಸಿದ ಸ್ಥಳವು ಕಾರ್ಮಿಕರ ಕಣ್ಣೀರಿನ ಕಥೆಗೆ ಸಾಕ್ಷಿಯಾಗಿತ್ತು. ದುರಂತದ ಸ್ಥಳ ವೀಕ್ಷಿಸಲು ಸಾವಿರಾರು ಮಂದಿ ಬಂದು ಹೋಗುತ್ತಿದ್ದರು.

ಕಿರಿದಾದ ಸ್ಥಳದಲ್ಲಿ 13 ತಾಸು: ಕಟ್ಟಡ ಬುಡಮೇಲಾದ ಸಂದರ್ಭದಲ್ಲಿ ಆಯಾಜ್ ಪಾಷಾ ಅವರು ಮಧ್ಯದ ಅಂತಸ್ತಿನಲ್ಲಿ ಕೆಲಸ ಮಾಡುತ್ತಿದ್ದರು. ಅವಶೇಷಗಳ ಅಡಿ ಪುಟ್ಟ ಜಾಗದಲ್ಲಿ ಸಿಲುಕಿಕೊಂಡಿದ್ದರು. ತಲೆಯ ಮೇಲೆ ಕಟ್ಟಿಗೆಗಳು ಬಿದ್ದಿದ್ದವು. ರಾತ್ರಿಯಿಡೀ ಕಾರ್ಯಾಚರಣೆ ನಡೆಸಿ ಬುಧವಾರ ನಸುಕಿನ ವೇಳೆ ಆಯಾಜ್ ಪಾಷಾ ಇದ್ದ ಸ್ಥಳವನ್ನು ಪತ್ತೆ ಹಚ್ಚಲಾಯಿತು. 13 ತಾಸಿನ ಬಳಿಕ ರಕ್ಷಿಸಿ ಆಸ್ಪತ್ರೆಗೆ ದಾಖಲಿಸಲಾಯಿತು.

ಮತ್ತೊಬ್ಬ ಕಾರ್ಮಿಕ ಕಟ್ಟಡ ಬುಡಮೇಲಾಗುತ್ತಿರುವುದನ್ನು ಗಮನಿಸಿ ಮೇಲಂತಸ್ತಿಗೆ ತೆರಳಿ ಮರದ ಕೊಂಬೆ ನೆರವಿನಿಂದ ಪಾರಾಗಿದ್ದಾರೆ ಎಂದು ಪ್ರತ್ಯಕ್ಷದರ್ಶಿಗಳು ‘ಪ್ರಜಾವಾಣಿ’ಗೆ ತಿಳಿಸಿದರು.

‘ಒಂದು ತಿಂಗಳಿಂದ ಟೈಲ್ಸ್ ಕೆಲಸ ಮಾಡುತ್ತಿದ್ದೆವು. ಕೆಲಸಕ್ಕಾಗಿ ನಮ್ಮನ್ನು ಮೇಸ್ತ್ರಿ ಕರೆತಂದಿದ್ದರು. ಮಾಲೀಕರನ್ನು ನೋಡಿಲ್ಲ. ಮಂಗಳವಾರ ಮಧ್ಯಾಹ್ನ ಮಳೆ ಬಂದು ನಿಂತ ಕೆಲವೇ ಕ್ಷಣಗಳಲ್ಲಿ ಕಟ್ಟಡ ವಾಲಿತು. ಕ್ಷಣಾರ್ಧದಲ್ಲಿ ಧರೆಗುರುಳಿತು. ನಾನು ಸಿಲುಕಿಕೊಂಡಿದ್ದ ಸ್ಥಳದಲ್ಲಿ ಬಾಗಿಲಿತ್ತು. ಅದನ್ನು ಒದ್ದು ಹೊರಕ್ಕೆ ಬಂದು ಜೀವ ಉಳಿಸಿಕೊಂಡೆ’ ಎಂದು ಆಂಧ್ರಪ್ರದೇಶದ ಚಿತ್ತೂರಿನ ಪ್ರದೀಪ್ ರೆಡ್ಡಿ ಹೇಳಿದರು.

ನಿಟ್ಟುಸಿರು ಬಿಟ್ಟ ನಿವಾಸಿಗಳು: ಕುಸಿದ ಕಟ್ಟಡದ ಬಲಭಾಗದಲ್ಲಿ ನಾಲ್ಕರಿಂದ ಐದು ಅಂತಸ್ತಿನ ನಾಲ್ಕು ಮನೆಗಳಿವೆ. ಎಲ್ಲ ಮನೆಗಳಲ್ಲೂ ಮಾಲೀಕರು, ಬಾಡಿಗೆದಾರರು ನೆಲಸಿದ್ದಾರೆ. ಕಟ್ಟಡವು ಖಾಲಿ ನಿವೇಶನದ ಬದಲಿಗೆ ಪಕ್ಕದ ಕಟ್ಟಡಗಳತ್ತ ಬಿದ್ದಿದ್ದರೆ ಸಾವು– ನೋವು ಇನ್ನೂ ಹೆಚ್ಚಾಗುವ ಅಪಾಯವಿತ್ತು.

‘ಕಟ್ಟಡ ಕುಸಿಯುವ ಕೆಲವೇ ಕ್ಷಣಗಳ ಹಿಂದೆ ಅದೇ ಮಾರ್ಗದಲ್ಲಿ ಮನೆಗೆ ಬಂದಿದ್ದೆ. ದೇವರು ಕಾಪಾಡಿದ. ನಿತ್ಯ ಮನೆಯ ಎದುರೇ ಕೆಲಸ ಮಾಡುತ್ತಿದ್ದ ಕಾರ್ಮಿಕರು ಶವವಾಗಿ ಹೋದರು’ ಎಂದು ಕಾವೇರಿ ರೆಸಿಡೆನ್ಸಿಯ ನಿವಾಸಿ ಶಾಲಿಕಾ ಕಣ್ಣೀರು ಹಾಕಿದರು.

ನಾಗವಾರದ ಏಳುಮಲೈ ಅವರು ಸುರಕ್ಷಿತವಾಗಿ ಹೊರಬರುವ ನಿರೀಕ್ಷೆಯಲ್ಲಿ ಸಂಬಂಧಿ ಮಗೇಶ್ ಇದ್ದರು. ಕಲಬುರಗಿಯ ಜಗಮ್ಮ ಅವರು ಕಟ್ಟಡದಲ್ಲಿ ಶೌಚಾಲಯದಲ್ಲಿ ಸಿಲುಕಿಕೊಂಡಿದ್ದರು. ಅವರನ್ನೂ ರಕ್ಷಿಸಲಾಯಿತು.

‘ಮುಂದಿನ ತಿಂಗಳು ಗೃಹಪ್ರವೇಶ ನಡೆಸಲು ಮಾಲೀಕರು ನಿರ್ಧರಿಸಿದ್ದರು. ಬೇಗ ಕೆಲಸ ಮುಗಿಸುವಂತೆಯೂ ಗುತ್ತಿಗೆದಾರರಿಗೆ ಸೂಚಿಸಿದ್ದರು. ವೇಗವಾಗಿ ಕೆಲಸ ನಡೆಯುತ್ತಿತ್ತು’ ಎಂದು ಕಾರ್ಮಿಕರೊಬ್ಬರು ತಿಳಿಸಿದರು.

ಬೆಂಗಳೂರಿನ ಬಾಬು ಸಾ ಪಾಳ್ಯದಲ್ಲಿ ಕಟ್ಟಡ ಕುಸಿದ ಸ್ಥಳದಲ್ಲಿ ಎನ್‌ಡಿಆರ್‌ಎಫ್ ಸಿಬ್ಬಂದಿ ಕಾರ್ಯಾಚರಣೆ ನಡೆಸಿದರು ಪ್ರಜಾವಾಣಿ ಚಿತ್ರ/ಬಿ.ಕೆ.ಜನಾರ್ದನ್

ಕಾರ್ಯಾಚರಣೆ ಹೇಗಿತ್ತು?

- ಮಂಗಳವಾರ ಮಧ್ಯಾಹ್ನ 3.40ರ ಸುಮಾರಿಗೆ ಉರುಳಿದ ಕಟ್ಟಡ
- ಮಾಹಿತಿ ತಿಳಿದ ತಕ್ಷಣವೇ ಸ್ಥಳಕ್ಕೆ ತೆರಳಿದ ಅಗ್ನಿಶಾಮಕ ದಳ, ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ಹಾಗೂ ಸ್ಥಳೀಯ ಪೊಲೀಸರು
- ಮಂಗಳವಾರ ರಾತ್ರಿಯಿಡೀ ನಡೆದ ಕಾರ್ಯಾಚರಣೆ

ಸಾವಿನ ಸಂಖ್ಯೆ ಎಂಟಕ್ಕೆ ಏರಿಕೆ

ದುರಂತದಲ್ಲಿ ಸಾವಿನ ಸಂಖ್ಯೆ ಎಂಟಕ್ಕೆ ಏರಿಕೆ ಆಗಿದೆ. ಇನ್ನೂ ಇಬ್ಬರು ನಾಪತ್ತೆಯಾಗಿದ್ದು, ಅವರ ರಕ್ಷಣೆಗಾಗಿ ಕಾರ್ಯಾಚರಣೆ ಮುಂದುವರಿದಿದೆ.

ಬಿಹಾರದ ಅರ್ಮಾನ್ (26), ಮೊಹ್ಮದ್ ಸಾಹಿಲ್, ಶ್ರೀರಾನ್ ಕಿರುಪಾಲ, ಸೋಲೋ ಪಾಸ್ವಾನ್, ತಮಿಳುನಾಡಿನ ಮಣಿಕಂಠನ್, ಸತ್ಯರಾಜು, ಆಂಧ್ರಪ್ರದೇಶದ ತುಳಸಿ ರೆಡ್ಡಿ, ಉತ್ತರ ಪ್ರದೇಶದ ಪುಲ್ಚನ್ ಯಾದವ್ ಮೃತಪಟ್ಟಿದ್ದು, ಮೃತದೇಹಗಳನ್ನು ಹೊರಕ್ಕೆ ತೆಗೆಯಲಾಗಿದೆ. ಆಂಧ್ರಪ್ರದೇಶದ ಚಿತ್ತೂರಿನ ಗಜೇಂದ್ರ ಹಾಗೂ ಬೆಂಗಳೂರಿನ ನಾಗವಾರದ ಏಳುಮಲೈ ನಾಪತ್ತೆ ಆದವರು.

ಕಲಬುರಗಿಯ ಜಗಮ್ಮ(50), ಯಾದಗಿರಿಯ ನಾಗರಾಜು(25), ಬಿಹಾರದ ರಮೇಶ್ ಕುಮಾರ್ (28), ವಕೀಲ್ ಪಾಸ್ವಾನ್, ಅರ್ಮಾನ್ (22), ಅಯಾಜ್ (40) ಗಾಯಗೊಂಡಿದ್ದು ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಜಗಮ್ಮ ಹಾಗೂ ಆಯಾಜ್ ಸ್ಥಿತಿ ಗಂಭೀರವಾಗಿದೆ ಎಂದು ಮೂಲಗಳು ತಿಳಿಸಿವೆ.

ಎನ್‌ಡಿಆರ್‌ಎಫ್, ಎಸ್‌ಡಿಆರ್‌ಎಫ್ ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ನಿರಂತರ ಕಾರ್ಯಾಚರಣೆ ನಡೆಸಿ ಬಿಹಾರದ ಸಮಸ್ತಿಪುರದ ಅರ್ಮಾನ್, ಜಿಸಾನ್, ಮಹ್ಮದ್ ಸಾಹಿಲ್, ರಶೀದ್ (25), ಸಿತಾರೆ, ಇಲ್ತಾಫ್ (30), ಸೋಹಿಲ್ ಹಾಗೂ ಪ್ರದೀಪ್ ರೆಡ್ಡಿ ಅವರನ್ನು ರಕ್ಷಿಸಿದ್ದಾರೆ.

ಸೀಟು ಬ್ಲಾಕಿಂಗ್ ದಂಧೆ; ಶಂಕೆ

ಎಂಜಿನಿಯರಿಂಗ್: ದಾಖಲಾಗದ 2,348 ಮಂದಿಗೆ ನೋಟಿಸ್

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಪ್ರಮುಖ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ‘ಸೀಟ್ ಬ್ಲಾಕಿಂಗ್’ ದಂಧೆ ನಡೆದಿರುವ ಶಂಕೆ ವ್ಯಕ್ತವಾಗಿದ್ದು, ಪ್ರವೇಶ ಪಡೆಯದ 2,348 ವಿದ್ಯಾರ್ಥಿಗಳಿಗೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನೋಟಿಸ್ ನೀಡಿದೆ.

ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ನಡೆಸುವ ಸಿಇಟಿಯಲ್ಲಿ ಉನ್ನತ ರ‍್ಯಾಂಕ್ ಪಡೆದ ಪ್ರತಿಭಾವಂತ ವಿದ್ಯಾರ್ಥಿಗಳು ಎರಡನೇ ಸುತ್ತು ಪೂರ್ಣಗೊಳ್ಳುವವರೆಗೂ ಸೀಟು ಹಿಡಿದಿಟ್ಟುಕೊಂಡು ಕೊನೆಯ ಸುತ್ತಿನ ನಂತರ ತಮಗೆ ಹಂಚಿಕೆಯಾದ ಪ್ರಮುಖ ಕಾಲೇಜಿಗಳಿಗೆ ಪ್ರವೇಶ ಪಡೆಯದೇ ಇತರೆ ವಿದ್ಯಾರ್ಥಿಗಳಿಗೆ ನಷ್ಟ ಮಾಡಿದ್ದಾರೆ.

ಹೇಗೆ ಸೀಟ್ ಬ್ಲಾಕಿಂಗ್?: ಬೆಂಗಳೂರು ಸೇರಿದಂತೆ ರಾಜ್ಯದ ಪ್ರಮುಖ ಎಂಜಿನಿಯರಿಂಗ್ ಕಾಲೇಜುಗಳಲ್ಲಿ ಈ ಬಾರಿ ಕಂಪ್ಯೂಟರ್ ಸೈನ್ಸ್, ಕೃತಕ ಬುದ್ಧಿಮತ್ತೆ, ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್ ಸೇರಿದಂತೆ ಕೆಲ ಕೋರ್ಸ್‌ಗಳಿಗೆ ಬಹಳ ಬೇಡಿಕೆ ಇದ್ದು, ಆಡಳಿತ ಮಂಡಳಿ ಕೋಟಾದ ಸೀಟುಗಳಿಗೆ ₹60 ಲಕ್ಷದವರೆಗೂ ಹಣ ಪಡೆಯಲಾಗಿದೆ. ಇಂತಹ ಕಾಲೇಜುಗಳಲ್ಲಿ ಬೇಡಿಕೆ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಂಡರೂ ವಿದ್ಯಾರ್ಥಿಗಳು ಪ್ರವೇಶ ಪಡೆದಿಲ್ಲ.

ಸರ್ಕಾರ ಮತ್ತು ಅನುದಾನರಹಿತ ಎಂಜಿನಿಯರಿಂಗ್ ಕಾಲೇಜುಗಳ ಸಂಘದ ನಡುವಿನ ಒಪ್ಪಂದದ ಪ್ರಕಾರ ಎರಡನೇ ಸುತ್ತಿನ ಮುಂದುವರಿದ ಸೀಟು ಹಂಚಿಕೆ, ಪ್ರವೇಶ ಪ್ರಕ್ರಿಯೆ ನಂತರ ಬಾಕಿ ಉಳಿದ ಸೀಟುಗಳನ್ನು ಆಯಾ ಕಾಲೇಜುಗಳಿಗೆ ಬಿಟ್ಟು ಕೊಡಬೇಕಿದೆ. ಹಾಗಾಗಿ, ಉಳಿದ ಸೀಟುಗಳನ್ನು ಕಾಲೇಜುಗಳ ಆಡಳಿತ ಮಂಡಳಿಗಳು ಅಧಿಕ ಹಣಕ್ಕೆ ನೀಡುತ್ತವೆ.

ಒಪ್ಪಂದದ ಇಂತಹ ಅಂಶಗಳನ್ನು ಬಳಸಿಕೊಂಡ ಕೆಲ ಕಾಲೇಜುಗಳು ವೈದ್ಯಕೀಯ ಕೋರ್ಸ್‌ಗಳಿಗೆ ಪ್ರವೇಶ ಸಿಗದೆ ಮುಂದಿನ ಶೈಕ್ಷಣಿಕ ವರ್ಷಕ್ಕೆ ತರಬೇತಿ ಪಡೆಯುತ್ತಿರುವ ಪ್ರತಿಭಾವಂತ ವಿದ್ಯಾರ್ಥಿಗಳನ್ನು ಬಳಸಿಕೊಂಡು ಸೀಟ್ ಬ್ಲಾಕಿಂಗ್ ವ್ಯವಹಾರ ನಡೆಸುತ್ತಿರಬಹುದು ಎಂದು ಕೆಇಎ ಅಧಿಕಾರಿಗಳು ಶಂಕೆ ವ್ಯಕ್ತಪಡಿಸಿದ್ದಾರೆ.

ಬೆಂಗಳೂರಿನ ಬಿಎಂಎಸ್ ಕಾಲೇಜಿನ ಕಂಪ್ಯೂಟರ್ ಸೈನ್ಸ್ ವಿಭಾಗವೊಂದರಲ್ಲೇ 35 ಸೀಟುಗಳು ಉಳಿದಿವೆ. ರಾಜ್ಯದ ವಿವಿಧ ಕಾಲೇಜುಗಳಲ್ಲಿ ಒಟ್ಟು 16,004 ಎಂಜಿನಿಯರಿಂಗ್ ಸೀಟುಗಳು ಉಳಿದಿವೆ. ಹೆಚ್ಚಿನ ಬೇಡಿಕೆ ಇರುವ ಕೋರ್ಸ್‌ಗಳಲ್ಲೂ 20ಕ್ಕೂ ಹೆಚ್ಚು ಸೀಟು ಉಳಿದ ಇಂತಹ ಹಲವು ಕಾಲೇಜುಗಳನ್ನು ಪಟ್ಟಿ ಮಾಡಲಾಗಿದೆ.

ನಾಲ್ಕು ವರ್ಷಗಳ ನಿರ್ಬಂಧಕ್ಕೆ ಚಿಂತನೆ

‘ಸೀಟ್ ಬ್ಲಾಕ್ ಮಾಡಿಸಿ ಪ್ರವೇಶ ಪಡೆಯದವರನ್ನು ಮೂರು ಭಾಗಗಳಾಗಿ ಪ್ರತ್ಯೇಕಿಸಿ ನೋಟಿಸ್ ನೀಡಲಾಗಿದೆ. ಉತ್ತರಕ್ಕೆ ಮೂರು ದಿನಗಳ ಗಡುವು ಕೊಡಲಾಗಿದೆ. ಉದ್ದೇಶಪೂರ್ವಕವಾಗಿ ತಪ್ಪು ಎಸಗಿದವರಿಗೆ ನಾಲ್ಕು ವರ್ಷಗಳು ರಾಜ್ಯದ ಯಾವುದೇ ಎಂಜಿನಿಯರಿಂಗ್ ಕಾಲೇಜಿಗೆ ಪ್ರವೇಶ ಪಡೆಯದಂತೆ ನಿರ್ಬಂಧ ವಿಧಿಸಲು ಚಿಂತನೆ ನಡೆದಿದೆ’ ಎಂದು ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ ಹೇಳಿದ್ದಾರೆ.

■ ಉಳಿಕೆ ಸೀಟು

ಕೋರ್ಸ್	ಉಳಿಕೆ ಸೀಟು
ಕಂಪ್ಯೂಟರ್ ಸೈನ್ಸ್	637
ಎಲೆಕ್ಟ್ರಾನಿಕ್ಸ್ ಮತ್ತು ಕಮ್ಯುನಿಕೇಷನ್	1,520
ವಾಸ್ತುಶಿಲ್ಪ	569

‘ಕ್ಷೌರಿಕರು ಅಮಂಗಲರಲ್ಲ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕ್ಷೌರಿಕ ವೃತ್ತಿ ಮಾಡುವ ಸವಿತಾ ಸಮಾಜದವರು ಅಮಂಗಲ. ಅವರನ್ನು ನೋಡುವುದು ದುರದೃಷ್ಟ ಎಂಬ ಮಾತುಗಳು ಅನುಚಿತವಾದುವು’ ಎಂದು ಶೃಂಗೇರಿ ಪೀಠಾಧೀಶ ವಿಧುಶೇಖರ ಭಾರತಿ ಸ್ವಾಮೀಜಿ ಹೇಳಿದರು.

ನಗರದಲ್ಲಿ ಬುಧವಾರ ನಡೆದ ‘ಚಾತುರ್ಮಾಸದಲ್ಲಿ ಒಂದು ದಿನ ಸವಿತಾ ಸಮಾಜಕ್ಕೆ ಆಶೀರ್ವಚನ’ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

‘ಸನಾತನ ಧರ್ಮದಲ್ಲಿ ಮನುಷ್ಯ ಹೇಗಿರಬೇಕು ಎಂಬ ಬಗ್ಗೆ ಸ್ಪಷ್ಟ ನಿಯಮವಿದೆ. ಮನುಷ್ಯ ಎಲ್ಲರನ್ನೂ ಗೌರವದಿಂದ ಕಾಣಬೇಕು. ಯಾವುದೇ ಸಮಾಜದ ಮೇಲಿರುವ ಕೇವಲ ದೃಷ್ಟಿ ಹೋಗಿ ಗೌರವದ ದೃಷ್ಟಿ ಹರಿಯಬೇಕು’ ಎಂದು ಆಶಿಸಿದರು.

ವಿಧುಶೇಖರ ಭಾರತಿ ಸ್ವಾಮೀಜಿ

‘ಕ್ಷೌರಿಕ ವೃತ್ತಿ ಮಾಡುವ ಮೂಲಕ ಸವಿತಾ ಸಮುದಾಯದವರು ನಮ್ಮೆಲ್ಲರನ್ನೂ ಸುಂದರರನ್ನಾಗಿ ಮಾಡುತ್ತಿದ್ದಾರೆ. ಅದೇ ರೀತಿ ವಾದ್ಯ ಸೇವೆ ದೇವರ ಸೇವೆಯಾಗಿದ್ದು, ಮಂಗಲವಾದ್ಯ ವಿಶೇಷ ವೃತ್ತಿಯಾಗಬೇಕು. ಮಂಗಲವಾದ್ಯ ನುಡಿಸುವ ಸಮುದಾಯವನ್ನ ಕಂಡರೆ ಎಲ್ಲವೂ ಮಂಗಲವಾಗುತ್ತದೆ. ಈ ವೃತ್ತಿಗೆ ಶಾಶ್ವತ ನೆಲೆ, ಬೆಲೆ ಗೌರವ ಸಿಗುವಂತಾಗಬೇಕು. ಈ ಎರಡೂ ವೃತ್ತಿಗಳಲ್ಲಿರುವ ಸವಿತಾ ಸಮಾಜ ಎಲ್ಲ ವಲಯಗಳಲ್ಲಿ ಮುಂಚೂಣಿಗೆ ಬರಬೇಕು’ ಎಂದು ಹೇಳಿದರು.

ಕ್ಷೌರಿಕ ವೃತ್ತಿ ಮಾಡುವವರ ಬಗ್ಗೆ ವಾಹಿನಿಗಳಲ್ಲಿ ಅವಹೇಳನ ರೀತಿಯಲ್ಲಿ ಕೆಲವರು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ’ ಎಂದರು.

ಶ್ರೀ ಸಿದ್ದರಾಮಯ್ಯ
ಸನ್ಮಾನ್ಯ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಕರ್ನಾಟಕ ಸರ್ಕಾರ
ರಾಷ್ಟ್ರೀಯ ಆರೋಗ್ಯ ಅಭಿಯಾನ
राष्ट्रीय स्वास्थ्य मिशन

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ

ಶ್ರೀ ಡಿ. ಕೆ. ಶಿವಕುಮಾರ್
ಮಾನ್ಯ ಉಪ ಮುಖ್ಯಮಂತ್ರಿಗಳು, ಕರ್ನಾಟಕ ಸರ್ಕಾರ

ಅಸಾಂಕ್ರಾಮಿಕ ರೋಗಗಳ ನಿಯಂತ್ರಣ ಹಾಗೂ ನಿರ್ವಹಣೆಯ ಮಹತ್ವಾಕಾಂಕ್ಷಿ "ಗೃಹ ಆರೋಗ್ಯ" ಯೋಜನೆಗೆ ಶ್ರೀ ಸಿದ್ದರಾಮಯ್ಯ ಸನ್ಮಾನ್ಯ ಮುಖ್ಯಮಂತ್ರಿಗಳು ರವರಿಂದ ಚಾಲನೆ

ದಿನಾಂಕ: 24-10-2024 | ಸಮಯ: ಮಧ್ಯಾಹ್ನ 03:00 ಕ್ಕೆ | ಸ್ಥಳ: ಬ್ಯಾಂಕ್ವೆಟ್ ಹಾಲ್, ವಿಧಾನ ಸೌಧ, ಬೆಂಗಳೂರು.
ವಿಡಿಯೋ ಕಾನ್ಫರೆನ್ಸ್ ಮುಖಾಂತರ ಫಲಾನುಭವಿಗಳೊಂದಿಗೆ ಸಂವಾದ, ಜಿಲ್ಲಾಧಿಕಾರಿಗಳ ಸಭಾಂಗಣ, ಕೋಲಾರ ಜಿಲ್ಲೆ.

ಗೃಹ ಆರೋಗ್ಯ ಯೋಜನೆಯ ಪ್ರಮುಖ ಅಂಶಗಳು:

ಆರೋಗ್ಯ ಕಾರ್ಯಕರ್ತರ ತಂಡ ಗ್ರಾಮೀಣ ಭಾಗದ 30 ವರ್ಷ ಮೇಲ್ಪಟ್ಟ ಎಲ್ಲಾ ನಾಗರೀಕರ ಮನೆಗಳಿಗೆ ಭೇಟಿ ನೀಡಿ ಪ್ರಮುಖ 6 ಅಸಾಂಕ್ರಾಮಿಕ ರೋಗಗಳಾದ ಮಧುಮೇಹ (ಸಕ್ಕರೆ ಕಾಯಿಲೆ), ಅಧಿಕ ರಕ್ತದೊತ್ತಡ (BP) ಸಂಬಂಧ ಪರೀಕ್ಷೆ ಮತ್ತು ಬಾಯಿ, ಸ್ತನ, ಗರ್ಭಕಂಠದ ಕ್ಯಾನ್ಸರ್ ಹಾಗೂ ಮಾನಸಿಕ ಆರೋಗ್ಯಕ್ಕೆ ಸಂಬಂಧಿಸಿದಂತೆ ಪ್ರಾಥಮಿಕ ಹಂತದ ತಪಾಸಣೆ →
ಅಸಾಂಕ್ರಾಮಿಕ ರೋಗಗಳಿಗೆ ಪ್ರಮುಖ ಕಾರಣಗಳಾದ - ಸ್ಲೀಪ್ ಅಪ್ನಿಯಾ (ನಿದ್ರೆಯಲ್ಲಿ ಉಸಿರುಕಟ್ಟುವಿಕೆ), BMI ಅಸಮತೋಲನ, ಧೂಮಪಾನ ಮತ್ತು ಮದ್ಯಪಾನ, ವ್ಯಸನ ಮುಕ್ತದ ಬಗ್ಗೆ ಆರೋಗ್ಯ ಶಿಕ್ಷಣ ಮತ್ತು ಆಪ್ತ ಸಮಾಲೋಚನೆಯ ಮುಖಾಂತರ ನಿಯಂತ್ರಣಕ್ಕೆ ಕ್ರಮ

ಆಯುಷ್ ಪದ್ಧತಿಯ ಸಂವರ್ಧನೆ ಮೂಲಕ ಜೀವನಶೈಲಿ ಮಾರ್ಪಾಡು ಹಾಗೂ ಚಿಕಿತ್ಸಾ ಕ್ರಮಗಳಿಂದ ಅಸಾಂಕ್ರಾಮಿಕ ರೋಗಗಳ ನಿಯಂತ್ರಣ ಹಾಗೂ ನಿರ್ವಹಣೆ →
ಮಧುಮೇಹ ಮತ್ತು ಅಧಿಕ ರಕ್ತದೊತ್ತಡ ಕಾಯಿಲೆಗಳಿಗೆ ವೈದ್ಯರ ಸಲಹೆಯಂತೆ ನಿರಂತರ ಉಚಿತ ಔಷಧಿಗಳ ವಿತರಣೆ →
ಅಸಾಂಕ್ರಾಮಿಕ ರೋಗಗಳನ್ನು ಪ್ರಾರಂಭಿಕ ಹಂತದಲ್ಲೇ ಪತ್ತೆ ಹಚ್ಚಿ, ನಿರಂತರ ಉಚಿತ ತಪಾಸಣೆ ಹಾಗೂ ಚಿಕಿತ್ಸೆಯ ಮೂಲಕ ಅಡ್ಡ ಪರಿಣಾಮ ಮತ್ತು ಅಕಾಲಿಕ ಮರಣ ತಡೆಗಟ್ಟುವುದು ಯೋಜನೆಯ ಪ್ರಮುಖ ಉದ್ದೇಶ

ಗೃಹ ಆರೋಗ್ಯ
ಆರೋಗ್ಯ ಸೇವೆ ಮನೆ ಬಾಗಿಲಿಗೆ

ಪ್ರಾರಂಭಿಕವಾಗಿ ಕೋಲಾರ ಜಿಲ್ಲೆಯಲ್ಲಿ ಜಾರಿ
ಜನವರಿ 2025 ರಿಂದ ರಾಜ್ಯಾದ್ಯಂತ ವಿಸ್ತರಣೆ

ಸನ್ಮಾನ್ಯ ಮುಖ್ಯಮಂತ್ರಿಗಳು, ಶ್ರೀ ಸಿದ್ದರಾಮಯ್ಯ ರವರು ಹಾಗೂ ಶ್ರೀ ದಿನೇಶ್ ಗುಂಡೂರಾವ್ ಮಾನ್ಯ ಆರೋಗ್ಯ ಸಚಿವರು ಇಲಾಖಾ ಕಾರ್ಯಕ್ರಮದಲ್ಲಿ ಭಾಗವಹಿಸಿರುವುದು

"ದೇಶದ ಕಾಡು, ವನ್ಯಜೀವಿ, ನದಿಗಳು ಒಳಗೊಂಡಂತೆ ಪರಿಸರ ಉಳಿಸಿ ಬೆಳೆಸುವುದು" – ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ | ನಿಮ್ಮ ಆರೋಗ್ಯ, ನಮ್ಮ ಆದ್ಯತೆ.

ಯಲಹಂಕದ ಕೇಂದ್ರೀಯ ವಿಹಾರ್ ಅಪಾರ್ಟ್‌ಮೆಂಟ್ ಕೆಳಅಂತಸ್ತಿನಲ್ಲಿ ಬುಧವಾರವೂ ನೀರು ನಿಂತಿತ್ತು

ಚಿಕ್ಕಪೇಟೆ ಮುಖ್ಯರಸ್ತೆಯಲ್ಲಿ ತ್ಯಾಜ್ಯ ವಿಲೇವಾರಿಯಾಗದೆ ರಸ್ತೆಯಲ್ಲೇ ರಾಶಿಯಾಗಿದೆ ಪ್ರಜಾವಾಣಿ ಚಿತ್ರ: ಎಸ್.ಕೆ. ದಿನೇಶ್

ಧರೆಗುರುಳಿದ ಮರಗಳು: ವಾಹನ ಸಂಚಾರಕ್ಕೆ ಅಡ್ಡಿ, ನಾಗರಿಕರ ಪರದಾಟ

ಮನೆಯಿಂದ ಹೊರಹೋಗದ ನೀರು, ತಪ್ಪದ ಗೋಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಮಂಗಳವಾರ ರಾತ್ರಿಯಿಂದ ಬಿಡುವು ನೀಡಿದ್ದ ಮಳೆ, ಬುಧವಾರ ಮಧ್ಯಾಹ್ನ ಕೆಲವು ಪ್ರದೇಶಗಳಲ್ಲಿ ಅಬ್ಬರಿಸಿತು. ಜಲಾವೃತವಾಗಿದ್ದ ಪ್ರದೇಶಗಳಲ್ಲಿ ಹೆಚ್ಚು ಮಳೆಯಾಗದಿದ್ದರೂ, ಮನೆಗಳಿಂದ ನೀರು ಹೊರಹೋಗದೆ ನಿವಾಸಿಗಳು ಪರಿತಪಿಸಿದರು.

ಬುಧವಾರ 'ಆರೆಂಜ್ ಅಲರ್ಟ್' ಇದ್ದ ಕಾರಣದಿಂದ ಬೆಂಗಳೂರು ನಗರ ಜಿಲ್ಲಾಧಿಕಾರಿಯವರು ಶಾಲೆಗಳಿಗೆ ರಜೆ ಘೋಷಿಸಿದ್ದರು. ಆದರೆ, ಬುಧವಾರ ಮಧ್ಯಾಹ್ನದವರೆಗೂ ನಗರದಲ್ಲಿ ಬಿಸಿಲು ಹೆಚ್ಚಾಗಿತ್ತು. ನಂತರ ಕೆಲವು ಪ್ರದೇಶಗಳಲ್ಲಿ ಮಳೆಯಾಯಿತು.

ಜಯನಗರ, ಬಿಟಿಎಂ ಲೇಔಟ್, ಸಿಲ್ಕ್ ಬೋರ್ಡ್, ಎಚ್‌ಎಸ್‌ಆರ್ ಲೇಔಟ್, ಬನ್ನೇರುಘಟ್ಟ ರಸ್ತೆ, ಕನಕಪುರ ರಸ್ತೆ, ಮಡಿವಾಳ, ಕೋರಮಂಗಲದಲ್ಲಿ ಹೆಚ್ಚು ಮಳೆಯಾಯಿತು. ಮಳೆ ನೀರು ರಸ್ತೆಗಳಲ್ಲೇ ನಿಂತು ವಾಹನ ಸಂಚಾರಕ್ಕೆ ಅಡ್ಡಿಯಾಯಿತು. ಹಲವು ಕಡೆ ಮರಗಳು ಧರೆಗುರುಳಿದವು.

ತೆರವಾಗದ ನೀರು: ಯಲಹಂಕದ ಕೇಂದ್ರೀಯ ವಿಹಾರ್ ಅಪಾರ್ಟ್‌ಮೆಂಟ್ ಮತ್ತು ಜಕ್ಕೂರು ಬಳಿಯ ಡೈನಸ್ಟಿ ಲೇಔಟ್‌ನಲ್ಲಿ ಮಂಗಳವಾರ ತುಂಬಿಕೊಂಡಿದ್ದ ಮಳೆನೀರನ್ನು ಹೊರ ಹಾಕಲು ಬಿಬಿಎಂಪಿ ಹಾಗೂ ಎನ್‌ಡಿಆರ್‌ಎಫ್ ಸಿಬ್ಬಂದಿಗೆ ಬುಧವಾರ ಸಂಜೆಯವರೆಗೂ ಸಾಧ್ಯವಾಗಿರಲಿಲ್ಲ.

ಸಾಯಿ ಲೇಔಟ್ ಹಾಗೂ ವಡ್ಡರಪಾಳ್ಯದಲ್ಲಿ ಮನೆ ಹಾಗೂ ರಸ್ತೆಯಲ್ಲಿ ನೀರು ನಿಂತಿದ್ದು, ನಿವಾಸಿಗಳು ಸಂಕಷ್ಟ ಅನುಭವಿಸಿದರು.

1,079 ಮನೆಗಳಿಗೆ ಮಳೆ ನೀರು ನುಗ್ಗಿದ್ದು, ಅಲ್ಲಿನ ಎಲ್ಲ ನಿವಾಸಿಗಳನ್ನೂ ತೆರವುಗೊಳಿಸಲಾಗಿದೆ. ಅವರಿಗೆ ಪರಿಹಾರವನ್ನು ಶೀಘ್ರ ನೀಡಲಾಗುತ್ತದೆ. ಒಟ್ಟು 30 ಪ್ರದೇಶಗಳಲ್ಲಿ ನೀರು ನಿಂತಿದ್ದು, 29 ಸ್ಥಳಗಳಲ್ಲಿ ತೆರವು ಮಾಡಲಾಗಿದೆ. 85 ರಸ್ತೆಗಳಲ್ಲಿ ಮರ–ಕೊಂಬೆಗಳು ಉರುಳಿ ಬಿದ್ದಿದ್ದವು ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

ಅರಣ್ಯ ವಿಭಾಗದ 30 ತಂಡಗಳು, ಅಗ್ನಿಶಾಮಕ ದಳದ ಒಂದು ತಂಡ, ಒಂದು ಬೋಟ್, 15 ಪಂಪ್‌ಸೆಟ್, 10 ಜೆಸಿಬಿಗಳಿಂದ ಪರಿಹಾರ ಕಾರ್ಯ ಕೈಗೊಳ್ಳಲಾಗುತ್ತಿದೆ. ಸಾಯಿ ಲೇಔಟ್‌ನಲ್ಲಿ ಕುಡಿಯುವ ನೀರಿನ ವ್ಯವಸ್ಥೆಯ ಜೊತೆಗೆ 300 ಜನರಿಗೆ ಉಪಾಹಾರ, ಮಧ್ಯಾಹ್ನ ಮತ್ತು ರಾತ್ರಿ ಊಟ ನೀಡಲಾಗಿದೆ. ಏಳು ಜನರಿಗೆ ಹೋಟೆಲ್‌ನಲ್ಲಿ ವಸತಿ ಕಲ್ಪಿಸಲಾಗಿದೆ ಎಂದು ಪಾಲಿಕೆ ಮಾಹಿತಿ ನೀಡಿದೆ.

ಹೊರಮಾವು ಸಮೀಪದ ಸಾಯಿ ಲೇಔಟ್‌ನಲ್ಲಿ ನೀರನ್ನು ಹೊರಹಾಕಲು ಪ್ರಯತ್ನಿಸುತ್ತಿರುವ ಅಗ್ನಿಶಾಮಕ ದಳದ ಸಿಬ್ಬಂದಿ ಪ್ರಜಾವಾಣಿ ಚಿತ್ರ: ಬಿ.ಕೆ. ಜನಾರ್ಧನ್

ಎಲ್ಲಿ ಹೆಚ್ಚು ಮಳೆ?

ಮಂಗಳವಾರ ಬೆಳಿಗ್ಗೆ 8.30ರಿಂದ ರಾತ್ರಿ 10 (ಸೆಂಟಿಮೀಟರ್‌ಗಳಲ್ಲಿ)

ಬಿಟಿಎಂ ಲೇಔಟ್	3.8
ದೊರೆಸಾನಿಪಾಳ್ಯ	3.7
ಪುಲಕೇಶಿನಗರ	3.5
ಬೊಮ್ಮನಹಳ್ಳಿ	3.3
ಮಾರತ್‌ಹಳ್ಳಿ	2.9
ಸಂಪಂಗಿರಾಮನಗರ	2.8
ಹಂಪಿ ನಗರ	2.7
ಕಾಡುಗೋಡಿ	2.7
ಅರೆಕೆರೆ	2.6
ಎಚ್‌ಎಸ್‌ಆರ್ ಲೇಔಟ್	2.4
ಮಾರುತಿ ಮಂದಿರ	2.3
ಎಚ್‌ಎಎಲ್ ವಿಮಾನ ನಿಲ್ದಾಣ	2.0
ಮನೋರಾಯನಪಾಳ್ಯ	2.0
ಹಗದೂರು	2.0
ಹೇರೋಹಳ್ಳಿ	2.0

ಬಸವನಗುಡಿಯ ಎಂ.ಎನ್. ಕೃಷ್ಣರಾವ್ ಪಾರ್ಕ್ ಎದುರು ಬೃಹತ್ ಮರ ಬುಧವಾರ ಉರುಳಿಬಿದ್ದು, ಮೂರು ಕಾರು ಜಖಂಗೊಂಡವು ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ಕಿತ್ತಗನೂರಿನಲ್ಲಿ 60ಕ್ಕೂ ಹೆಚ್ಚು ಮನೆಗಳು ಜಲಾವೃತ

ಗ್ರೀನ್ ಗಾರ್ಡನ್ ಬಡಾವಣೆಯ ನಿವಾಸಿಗಳನ್ನು ಅಗ್ನಿಶಾಮಕ ಸಿಬ್ಬಂದಿ ಬೋಟ್ ಮೂಲಕ ಸುರಕ್ಷಿತ ಸ್ಥಳಕ್ಕೆ ಕರೆದೊಯ್ದರು

ಕೆ.ಆರ್.ಪುರ: ಕಳೆದ ಮೂರು ದಿನಗಳಿಂದ ಎಡೆಬಿಡದೆ ಸುರಿಯುತ್ತಿರುವ ಮಳೆಯಿಂದಾಗಿ ಮಹದೇವಪುರ ಕ್ಷೇತ್ರದ ಕಿತ್ತಗನೂರಿನ ಗ್ರೀನ್ ಗಾರ್ಡನ್ ಮತ್ತು ಸಿಗ್ನೆಚರ್ ಬಡಾವಣೆಯ 60ಕ್ಕೂ ಹೆಚ್ಚು ಮನೆಗಳು ಜಲಾವೃತಗೊಂಡಿವೆ.

ಕಿತ್ತಗನೂರು ಮೂಲಕ ಬಿದರಹಳ್ಳಿ ಕಡೆಗೆ ಸಂಪರ್ಕ ಕಲ್ಪಿಸುವ ರಾಜಕಾಲುವೆಗೆ ಸೇತುವೆ ನಿರ್ಮಾಣ ಮಾಡದಿರುವುದಿಂದ, ರಾಂಪುರ ಕೆರೆಯಿಂದ ಎಲೆಮಲ್ಲಪ್ಪಶೆಟ್ಟಿ ಕೆರೆಗೆ ಸಂಪರ್ಕ ಕಲ್ಪಿಸುವ ರಾಜಕಾಲುವೆಯ ನೀರು ಬಡಾವಣೆಯ ಮನೆಗಳಿಗೆ ನುಗ್ಗಿ ಅವಾಂತರ ಸೃಷ್ಟಿಯಾಗಿದೆ.

ಮೂರು ದಿನಗಳಿಂದಲೂ ಜಲದಿಗ್ಬಂಧನಕ್ಕೆ ಒಳಗಾಗಿದ್ದ ಗ್ರೀನ್ ಗಾರ್ಡನ್ ಮತ್ತು ಸಿಗ್ನೇಚರ್ ಬಡಾವಣೆಯ ನಿವಾಸಿಗಳು ಮನೆಯಿಂದ ಹೊರಬರಲಾಗದೇ, ಆಹಾರ, ನೀರು ಇಲ್ಲದೆ ಪರದಾಡಿದರು.

'ಪ್ರತಿ ವರ್ಷ ಸಮಸ್ಯೆ ಆಗುತ್ತಿದೆ. ಮೂರು ದಿನಗಳಿಂದಲೂ ರಾಜಕಾಲುವೆ ನೀರು ಬಡಾವಣೆಗಳಿಗೆ ನುಗ್ಗಿದ್ದರಿಂದ ತೊಂದರೆ ಅನುಭವಿಸಿದ್ದೇವೆ. ಮನೆಗಳಿಗೆ ವಿಷ ಜಂತುಗಳು ಸೇರಿವೆ. ಆಹಾರ, ನೀರು ಇಲ್ಲದೆ ತೊಂದರೆ ಅನುಭವಿಸಿದ್ದೇವೆ' ಎಂದು ಬಡಾವಣೆ ನಿವಾಸಿ ದಕ್ಷಾ ದೂರಿದರು.

ಜಲಾವೃತಗೊಂಡಿದ್ದ ಟಾಟಾನಗರ, ಬಾಲಾಜಿ ಬಡಾವಣೆಯ ಸ್ಥಿತಿ

ನೀರು ಇಳಿದಿದೆ.. ಸಮಸ್ಯೆಗಳು ಉಳಿದಿವೆ..!

ಬೆಂಗಳೂರು: ಮಳೆ ಬಿಡುವು ಕೊಟ್ಟಿದ್ದು, ರಸ್ತೆಯ ಮೇಲೆ ನಿಂತಿದ್ದ ನೀರು ಇಳಿದಿದೆ. ಮನೆಗಳ ಸಂಪ್‌ಗಳು, ಅಪಾರ್ಟ್‌ಮೆಂಟ್‌ಗಳ ನೆಲ ಮಹಡಿಗೆ ನುಗ್ಗಿದ ಕೊಳಚೆ ಮಿಶ್ರಿತ ಮಳೆ ನೀರನ್ನು ನಿವಾಸಿಗಳು ಹೊರ ಹಾಕುತ್ತಿದ್ದರು. ಅಂಗಡಿ ಮಳಿಗೆಗಳವರು ತೊಯ್ದು ಹೋಗಿರುವ ವಸ್ತುಗಳನ್ನು ಬಿಸಿಲಿಗೆ ಹರಡಿ ಒಣಗಿಸುತ್ತಾ, ಅತ್ತ ಅಂಗಡಿಯನ್ನು ಸ್ವಚ್ಛಗೊಳಿಸುತ್ತಿದ್ದರು...!

ಮಂಗಳವಾರ ಮನೆಗಳಿಗೆ ನೀರು ನುಗ್ಗಿ ಭಾರಿ ಅವಾಂತರ ಸೃಷ್ಟಿಯಾಗಿದ್ದ ಕೊಡಿಗೆಹಳ್ಳಿ ವ್ಯಾಪ್ತಿಯ ಟಾಟಾನಗರ, ಬಾಲಾಜಿ ಬಡಾವಣೆ, ಭದ್ರಪ್ಪ ಲೇಔಟ್ ಸುತ್ತಮುತ್ತಲಿನ ಪ್ರದೇಶದಲ್ಲಿ ಬುಧವಾರ ಕಂಡು ಬಂದ ದೃಶ್ಯಗಳಿವು.

ಭಾರಿ ಮಳೆ ಹಾಗೂ ದೊಡ್ಡಬೊಮ್ಮಸಂದ್ರ ಕೆರೆಯ ಕೋಡಿ ಬಿದ್ದಿದ್ದರಿಂದ ರಾಜಕಾಲುವೆ ಉಕ್ಕಿ ಹರಿದು, ಹೊಳೆಯಂತಾಗಿದ್ದ ಬಡಾವಣೆಗಳ ಕೆಲ ರಸ್ತೆಗಳಲ್ಲಿ, ನೀರು ಇಳಿದಿದೆ. ಆದರೆ, ಇನ್ನೂ ಕೆಲವೆಡೆ ರಸ್ತೆಗಳ ಬದಿಯಲ್ಲಿ ಕೊಳಚೆ ನೀರು ನಿಂತು ದುರ್ವಾಸನೆ ಬೀರುತ್ತಿದೆ. ಸುಂದರವಾಗಿದ್ದ 'ಸತೀಶ್ ಧವನ್' ಉದ್ಯಾನದ ತುಂಬಾ ಮಳೆ ನೀರು ತುಂಬಿಕೊಂಡಿದೆ.

ಇತ್ತೀಚೆಗಷ್ಟೇ ರಸ್ತೆ ಗುಂಡಿಗಳಿಗೆ ಹಾಕಿದ್ದ ಡಾಂಬರು ಕಿತ್ತು ಹೋಗಿದೆ. ರಾಜಕಾಲುವೆಯಲ್ಲಿ ಮೇಲ್ಮಟ್ಟದಲ್ಲೇ ನೀರು ಹರಿಯುತ್ತಿದ್ದು, ಅದರ ತುಂಬಾ ತ್ಯಾಜ್ಯ ತುಂಬಿಕೊಂಡಿದೆ. ಮತ್ತೆ ಮಳೆ ಬಂದರೆ, ಕಾಲುವೆ ಉಕ್ಕಿ ಹರಿಯುವ ಸಾಧ್ಯತೆ ಇದೆ ಎಂದು ಸ್ಥಳೀಯರು ಆತಂಕದಿಂದ ಹೇಳುತ್ತಿದ್ದರು.

ನೀರು ತೆರವು ಕಾರ್ಯ: ಟಾಟಾನಗರ ಬಡಾವಣೆಯಲ್ಲಿ ಸಂಪ್‌ನಲ್ಲಿ ತುಂಬಿಕೊಂಡಿದ್ದ ಮಳೆ ನೀರು ಮಿಶ್ರಿತ ಕೊಳಚೆ ನೀರನ್ನು ನಿವಾಸಿಗಳು ಹೊರ ಹಾಕಿ, ಟ್ಯಾಂಕರ್ ನೀರು ತರಿಸಿ ತುಂಬಿಸುತ್ತಿದ್ದರು. 'ಸಂಪ್‌ಗೆ ಟ್ಯಾಂಕರ್ ನೀರಿಗೆ ಕೊಳಚೆ ನೀರು ಬೆರೆತಿತ್ತು. ಅದನ್ನು ಹೊರ ಹಾಕಿಸಿ, ಆಲಂ ಹಾಕಿದ್ದೇವೆ' ಎಂದು ಟಾಟಾ ನಗರದ ನಿವಾಸಿ ಲಕ್ಷ್ಮಿ ಹೇಳಿದರು.

ಇನ್ನೂ ಹಲವು ಅಪಾರ್ಟ್‌ಮೆಂಟ್‌ಗಳ ನೆಲ ಮಹಡಿಯಲ್ಲಿ ಇನ್ನೂ ಮಳೆ ನೀರು ತುಂಬಿದೆ. ಜನರೇಟರ್ ನೆರವಿನೊಂದಿಗೆ ನೀರನ್ನು ಹೊರ ಹಾಕುತ್ತಿದ್ದಾರೆ. 'ನೆಲಮಹಡಿಯಲ್ಲಿದ್ದ ವಾಹನಗಳಿಗೆಲ್ಲ ನೀರು ತುಂಬಿಕೊಂಡಿದೆ. ನೀರು ಪೂರ್ತಿ ಖಾಲಿಯಾದ ಮೇಲೆ, ಅವುಗಳ ಸ್ಥಿತಿ ತಿಳಿಯುತ್ತದೆ' ಎಂದು ನಿವಾಸಿಯೊಬ್ಬರು ಆತಂಕದಿಂದ ಹೇಳಿದರು. ಕೆಲವರು ಮನೆಗಳಿಂದ ಮಳೆ ನೀರನ್ನು ರಸ್ತೆಗೆ ಹರಿಸುತ್ತಿದ್ದರೆ, ಇನ್ನೂ ಕೆಲವರು ಸಮೀಪದಲ್ಲಿದ್ದ ನೀರುಗಾಲುವೆಗಳಿಗೆ ಬಿಡುತ್ತಿದ್ದರು. ರಸ್ತೆ ಮೇಲೆ ಹರಿದ ನೀರು, ಕೆಲವು ಕಡೆ ಸಂಚಾರಕ್ಕೆ ಅಡ್ಡಿಯಾಗುತ್ತಿದೆ.

ಮಳೆಯಿಂದ ಪ್ರವಾಹಕ್ಕೊಳಗಾದ ನಗರದ ಟಾಟಾನಗರದ ಹಲವೆಡೆ ರಸ್ತೆಗಳು ಹಾಳಾಗಿವೆ

ಮಳೆಯಿಂದ ಪ್ರವಾಹಕ್ಕೊಳಗಾದ ನಗರದ ಟಾಟಾನಗರದ ಕೆಲವೆಡೆ ಪಂಪ್‌ಗಳನ್ನು ಬಳಸಿ ನೀರನ್ನು ಹೊರಹಾಕಲಾಯಿತು ಪ್ರಜಾವಾಣಿ ಚಿತ್ರಗಳು

ಏಕೆ ಹೀಗಾಯ್ತು..?

ದೊಡ್ಡಬೊಮ್ಮಸಂದ್ರ ಕೆರೆ ಹಾಗೂ ಹೆಬ್ಬಾಳ ಕೆರೆಗಳ ನಡುವೆ ಟಾಟಾನಗರ, ಬಾಲಾಜಿ ಬಡಾವಣೆಗಳಿವೆ (ಸ್ಥಳೀಯರ ಪ್ರಕಾರ ಕೆರೆ ನೀರು ಹರಿಯುವ ಕಾಲುವೆ ಪಾತ್ರದಲ್ಲಿವೆ). ಬಡಾವಣೆಗಳ ಮಧ್ಯೆ ರಾಜಕಾಲುವೆ ಹರಿಯುತ್ತದೆ.

'ಮೊನ್ನೆ ದೊಡ್ಡಬೊಮ್ಮಸಂದ್ರ ಕೆರೆ ತುಂಬಿ ಕೋಡಿ ಬಿದ್ದು, ಆ ಕೋಡಿ ನೀರು ಹೆಬ್ಬಾಳ ಕೆರೆಯನ್ನು ಸಂಪರ್ಕಿಸುವ ಈ ರಾಜಕಾಲುವೆಯಲ್ಲಿ ಹರಿಯಿತು. ಕೆಲವೆಡೆ ಕಾಲುವೆ ಕಿರಿದಾಗಿದ್ದರಿಂದ, ಹರಿವಿನ ಪ್ರಮಾಣವೂ ಹೆಚ್ಚಾಗಿ, ರಸ್ತೆಗಳಿಗೆ, ಮನೆಗಳಿಗೆ ನೀರು ನುಗ್ಗಿದೆ' ಎಂಬುದು ಸ್ಥಳೀಯರ ವಿಶ್ಲೇಷಣೆ.

'ಇದು ಗದ್ದೆಗಳಿದ್ದ ಜಾಗ. ಮೊದಲಿನಿಂದಲೂ ದೊಡ್ಡಬೊಮ್ಮಸಂದ್ರ ಕೆರೆಯ ಕೋಡಿ ನೀರು ಇದೇ ಜಾಗದಲ್ಲೇ ಹರಿಯುತ್ತಿತ್ತು. ಅಲ್ಲಿ ಈಗ ಬಡಾವಣೆಗಳಾಗಿವೆ. ಮಳೆ ನೀರು ಹರಿಯಲು ಸರಿಯಾದ ವ್ಯವಸ್ಥೆ ಇಲ್ಲದೇ, ಮನೆಗಳಿಗೆ ನುಗ್ಗುತ್ತಿದೆ. ಇದು ಮಳೆಯಿಂದಷ್ಟೇ ಉಂಟಾದ ಸಮಸ್ಯೆಯಲ್ಲ. ನಾಲ್ಕೈದು ವರ್ಷಗಳ ಹಿಂದೆ ಹೀಗೆಯೇ ಆಗಿತ್ತು. ಆದರೆ, ಇಷ್ಟು ದೊಡ್ಡ ಸಮಸ್ಯೆಯಾಗಿರಲಿಲ್ಲ' ಎಂದು ಸ್ಥಳೀಯ ನಿವಾಸಿ ಶ್ರೀನಿವಾಸ್ ಸಮಸ್ಯೆಯ ಮೂಲವನ್ನು ವಿವರಿಸಿದರು.

'ಈ ಕೆರೆಗಳ ಜಾಲ ನೂರಾರು ವರ್ಷಗಳಿಂದ ಇದೆ. ಬಡಾವಣೆಗಳು ನಿರ್ಮಾಣವಾಗಿರುವುದು ಮೂರ್ನಾಲ್ಕು ದಶಕಗಳ ಹಿಂದೆ. ಸ್ವಾಭಾವಿಕವಾಗಿ ಹರಿಯುವ ಕೆರೆ ನೀರಿಗೆ ಅಡ್ಡಿಪಡಿಸಿದ್ದರಿಂದ ಹೀಗಾಗಿದೆ. ಕೆರೆಗೆ ನೀರು ಹರಿಯಲು ದಾರಿ ಬಿಡುವುದೊಂದೇ ಈಗಿರುವ ಮಾರ್ಗ' ಎನ್ನುತ್ತಾರೆ ಟಾಟಾ ನಗರದ ನಿವಾಸಿ ಗೋಪಾಲಕೃಷ್ಣ.

ಟೆಕ್ ಸಂಸ್ಥೆಗಳಿಗಾಗಿ 'ಸಮಾಲೋಚನಾ ಸಮಿತಿ'

ಬೆಂಗಳೂರು: ನಗರದಲ್ಲಿ ನಿರಂತರ ಮಳೆಯಿಂದ ಐಟಿ ಕಂಪನಿಗಳು ಸೇರಿದಂತೆ ಉದ್ಯಮಗಳ ಮೇಲೆ ಗಂಭೀರ ಪರಿಣಾಮ ಉಂಟಾಗುತ್ತಿದ್ದು, ಇದಕ್ಕೆ ಪರಿಹಾರ ಕಲ್ಪಿಸಲು 'ಸಮಾಲೋಚನಾ ಸಮಿತಿ' ರಚಿಸಲಾಗಿದೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ಹಲವು ಟೆಕ್‌ಪಾರ್ಕ್‌ಗಳಲ್ಲಿರುವ ಸಂಸ್ಥೆಗಳು ಎದುರಿಸುತ್ತಿರುವ ಸವಾಲು, ಸಮಸ್ಯೆಗಳಿಗೆ ಪ್ರಾಮುಖ್ಯ ನೀಡಿ ಬಗೆಹರಿಸಲು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ 'ಸಮಾಲೋಚನಾ ಸಮಿತಿ' ರಚಿಸಲಾಗಿದೆ ಎಂದು ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ತಿಳಿಸಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಸೂಚನೆ ಮೇರೆಗೆ ಈ ಸಮಿತಿ ರಚಿಸಲಾಗಿದೆ. ಐಟಿ, ಬಿಟಿ ಮತ್ತು ಸ್ಟಾರ್ಟ್‌ಅಪ್ ವಿಷನ್ ಗ್ರೂಪ್‌ಗಳ ಮುಖ್ಯಸ್ಥರು ಸಮಿತಿಯಲ್ಲಿರಲಿದ್ದಾರೆ ಎಂದಿದ್ದಾರೆ.

ಸಮಾಲೋಚನಾ ಸಮಿತಿ: ಅಧ್ಯಕ್ಷ– ಉಪ ಮುಖ್ಯಮಂತ್ರಿ, ಉಪಾಧ್ಯಕ್ಷ– ಮಾಹಿತಿ ತಂತ್ರಜ್ಞಾನ ಸಚಿವ, ಸದಸ್ಯರು– ಕಿಯೋನಿಕ್ಸ್ ಅಧ್ಯಕ್ಷ, ನಗರಾಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ, ಬಿಬಿಎಂಪಿ ಮುಖ್ಯ ಆಯುಕ್ತ, ನಗರ ಪೊಲೀಸ್ ಕಮಿಷನರ್, ವಿದ್ಯುನ್ಮಾನ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಇಲಾಖೆ ಕಾರ್ಯದರ್ಶಿ, ಉಪ ಮುಖ್ಯಮಂತ್ರಿಯವರ ಕಾರ್ಯದರ್ಶಿ, ಸದಸ್ಯ ಕಾರ್ಯದರ್ಶಿ– ಬಿಬಿಎಂಪಿ ಪ್ರಧಾನ ಎಂಜಿನಿಯರ್.

ಮನೆಗಳಿಗೆ ನುಗ್ಗಿದ ನೀರು; ಆಕ್ರೋಶ

ಬಿಳೇಕಹಳ್ಳಿಯ ಅನುಗ್ರಹ ಬಡಾವಣೆಯಲ್ಲಿ ನಾಲ್ಕು ಅಡಿಗೂ ಹೆಚ್ಚು ನೀರು ನಿಂತು ವಾಹನ ಸವಾರರು ತೊಂದರೆ ಅನುಭವಿಸಿದರು

ಬೊಮ್ಮನಹಳ್ಳಿ: ಬುಧವಾರ ಸಂಜೆ ಸುರಿದ ಭಾರಿ ಮಳೆಯಿಂದಾಗಿ ಬೊಮ್ಮನಹಳ್ಳಿ ಪ್ರದೇಶದ ಹಲವು ಬಡಾವಣೆಗಳಲ್ಲಿ ಮನೆಗಳಿಗೆ ನೀರು ನುಗ್ಗಿ ನಿವಾಸಿಗಳು ಸಂಕಷ್ಟಕ್ಕೆ ಸಿಲುಕಿದರು.

ಮಂಗಮ್ಮನಪಾಳ್ಯ, ಬಿಳೇಕಹಳ್ಳಿ ಪ್ರದೇಶದ ಅನುಗ್ರಹ ಬಡಾವಣೆ ಎರಡನೇ ಹಂತ, ಕೋಡಿಚಿಕ್ಕನಹಳ್ಳಿಯ ಕೆಲ ಭಾಗಗಳಲ್ಲಿ ರಸ್ತೆಗಳು ಹೊಳೆಯಂತಾದವು. ಮನೆಗಳಿಗೆ ನೀರು ನುಗ್ಗಿ ನಿವಾಸಿಗಳು, ನೀರು ಹೊರಹಾಕುವಲ್ಲಿ ನಿರತರಾದರು. ಅನುಗ್ರಹ ಬಡಾವಣೆಯ ಕಾವೇರಿಯಮ್ಮ ದೇವಸ್ಥಾನಕ್ಕೆ ಕೊಳಚೆ ನೀರು ನುಗ್ಗಿತ್ತು. ಭಾರಿ ಮಳೆಯಿಂದಾಗಿ ಚೇಂಬರ್‌ಗಳಲ್ಲಿ ನೀರು ಉಕ್ಕಿ ಹರಿಯುತ್ತಿದ್ದು, ದುರ್ವಾಸನೆ ಬೀರುತ್ತಿದೆ. ಇದರಿಂದ ರೋಗ ಹರಡುವ ಭೀತಿ ಎದುರಾಗಿದೆ ಎಂದು ನಿವಾಸಿಗಳು ಆತಂಕ ವ್ಯಕ್ತಪಡಿಸಿರು.

ಬಿಳೇಕಹಳ್ಳಿ ಮತ್ತು ಬಿಟಿಎಂ ಬಡಾವಣೆಗೆ ಸಂಪರ್ಕ ಕಲ್ಪಿಸುವ ಮುಖ್ಯ ರಸ್ತೆಯಲ್ಲಿ ಮೂರು ಅಡಿಗೂ ಹೆಚ್ಚು ನೀರು ನಿಂತು, ಕೆಲ ಸಮಯ ಸಂಪರ್ಕ ಕಡಿತವಾಗಿತ್ತು. ಇದರಿಂದ ಜನ ಸಂಚಾರಕ್ಕೆ ಅಡಚಣೆಯಾಗಿತ್ತು.

'ಮಂಗಮ್ಮನಪಾಳ್ಯ ತಗ್ಗುಪ್ರದೇಶದಲ್ಲಿದ್ದು, ನೀರು ಮನೆಗಳಿಗೆ ನುಗ್ಗಿದೆ. ಕೆಲವೆಡೆ ರಸ್ತೆಯಲ್ಲಿ ನಾಲ್ಕು ಅಡಿ ನೀರು ನಿಂತಿದೆ. ಪ್ರತಿ ಮಳೆಯಲ್ಲೂ ನಮ್ಮ ಪ್ರದೇಶ ಮುಳುಗಡೆ ಆಗುವುದು ಅಧಿಕಾರಿಗಳಿಗೆ ಗೊತ್ತಿದೆ. ಆದಾಗ್ಯೂ ಯಾವುದೇ ಕ್ರಮಕೈಗೊಂಡಿಲ್ಲ, ಬಿಬಿಎಂಪಿ ಕೂಡಲೇ ಸ್ಪಂದಿಸದೇ ಇದ್ದಲ್ಲಿ ಪ್ರತಿಭಟನೆ ಮಾಡುತ್ತೇವೆ' ಎಂದು ಮಂಗಮ್ಮನಪಾಳ್ಯ ನಿವಾಸಿ ಸಯ್ಯದ್ ನಜೀರ್ ಆಕ್ರೋಶ ವ್ಯಕ್ತಪಡಿಸಿದರು.

ಸಿಲ್ಕ್ ಬೋರ್ಡ್ ಬಳಿ ಅಪಾರ ಪ್ರಮಾ ಣದ ನೀರು ನಿಂತಿದ್ದು, ಸಂಚಾರ ದಟ್ಟಣೆ ಹೆಚ್ಚಾಗಿ ವಾಹನ ಸವಾರರು ಪರದಾಡಿದರು. ಹೆಚ್‌ಎಸ್‌ಆರ್ ಬಡಾವಣೆಯ ಹಲವು ರಸ್ತೆಗಳು ಹೊಳೆಯಂತಾದವು.

'ಜನರಿಗೆ ತೊಂದರೆ ಆದಲ್ಲಿ ಸಹಾಯವಾಣಿ 080 – 25732447 ನಂಬರ್‌ಗೆ ಕರೆ ಮಾಡಬಹುದು' ಎಂದು ಬಿಬಿಎಂಪಿ ಬೊಮ್ಮನಹಳ್ಳಿ ವಲಯ ಜಂಟಿ ಆಯುಕ್ತ ಅಜಿತ್ ತಿಳಿಸಿದರು.

ಜಲಾವೃತಗೊಂಡ ಸ್ಥಳಗಳಿಗೆ ಡಿಸಿಎಂ ಭೇಟಿ, ಪರಿಶೀಲನೆ

ರಾಜಕಾಲುವೆ ಒತ್ತುವರಿ ತೆರವಿಗೆ ಸೂಚನೆ

ಬೆಂಗಳೂರು: ನಗರದಲ್ಲಿ ರಾಜಕಾಲುವೆ ಒತ್ತುವರಿಯನ್ನು ಯಾವುದೇ ಮುಲಾಜಿಲ್ಲದೆ ತೆರವು ಮಾಡಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿರುವುದಾಗಿ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಮಳೆಯಿಂದ ಸಮಸ್ಯೆಗೆ ಒಳಗಾಗಿರುವ ಯಲಹಂಕದ ಕೇಂದ್ರೀಯ ವಿಹಾರ್ ಅಪಾರ್ಟ್‌ಮೆಂಟ್, ಬ್ಯಾಟರಾಯನಪುರದ ಮರಿಯಣ್ಣಪಾಳ್ಯ, ಕೆ.ಆರ್. ಪುರದ ಹೊರಮಾವು ಬಳಿಯ ಶ್ರೀ ಸಾಯಿ ಬಡಾವಣೆಗೆ ಅವರು ಬುಧವಾರ ಭೇಟಿ ನೀಡಿ, ಪರಿಶೀಲನೆ ನಡೆಸಿದರು.

ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಶಿವಕುಮಾರ್, 'ಖಾಸಗಿಯವರು ರಾಜಕಾಲುವೆ ಒತ್ತುವರಿ ತೆರವುಗೊಳಿಸದಂತೆ ನ್ಯಾಯಾಲಯದಿಂದ ತಡೆಯಾಜ್ಞೆ ತಂದಿದ್ದಾರೆ. ತುರ್ತು ಸಂದರ್ಭದಲ್ಲಿ ಯಾವುದನ್ನೂ ಪರಿಗಣಿಸದೆ ಕೂಡಲೇ ಎಲ್ಲಾ ಒತ್ತುವರಿಗಳನ್ನು ತೆರವುಗೊಳಿಸಬೇಕು. ಪ್ರವಾಹ ಪರಿಸ್ಥಿತಿ ನಿರ್ವಹಣೆ ಅಡಿಯಲ್ಲಿ ಕೂಡಲೇ ಆದೇಶಿಸಲು ಜಿಲ್ಲಾಧಿಕಾರಿಗೆ ತಿಳಿಸಿದ್ದೇನೆ. ಬಿಬಿಎಂಪಿ ಹಾಗೂ ಬಿಡಿಎ ಅಧಿಕಾರಿಗಳಿಗೂ ಸೂಚಿಸಿದ್ದೇನೆ' ಎಂದರು.

'ಯಾರೇ ಖಾಸಗಿಯವರು ಅಡ್ಡಿಪಡಿಸಿದರೂ ನಾವು ನಮ್ಮ ಕೆಲಸ ಮಾಡುತ್ತೇವೆ. ಇಂತಹ ಸಂದರ್ಭದಲ್ಲಿ ನ್ಯಾಯಾಲಯದ ಪ್ರಕರಣ ಮುಖ್ಯವಲ್ಲ. ನಮಗೆ ಸಾರ್ವಜನಿಕರ ಹಿತ ಮುಖ್ಯ' ಎಂದು ಹೇಳಿದರು.

ಮಳೆ ನೀರುಗಾಲುವೆಗಳನ್ನು ಸ್ವಚ್ಛಗೊಳಿಸಿ ಸರಾಗವಾಗಿ ನೀರು ಹರಿಯುವಂತೆ ಮಾಡಲು ವಿಶ್ವಬ್ಯಾಂಕಿನಿಂದ ₹ 1 ಸಾವಿರ ಕೋಟಿ ಸಾಲ ಪಡೆದು ಕೆಲಸ ಮಾಡಲಾಗುತ್ತಿದೆ ಎಂದರು.

'ಯಲಹಂಕದ ಕೇಂದ್ರೀಯ ವಿಹಾರ್ ಅಪಾರ್ಟ್‌ಮೆಂಟ್‌ನಲ್ಲಿ ಎಂಟು ಬ್ಲಾಕ್‌ಗಳಿದ್ದು, 600ಕ್ಕೂ ಹೆಚ್ಚು ಫ್ಲ್ಯಾಟ್‌ಗಳಿವೆ. ಇಲ್ಲಿನ ಶೇ 95ರಷ್ಟು ನಿವಾಸಿಗಳನ್ನು ಸ್ಥಳಾಂತರ ಮಾಡಲಾಗಿದೆ. ವಿದ್ಯುತ್ ಸಂಪರ್ಕವಿಲ್ಲದಿದ್ದರೂ 20 ಕುಟುಂಬದವರು ಇಲ್ಲೇ ಇರುವುದಾಗಿ ಹೇಳಿದ್ದಾರೆ. ಅವರನ್ನು ಅಲ್ಲಿಯೇ ಬಿಡಲು ಆಗುವುದಿಲ್ಲ. ಅವರಿಗೆ ಏನೇ ತೊಂದರೆಯಾದರೂ ಅದಕ್ಕೆ ನಾವೇ ಜವಾಬ್ದಾರರಾಗುತ್ತೇವೆ. ಆದ್ದರಿಂದ ಹತ್ತಿರದ ವಸತಿಗೃಹಗಳಲ್ಲಿ ವ್ಯವಸ್ಥೆ ಮಾಡಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ' ಎಂದು ತಿಳಿಸಿದರು.

'ಯಲಹಂಕದಲ್ಲಿ 115- 120 ವರ್ಷಗಳ ನಂತರ ವಾಡಿಕೆಗಿಂತ ಹೆಚ್ಚು ಮಳೆ ಸುರಿದಿದೆ. ಈ ರೀತಿಯ ಅವಘಡ ನಮ್ಮಲ್ಲಿ ಮಾತ್ರವಲ್ಲ, ಮುಂಬೈ ಸೇರಿ ಅನೇಕ ನಗರಗಳಲ್ಲಿ ಆಗಿದೆ. ಇತ್ತೀಚೆಗೆ ಫ್ರಾನ್ಸ್‌ನಲ್ಲಿಯೂ ತೊಂದರೆ ಆಗಿದೆ. ಮನೆಗೆ ನೀರು ನುಗ್ಗಿ ತೊಂದರೆ ಉಂಟಾಗಿರುವವರಿಗೆ ತಲಾ ₹10 ಸಾವಿರ ಪರಿಹಾರ, ವಸತಿ ಇಲ್ಲದವರಿಗೆ ವಸತಿ, ಊಟದ ವ್ಯವಸ್ಥೆ ಮಾಡಲಾಗುವುದು ಎಂದರು.

ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಜಲಾವೃತಗೊಂಡ ಕೇಂದ್ರೀಯ ವಿಹಾರ್ ಅಪಾರ್ಟ್‌ಮೆಂಟ್‌ನಲ್ಲಿ ಪರಿಶೀಲನೆ ನಡೆಸಿದರು

ತಲಾ ₹5 ಲಕ್ಷ ಪರಿಹಾರ

'ಕೆಂಗೇರಿ ಕೆರೆಯಲ್ಲಿ ಮುಳುಗಿ ಮೃತಪಟ್ಟ ಇಬ್ಬರು ಮಕ್ಕಳ ಕುಟುಂಬಕ್ಕೆ ಬಿಬಿಎಂಪಿ ವತಿಯಿಂದ ತಲಾ 5 ಲಕ್ಷ ಪರಿಹಾರ ನೀಡಲಾಗುತ್ತದೆ' ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ತಿಳಿಸಿದರು.

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

PERSONAL

Change of Name

CHANGE OF NAME
I, **APARNA C**, Residing at No. 23, Krishna Nilayam, 6th Main Road, Mathikere Extension, Bengaluru-560054, have changed my name to **APARNA GOPALAKRISHNAN** vide affidavit dated 14.10.2024 before Notary Ambika. S, Bengaluru. Henceforth I shall be known as **APARNA GOPALAKRISHNAN** only.

CHANGE OF NAME
I, **KURKAL DARSHAN SHETTY** Residing at Flat No. 262, 6th Floor, Ranka Heights, 4th Main, 7th Cross, Domlur Layout, Domlur, Bengaluru-560071, have changed my daughter's name from **SWARNIKA DARSHAN SHETTY** to **SWARNIKA SHETTY** affidavit dated 23.10.2024 before Notary N. Narayana Swamy, Bengaluru.

I,SMT.NALINA R Residing`at Chikkegowdanapalya, Talaghattapura, Bangalore-560109 have`Changed my`minor`Son's Name from Muniraju Pankaj to Chikkegowdanpalya Muniraju Pankaj vide`Affidavit dtd:22-10-2024 Sworn`Before Notary K.V.Prema Kumari, Bangalore

I, NAGALAKSHMI MOHANKUMAR W/o. Mohan Kumar, Residing at No. 369, 5th Cross, KHB Layout, Suncity, K.S.Town, Bangalore - 560060 have changed my name from NAGALAKSHMI MOHANKUMAR to NAGALAKSHMI vide affidavit dated 01-10-2024, sworn before notary Mohamed Hussain. K, Bangalore.

BUSINESS

Business Offers

Finance

MSME LOANS: We arrange MSME Business Loans against your existing or New Businesses also.Contact:7204995189

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

DH DECCAN HERALD Classifieds More value, more impact
ಪ್ರಜಾವಾಣಿ
PUBLIC NOTICE
BOOK YOUR PUBLIC NOTICE ADS IN DH ALL + PRAJAVANI BENGALURU CITY, ON ALL DAYS
@550/-* PER SQCM
www.dhclassifieds.com
BOOK NOW
*Conditions apply
For more details contact:
+91 9886213331 | +91 9845114560
+91 9731810277 | 080- 45557163/164

ಅರ್ಜುನ
ವರ ಜ್ಯುವೆಲ್ಲರ್ಸ್
ಜಯನಗರ, ಬೆಂಗಳೂರು
29.10.2024
(ಮಂಗಳವಾರ)
ಬೆಳಗ್ಗೆ 07.00 ರಿಂದ ರಾತ್ರಿ 11.00
30.10.2024
(ಬುಧವಾರ)
ಬೆಳಗ್ಗೆ 09.00 ರಿಂದ ರಾತ್ರಿ 09.00
ಈ ದಂತೇರಸ್‌ನಲ್ಲಿ
ಹಿಂದಿನ ಸಂಭ್ರಮದ
ನಮ್ಮ ಪ್ರಪಂಚಕ್ಕೆ ನೀವೂ ಸೇರಿರಿ.
ಬಿನ್ನವಿಡೀ ಉಪಹಾರಗಳು
ಪಾರ್ಕಿಂಗ್ ಪರಿಚಾರಕತೆ ಲಭ್ಯ
#69, 38ನೇ ಕ್ರಾಸ್, 4ನೇ ಟಿ ಬ್ಲಾಕ್, ಜಯನಗರ, ಬೆಂಗಳೂರು
+91 6362824611 | 080 26651969, 41241969 / 70 | www.arjunaa.com

YAMAHA
RACING
The call of The BLUE
ದೀಪಾವಳಿ ಹಬ್ಬದ
ಶುಭಾಶಯಗಳು
SCENE FESTIVE ಮಗಾ
FZ-S FI VERSION 4.0
CASHBACK UP TO ₹5000*
LOW DOWN PAYMENT STARTING FROM ₹7999*
fascino 125 Fi
HYBRID
CASHBACK UP TO ₹4000*
LOW DOWN PAYMENT STARTING FROM ₹2999*
*Offer applicable on select variants. Limited period Offer. T&C Apply
FZ-FI: STARTING FROM ₹1 06 000*
(Ex-Showroom Price in Karnataka)
FASCINO: STARTING FROM ₹81 870*
(Ex-Showroom Price in Karnataka for Drum)
Garuda Wheels, Hoskote, Ph: 9035040171; Whitefield Yamaha, Whitefield, Ph: 9606061054; Mahadevapura, Ph: 9148086668; Motoworld: Bommanahalli, Ph: 080-69643030; Chandapura, Ph: 080-69643030; Bangalore Wheels: Rajajinagar, Ph: 9964156618; Vijayanagar, Ph: 9611920002; Malathahalli, Ph: 9916610017; Kengeri, Ph: 9916610022; Perfect Riders: Lalbagh Road, Ph: 8497816000; Jayanagar, Ph: 8497816000; Pacer Yamaha: Hebbal, Ph: 6360237411; Kalyan Nagar, Ph: 9902607629; RR Nagar, Ph: 7624818307; Vidyaranyapura, Ph: 9036690334; Vinayak Motors: Domlur, Ph: 9591072222; Kormangala, Ph: 9035961010; Laxmi International, Bannerghatta Road, Ph: 9739364819; Chandan Motors, Banashankari, Ph: 9606861911; Geetha Motors: Nelamangala, Ph: 7619628882, Peenya, Ph: 8951954565; Panache Enterprises: Indiranagar, Ph: 9844011961; Marathahalli, Ph: 9844011961; I Yamaha Automotives, K R Puram, Ph: 8088448844; Srijaya Motors, Yalahanka, Ph: 7406622213, 7406622218; Sree Geetha Motors, Tumkur, Ph: 6364885726; Sri RV Advent Ride, Kolar, Ph: 9071374827; Xtreme Motors, Chikaballapur, Ph: 9353279001; Yamaha Bike Corner: Varthur: Touch Yamaha, Ph: 9986547353; Anekal: Anekal Yamaha Motors, Ph: 9972909455; Devanahalli: Nandi Bikes, Ph: 9739030606; Magadi: Sri Narashima Motors, Ph: 9482090890; Tiptur: Jenukallu Yamaha, Ph: 7892862641; Mulbagal: Sri RV Advent Ride, Ph: 9071374830; Kunigal: Manjunathaswamy Yamaha, Ph: 7411979755; Chintamani: Xtreme Motors, Ph: 9353279001; Attibele: Moto World, Ph: 8884452700; Dommasandra: Moto World, Ph: 8884452899.

CARATLANE
A TANISHQ Partnership
ಈ ಫೆಸ್ಟಿವ್ ಸೀಸನ್
#HridayaBichhiMaadiriExpress
100% OFF*
ON MAKING CHARGES
of 4000+ Diamond Designs
5% INSTANT DISCOUNT#
SBI card
#Min. Trxn.: ₹25,000; Max. Discount: ₹2,000 per Trxn. per card per channel; Validity: 23 Oct - 29 Oct 2024. T&C Apply.
*T&C.
FLAT 25% OFF* on Making Charges of 1000+ Gold Designs
Introducing EVERYDAY 22KT for the modern woman
9=10 Plan of Purchase
Gold Exchange Program
Ear piercing
300+ stores across India | www.caratlane.com

ಸ್ಪರ್ಧಾ ವಾಣಿ

ಪ್ರಜಾವಾಣಿ QUIZ CHAMPIONSHIP
ಕ್ವಿಜ್‌ನ ನೋಂದಣಿಗಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಹಾಜನಪದಗಳು

ಯು.ಟಿ.ಆಯಿಷಾ ಫರ್ಝಾನ

16

ಮಹಾಜನಪದಗಳು ಪ್ರಾಚೀನ ಭಾರತೀಯ ಸಾಮ್ರಾಜ್ಯಗಳಾಗಿದ್ದು, ಇದು ಆರಂಭಿಕ ಐತಿಹಾಸಿಕ ಅವಧಿಯಲ್ಲಿ ಸುಮಾರು ಕ್ರಿ.ಪೂ 6 ರಿಂದ 4ನೇ ಶತಮಾನದವರೆಗೆ ಅಸ್ತಿತ್ವದಲ್ಲಿತ್ತು. ಪ್ರಾಚೀನ ಭಾರತದ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಬೆಳವಣಿಗೆಯನ್ನು ರೂಪಿಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಿದ ಈ ಪ್ರಬಲ ರಾಜ್ಯಗಳು ಅಸ್ತಿತ್ವದಲ್ಲಿದ್ದ ಕಾಲವು ಭಾರತೀಯ ನಾಗರಿಕತೆಯಲ್ಲಿ ಮಹತ್ವದ ಬೆಳವಣಿಗೆಯಾಗಿ ದಾಖಲಾಗಿದೆ. ಈ ಮಹಾಜನಪದಗಳು ಇಂದಿನ ಅಫ್ಘಾನಿಸ್ತಾನದಿಂದ ಬಂಗಾಳದವರೆಗೆ ವಿಸ್ತರಿಸಿರುವ ಇಂಡೋ-ಗಂಗಾ ಬಯಲಿನಲ್ಲಿ ನೆಲೆಗೊಂಡಿವೆ. ಬೌದ್ಧ ಮತ್ತು ಜೈನ ಪಠ್ಯಗಳಲ್ಲಿ ಅವುಗಳನ್ನು ಬಗ್ಗೆ ಉಲ್ಲೇಖಿಸಲಾಗಿದ್ದು, ಇದು ಆ ಮಹಾಜನಪದಗಳ ರಾಜಕೀಯ ಮತ್ತು ಆರ್ಥಿಕ ಪರಿಸ್ಥಿತಿಗಳ ವಿವರವಾದ ಮಾಹಿತಿಗಳನ್ನು ಒದಗಿಸುತ್ತದೆ.

1.ಅಂಗ: ಭಾರತದ ಪೂರ್ವಭಾಗದಲ್ಲಿ ನೆಲೆಗೊಂಡಿರುವ ಅಂಗವು ಸಂಪತ್ತು ಮತ್ತು ವಾಣಿಜ್ಯಕ್ಕೆ ಹೆಸರುವಾಸಿಯಾಗಿದೆ. ಚಂಪಾ, ಅದರ ರಾಜಧಾನಿಯಾಗಿದ್ದು ಅಂದಿನ ಕಾಲಕ್ಕೆ ಪ್ರಮುಖ ವ್ಯಾಪಾರ ಮಾರ್ಗಗಳೊಂದಿಗೆ ಅಭಿವೃದ್ಧಿ ಹೊಂದುತ್ತಿರುವ ನಗರವಾಗಿತ್ತು.

2.ಮಗಧ: ಅತ್ಯಂತ ಶಕ್ತಿಶಾಲಿ ಸಾಮ್ರಾಜ್ಯಗಳಲ್ಲಿ ಒಂದಾದ ಮಗಧವು ಮೌರ್ಯ ಮತ್ತು ಗುಪ್ತ ಸಾಮ್ರಾಜ್ಯಗಳ ಉದಯದಲ್ಲಿ ಮಹತ್ವದ ಪಾತ್ರವನ್ನು ವಹಿಸಿದೆ. ಅದರ ರಾಜಧಾನಿಯಾದ ರಾಜಗೃಹವು ನಂತರ ಪಾಟಲಿಪುತ್ರಕ್ಕೆ ಸ್ಥಳಾಂತರಗೊಂಡಿದ್ದು ಇದು ಶಕ್ತಿ ಮತ್ತು ಸಂಸ್ಕೃತಿಯ ಅಪ್ರತಿಮ ಕೇಂದ್ರವಾಯಿತು.

3. ವಜ್ಜಿ (ವೃಜ್ಜಿ): ಲಿಚ್ಛವಿಗಳು ಸೇರಿದಂತೆ ಹಲವು ಕುಲಗಳ ಒಕ್ಕೂಟವಾಗಿದ್ದು, ವಜ್ಜಿ ಗಣರಾಜ್ಯವು ಪ್ರಜಾಪ್ರಭುತ್ವದ ಆಡಳಿತಕ್ಕೆ ಹೆಸರುವಾಸಿಯಾಗಿದೆ. ವೈಶಾಲಿ, ಅದರ ರಾಜಧಾನಿಯಾಗಿತ್ತು. ಇದು ಬೌದ್ಧಧರ್ಮದ ಆರಂಭಿಕ ಕಾಲದ ಪ್ರಮುಖ ಕೇಂದ್ರವಾಯಿತು.

4.ಮಲ್ಲ: ಗಣರಾಜ್ಯ ಸರ್ಕಾರಕ್ಕೆ ಹೆಸರುವಾಸಿಯಾದ ಮಲ್ಲನಗರವನ್ನು ಕುಸಿನಗರ ಮತ್ತು ಪಾವದಲ್ಲಿ ರಾಜಧಾನಿಗಳನ್ನು ನಿರ್ಮಿಸಿ ಎರಡು ಭಾಗಗಳಾಗಿ ವಿಂಗಡಿಸಲಾಯಿತು. ಬುದ್ಧನು ಮಹಾಪರಿನಿರ್ವಾಣವನ್ನು ಪಡೆದ ಸ್ಥಳವಾಗಿರುವುದಕ್ಕೆ ಇದು ಚಾರಿತ್ರಿಕವಾಗಿ ಅತ್ಯಂತ ಮಹತ್ವದ್ದಾಗಿದೆ.

5. ಕಾಶಿ: ವಾರಾಣಸಿಯಲ್ಲಿ ರಾಜಧಾನಿಯನ್ನು ಹೊಂದಿರುವ ಕಾಶಿ ಧಾರ್ಮಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವಾಗಿತ್ತು. ಕೋಸಲ ಮತ್ತು ಮಗಧದ ನಡುವೆ ಕೆಲವು ವಿಚಾರಗಳಲ್ಲಿ ಆಗಾಗ್ಗೆ ಸ್ಪರ್ಧೆ ನಡೆಯುತ್ತಿತ್ತು.

6.ಕೋಸಲ: ಕೋಸಲದ ರಾಜಧಾನಿ ಶ್ರಾವಸ್ತಿಯಾಗಿದ್ದು ಪ್ರಾಚೀನ ಭಾರತದಲ್ಲಿ ಪ್ರಭಾವಶಾಲಿ ಸಾಮ್ರಾಜ್ಯವಾಗಿತ್ತು. ಈ ಪ್ರದೇಶವು ಬುದ್ಧನ ಜೀವನದಲ್ಲಿ ಮಹತ್ವದ್ದಾಗಿತ್ತು. ಮತ್ತು ಅದರ ರಾಜ ಪ್ರಸೇನಜಿತ್ ಬುದ್ಧನ ಸಮಕಾಲೀನನಾಗಿದ್ದನು.

7.ವತ್ಸ : ಕೌಸಂಬಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡಿರುವ ವತ್ಸವು ತನ್ನ ವ್ಯಾಪಾರ ಮತ್ತು ಸಂಪತ್ತಿಗೆ ಹೆಸರುವಾಸಿಯಾಗಿತ್ತು. ಇದರ ದೊರೆ ಉದಯನ ಪ್ರಾಚೀನ ಭಾರತದ ರಾಜಕೀಯ ಇತಿಹಾಸದಲ್ಲಿ ಮಹತ್ವದ ವ್ಯಕ್ತಿಯಾಗಿದ್ದನು.

8.ಕುರು: ಹಸ್ತಿನಾಪುರ ಮತ್ತು ಇಂದ್ರಪ್ರಸ್ಥದ ಸುತ್ತ ಕೇಂದ್ರೀಕೃತವಾಗಿರುವ ಕುರು ಸಾಮ್ರಾಜ್ಯವು ಐತಿಹಾಸಿಕವಾಗಿ ಮಹಾಭಾರತ ಮಹಾಕಾವ್ಯದೊಂದಿಗೆ ನೇರವಾದ ಸಂಬಂಧ ಹೊಂದಿದೆ. ಕುರು ಸಾಮ್ರಾಜ್ಯವು ತನ್ನ ಯೋಧ ವರ್ಗಕ್ಕೆ ಹೆಸರುವಾಸಿಯಾಗಿತ್ತು.

9.ಪಾಂಚಾಲ: ಪಾಂಚಾಲವನ್ನು ಎರಡು ಪ್ರದೇಶಗಳಾಗಿ ವಿಂಗಡಿಸಲಾಗಿದೆ.ಉತ್ತರ ಪಾಂಚಾಲವು ಅಹಿಚ್ಛತ್ರವನ್ನು ತನ್ನ ರಾಜಧಾನಿಯಾಗಿ ಮತ್ತು ದಕ್ಷಿಣ ಪಾಂಚಾಲವು ಕಂಪಿಲ್ಯವನ್ನು ತನ್ನ ರಾಜಧಾನಿಯಾಗಿ ಹೊಂದಿತ್ತು. ಇದು ಮಹಾಭಾರತದಲ್ಲಿ ಮಹತ್ವದ ಪಾತ್ರವನ್ನು ಹೊಂದಿತ್ತು.(ಪಾಂಚಾಲಿ ಎಂದು ದ್ರೌಪದಿಯನ್ನು ಕರೆಯಲಾಗುತ್ತದೆ.)

10. ಮತ್ಸ್ಯ: ವಿರಾಟ್ ನಗರದಲ್ಲಿ ತನ್ನ ರಾಜಧಾನಿಯನ್ನು ಹೊಂದಿರುವ ಮತ್ಸ್ಯವು ಇತರ ರಾಜ್ಯಗಳಿಗೆ ಹೋಲಿಸಿದರೆ ಚಿಕ್ಕದಾಗಿದ್ದರೂ ಮಹತ್ವದ್ದಾಗಿತ್ತು. ಇದು ಮಹಾಭಾರತದ ಅವಧಿಯಲ್ಲಿ ಪಾಂಡವರೊಂದಿಗೆ ನಿಕಟವಾದ ಸಂಬಂಧವನ್ನು ಹೊಂದಿತ್ತು.

11. ಚೇದಿ: ಶುಕ್ತಿಮತಿಯಿಂದ ಆಳ್ವಿಕೆಗೆ ಒಳಗಾದ ಚೇದಿಯು ಬುಂದೇಲ್‌ಖಂಡ ಪ್ರದೇಶದಲ್ಲಿ ನೆಲೆಗೊಂಡಿತ್ತು. ಇದನ್ನು ಹಲವಾರು ಪ್ರಾಚೀನ ಗ್ರಂಥಗಳಲ್ಲಿ ಉಲ್ಲೇಖಿಸಲಾಗಿದೆ ಮತ್ತು ಉತ್ತರ ಭಾರತದ ರಾಜಕೀಯ ವಲಯದ ಒಂದು ಮಹತ್ವದ ಭಾಗವಾಗಿತ್ತು.

12. ಸುರಸೇನ :ಮಥುರಾದಲ್ಲಿ ತನ್ನ ರಾಜಧಾನಿಯನ್ನು ಹೊಂದಿರುವ ಸುರಸೇನವು ಯಾದವ ರಾಜವಂಶದ ಮೇಲೆ ತನ್ನ ಪ್ರಭಾವಕ್ಕೆ ಹೆಸರುವಾಸಿಯಾಗಿತ್ತು. ಮಥುರಾ ಮಹತ್ವದ ಸಾಂಸ್ಕೃತಿಕ ಮತ್ತು ಧಾರ್ಮಿಕ ಕೇಂದ್ರವಾಗಿತ್ತು. ವಿಶೇಷವಾಗಿ ಕೃಷ್ಣನ ಆರಾಧನೆಗಾಗಿ ಹೆಸರುವಾಸಿಯಾದ ನಗರವಾಗಿತ್ತು.

13. ಅಸ್ಸಾಕ (ಅಶ್ಮಾಕ):ದಖ್ಖನ್ ಪ್ರಸ್ಥಭೂಮಿ ಪ್ರದೇಶದಲ್ಲಿ ನೆಲೆಗೊಂಡಿರುವ ಕೆಲವೇ ಮಹಾಜನಪದಗಳಲ್ಲಿ ಅಸ್ಸಾಕ ಒಂದಾಗಿದ್ದು ವಿಂಧ್ಯದ ದಕ್ಷಿಣಕ್ಕೆ ನೆಲೆಗೊಂಡಿವೆ. ಉತ್ತರದ ಸಾಂಸ್ಕೃತಿಕ ಮತ್ತು ರಾಜಕೀಯ ಪ್ರಭಾವವನ್ನು ದಕ್ಷಿಣಕ್ಕೆ ವಿಸ್ತರಿಸುವಲ್ಲಿ ಇದು ನಿರ್ಣಾಯಕ ಪಾತ್ರವನ್ನು ವಹಿಸಿದೆ.

14. ಅವಂತಿ : ಅವಂತಿಯು ಉಜ್ಜಯಿನಿ ಮತ್ತು ಮಾಹಿಷ್ಮತಿ ಎಂಬ ಎರಡು ರಾಜಧಾನಿಗಳೊಂದಿಗೆ ಒಂದು ಪ್ರಮುಖ ರಾಜ್ಯವಾಗಿತ್ತು. ಇದು ಆ ಕಾಲದ ರಾಜಕೀಯದ ಪ್ರಮುಖ ಪ್ರದೇಶವಾಗಿದ್ದು, ನಂತರದಲ್ಲಿ ಮಗಧ ಸಾಮ್ರಾಜ್ಯದ ಭಾಗವಾಯಿತು.

15. ಗಾಂಧಾರ :ತಕ್ಷಶಿಲಾದಲ್ಲಿ ತನ್ನ ರಾಜಧಾನಿಯನ್ನು ಹೊಂದಿರುವ ಗಾಂಧಾರವು ಕಲಿಕೆ ಮತ್ತು ವ್ಯಾಪಾರದ ಕೇಂದ್ರವಾಗಿತ್ತು. ಇದು ಭಾರತವನ್ನು ಮಧ್ಯ ಏಷ್ಯಾ ಮತ್ತು ಪರ್ಷಿಯನ್ ಸಾಮ್ರಾಜ್ಯದೊಂದಿಗೆ ಸಂಪರ್ಕಿಸಿತು. ಹಾಗೂ ಬೌದ್ಧಧರ್ಮದ ಹರಡುವಿಕೆಯಲ್ಲಿ ಪ್ರಮುಖ ಪಾತ್ರ ವಹಿಸಿತು.

16. ಕಾಂಬೋಜ: ವಾಯುವ್ಯದಲ್ಲಿರುವ ಕಾಂಬೋಜವು ಕುದುರೆಗಳು ಮತ್ತು ಯೋಧರಿಗೆ ಹೆಸರುವಾಸಿಯಾಗಿದೆ. ಇದು ಪರ್ಷಿಯಾ ಮತ್ತು ಮಧ್ಯ ಏಷ್ಯಾದೊಂದಿಗೆ ಬಲವಾದ ಸಂಪರ್ಕವನ್ನು ಹೊಂದಿತ್ತು ಮತ್ತು ವಿಶಾಲವಾದ ಇಂಡೋ-ಆರ್ಯನ್ ಸಂಸ್ಕೃತಿಯ ಭಾಗವಾಗಿತ್ತು.

ಪಾಟಲಿಪುತ್ರ, ವಾರಾಣಸಿ ಮತ್ತು ಉಜ್ಜಯಿನಿಯಂತಹ ನಗರಗಳು ಸಂಸ್ಕೃತಿ ಮತ್ತು ಆಡಳಿತದ ಕೇಂದ್ರಗಳಾಗಿದ್ದವು. ಈ ರಾಜ್ಯಗಳು ಮೌರ್ಯರು ಮತ್ತು ಗುಪ್ತರಂತಹ ಮಹಾನ್ ಸಾಮ್ರಾಜ್ಯಗಳ ಉದಯಕ್ಕೆ ವೇದಿಕೆಯನ್ನು ಸ್ಥಾಪಿಸಿದವು. ಮಹಾಜನಪದ ಅವಧಿಯು ಪ್ರಾಚೀನ ಭಾರತದ ಸಾಮಾಜಿಕ-ರಾಜಕೀಯ ಜೀವನವನ್ನು ರೂಪಿಸುವಲ್ಲಿ ಪ್ರಮುಖವಾಗಿದ್ದು, ಭಾರತೀಯ ನಾಗರಿಕತೆಯ ವಿಕಾಸಕ್ಕೆ ತನ್ನದೇ ಆದ ಮಹತ್ವದ ಕೊಡುಗೆಗಳನ್ನು ನೀಡಿತು. ❖

ಮಹಾಜನಪದಗಳ ಪ್ರಮುಖ ಲಕ್ಷಣಗಳು

ಭೌಗೋಳಿಕ ವಿತರಣೆ : ಈ ಮಹಾಜನಪದಗಳು ಉತ್ತರ ಮತ್ತು ಮಧ್ಯ ಭಾರತದಾದ್ಯಂತ ಹರಡಿವೆಯಲ್ಲದೇ ಆಧುನಿಕ ಉತ್ತರ ಪ್ರದೇಶ, ಬಿಹಾರ, ರಾಜಸ್ಥಾನ, ಪಂಜಾಬ್, ಮಧ್ಯಪ್ರದೇಶ ಮತ್ತು ಇಂದಿನ ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನದ ಕೆಲವು ಭಾಗಗಳನ್ನು ಒಳಗೊಂಡಿದೆ.

ಆಡಳಿತ: ಹೆಚ್ಚಿನ ಮಹಾಜನಪದಗಳು ರಾಜಪ್ರಭುತ್ವದಲ್ಲಿದ್ದರೂ, ಕೆಲವು ಗಣರಾಜ್ಯ ವ್ಯವಸ್ಥೆಯನ್ನು ಹೊಂದಿದ್ದವು. ರಾಜರು ಅಥವಾ ಆಳುವ ಕುಟುಂಬಗಳು ಅವರನ್ನು ಹೆಚ್ಚಾಗಿ ನಿಯಂತ್ರಿಸುತ್ತಿದ್ದವು. ಈ ಗಣರಾಜ್ಯಗಳಲ್ಲಿ ಶ್ರೀಮಂತರ ಗುಂಪುಗಳು ಅಧಿಕಾರವನ್ನು ಹೊಂದಿದ್ದವು.

ಆರ್ಥಿಕ ಚಟುವಟಿಕೆ: ಕೃಷಿಯು ಆರ್ಥಿಕತೆಯ ಬೆನ್ನೆಲುಬಾಗಿತ್ತು. ವ್ಯಾಪಾರ ಮತ್ತು ಕರಕುಶಲ ಕಲೆಗಳೂ ಚಾಲ್ತಿಯಲ್ಲಿದ್ದವು. ವಾರಾಣಸಿ ಮತ್ತು ತಕ್ಷಶಿಲಾದಂತಹ ನಗರಗಳು ಪ್ರಮುಖ ವ್ಯಾಪಾರ ಕೇಂದ್ರಗಳಾಗಿದ್ದವು.

ಸೇನಾಬಲ: ಮಹಾಜನಪದಗಳು ಬಲವಾದ ಸೈನ್ಯವನ್ನು ಹೊಂದಿದ್ದು ಆಗಾಗ್ಗೆ ತಮ್ಮ ಪ್ರದೇಶ ಮತ್ತು ಪ್ರಭಾವವನ್ನು ವಿಸ್ತರಿಸಲು ಪರಸ್ಪರ ಯುದ್ಧಗಳಲ್ಲಿ ತೊಡಗಿದ್ದರು.

ಬೌದ್ಧ ಮತ್ತು ಜೈನ ಧರ್ಮದ ಉದಯ:ಮಹಾಜನಪದಗಳ ಅವಧಿಯಲ್ಲಿಯೇ ಬೌದ್ಧ ಮತ್ತು ಜೈನ ಧರ್ಮದಂತಹ ಧಾರ್ಮಿಕ ಚಳವಳಿಗಳ ಉದಯವಾಯಿತು. ಇದು ಆ ಕಾಲದ ಸಾಮಾಜಿಕ-ಧಾರ್ಮಿಕ ರಚನೆಯನ್ನು ಹೆಚ್ಚು ಪ್ರಭಾವಿಸಿತು.



ಮಹಾಜನಪದ	ರಾಜಧಾನಿ	ಪ್ರಸ್ತುತ ಸ್ಥಳ
ಅಂಗ	ಚಂಪಾ	ಆಧುನಿಕ ಬಿಹಾರ (ಭಾಗಲ್ಪುರ್)
ಮಗಧ	ರಾಜಗೃಹ (ನಂತರದಲ್ಲಿ ಪಾಟಲಿಪುತ್ರ)	ದಕ್ಷಿಣ ಬಿಹಾರ
ವಜ್ಜಿ (ವೃಜ್ಜಿ)	ವೈಶಾಲಿ	ಉತ್ತರ ಬಿಹಾರ
ಮಲ್ಲ	ಕುಸಿನಗರ, ಪಾವ	ಪೂರ್ವ ಉತ್ತರ ಪ್ರದೇಶ
ಕಾಶಿ	ವಾರಾಣಸಿ	ಪೂರ್ವ ಉತ್ತರ ಪ್ರದೇಶ
ಕೋಸಲ	ಶ್ರಾವಸ್ತಿ	ಪೂರ್ವ ಉತ್ತರ ಪ್ರದೇಶ ಮತ್ತು ನೇಪಾಳದ ಭಾಗಗಳು
ವತ್ಸ	ಕೌಸಂಬಿ (ಪ್ರಯಾಗರಾಜ್ ಬಳಿ)	ಆಧುನಿಕ ಉತ್ತರ ಪ್ರದೇಶ
ಕುರು	ಇಂದ್ರಪ್ರಸ್ಥ, ಹಸ್ತಿನಾಪುರ	ದೆಹಲಿ -ಹರಿಯಾಣ - ಪಶ್ಚಿಮ ಉತ್ತರ ಪ್ರದೇಶ
ಪಾಂಚಾಲ	ಅಹಿಚ್ಛತ್ರ (ಉತ್ತರ), ಕಂಪಿಲ್ಯ (ದಕ್ಷಿಣ)	ಪಶ್ಚಿಮ ಉತ್ತರ ಪ್ರದೇಶ
ಮತ್ಸ್ಯ	ವಿರಾಟ್‌ನಗರ	ಆಧುನಿಕ ರಾಜಸ್ಥಾನ
ಚೇದಿ	ಶುಕ್ತಿಮತಿ	ಬುಂದೇಲ್‌ಖಂಡ್ ಪ್ರದೇಶ (ಮಧ್ಯಪ್ರದೇಶ)
ಸುರಸೇನ	ಮಥುರಾ	ಪಶ್ಚಿಮ ಉತ್ತರ ಪ್ರದೇಶ
ಅಸ್ಸಾಕ (ಅಶ್ಮಾಕ) ಪೊಟಲಿ/ಪ್ರತಿಷ್ಠಾನ	ದಖ್ಖನ್ ಪ್ರದೇಶ	ಮಹಾರಾಷ್ಟ್ರ
ಅವಂತಿ	ಉಜ್ಜಯಿನಿ(ಉತ್ತರ) ಮಾಹಿಷ್ಮತಿ (ದಕ್ಷಿಣ)	ಮಧ್ಯಪ್ರದೇಶ
ಗಾಂಧಾರ	ತಕ್ಷಶಿಲಾ	ಇಂದಿನ ಪಾಕಿಸ್ತಾನ (ರಾವಲ್ಪಿಂಡಿ ಪ್ರದೇಶ)
ಕಾಂಬೋಜ	ರಾಜಪುರ	ವಾಯುವ್ಯ ಪಾಕಿಸ್ತಾನ ಮತ್ತು ಅಫ್ಘಾನಿಸ್ತಾನ

ಬಹು ಆಯ್ಕೆಯ ಪ್ರಶ್ನೆಗಳು

1. ಕೆಳಗಿನ ಯಾವ ಮಹಾಜನಪದಗಳು ಅದರ ಗಣರಾಜ್ಯ ಸರ್ಕಾರಕ್ಕೆ ಹೆಸರುವಾಸಿಯಾಗಿದೆ ಮತ್ತು ಬುದ್ಧನು ಮಹಾಪರಿನಿರ್ವಾಣವನ್ನು ಪಡೆದ ಸ್ಥಳವಾಗಿದೆ ?

(1) ಕುರು (2) ಮಲ್ಲ
(3) ಮಗಧ 4) ವಜ್ಜಿ

ಉತ್ತರ: (2)

2. ಕಲಿಕೆ ಮತ್ತು ವ್ಯಾಪಾರದ ಕೇಂದ್ರವಾಗಿ ಹೆಸರುವಾಸಿಯಾದ ಗಾಂಧಾರ ಸಾಮ್ರಾಜ್ಯದ ರಾಜಧಾನಿ ಯಾವುದು?

(1) ವೈಶಾಲಿ (2) ತಕ್ಷಶಿಲಾ
(3) ಉಜ್ಜಯಿನಿ (4) ಮಥುರಾ

ಉತ್ತರ: (2)

3. ಶ್ರಾವಸ್ತಿಯಲ್ಲಿ ರಾಜಧಾನಿಯನ್ನು ಹೊಂದಿರುವ ಕೋಸಲದ ಮಹಾಜನಪದವು ಯಾವ ಧಾರ್ಮಿಕ ವ್ಯಕ್ತಿಯೊಂದಿಗೆ ನಿಕಟ ಸಂಬಂಧ ಹೊಂದಿದೆ ?

(1) ಮಹಾವೀರ (2) ಚಂದ್ರಗುಪ್ತ ಮೌರ್ಯ
(3) ಬುದ್ಧ (4) ಕೃಷ್ಣ

ಉತ್ತರ: (3)

4. ಯಾವ ಮಹಾಜನಪದವು ದಖ್ಖನ್ ಪ್ರದೇಶದಲ್ಲಿತ್ತು ಮತ್ತು ವಿಂಧ್ಯದ ದಕ್ಷಿಣಕ್ಕೆ ನೆಲೆಗೊಂಡಿರುವ ಕೆಲವು ಮಹಾಜನಪದಗಳಲ್ಲಿ ಒಂದಾಗಿತ್ತು?

(1) ಕುರು (2) ಪಾಂಚಾಲ
(3) ಅಸ್ಸಾಕಾ (4) ಮತ್ಸ್ಯ

ಉತ್ತರ: (3)

5. ಅಂತರರಾಷ್ಟ್ರೀಯ ನ್ಯಾಯಾಲಯದಲ್ಲಿ ನ್ಯಾಯಾಧೀಶರಾಗಿ ಕಾರ್ಯನಿರ್ವಹಿಸಿರುವ ಪ್ರಮುಖ ಭಾರತೀಯರನ್ನು ಗುರುತಿಸಿ ?

1. ದಲ್ವೀರ್ ಭಂಡಾರಿ 2. ನಾಗೇಂದ್ರ ಸಿಂಗ್
3. ಸರ್ ಬೆನೆಗಲ್ ರಾವ್ 4. ಆರ್. ಎಸ್. ಪಾಠಕ್

ಕೋಡ್ ಬಳಸಿ ಸರಿಯಾದ ಉತ್ತರವನ್ನು ಗುರುತಿಸಿ.

ಎ.1, 2, 3 ಮತ್ತು 4 ಬಿ. 1 ಮತ್ತು 2
ಸಿ. 2 ಮತ್ತು 3 ಡಿ. 3 ಮತ್ತು 4

ಉತ್ತರ : ಎ

6 ಚಂದ್ರಯಾನ-4 ಅಭಿಯಾನದ ಪ್ರಾಥಮಿಕ ಗುರಿ ಏನು?

1. ಚಂದ್ರನ ಮೇಲ್ಮೈಯಲ್ಲಿ ಒಂದು ರೋವರ್ ನಿಯೋಜಿಸುವುದು.
2. ಚಂದ್ರನಿಂದ ಮಾದರಿಗಳನ್ನು ಸಂಗ್ರಹಿಸಿ ಅವುಗಳನ್ನು ಭೂಮಿಗೆ ತರುವುದು.
3. ಚಂದ್ರನ 3ಡಿ ನಕ್ಷೆ ತಯಾರಿಸುವುದು.
4. ಚಂದ್ರನ ಮೇಲೆ ನೀರನ್ನು ಹುಡುಕುವುದು.

ಉತ್ತರ: (2)

7. ಚಂದ್ರನ ಮೇಲೆ ನೀರಿನ ಅಣುಗಳು ಇರುವುದನ್ನು ದೃಢಪಡಿಸಿದ ಇಸ್ರೊದ ಅಭಿಯಾನ ಯಾವುದು?

1. ಚಂದ್ರಯಾನ-2 2. ಚಂದ್ರಯಾನ-3
3. ಚಂದ್ರಯಾನ-1 4. ಚಂದ್ರಯಾನ-4

ಉತ್ತರ: (3)

8 ಭಾರತದ ಅಮೂರ್ತ ಸಾಂಸ್ಕೃತಿಕ ಪರಂಪರೆಗಳ ಮೂಲಾಂಶಗಳ ಕುರಿತ ಕೆಳಗಿನ ಹೇಳಿಕೆಗಳನ್ನು ಪರಿಶೀಲಿಸಿ:

1. ಗುಜರಾತಿನ ಗಾರ್ಭಾ ನೃತ್ಯವನ್ನು ದೀಪಾವಳಿ ಸಂದರ್ಭದಲ್ಲಿ ಮಾಡಲಾಗುತ್ತಿದ್ದು, ಅದು ಸ್ತ್ರೀ ಸ್ವರೂಪವಾದ 'ಶಕ್ತಿ' ಯನ್ನು ಸಂಕೇತಿಸುತ್ತದೆ.
2. ಕೋಲ್ಕತ್ತದ ದುರ್ಗಾ ಪೂಜೆಯಲ್ಲಿ ಆವೆ ಮಣ್ಣಿನಲ್ಲಿ ದುರ್ಗಾ ಮತ್ತು ಪರಿವಾರದ ಮೂರ್ತಿಗಳನ್ನು ಮಾಡಿ, ಪೂಜಿಸಿದ ಬಳಿಕ ಗಂಗೆಯಲ್ಲಿ ವಿಸರ್ಜಿಸಲಾಗುತ್ತದೆ.
3. ಕುಂಭಮೇಳವು ಜಗತ್ತಿನಲ್ಲೇ ಅತ್ಯಂತ ಹೆಚ್ಚು ಜನರು ಸೇರುವ ಮೇಳವಾಗಿದ್ದು, ಅಲಹಾಬಾದ್, ಹರಿದ್ವಾರ, ಉಜ್ಜಯಿನಿ ಮತ್ತು ನಾಸಿಕ್‌ನಲ್ಲಿ ಮೂರು ವರ್ಷಗಳಿಗೆ ಒಮ್ಮೆ ನಡೆಯುತ್ತದೆ.
4. ಯೋಗವು ಆಸನಗಳು, ಧ್ಯಾನ, ನಿಯಂತ್ರಿತ ಉಸಿರಾಟ ಮತ್ತು ಉಚ್ಚಾರಗಳ ಮೂಲಕ ದೇಹ ಮನಸ್ಸು ಮತ್ತು ಆತ್ಮಗಳನ್ನು ಏಕೀಕರಿಸಿ, ಮಾನಸಿಕ, ದೈಹಿಕ ಮತ್ತು ಆಧ್ಯಾತ್ಮಿಕ ಆರೋಗ್ಯವನ್ನು ಕಾಪಾಡುತ್ತದೆ ಎನ್ನಲಾಗಿದೆ.

ಈ ಮೇಲಿನ ನಾಲ್ಕು ಹೇಳಿಕೆಗಳಲ್ಲಿ ಎಷ್ಟು ಸರಿಯಾಗಿದೆ ?

1 ಒಂದು ಮಾತ್ರ 2. ಎರಡು ಮಾತ್ರ
3. ಮೂರು ಮಾತ್ರ 4. ನಾಲ್ಕೂ ಸರಿ

ಉತ್ತರ: (2)

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಇಂಗ್ಲಿಷ್

Second Language ENGLISH

Prose

Gentleman of Rio en Medio

Think About The Text

Enrich Your Vocabulary:

Task–1 : **Look for the words in the word maze which match with the given meaning. One is done for you. Note the number given in brakets is the number of letters in that word. Read across, down and diagonally.**

W	A	A	I	P	T	Q	M	B	H	G
T	J	N	D	R	F	O	E	D	V	B
H	S	L	I	D	K	W	R	T	S	N
K	I	O	S	M	O	B	L	K	H	M
R	O	K	C	P	P	O	P	P	A	R
B	D	P	O	R	C	H	A	R	D	T
V	K	I	V	O	D	M	O	O	U	Q
L	G	O	E	P	E	K	F	P	R	A
M	P	N	R	T	H	C	E	E	L	P
Q	A	T	Y	Y	L	W	R	R	P	D
C	R	B	X	L	S	V	N	T	O	C
M	O	L	A	F	P	U	Y	Y	R	B

(4): a long thin stick - Cane
(9) finding something that was not known earlier discovery- DISCOVERY *(....Contd)*
8) thing/things that someone owns – PROPERTY
7) a place where fruit trees are grown - ORCHARD
5) ability to control people – POWER

Task – 2: Find out the words in the given word maze and match with their meanings. Readacross, down and diagnally.

P	R	S	E	V	E	R	A	L	M
C	Z	Q	W	S	D	K	J	R	X
O	P	D	E	E	D	L	B	V	Y
M	M	X	F	G	O	A	R	N	P
P	A	T	C	K	C	E	A	B	[illegible]
L	O	E	S	L	U	P	T	D	[illegible]
A	U	R	H	X	M	E	E	O	Y
I	L	K	J	O	E	W	H	R	P
N	G	D	C	H	N	K	V	I	W
T	M	C	Q	O	T	M	Q	U	N
M	A	N	N	E	R	R	W	T	S

(9) to go with someone – ACCOMPANY
(6) the way in which something is done – MANNER
(9) unhappy about something – COMPLAINT
(7) many-SEVERAL
(8) official record — DOCUMENT
(4) price – RATE
(4) agreement – DEED.

Read and respond:

Read the passage carefully and answer the questions set on it.

A small crowd had gathered around the entrance to the park. His curiosity aroused, Robert crossed the road to see what was happening. He found that the centre of attraction was an old man with a performing monkey. The monkey's tricks, he soon discovered, were in no way remarkable. So, after throwing a few pennies in the dirty hat which the man had placed on the pavement, Robert moved off, along with other members of the crowd. At this point the man suddenly let out a loud cry. Everyone turned to see what had happened. The man was bending over his monkey, which now lay quite still on the pavement. He picked up the apparently lifeless body and holding it close to him, began to weep. A young man stepped forward from the crowd and taking some money from his pocket, dropped it into the hat. Robert and several other people did likewise, until the pennies in the hat were covered with silver coins. Meanwhile the man continued to hold the dead monkey in his arms and seemed to take no notice of what was going on about him. A few months later, Robert came across the old man again in another part of the city. The man had a monkey, bought no doubt with the money the crowd had given him. It did not, however, seem any better at its tricks than the previous one. Robert was pleased to see that the old man was still able to earn a living, though on this occasion, having partly paid for the monkey out of his own pocket, he did not feel inclined to throw any money into the hat.But the performance was not yet over. Once again the old man let out a loud cry. Once again the monkey lay still on the pavement. The man picked up the 'dead' monkey and clutching it in his arms began to weep. The same young man stepped forward and threw some money into the hat. Again the crowd followed suit – except Robert. Smiling to himself, he went on his way, amazed at the man's audacity.

1. Robert went to the other side of the road because.................

a) he wanted to help the old man by giving him some money
b) he wanted to see why a crowd had gathered
c) he was curious to watch the monkey's tricks
d) he had seen one of his friends over there.

Ans:(b) he wanted to see why the crowd had gathered

2. The word "pavement" in the fifth line of para 1 is................

a) a temporary tent which is used for public entertainment
b) a path at the side of a road for people to walk on
c) a small building made of wood
d) a shelf on the road.

Ans:(b) a path at the side of the road for people to walk on

3. The old man let out a loud cry suddenly in order to...

a) keep the monkey quiet for some time
b) let the crowd know that his monkey was dead
c) let the crowd know that he was a poor man
d) show that he was hurt.

Ans: (b) let the crowd know that his monkey was dead

II PUC - CHEMISTRY

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ, ಕೇಂದ್ರ

The d and f Block Elements

89. Explain the formation of alloys of transition elements.

Ans: (.......Contd)

Example:- Bronze is an alloy formed by 83% copper, 12% tin, and 5% other metals.

Other Examples : (i) Stainless steel is an alloy of Fe, Cr, Cr and Ni.

(ii) Amalgam is an alloy of Hg with other metals.

(iii) Brass (Cu + Zn)

90. The halides of transition elements become more covalent with increasing oxidation state of the metal. Why?

Ans: As the oxidation state increases, the size of the ion of the transition element decreases. As per Fajan's rule, as the size of metal ions decreases, the covalent character of the bond formed increases. Therefore, the halides of transition elements become more covalent with the increasing oxidation state of the metal.

91. Give characteristics of oxides and oxoanions of transition metals.

Ans: (i) All transition metals except Sc from metal oxides which are ionic and basic nature.

(ii) Higher oxidation state oxides like Mn_2O_7 are covalent and acidic in nature.

(iii) Some metal oxides react with both acids and bases. Such oxides are called amphoteric oxides. for Examples: Cr_2O_3, V_2O_5.

92. Explain why does colour of $KMnO_4$, disappear when oxalic acid is added to its solution in acidic medium.

Ans: $KMnO_4$ acts as an oxidising agent. It oxidises oxalic acid to CO_2 and changes to Mn^{2+} ion, which is colourless.

93. Vandiumpentoxide (V_2O_5) is amphoteric oxide. Explain.

Ans: V_2O_5 reacts with both alkalies as well as acids to give VO_4^{3-} and VO_4^{+} respectively. Hence Vanadium pentoxide V_2O_5 is amphoteric oxide.

94. The second and third rows of transition elements resemble each other much more than they resemble the first row. Explain why?

Ans: Due to lanthanoid contraction, the atomic radii of the second and third-row transition elements are almost identical. So, they resemble each other much more than first-row elements.

95. Give an example for amphoteric oxide.

Ans: Cr_2O_3

96. Name the important ore or chief ore of potassium dichromate $(K_2Cr_2O_7)$.

Ans: Chromite ore or chrome iron stone – $FeO.Cr_2O_3$ or $FeCr_2O_4$.

97. Give two uses of potassium dichromate.

Ans: (i) It is used in leather industry.
(ii) Used as an oxidizing agent.

98. Ionisation enthalpies of Ce, Pr and Nd are higher than Th, Pa and U. Why?

Ans: Ce, Pr and Nd are lanthanoids and have an incomplete 4f shell, while Th, Pa and U are actinoids and have an incomplete 5f shell. When 5f - orbitals begin to be occupied, they will penetrate less into the inner core of electrons. The 5f-electrons will, therefore, be more effectively shielded from the nuclear charge than the 4f electrons of the corresponding lanthanoids. Therefore, outer electrons are less firmly held and are available for bonding in the actinoids.

99. How is potassium dichromate $(K_2Cr_2O_7)$ manufactured?

Ans: $K_2Cr_2O_7$ is manufactured from chromite ore or chrome iron stone–$FeO.Cr_2O_3$ or $FeCr_2O_4$.

Step-1 – Chromite ore is heated with sodium carbonate in excess of air to form sodium chromate.

$$4FeCr_2O_4 + 8Na_2CO_3 + 7O_2 \longrightarrow 8Na_2CrO_4 + 2Fe_2O_3 + 8CO_2$$

Step 2 – The yellow solution of sodium chromate is filtered and acidified with sulphuric acid to give orange solution of sodium dichromate.

$$2Na_2CrO_4 + H_2SO_4 \longrightarrow Na_2Cr_2O_7 + Na_2SO_4 + H_2O$$

The less soluble sodium sulphate is removed by filtration.

Step 3 – The solution of sodium dichromate is treated with KCl to form potassium dichromate.

$$Na_2CrO_7 + 2KCl \longrightarrow K_2Cr_2O_7 + 2NaCl$$

Solution on colling gives orange red crystals of $K_2Cr_2O_7$.

100. Write the structure of chromate ion and dichromate ion.

Ans:**The structure of chromate ion $[CrO_4^{2-}]$ is tetrahedral. The structure of dichromate ion consists of two tetrahedral sharing one corner with Cr–O–Cr bond angle of 126°.**



ಸ್ಪರ್ಧಾವಾಣಿ ಮಾಸಪತ್ರಿಕೆಯ ಹಿಂದಿನ ಸಂಚಿಕೆಗಳನ್ನು ಖರೀದಿಸುವ ಅವಕಾಶ ತಪ್ಪಿ ಹೋಯಿತೇ?

ಪ್ರಜಾವಾಣಿ ಸ್ಪರ್ಧಾವಾಣಿ MASTERMIND

ಆರ್ಡರ್ ಮಾಡಲು QR ಸ್ಕ್ಯಾನ್ ಮಾಡಿ, ನಿಮ್ಮ ವಿವರಗಳನ್ನು ಭರ್ತಿ ಮಾಡಿ.

ಕೇವಲ ₹220 ರಿಂದ ಪ್ರಾರಂಭ

* ಷರತ್ತುಗಳು ಅನ್ವಯ

ಕೋಡಿಯಲ್ಲಿ ಕೊಚ್ಚಿ ಹೋದ ಬೈಕ್ ಸವಾರ

ಗೋಡೆ ಕುಸಿದು ಮಹಿಳೆ ಸಾವು ● ಮಡಿಕೇರಿ, ಸಕಲೇಶಪುರ, ಅರಸೀಕೆರೆಯಲ್ಲಿ ಧಾರಾಕಾರ ಮಳೆ

ಪ್ರಜಾವಾಣಿ ವಾರ್ತೆ

ಹಾಸನ/ಮಂಡ್ಯ: ರಾಜ್ಯದ ಕೆಲವೆಡೆ ಮಂಗಳವಾರ ರಾತ್ರಿ ಮತ್ತು ಬುಧವಾರ ಧಾರಾಕಾರ ಮಳೆಯಾಗಿದೆ. ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಅಣೆ ಚನ್ನಾಪುರ ಗ್ರಾಮದ ಕೆರೆ ಕೋಡಿ ನೀರಿನಲ್ಲಿ ಬೈಕ್ ಸವಾರ ಕೊಚ್ಚಿ ಹೋಗಿದ್ದರೆ, ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಜಿ. ಹೊಸಹಳ್ಳಿ ಗ್ರಾಮದಲ್ಲಿ ಮನೆ ಗೋಡೆ ಕುಸಿದು ಸಹನಾ (30) ಎಂಬುವರು ಮೃತಪಟ್ಟಿದ್ದಾರೆ.

ಹಾಸನ ಜಿಲ್ಲೆಯ ಸಕಲೇಶಪುರ, ಅರಸೀಕೆರೆ ತಾಲ್ಲೂಕು ಹಾಗೂ ಕೊಡಗು ಜಿಲ್ಲೆಯ ಮಡಿಕೇರಿ ಹಾಗೂ ಗೋಣಿಕೊಪ್ಪಲಿನಲ್ಲಿ ಗುಡುಗು–ಸಿಡಿಲು ಸಹಿತ ಧಾರಾಕಾರ ಮಳೆ ಸುರಿದಿದ್ದು, ಅಂಗಡಿ, ಮನೆಗಳಿಗೆ ನೀರು ನುಗ್ಗಿತ್ತು.

ಕಂಬದಹಳ್ಳಿಯ ರಾಮಚಂದ್ರೇಗೌಡ (65) ಬುಧವಾರ ಬೆಳ್ಳೂರು ಕ್ರಾಸ್‌ನಿಂದ ಕಂಬದಹಳ್ಳಿಯ ಕಡೆಗೆ ಹೋಗುತ್ತಿದ್ದರು. ಈ ವೇಳೆ ನೀರಿನಲ್ಲಿ ಕೊಚ್ಚಿ ಹೋಗಿದ್ದಾರೆ. ಅಗ್ನಿಶಾಮಕ ಸಿಬ್ಬಂದಿ ಮೃತದೇಹ ಮತ್ತು ಬೈಕ್ ಅನ್ನು ನೀರಿನಿಂದ ಹೊರತೆಗೆದರು. ಸ್ನಾನಕ್ಕೆ ತೆರಳಿದ್ದ ಸಹನಾ ಮೇಲೆ ಮನೆ ಗೋಡೆ ಕುಸಿದು ಬಿದ್ದಿದೆ. ಪ್ರಜ್ಞಾಹೀನರಾಗಿದ್ದ ಅವರನ್ನು ತಕ್ಷಣ ಕುಟುಂಬಸ್ಥರು ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದಾರೆ. ಮಾರ್ಗಮಧ್ಯೆ ಅವರು ಮೃತಪಟ್ಟಿದ್ದಾರೆ. ನಾಲ್ಕೈದು ದಿನಗಳಿಂದ ಸುರಿಯುತ್ತಿರುವ ಮಳೆಯಿಂದಾಗಿ ಹಳೆಯ ಮಣ್ಣಿನ ಮನೆ ನೆನೆದಿತ್ತು ಎಂದು ತಿಳಿದು ಬಂದಿದೆ.

ಕೆ.ಆರ್.ಪೇಟೆ ತಾಲ್ಲೂಕಿನ ಕಿಕ್ಕೇರಿಯಲ್ಲಿ ಕುಸಿದ ಮನೆ ಮುಂದೆ ವೃದ್ಧೆ ಜಯಮ್ಮ

ಶ್ರೀರಂಗಪಟ್ಟಣ ತಾಲ್ಲೂಕಿನಲ್ಲಿ ಲೋಕಪಾವನಿ ನದಿಯ ಸೆಳೆತಕ್ಕೆ ಸಿಕ್ಕಿ ಕೊಚ್ಚಿಹೋಗುತ್ತಿದ್ದ ಎತ್ತಿನ ಗಾಡಿ ಹಾಗೂ ಸವಾರನನ್ನು ಪೊಲೀಸರು ಹಾಗೂ ಸ್ಥಳೀಯರು ಬುಧವಾರ ರಕ್ಷಿಸಿದರು. ಶ್ರೀನಿವಾಸ ಅಗ್ರಹಾರ ಗ್ರಾಮದ ರಾಜು ಗಾಡಿಯನ್ನು ತೊಳೆಯಲು ಬಾಬುರಾಯನಕೊಪ್ಪಲು ಬಳಿ ನದಿಗೆ ಹೋದಾಗ ಘಟನೆ ನಡೆಯಿತು.

ಕೆ.ಆರ್.ಪೇಟೆ ತಾಲ್ಲೂಕಿನ ಕಿಕ್ಕೇರಿಯ ಬಸ್‌ನಿಲ್ದಾಣ ಸಮೀಪದ ಜಯಮ್ಮ ಎಂಬವರ ಮನೆ ಗೋಡೆ ಮಂಗಳವಾರ ರಾತ್ರಿ ಕುಸಿದಿದ್ದು, ದಿನಬಳಕೆ ವಸ್ತುಗಳು ಹಾಳಾಗಿವೆ. ನಾಡಹೆಂಚುಗಳು ಪುಡಿಯಾಗಿವೆ.

ಸಕಲೇಶಪುರದಲ್ಲಿ ಆಜಾದ್ ರಸ್ತೆ ಜಲಾವೃತಗೊಂಡಿತ್ತು. ಅಂಗಡಿಗಳಿಗೆ ನೀರು ನುಗ್ಗಿದ್ದರಿಂದ ವರ್ತಕರು ಪರದಾಡಿದರು. ಅರಸೀಕೆರೆ ಹಾಗೂ ಸುತ್ತಲಿನ ಗ್ರಾಮಗಳಲ್ಲಿ ಕೆರೆ ಕೋಡಿ ಬಿದ್ದಿದ್ದು, ಬಡಾವಣೆಗಳಿಗೆ ನೀರು ನುಗ್ಗಿತ್ತು. ತಾಲ್ಲೂಕಿನ ಯಾದಾಪುರ-ಸಂಕೋಡನಹಳ್ಳಿ ಸೇತುವೆ ಜಲಾವೃತವಾಗಿತ್ತು.

ಕೊಡಗು ಜಿಲ್ಲೆಯ ಮಡಿಕೇರಿ ಹಾಗೂ ಗೋಣಿಕೊಪ್ಪಲಿನಲ್ಲಿ ಬುಧವಾರ ಎರಡು ಗಂಟೆಗೂ ಅಧಿಕ ಕಾಲ ಗುಡುಗು ಸಿಡಿಲಿನಿಂದ ಕೂಡಿದ ಮಳೆ ಸುರಿಯಿತು.

ಉಪ್ಪಿನಂಗಡಿ ವರದಿ (ದಕ್ಷಿಣ ಕನ್ನಡ): ಕಡಬ ತಾಲ್ಲೂಕಿನಾದ್ಯಂತ ಬುಧವಾರ ಸಂಜೆ ಗುಡುಗು ಸಹಿತ ಧಾರಾಕಾರ ಮಳೆಯಾಗಿದೆ. ಅರ್ಧ ತಾಸಿಗೂ ಹೆಚ್ಚು ಕಾಲ ಸುರಿದ ಮಳೆಯಿಂದ ಉಪ್ಪಿನಂಗಡಿ- ಕಡಬ- ಸುಬ್ರಹ್ಮಣ್ಯ ರಾಜ್ಯ ಹೆದ್ದಾರಿಯ ಮರ್ದಾಳ ಪೇಟೆಯ ರಸ್ತೆಯಲ್ಲೇ ನೀರು ಹರಿದು ನದಿಯಂತಾಗಿತ್ತು. ಸುಳ್ಯದ ಹಲವು ಕಡೆಗಳಲ್ಲಿ ಜೋರು ಮಳೆಯಾಗಿದೆ.

ದಾವಣಗೆರೆ ವರದಿ: ಜಿಲ್ಲೆಯಲ್ಲಿ ಧಾರಾಕಾರ ಮಳೆ ಸುರಿದಿದೆ. ನಿರಂತರವಾಗಿ ಬೀಳುತ್ತಿರುವ ಮಳೆಯಿಂದಾಗಿ ರೈತರು ಮತ್ತೆ ಆತಂಕಗೊಂಡಿದ್ದಾರೆ.

ಮಂಗಳವಾರ ವರುಣ ಬಿಡುವು ನೀಡಿದ್ದರಿಂದ ರೈತರು ನಿರಾಳರಾಗಿದ್ದರು. ಮೋಡಗಳು ಮರೆಯಾಗಿ ಸೂರ್ಯ ಕಣ್ತೆರೆದಿದ್ದು ಕಂಡು ಹರ್ಷಗೊಂಡಿದ್ದರು. ಮೆಕ್ಕೆಜೋಳ, ರಾಗಿ ಕೊಯ್ಲಿಗೆ ಸಿದ್ಧತೆ ಮಾಡಿಕೊಳ್ಳುತ್ತಿದ್ದರು. ಆದರೆ, ಬುಧವಾರ ಸುರಿದ ಮಳೆಗೆ ಬೆಳೆಗಳು ಮತ್ತೆ ಜಲಾವೃತಗೊಂಡಿವೆ.

ಎರಡು ವಾರಗಳಿಂದ ಬಿಟ್ಟೂಬಿಡದೇ ಸುರಿಯುತ್ತಿರುವ ಮಳೆಯಿಂದಾಗಿ ಜಲಮೂಲಗಳು ಭರ್ತಿಯಾಗಿವೆ. ಬುಧವಾರ ಮಧ್ಯಾಹ್ನ ಎರಡು ಗಂಟೆ ಸುರಿದ ಮಳೆಗೆ ಕಾಲುವೆಗಳು ತುಂಬಿ ಹರಿದವು. ಪುನೀತ್ ರಾಜ್‌ಕುಮಾರ್ ಬಡಾವಣೆ, ಎಸ್.ಎಸ್. ಬಡಾವಣೆಯ ತಗ್ಗು ಪ್ರದೇಶಗಳಿಗೆ ನೀರು ನುಗ್ಗಿ ಜನರು ಸಮಸ್ಯೆ ಅನುಭವಿಸಿದರು.

ತಗ್ಗಲಿದೆ ಮಳೆಯ ತೀವ್ರತೆ: ಮುನ್ಸೂಚನೆ

ಬೆಂಗಳೂರು: ರಾಜ್ಯದಲ್ಲಿ ಗುರುವಾರದಿಂದ ಮಳೆಯ ತೀವ್ರತೆ ತಗ್ಗುವ ಸಾಧ್ಯತೆ ಇದೆ ಎಂಬ ಮುನ್ಸೂಚನೆಯನ್ನು ಹವಾಮಾನ ಇಲಾಖೆ ನೀಡಿದ್ದು, ವಿವಿಧೆಡೆ ಸಾಧಾರಣ ಮಳೆಯಾಗುವ ಸಂಭವವಿದೆ ಎಂದು ತಿಳಿಸಿದೆ.

ರಾಜ್ಯದ ಯಾವುದೇ ಜಿಲ್ಲೆಗೆ ಗುರುವಾರ ಭಾರಿ ಮಳೆಯ ಮುನ್ಸೂಚನೆಯಿಲ್ಲ. ಕರಾವಳಿಯ ಒಂದೆರಡು ಸ್ಥಳಗಳು ಹಾಗೂ ದಕ್ಷಿಣ ಒಳನಾಡಿನ ಹಲವು ಸ್ಥಳಗಳಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ಉತ್ತರ ಒಳನಾಡಿನ ಬೆಳಗಾವಿ, ಧಾರವಾಡ ಹಾಗೂ ಹಾವೇರಿ ಜಿಲ್ಲೆಯ ಒಂದೆರಡು ಸ್ಥಳಗಳಲ್ಲಿ ಮಳೆಯಾಗಲಿದ್ದು, ಉಳಿದೆಡೆ ಒಣಹವೆ ಇರುವ ಸಂಭವವಿದೆ ಎಂದು ಇಲಾಖೆ ಹೇಳಿದೆ.

ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ವಾತಾವರಣದಲ್ಲಿ ಉಷ್ಣಾಂಶ ಹೆಚ್ಚಳವಾಗುವ ಸಂಭವವಿದೆ ಎಂದಿದೆ. ಶುಕ್ರವಾರದಿಂದ ದಕ್ಷಿಣ ಒಳನಾಡಿನ ಕೆಲವೆಡೆ ಸಾಧಾರಣ ಮಳೆಯಾಗುವ ಸಾಧ್ಯತೆಯಿದ್ದು, ಕರಾವಳಿ ಹಾಗೂ ಉತ್ತರ ಒಳನಾಡಿನಲ್ಲಿ ಒಣಹವೆ ಇರುವ ಸಂಭವವಿದೆ ಎಂದು ಇಲಾಖೆ ತಿಳಿಸಿದೆ.

ಒಳಮೀಸಲಾತಿ ಜಾರಿಗೊಳಿಸುವಂತೆ ಆಗ್ರಹಿಸಿ ಜಿಲ್ಲಾ ಮಾದಿಗ – ಛಲವಾದಿ ಸಮುದಾಯಗಳ ಒಕ್ಕೂಟದ ಸದಸ್ಯರು ದಾವಣಗೆರೆಯ ಜಯದೇವ ವೃತ್ತದಲ್ಲಿ ಮಾನವ ಸರಪಳಿ ನಿರ್ಮಿಸಿ ಪ್ರತಿಭಟನೆ ನಡೆಸಿದರು –ಪ್ರಜಾವಾಣಿ ಚಿತ್ರ

ಒಳಮೀಸಲಿಗೆ ಒಗ್ಗೂಡಿದ ಎಡಗೈ–ಬಲಗೈ ಬಣ

ಪ್ರಜಾವಾಣಿ ವಾರ್ತೆ

ದಾವಣಗೆರೆ: ಜಿಲ್ಲಾ ಮಾದಿಗ–ಛಲವಾದಿ ಸಮುದಾಯಗಳ ಒಕ್ಕೂಟದ ನೇತೃತ್ವದಲ್ಲಿ ಒಗ್ಗೂಡಿದ ದಲಿತ ಸಮುದಾಯದ ಎಡಗೈ ಹಾಗೂ ಬಲಗೈ ಬಣಗಳು, ಒಳಮೀಸಲಾತಿಯನ್ನು ಶೀಘ್ರವೇ ಜಾರಿಗೊಳಿಸುವಂತೆ ಒತ್ತಾಯಿಸಿ ಬುಧವಾರ ಇಲ್ಲಿ ಬೃಹತ್ ಪ್ರತಿಭಟನೆ ನಡೆಸಿದವು.

ಈ ಸೌಲಭ್ಯ ಅನುಷ್ಠಾನಕ್ಕೆ ಬರುವವರೆಗೂ ಹೊಸದಾಗಿ ಸರ್ಕಾರಿ, ಅರೆ ಸರ್ಕಾರಿ ಸಿಬ್ಬಂದಿಯ ನೇಮಕಾತಿ ಪ್ರಕ್ರಿಯೆ ಸ್ಥಗಿತಗೊಳಿಸುವಂತೆ ಆಗ್ರಹಿಸಲಾಯಿತು. ಒಳಮೀಸಲಾತಿ ನಿರ್ಧಾರ ಕೈಗೊಳ್ಳುವ ಸಂವಿಧಾನಾತ್ಮಕ ಅಧಿಕಾರವನ್ನು ರಾಜ್ಯ ಸರ್ಕಾರಗಳಿಗೆ ನೀಡಿ ಸುಪ್ರೀಂ ಕೋರ್ಟ್ ತೀರ್ಪು ಪ್ರಕಟಿಸಿ 80 ದಿನ ಕಳೆದಿವೆ. ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಈವರೆಗೆ ಸ್ಪಷ್ಟ ನಿಲುವು ತಳೆದಿಲ್ಲ. ಈ ನಿರ್ಲಕ್ಷ್ಯ ಧೋರಣೆ ಮುಂದುವರಿದರೆ ಹೋರಾಟ ತೀವ್ರಗೊಳಿಸುವುದಾಗಿ ಪ್ರತಿಭಟನಕಾರರು ಎಚ್ಚರಿಕೆ ನೀಡಿದರು.

ಪರಿಶಿಷ್ಟ ಜಾತಿ ಪಟ್ಟಿಯಲ್ಲಿರುವ ಅಸ್ಪೃಶ್ಯ ಮಾದಿಗ ಮತ್ತು ಛಲವಾದಿ ಸಮುದಾಯಗಳ ಹಿತಾಸಕ್ತಿಯನ್ನು ಗಮನದಲ್ಲಿ ಇಟ್ಟುಕೊಂಡು ಸುಪ್ರೀಂ ಕೋರ್ಟ್ ತೀರ್ಪು ಅನುಷ್ಠಾನಗೊಳಿಸಬೇಕು. ಅಲ್ಲಿಯವರೆಗೆ ಪರಿಶಿಷ್ಟ ಜಾತಿಗೆ ಸಂಬಂಧಿಸಿದ ಹಣಕಾಸಿನ ಮತ್ತು ಇತರೆ ಎಲ್ಲ ಸೌಲಭ್ಯಗಳನ್ನು ಸ್ಥಗಿತಗೊಳಿಸಬೇಕು ಎಂದು ಒತ್ತಾಯಿಸಿದರು.

ಶಾಲಾ ಮಕ್ಕಳಿಗೆ ಕ್ರೀಡಾ ತರಬೇತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರಿ ಶಾಲೆಗಳ ದೈಹಿಕ ಶಿಕ್ಷಣ ಶಿಕ್ಷಕರಿಗೆ ವಿವಿಧ ಕ್ರೀಡೆಗಳ ಕುರಿತು ಇನ್ನು ಮುಂದೆ ‘ಇಂಗ್ಲಿಷ್ ಪ್ರೀಮಿಯರ್ ಲೀಗ್ ಸ್ಪೋರ್ಟ್ಸ್’ನಿಂದ ತರಬೇತಿ ದೊರೆಯಲಿದೆ.

ಸರ್ಕಾರಿ ಶಾಲೆಯ ಮಕ್ಕಳ ಕ್ರೀಡಾ ಸಾಮರ್ಥ್ಯ ವೃದ್ಧಿಸಲು, ಭವಿಷ್ಯದಲ್ಲಿ ಅವರನ್ನು ಉತ್ತಮ ಕ್ರೀಡಾಪಟುಗಳಾಗಿ ರೂಪಿಸುವಲ್ಲಿ ಸಹಕಾರ ಪಡೆಯಲು ‘ಆಪರೇಷನಲ್ ಅಲಯನ್ಸ್’ ಒಪ್ಪಂದಕ್ಕೆ ಶಾಲಾ ಶಿಕ್ಷಣ ಇಲಾಖೆ ಆಯುಕ್ತ ಕೆ.ವಿ. ತ್ರಿಲೋಕ್‌ಚಂದ್ರ ಹಾಗೂ ಬ್ರಿಟಿಷ್ ಕೌನ್ಸಿಲ್‌ನ ದಕ್ಷಿಣ ಭಾರತ ನಿರ್ದೇಶಕಿ ಜನಕ ಪುಷ್ಪನಾಥನ್ ಬುಧವಾರ ಸಹಿ ಹಾಕಿದರು.

ಒಪ್ಪಂದದ ನಂತರ ‘ಪ್ರೀಮಿಯರ್ ಲೀಗ್ ಪ್ರೈಮರಿ ಸ್ಟಾರ್ಸ್ ಪ್ರಾಜೆಕ್ಟ್’ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ, ಮೊದಲ ಹಂತದಲ್ಲಿ ಹಿರಿಯ ಪ್ರಾಥಮಿಕ ಶಾಲೆಗಳ ದೈಹಿಕ ಶಿಕ್ಷಕರಿಗೆ ಕ್ರೀಡಾ ಮತ್ತು ಜೀವನ ಕೌಶಲ ತರಬೇತಿ ನೀಡಲಾಗುತ್ತದೆ ಎಂದರು.

ಕೊಕ್ಕೊ, ಕಬಡ್ಡಿ ಮತ್ತಿತರ ಪ್ರಾಚೀನ ಕ್ರೀಡೆಗಳು ಸಹ ಫುಟ್ಬಾಲ್ ಆಟದಂತೆ ಬೆಳೆಯಬೇಕು. ಪ್ರಾಚೀನ ಕ್ರೀಡೆಗಳನ್ನು ಉಳಿಸಬೇಕು. ಶಾಲಾ ಹಂತದಲ್ಲಿ ಮಕ್ಕಳಿಗೆ ಈ ಕ್ರೀಡೆಗಳನ್ನು ಅಭ್ಯಾಸ ಮಾಡಿಸಲಾಗುತ್ತದೆ. ಆರು ವರ್ಷ ವಯಸ್ಸಿನಿಂದಲೇ ತರಬೇತಿ ನೀಡಲಾಗುತ್ತದೆ. ಶಾಲಾ ಶಿಕ್ಷಕರಿಗೂ ತರಬೇತಿ ನೀಡಲು ಸೂಚಿಸಲಾಗುವುದು ಎಂದು ಮಾಹಿತಿ ನೀಡಿದರು.

ಶಿಕ್ಷಣ ಇಲಾಖೆ ಪ್ರಧಾನ ಕಾರ್ಯದರ್ಶಿ ರಿತೇಶ್‌ಕುಮಾರ್ ಸಿಂಗ್, ಬ್ರಿಟಿಷ್ ಡೆಪ್ಯುಟಿ ಹೈಕಮಿಷನ್‌ನ ಕಾರ್ಯಾನುಷ್ಠಾನ ವಿಭಾಗದ ಉಪ ಮುಖ್ಯಸ್ಥ ಜೇಮ್ಸ್ ಗಾಡ್‌ಬೆರ್, ಸಮಗ್ರ ಶಿಕ್ಷಣ ಕರ್ನಾಟಕದ ಯೋಜನಾ ನಿರ್ದೇಶಕ ಎಂ. ಕೂರ್ಮರಾವ್ ಉಪಸ್ಥಿತರಿದ್ದರು.

ಮೂರನೆಯದು ಹೆಣ್ಣು ಮಗು ಎಂದು ನಿಂದನೆ: ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ

ಕೊಪ್ಪಳ: ತಾಲ್ಲೂಕಿನ ಚಳ್ಳಾರಿ ಗ್ರಾಮದಲ್ಲಿ ಮೂರು ಹೆಣ್ಣು ಮಕ್ಕಳನ್ನು ಹೆತ್ತ ಕಾರಣಕ್ಕಾಗಿ ಪತಿ ನಿಂದಿಸಿದ್ದರಿಂದ ನೊಂದ ಪತ್ನಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಚಳ್ಳಾರಿಯ ಗಣೇಶ ಗುಮಗೇರಿ ಹಾಗೂ ಹನುಮವ್ವ ಹಲವು ವರ್ಷಗಳ ಹಿಂದೆ ಮದುವೆಯಾಗಿದ್ದರು. ಕೆಲ ತಿಂಗಳ ಹಿಂದೆ ಮೂರನೇ ಮಗು ಜನಿಸಿದೆ. ಈ ಬಾರಿಯೂ ಹೆಣ್ಣುಮಗು ಆಗಿದೆ ಎಂದು ದಂಪತಿ ನಡುವೆ ಮೇಲಿಂದ ಮೇಲೆ ಗಲಾಟೆಯಾಗುತ್ತಿತ್ತು.

‘ಮೂರನೇ ಮಗು ಹೆಣ್ಣಾದ ನಂತರ ಅಳಿಯ ಗಣೇಶ ನನ್ನ ಮಗಳಿಗೆ ವಿಪರೀತವಾಗಿ ಕಾಟ ಕೊಟ್ಟಿದ್ದಾನೆ. ಮದ್ಯ ವ್ಯಸನಿಯೂ ಆಗಿದ್ದರಿಂದ ಹೊಡೆದು ಮೂರು ಹೆಣ್ಣು ಹೆತ್ತಿದ್ದೀಯಾ ಎಂದು ನಿಂದಿಸಿದ್ದರಿಂದ ಮನ ನೊಂದು ಮಗಳು ಆತ್ಮಹತ್ಯೆ ಮಾಡಿಕೊಂಡಿದ್ದಾಳೆ’ ಎಂದು ಹನುಮವ್ವ ಅವರ ತಂದೆ ಬಸಪ್ಪ ಕೋರಿ ನೀಡಿದ ದೂರಿನ ಅನ್ವಯ ಕೊಪ್ಪಳ ಗ್ರಾಮೀಣ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಹನುಮವ್ವ ಸಾವಿಗೆ ಮೂರು ಹೆಣ್ಣುಮಗು ಎನ್ನುವುದು ಒಂದು ನೆಪವಷ್ಟೇ. ಪದೇ ಪದೇ ಆ ದಂಪತಿ ನಡುವೆ ಜಗಳವಾಗುತ್ತಿತ್ತು. ಆತನನ್ನು ಬಂಧಿಸಿದ್ದು, ಇನ್ನಿಬ್ಬರ ವಿಚಾರಣೆ ನಡೆಯುತ್ತಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸಂಘ – ಪುತ್ತಿಲ ಪರಿವಾರದವರ ಮಧ್ಯೆ ವಾಕ್ಸಮರ, ಹೊಡೆದಾಟ

ಪ್ರಜಾವಾಣಿ ವಾರ್ತೆ

ಪುತ್ತೂರು (ದಕ್ಷಿಣ ಕನ್ನಡ): ಇಲ್ಲಿನ ಪಂಚವಟಿ ಸಮೀಪ ಬುಧವಾರ ನಡೆದ ವಿಶ್ವಹಿಂದೂ ಪರಿಷತ್‌ನ (ವಿಎಚ್‌ಪಿ) ನೂತನ ಕಾರ್ಯಾಲಯದ ಕಟ್ಟಡದ ಭೂಮಿ ಪೂಜೆ ವೇಳೆ ಪುತ್ತಿಲ ಪರಿವಾರ ಮತ್ತು ಸಂಘ ಪರಿವಾರದ ಕಾರ್ಯಕರ್ತರ ನಡುವೆ ಮಾತಿನ ಚಕಮಕಿ, ಹೊಡೆದಾಟ ನಡೆದಿದೆ.

ಭೂಮಿಪೂಜೆ ಕಾರ್ಯಕ್ರಮಕ್ಕೆ ಬಂದ ಬಿಜೆಪಿ ಮುಖಂಡ ಅರುಣ್ ಕುಮಾರ್ ಪುತ್ತಿಲ ಮತ್ತು ಅವರ ಬೆಂಬಲಿಗರನ್ನು ಸಂಘ ಪರಿವಾರದ ಕಾರ್ಯಕರ್ತರು ತಡೆದು ವಿರೋಧಿಸಿದರು. ‘ನೀವ್ಯಾಕೆ ಇಲ್ಲಿಗೆ ಬಂದದ್ದು, ನಿಮ್ಮನ್ಯಾರು ಕರೆದದ್ದು’ ಎಂದು ಪ್ರಶ್ನಿಸಿದರು. ಈ ಹಂತದಲ್ಲಿ ಪರಸ್ಪರ ಮಾತಿನ ಚಕಮುಕಿ, ತಳ್ಳಾಟ ನಡೆಯಿತು. ಮಧ್ಯೆ ಪ್ರವೇಶಿಸಿದ ಸಂಘ ಪರಿವಾರದ ಮುಖಂಡರು ವಿವಾದವನ್ನು ತಣ್ಣಗಾಗಿಸಿದರು.

ಕಾರ್ಯಕ್ರಮದ ನಡುವೆ ಪುತ್ತಿಲ ಹಾಗೂ ಬೆಂಬಲಿಗರು ಎದ್ದು ಹೊರಟಾಗ ಮತ್ತೆ ಆಕ್ಷೇಪ ವ್ಯಕ್ತವಾಯಿತು. ವಾದ–ಪ್ರತಿವಾದ ಬೆಳೆದು ಸಂಘ ಪರಿವಾರ ಮತ್ತು ಪುತ್ತಿಲ ಪರಿವಾರ ಕಾರ್ಯಕರ್ತರ ನಡುವೆ ಹೊಡೆದಾಟ ನಡೆಯಿತು. ಪೊಲೀಸರು ಮಧ್ಯೆ ಪ್ರವೇಶಿಸಿ ಪರಿಸ್ಥಿತಿ ನಿಯಂತ್ರಣಕ್ಕೆ ತಂದರು.

ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಅರುಣ್ ಕುಮಾರ್ ಪುತ್ತಿಲ ಸಂಘ ಪರಿವಾರದ ಮುಖಂಡರ ವಿರುದ್ಧ ಹೇಳಿಕೆ ನೀಡಿದ್ದರು. ವಿಎಚ್‌ಪಿ ಕಾರ್ಯಕ್ರಮದಲ್ಲಿ ಸಂಘ ಪರಿವಾರದ ಕಾರ್ಯಕರ್ತರು ಅವರನ್ನು ತಡೆಯಲು ಇದೇ ಕಾರಣ ಎಂದು ಅಲ್ಲಿದ್ದವರೊಬ್ಬರು ತಿಳಿಸಿದರು.

ಕಟ್ಟಡ ನಿರ್ಮಾಣ ಸಮಿತಿ ಅಧ್ಯಕ್ಷರಾಗಿರುವ ವಿಎಚ್‌ಪಿ ಮುಖಂಡ ಯು.ಪೂವಪ್ಪ ಅವರು ಕಾರ್ಯಕ್ರಮಕ್ಕೆ ಅರುಣ್ ಪುತ್ತಿಲ ಅವರಿಗೆ ಆಹ್ವಾನ ನೀಡಿದ್ದರು. ಪುತ್ತಿಲ ಪರಿವಾರವನ್ನು ತಡೆದ ಬಗ್ಗೆ ಪ್ರಾಸ್ತಾವಿಕ ಮಾತುಗಳಲ್ಲಿ ಅವರು ಅಸಮಾಧಾನ ವ್ಯಕ್ತಪಡಿಸಿದರು.

ವಿಎಚ್‌ಪಿ ಕಾರ್ಯಕ್ರಮದಲ್ಲಿ ಕಾಂಗ್ರೆಸ್ ಮುಖಂಡರು

ವಿಎಚ್‌ಪಿ ಕಾರ್ಯಾಲಯದ ಭೂಮಿಪೂಜೆಗೆ ಪುತ್ತೂರು ಕ್ಷೇತ್ರದ ಶಾಸಕ ಅಶೋಕ್ ಕುಮಾರ್ ರೈ, ಮಾಜಿ ಶಾಸಕಿ ಶಕುಂತಲಾ ಶೆಟ್ಟಿ (ಇಬ್ಬರೂ ಕಾಂಗ್ರೆಸ್ ಮುಖಂಡರು) ಭಾಗವಹಿಸಿದರು. ಅವರಿಬ್ಬರನ್ನೂ ವೇದಿಕೆಗೆ ಕರೆದು ಗೌರವಿಸಲಾಯಿತು. ವಿಎಚ್‌ಪಿಯ ಕೇಂದ್ರೀಯ ಕಾರ್ಯದರ್ಶಿ, ಅಯೋಧ್ಯೆ ರಾಮಮಂದಿರ ನಿರ್ಮಾಣದ ಉಸ್ತುವಾರಿಯಾಗಿದ್ದ ಗೋಪಾಲ್‌ಜಿ, ‘ನಮಗೆ ಕಾಂಗ್ರೆಸ್ ಕುರಿತು ಯಾವ ವಿರೋಧವೂ ಇಲ್ಲ’ ಎಂದರು.

ದುಬಾರೆ ಶಿಬಿರದಲ್ಲಿ ಧನಂಜಯ ಹಾಗೂ ಕಂಜನ್ ಆನೆಗಳ ಕಾದಾಟದ ದೃಶ್ಯ

ದುಬಾರೆಯಲ್ಲೂ ಗಜ ಕಾಳಗ

ಪ್ರಜಾವಾಣಿ ವಾರ್ತೆ

ಕುಶಾಲನಗರ (ಕೊಡಗು ಜಿಲ್ಲೆ): ದಸರಾ ಆನೆಗಳಾದ ಧನಂಜಯ ಮತ್ತು ಕಂಜನ್ ನಡುವಿನ ಜಗಳ ದುಬಾರೆಯಲ್ಲೂ ಮುಂದುವರಿದಿದೆ.

ಮೈಸೂರು ದಸರಾ ವೇಳೆ ಈ ಆನೆಗಳು ಜಗಳವಾಡಿಕೊಂಡು ಅರಮನೆಯಿಂದ ಹೊರಕ್ಕೆ ರಸ್ತೆಗೆ ಬಂದು ಆತಂಕ ಮೂಡಿಸಿದ್ದವು. ಇದೀಗ ಮತ್ತೆ ದುಬಾರೆ ಶಿಬಿರದಲ್ಲೂ ಕಾಳಗಕ್ಕಿಳಿದಿವೆ.

ಭಾನುವಾರ ಸಂಜೆ ಧನಂಜಯ ತನ್ನ ದಂತದಿಂದ ಕಂಜನ್‌ಗೆ ತಿವಿದಿತ್ತು. ನಂತರ, ಮಾವುತ ಅದನ್ನು ನಿಯಂತ್ರಿಸಿದ್ದರು. ಈ ದೃಶ್ಯವನ್ನು ಸೆರೆ ಹಿಡಿದಿರುವ ಪ್ರವಾಸಿಗರು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಂಡಿದ್ದಾರೆ. ಘಟನೆಯು ಕೆಲವೇ ನಿಮಿಷಗಳಲ್ಲಿ ನಡೆದಿದ್ದು, ನಂತರ ಆನೆಗಳು ಸುಮ್ಮನಾಗಿವೆ. ಆದರೂ ಈ ಎರಡೂ ಆನೆಗಳ ಬಳಿ ತೆರಳದಂತೆ ಪ್ರವಾಸಿಗರಿಗೆ ನಿರ್ಬಂಧ ವಿಧಿಸಲಾಗಿದೆ.

‘ಎರಡೂ ಆನೆಗಳು ಈಗ ಶಾಂತವಾಗಿದ್ದು, ಮಾವುತರು ನಿಗಾ ವಹಿಸಿದ್ದಾರೆ’ ಎಂದು ವಲಯ ಅರಣ್ಯ ಅಧಿಕಾರಿ ರತನ್‌ಕುಮಾರ್ ತಿಳಿಸಿದರು.

‘ದುಬಾರೆಯಲ್ಲಿ ಹೆಚ್ಚಾಗಿ ಗಂಡಾನೆಗಳೇ ಇದ್ದು, ಸಮರ್ಥವಾದ ಹೆಣ್ಣಾನೆಗಳಿಲ್ಲ. ಅದೇ ಕಾರಣಕ್ಕೆ, ಗಂಡಾನೆಗಳ ಮಧ್ಯೆ ಆಗಾಗ್ಗೆ ಜಗಳ ನಡೆಯುವುದು ಸಾಮಾನ್ಯ ಸಂಗತಿ’ ಎಂದು ಮೂಲಗಳು ತಿಳಿಸಿವೆ.

ಕೇಂದ್ರ, ರಾಜ್ಯದಿಂದ ವಿವರಣೆ ಕೇಳಿದ ಎನ್‌ಜಿಟಿ

ನವದೆಹಲಿ: ಬೆಂಗಳೂರು ಸೇರಿದಂತೆ ದೇಶದ 10 ಮಹಾನಗರಗಳಲ್ಲಿ ವಾಯುಮಾಲಿನ್ಯದಿಂದ ವಾರ್ಷಿಕ 33 ಸಾವಿರ ಮಂದಿ ಸಾಯುತ್ತಿದ್ದಾರೆ ಎಂಬ ಅಧ್ಯಯನ ವರದಿಯ ಆಧಾರದಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಂದ ರಾಷ್ಟ್ರೀಯ ಹಸಿರು ನ್ಯಾಯಮಂಡಳಿ (ಎನ್‌ಜಿಟಿ) ವಿವರಣೆ ಕೇಳಿದೆ.

ಲ್ಯಾನ್ಸೆಟ್ ಪ್ಲಾನೆಟರಿ ಹೆಲ್ತ್ ಜರ್ನಲ್‌ನಲ್ಲಿ ಪ್ರಕಟವಾದ ಅಧ್ಯಯನ ವರದಿಯ ಆಧಾರದಲ್ಲಿ ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಿಕೊಂಡಿರುವ ಎನ್‌ಜಿಟಿಯ ಅಧ್ಯಕ್ಷ ಪ್ರಕಾಶ್ ಶ್ರೀವಾಸ್ತವ ಮತ್ತು ನ್ಯಾಯಾಂಗ ಸದಸ್ಯ ಅರುಣ್ ಕುಮಾರ್ ತ್ಯಾಗಿ ಮತ್ತು ತಜ್ಞ ಸದಸ್ಯ ಎ. ಸೆಂಥಿಲ್ ವೇಲ್ ಅವರ ನೇತೃತ್ವದ ಪ್ರಧಾನ ಪೀಠವು ಕೇಂದ್ರ ಪರಿಸರ ಸಚಿವಾಲಯ, ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ, ಕರ್ನಾಟಕ ಸೇರಿದಂತೆ ಎಲ್ಲ ರಾಜ್ಯಗಳಿಗೆ ನೋಟಿಸ್ ಜಾರಿ ಮಾಡಿದೆ. ‘ಅಹಮದಾಬಾದ್, ಬೆಂಗಳೂರು, ಚೆನ್ನೈ, ದೆಹಲಿ, ಹೈದರಾಬಾದ್, ಕೋಲ್ಕತ್ತಾ, ಮುಂಬೈ, ಪುಣೆ, ಶಿಮ್ಲಾ ಮತ್ತು ವಾರಾಣಸಿ ನಗರಗಳ ಮಾಲಿನ್ಯ ಪ್ರಮಾಣ ವಿಶ್ವ ಆರೋಗ್ಯ ಸಂಸ್ಥೆಯ ಮಾರ್ಗಸೂಚಿಗಿಂತ ಹೆಚ್ಚು ಇದೆ’ ಎಂದು ವರದಿ ಹೇಳಿತ್ತು.

‘ಗೃಹ ಆರೋಗ್ಯ’ಕ್ಕೆ ಚಾಲನೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮನೆ ಬಾಗಿಲಿನಲ್ಲಿಯೇ ಆರೋಗ್ಯ ತಪಾಸಣೆ ನಡೆಸಿ, ಮಾತ್ರೆಗಳನ್ನು ವಿತರಿಸುವ ಆರೋಗ್ಯ ಇಲಾಖೆಯ ‘ಗೃಹ ಆರೋಗ್ಯ’ ಯೋಜನೆಗೆ ಗುರುವಾರ ಚಾಲನೆ ಸಿಗಲಿದೆ. ವಿಧಾನಸೌಧದ ಬ್ಯಾಂಕ್ವೆಂಟ್ ಹಾಲ್‌ನಲ್ಲಿ ಇಲಾಖೆಯು ಕಾರ್ಯಕ್ರಮ ಹಮ್ಮಿಕೊಂಡಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಂಜೆ 4 ಗಂಟೆಗೆ ಯೋಜನೆಗೆ ಚಾಲನೆ ನೀಡಲಿದ್ದಾರೆ.

ಸಾಂಕ್ರಾಮಿಕವಲ್ಲದ ರೋಗಗಳನ್ನು ಹತೋಟಿಗೆ ತರುವುದು ಯೋಜನೆಯ ಮುಖ್ಯ ಗುರಿಯಾಗಿದೆ. ಮೊದಲ ಹಂತದಲ್ಲಿ ಕೋಲಾರ ಜಿಲ್ಲೆಯಲ್ಲಿ-ಯೋಜನೆ ಅನುಷ್ಠಾನ ಆಗಲಿದ್ದು, ಜನವರಿ ತಿಂಗಳಲ್ಲಿ ರಾಜ್ಯದಾದ್ಯಂತ ವಿಸ್ತರಣೆಯಾಗಲಿದೆ. ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ.

ಹಾಸನಾಂಬೆ ದರ್ಶನ ಇಂದಿನಿಂದ

ಪ್ರಜಾವಾಣಿ ವಾರ್ತೆ

ಹಾಸನ: ವರ್ಷಕ್ಕೊಮ್ಮೆ ಗರ್ಭಗುಡಿ ಬಾಗಿಲು ತೆರೆದು ದರ್ಶನ ನೀಡುವ ಹಾಸನಾಂಬ ದೇವಿಯ ಜಾತ್ರೋತ್ಸವ ಗುರುವಾರ (ಅಕ್ಟೋಬರ್ 24) ಆರಂಭವಾಗಲಿದೆ. ನವೆಂಬರ್ 3ರವರೆಗೆ ಉತ್ಸವ ನಡೆಯಲಿದ್ದು, 11 ದಿನಗಳಲ್ಲಿ 9 ದಿನ ಮಾತ್ರ ಸಾರ್ವಜನಿಕರಿಗೆ ದರ್ಶನದ ಅವಕಾಶ ಕಲ್ಪಿಸಲಾಗಿದೆ. ವಿವಿಧೆಡೆಯಿಂದ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಬರುವುದರಿಂದ ಭದ್ರತೆ ಕಲ್ಪಿಸಲಾಗಿದೆ.

ಆದಿಚುಂಚನಗಿರಿ ಮಠದ ನಿರ್ಮಲಾನಂದನಾಥ ಸ್ವಾಮೀಜಿ ಹಾಗೂ ಸಿದ್ಧಗಂಗಾ ಮಠದ ಸಿದ್ಧಲಿಂಗ ಸ್ವಾಮೀಜಿ ಉಪಸ್ಥಿತಿಯಲ್ಲಿ ಗುರುವಾರ ಮಧ್ಯಾಹ್ನ 12 ಗಂಟೆಗೆ ದೇಗುಲದ ಬಾಗಿಲು ತೆರೆದು ದೇವಿಗೆ ಅಲಂಕಾರ ಮಾಡಲಾಗುತ್ತದೆ. ಮೊದಲ ದಿನ ದರ್ಶನಕ್ಕೆ ಅವಕಾಶವಿರುವುದಿಲ್ಲ. 25ರಂದು ಬೆಳಿಗ್ಗೆ 4ರಿಂದ ಸಂಜೆ 7 ಗಂಟೆಯವರೆಗೆ ದರ್ಶನ ಮಾಡಬಹುದು. 26 ರಿಂದ ನವೆಂಬರ್ 1ರವರೆಗೆ ನಿತ್ಯ ಬೆಳಗಿನ ಜಾವ 4ರಿಂದ ಮಧ್ಯಾಹ್ನ 2ಗಂಟೆವರೆಗೆ ಹಾಗೂ ಮಧ್ಯಾಹ್ನ 3ರಿಂದ ಬೆಳಗಿನ ಜಾವ 3 ಗಂಟೆಯವರೆಗೆ ದರ್ಶನಕ್ಕೆ ಅವಕಾಶವಿರುತ್ತದೆ. ನವೆಂಬರ್ 2ರಂದು ಬೆಳಗಿನ ಜಾವ 4 ರಿಂದ ಸಂಜೆ 5 ಗಂಟೆ ಹಾಗೂ ರಾತ್ರಿ 8 ಗಂಟೆಯಿಂದ ಮರುದಿನ ಬೆಳಿಗ್ಗೆ 6 ಗಂಟೆಯವರೆಗೆ ದರ್ಶನ ಮಾಡಬಹುದು. ನವೆಂಬರ್ 3ರಂದು ಬಾಗಿಲು ಮುಚ್ಚಲಿದ್ದು, ಸಾರ್ವಜನಿಕ ದರ್ಶನವಿರುವುದಿಲ್ಲ.

ಈ ಬಾರಿ ವಿಶೇಷವಾಗಿ ಲಾಡು ಪ್ರಸಾದ ವಿತರಿಸಲಾಗುತ್ತಿದ್ದು, ಇಸ್ಕಾನ್ ತಂತ್ರಜ್ಞಾನದೊಂದಿಗೆ ಸ್ಥಳೀಯವಾಗಿಯೇ ತಯಾರಿಸಲಾಗುತ್ತಿದೆ. ₹1 ಸಾವಿರ ಮೌಲ್ಯದ ವಿಶೇಷ ದರ್ಶನದ ಟಿಕೆಟ್‌ಗೆ ಎರಡು ಹಾಗೂ ₹300 ಮೌಲ್ಯದ ಟಿಕೆಟ್‌ಗೆ ಒಂದು ಲಡ್ಡು ಉಚಿತವಾಗಿ ವಿತರಿಸಲಾಗುವುದು. ಎರಡು ಲಾಡುಗಳ ಪೊಟ್ಟಣವನ್ನು ಭಕ್ತಾದಿಗಳು ₹60 ನೀಡಿ ಖರೀದಿಸಬಹುದು.

ರಿಲಯನ್ಸ್ ಸ್ಮಾರ್ಟ್ ಮತ್ತು ಸ್ಮಾರ್ಟ್ ಬಜಾರ್ ಮಳಿಗೆಗಳು

ಹಬ್ಬದ ಸೀಸನ್‌ಗಾಗಿ ಸಂಪೂರ್ಣ ಸಜ್ಜು

ಭಾರತದ ಗ್ರಾಹಕಸ್ನೇಹಿ ಹಾಗೂ ವಿವಿಧ ಕ್ಷೇತ್ರಗಳಲ್ಲಿ ಮುಂಚೂಣಿಯಲ್ಲಿರುವ ರಿಲಯನ್ಸ್, ತನ್ನ ಚಿಲ್ಲರೆ ವ್ಯಾಪಾರವನ್ನು ದೇಶಾದಾದ್ಯಂತ ವಿಸ್ತರಿಸಲು ಹೊರಟಿದೆ. ರಿಲಯನ್ಸ್ ರೀಟೇಲ್‌ನ ದಿನಸಿ ವಿಭಾಗದ ಮುಖ್ಯ ಕಾರ್ಯನಿರ್ವಣಾಧಿಕಾರಿ (ಸಿಇಒ) ದಾಮೋದರ್ ಮಾಲ್ ಅವರು ಪ್ರಜಾವಾಣಿಗೆ ನೀಡಿದ ಸಂದರ್ಶನದಲ್ಲಿ ವಿವರಿಸಿದರು. ಇದರ ಜತೆಯಲ್ಲಿ ತಮ್ಮ ವೃತ್ತಿಜೀವನದ ಒಳನೋಟಗಳನ್ನು ಹಾಗೂ ವಿಶೇಷವಾಗಿ ಕರ್ನಾಟಕ ರಾಜ್ಯದ ಮಾರುಕಟ್ಟೆಯಲ್ಲಿ ಗ್ರಾಹಕರು ವಸ್ತುಗಳನ್ನು ಖರೀದಿಸುವ ಅಭ್ಯಾಸ, ದೃಷ್ಟಿಕೋನ ಮತ್ತು ಅವರ ನಡವಳಿಕೆಗಳನ್ನು ಹಂಚಿಕೊಂಡರು.

ದಾಮೋದರ್ ಮಾಲ್ ಅವರು ಐಐಟಿ, ಮುಂಬೈ ಮತ್ತು ಐಐಎಂ, ಬೆಂಗಳೂರಿನಲ್ಲಿ ಅಧ್ಯಯನ ಮಾಡಿ ಯೂನಿಲಿವರ್ ಕಂಪನಿಯಿಂದ ತಮ್ಮ ವೃತ್ತಿ ಜೀವನ ಆರಂಭಿಸಿದರು. ಕೆಲ ವರ್ಷಗಳ ರಿಟೇಲ್ ಮಾರುಕಟ್ಟೆಯ ಅನುಭವ ಸಂಪಾದಿಸಿಕೊಂಡು ತಮ್ಮದೇ ಆದ ಸೂಪರ್ ಮಾರ್ಕೆಟ್ ಉದ್ಯಮ ಸ್ಥಾಪಿಸಿ, ನಿರ್ವಹಿಸಿದರು. ನಂತರ ಫ್ಯೂಚರ್ ಗ್ರೂಪ್‌ನೊಂದಿಗೆ ಕೆಲಸ ಮಾಡಿದ ಅವರು, ಪ್ರಸ್ತುತ ಪ್ರಸಿದ್ಧ ರಿಲಯನ್ಸ್ ರಿಟೇಲ್‌ನ ವ್ಯಾಲ್ಯೂ ಸ್ವರೂಪಗಳಾದ ಸ್ಮಾರ್ಟ್ ಬಜಾರ್, ಸ್ಮಾರ್ಟ್, ಸಿಗ್ನೇಚರ್ ಫ್ರೆಶ್, ಫ್ರೆಶ್‌ಪಿಕ್ ಸಿಇಒ ಆಗಿ ಕಾರ್ಯ ನಿರ್ವಹಿಸುತ್ತಿದ್ದಾರೆ.

ದಾಮೋದರ್ ಅವರು ಕೇವಲ ಒಬ್ಬ ಉದ್ಯಮಿಯಾಗಿ ಮಾತ್ರ ಗುರುತಿಸಿಕೊಂಡಿಲ್ಲ. ಅವರು ರಿಟೇಲ್ ಮಾರಾಟ ಮತ್ತು ಮಾರುಕಟ್ಟೆ ಕ್ಷೇತ್ರದಲ್ಲಿ ಗಳಿಸಿರುವ ಅಪಾರ ಅನುಭವಗಳನ್ನು ಅಕ್ಷರಗಳ ರೂಪದಲ್ಲಿ ಹಂಚಿಕೊಂಡಿದ್ದಾರೆ. ಅವರ ಲೇಖನಿಯಿಂದ ಮೂಡಿಬಂದಿರುವ ‘ಸೂಪರ್ ಮಾರ್ಕೆಟ್‌ವಾಲಾ’ ಮತ್ತು ‘ಬಿ ಎ ಸೂಪರ್ ಮಾರ್ಕೆಟ್‌ವಾಲಾ’ ಎಂಬ ಎರಡು ಪುಸ್ತಕಗಳ ಮೂಲಕ ಲೇಖಕರೂ ಆಗಿದ್ದಾರೆ. ಈ ಪುಸ್ತಕಗಳಲ್ಲಿ ಭಾರತೀಯ ಗ್ರಾಹಕ ಪ್ರವೃತ್ತಿಗಳು ಮತ್ತು ಸೂಪರ್ ಮಾರ್ಕೆಟ್‌ಗಳ ವಿಶಿಷ್ಟ ಅಂಶಗಳನ್ನು ಅನ್ವೇಷಿಸಿ, ವಿಶ್ಲೇಷಿಸಿದ್ದಾರೆ.

ದಾಮೋದರ್ ಮಾಲ್ ಅವರ ವಿಶೇಷ ಸಂದರ್ಶನ: ರಿಲಯನ್ಸ್ ಸಿಇಒ ದಾಮೋದರ್ ಅವರು ತಮ್ಮ ಸಂದರ್ಶನದಲ್ಲಿ ರಿಲಯನ್ಸ್ ರೀಟೇಲ್ ವ್ಯಾಲ್ಯೂ ಫಾರ್ಮ್ಯಾಟ್ ಅನ್ನು ಸಣ್ಣ ಪಟ್ಟಣಗಳಲ್ಲಿ ವಿಸ್ತರಿಸುವುದರತ್ತ ಹೆಚ್ಚಿನ ಗಮನಹರಿಸಿದ್ದಾರೆ. ವೈವಿಧ್ಯಮಯ ಅಂಗಡಿಯ ಸ್ವರೂಪಗಳು, ಓಮ್ನಿಚಾನಲ್ ವಿಧಾನ, ಸ್ಥಳೀಯ ಸೋರ್ಸಿಂಗ್‌ಗೆ ಬೆಂಬಲ ಹಾಗೂ ವಿಕಸನಗೊಳ್ಳುತ್ತಿರುವ ಗ್ರಾಹಕರ ಬೇಡಿಕೆಗಳನ್ನು ಪೂರೈಸುವ ಸಲುವಾಗಿ ವಿಶಿಷ್ಟ ದಿನಗಳಲ್ಲಿ ಮತ್ತು ಹಬ್ಬಗಳ ಸಮಯದಲ್ಲಿ ಸೂಕ್ತ ರೀತಿಯ ಕೊಡುಗೆಗಳನ್ನು ನೀಡುವತ್ತ ಲಕ್ಷ್ಯ ಹರಿಸಿದ್ದಾರೆ.

▸ ಕರ್ನಾಟಕದಲ್ಲಿ ಎಷ್ಟು ರಿಲಯನ್ಸ್ ರಿಟೇಲ್ ಸ್ಟೋರ್‌ಗಳಿವೆ? ಮುಂದಿನ ದಿನಗಳಲ್ಲಿ ಮತ್ತಷ್ಟು ವಿಸ್ತರಣೆ ಮಾಡುವ ಯೋಜನೆಗಳಿವೆಯೇ?

ರಿಲಯನ್ಸ್ ರಿಟೇಲ್ ವ್ಯಾಲ್ಯೂ ಫಾರ್ಮ್ಯಾಟ್ ದೇಶಾದ್ಯಂತ ಕಾರ್ಯಾಚರಣೆಯನ್ನು ಹೊಂದಿದ್ದರೂ, ಕರ್ನಾಟಕ ರಾಜ್ಯವು ಚಿಲ್ಲರೆ ಮಾರಾಟ ವಲಯದಲ್ಲಿ ತನ್ನದೇ ಆದ ಪ್ರಾಮುಖ್ಯತೆ ಪಡೆದಿದೆ. ಇಲ್ಲಿ 70ಕ್ಕೂ ಹೆಚ್ಚು ದೊಡ್ಡ ಸ್ವರೂಪದ (ಸ್ಮಾರ್ಟ್ ಬಜಾರ್) ಮಳಿಗೆಗಳನ್ನು ಒಳಗೊಂಡಂತೆ 290ಕ್ಕೂ ಅಧಿಕ ಕಿರಾಣಿ (ಗ್ರೋಸರಿ ಸೂಪರ್ ಮಳಿಗೆಗಳು) ಅಂಗಡಿಗಳನ್ನು ಹೊಂದಿದೆ. ಇಂದು ಇವುಗಳನ್ನು ದ್ವಿತೀಯ, ತೃತೀಯ ನಗರ ಮತ್ತು ಪಟ್ಟಣಗಳಾದ ಅಥಣಿ, ಚಿಕ್ಕೋಡಿ, ಗೋಕಾಕ, ಹಾವೇರಿ, ಶಿರಸಿಗೂ ವಿಸ್ತರಿಸಲಾಗಿದೆ. ಈ ಸ್ಟೋರ್‌ಗಳು ಮತ್ತು ಮಳಿಗೆಗಳು ನಿರ್ದಿಷ್ಟ ಗ್ರಾಹಕರನ್ನು ಗುರಿಯಾಗಿಸುವಲ್ಲಿ ಪ್ರಮುಖ ಪಾತ್ರವಹಿಸುತ್ತವೆ.

- **ಸ್ಮಾರ್ಟ್ ಬಜಾರ್:** ಹೆಚ್ಚಿನ ಪ್ರಮಾಣದಲ್ಲಿ ಬರುವ ಪ್ರೇಕ್ಷಕರು ಮತ್ತು ಗ್ರಾಹಕರಿಗೆ ಉತ್ತಮ ಮೌಲ್ಯ ನೀಡುವ ಬೃಹತ್ ಮಳಿಗೆ ತಾಣ.
- **ಫ್ರೆಶ್ ಸಿಗ್ನೇಚರ್:** ಆಧುನಿಕ ಗ್ರಾಹಕರಿಗೆ ತಾಜಾ, ಆರೋಗ್ಯಕರ ವಸ್ತುಗಳನ್ನು ಒದಗಿಸುವ ಮತ್ತು ಅಂತರರಾಷ್ಟ್ರೀಯ ಮಟ್ಟದ ಆಹಾರ ಪದಾರ್ಥಗಳಿಗೆ ಆದ್ಯತೆ ನೀಡುವ ಪ್ರೀಮಿಯಂ ಸ್ಟೋರ್.

ಸ್ಮಾರ್ಟ್ ಬಜಾರ್ ಹಾಗೂ ಫ್ರೆಶ್ ಸಿಗ್ನೇಚರ್‌ನ ಪ್ರತಿ ಸ್ಟೋರ್‌ನ ಸ್ವರೂಪವನ್ನು ಗ್ರಾಹಕರ ಗುರಿ ಮತ್ತು ಮಾರುಕಟ್ಟೆಗೆ ಅನುಗುಣವಾಗಿ ಇರಿಸುವುದಾಗಿದೆ. ಅಲ್ಲಿ ಸಂಗ್ರಹಿಸುವ ವಿವಿಧ ಉತ್ಪನ್ನ ವರ್ಗಗಳನ್ನು ಗ್ರಾಹಕರ ಅನುಭವಗಳಿಗೆ ತಕ್ಕಂತೆ ಸರಿದೂಗಿಸಲು ಹಾಗೂ ಸಂಬಂಧಿತವಾಗಿ ರಚಿಸಲು ಸಹಾಯ ಮಾಡುತ್ತದೆ.

▸ ಪ್ರಾದೇಶಿಕ ಹಾಗೂ ಸ್ಥಳೀಯ ಬ್ರ್ಯಾಂಡ್‌ಗಳಿಗೆ ಸಹಾಯ ಮಾಡಲು ರಿಲಯನ್ಸ್ ರಿಟೇಲ್ ಕೈಗೊಂಡ ನಿರ್ದಿಷ್ಟ ಉಪಕ್ರಮಗಳು ಯಾವುವು?

ರಾಜ್ಯದ ಜನರ ಅಭಿರುಚಿ ತಕ್ಕಂತ ಆಹಾರ ಉತ್ಪನ್ನಗಳಿಗೆ ಗಮನಾರ್ಹ ಬೇಡಿಕೆಯಿರುವುದು ಕರ್ನಾಟಕದಲ್ಲಿ ಕಂಡುಬಂದಿದೆ. ಅದಕ್ಕುನುಗುಣವಾಗಿ ನಾವು ಸ್ಥಳೀಯ ಉದ್ಯಮಿಗಳು ಮತ್ತು ಪ್ರಾದೇಶಿಕ ಆಹಾರ ಬ್ರ್ಯಾಂಡ್‌ಗಳ ಉತ್ಪಾದಕರಿಗೆ ಅವಕಾಶಗಳನ್ನು ಒದಗಿಸುತ್ತಿದ್ದೇವೆ. ಆ ಮೂಲಕ ನಾವು ಇದನ್ನು ಸದುಪಯೋಗ ಪಡಿಸಿಕೊಳ್ಳುತ್ತಿದ್ದೇವೆ. ಭಾರತದಲ್ಲಿ ವಿತರಣೆ ಎಂಬುದು ಬಹುತೇಕ ಸಮಯ ತಿಂದುಹಾಕುವ ಹಾಗೂ ದುಬಾರಿ ಕೆಲಸವಾಗಿದ್ದರೂ, ನಮ್ಮಂತಹ ಆಧುನಿಕ ಚಿಲ್ಲರೆ ವ್ಯಾಪಾರಿಗಳು ಗ್ರಾಹಕರನ್ನು ತಲುಪಲು ಯೋಜನೆಗಳನ್ನು ರೂಪಿಸುತ್ತೇವೆ. ಬ್ರ್ಯಾಂಡ್ ಉತ್ಪನ್ನಗಳಿಗೆ ಹೆಚ್ಚು ಒತ್ತು ನೀಡುತ್ತವೆ ಹಾಗೂ ಪರಿಣಾಮಕಾರಿ ಪರಿಹಾರವನ್ನೂ ಕಲ್ಪಿಸುತ್ತವೆ. ಈ ವಿಧಾನ ದೇಶದ ಸ್ಥಳೀಯ ವ್ಯಾಪಾರ ಮತ್ತು ಚಿಲ್ಲರೆ ವಹಿವಾಟು ಎರಡನ್ನೂ ಬಲಪಡಿಸುತ್ತದೆ. ಇಂತಹ ಪರಿಹಾರಗಳನ್ನು ಅಳವಡಿಸಿಕೊಂಡಿರುವ ಲಾಲ್ ಸ್ವೀಟ್ಸ್, ಮೋದ್ರನ್ ಚಿಪ್ಸ್, ಗಾಯತ್ರಿ ಕಾಫಿ, ಗೋವನ್ ಫುಡ್ ಕೆಲವು ಉದಾಹರಣೆಗಳಾಗಿವೆ ಎಂದಿದ್ದಾರೆ.

▸ ರಿಲಯನ್ಸ್ ರಿಟೇಲ್ ಹಬ್ಬದ ಋತುವಿನಲ್ಲಿ ತಮ್ಮ ಮಳಿಗೆಗಳಲ್ಲಿ ಗ್ರಾಹಕರಿಗೆ ಸೌಕರ್ಯದ ಅನುಭವವನ್ನು ಹಾಗೂ ಮಾರಾಟವನ್ನು ಹೆಚ್ಚಿಸಲು ಏನು ಮಾಡುತ್ತದೆ?

ಪ್ರಸ್ತುತ ಹಬ್ಬದ ಋತುವು ಪೂರ್ಣ ಸ್ವಿಂಗ್‌ನಲ್ಲಿದೆ. ಒಂದು ಕಾಲದಲ್ಲಿ ಹಬ್ಬದ ಆಚರಣೆಗಳು ಕೇವಲ ಪ್ರದೇಶಕ್ಕಷ್ಟೇ ಸೀಮಿತ ಮತ್ತು ನಿರ್ದಿಷ್ಟವಾಗಿದ್ದವು. ಆದರೆ, ಈಗ ಅನೇಕ ಪ್ರದೇಶಗಳಲ್ಲಿ ಆಚರಿಸಲಾಗುತ್ತದೆ. ಕರ್ನಾಟಕದಲ್ಲಿ ಮಹಾಶಿವರಾತ್ರಿ, ಹೋಳಿ, ಕ್ರಿಸ್ಮಸ್ ಮತ್ತು ಓಣಂಗಳಂತಹ ಹಬ್ಬಗಳನ್ನು ಆಚರಿಸಲಾಗುತ್ತದೆ. ಸಾಂಪ್ರದಾಯಿಕ ಮತ್ತು ಪ್ರಾದೇಶಿಕ ಹಬ್ಬಗಳಾದ ವರಮಹಾಲಕ್ಷ್ಮಿ, ಮಕರ ಸಂಕ್ರಾಂತಿ, ಯುಗಾದಿ, ವಿನಾಯಕ ಚತುರ್ಥಿ ಮತ್ತು ದಸರಾ ಕೂಡ ಆಚರಿಸಲಾಗುತ್ತದೆ. ಈ ಹಬ್ಬದ ಋತುವಿನಲ್ಲಿ ಆಹಾರ ಉತ್ಪನ್ನಗಳು, ಬಟ್ಟೆ, ಉಡುಗೊರೆಗಳು ಮತ್ತಿತರ ವಸ್ತುಗಳ ಬೇಡಿಕೆಯಲ್ಲಿ ಗಮನಾರ್ಹ ಹೆಚ್ಚಳ ಕಂಡುಬಂದಿದೆ. ಅದನ್ನು ಮನಗಂಡ ರಿಲಯನ್ಸ್ SMART Bazaar ವಿವಿಧ ಪ್ರದೇಶಗಳಲ್ಲಿನ ನಾನಾ ಸಮುದಾಯಗಳ ನಿರ್ದಿಷ್ಟ ಅಗತ್ಯಗಳನ್ನು ಪೂರೈಸಲು ತನ್ನ ಮಳಿಗೆಗಳನ್ನು ಸಜ್ಜುಗೊಳಿಸುತ್ತಿದೆ. ಹಬ್ಬದ ಬೇಡಿಕೆಗೆ ಅನುಗುಣವಾಗಿ ಹೆಚ್ಚಿನ ಪ್ರಚಾರಗಳು ಮತ್ತು ರಿಯಾಯಿತಿಗಳನ್ನು ನೀಡುತ್ತಲಿದೆ. ಇಲ್ಲಿಯವರೆಗೂ ಪೂಜಾ ಸಾಮಗ್ರಿಗಳು, ಆಹಾರ ಮತ್ತು ವಸ್ತ್ರ ವಿಭಾಗಗಳಲ್ಲಿ ಗರಿಷ್ಠ ಮಟ್ಟದ ಮಾರಾಟ ಕಂಡುಬಂದಿದ್ದು, ಅದರೊಂದಿಗೆ ಈ ಸೀಸನ್‌ನಲ್ಲಿ ಮಾರಾಟ ಸಕಾರಾತ್ಮಕವಾಗಿ ಪ್ರಾರಂಭವಾಗಿದೆ.

ಇದರ ನಡುವೆ ಆನ್‌ಲೈನ್ ಚಿಲ್ಲರೆ ವ್ಯಾಪಾರ ಅಥವಾ ಇಕಾಮ್‌ನಿಂದ ಸಂಘಟಿತ ಚಿಲ್ಲರೆ ವ್ಯಾಪಾರದ ಸ್ಪರ್ಧೆಯನ್ನು ನೀವು ಹೇಗೆ ನೋಡುತ್ತೀರಿ? ಇಕಾಮ್ ಸ್ಪರ್ಧೆಯನ್ನು ಎದುರಿಸಲು ರಿಲಯನ್ಸ್ ರಿಟೇಲ್ ತೆಗೆದುಕೊಂಡ ಕ್ರಮಗಳು ಯಾವುವು ಎಂಬ ಪ್ರಶ್ನೆಗೆ ಉತ್ತರಿಸಿದ ದಾಮೋದರ್.,

ಆಫ್‌ಲೈನ್ ಮತ್ತು ಆನ್‌ಲೈನ್ ಚಿಲ್ಲರೆ ವ್ಯಾಪಾರವನ್ನು ಪ್ರತಿಸ್ಪರ್ಧಿಗಳೆಂದು ಭಾವಿಸುವ ಬದಲು, ಅವುಗಳನ್ನು ಪೂರಕವಾಗಿ ನೋಡಬೇಕು. ಅದಕ್ಕಾಗಿಯೇ ನಾವು ಶಾಪಿಂಗ್ ಅನುಭವವನ್ನು ಹೆಚ್ಚಿಸಲು ಎರಡೂ ಪ್ಲಾಟ್‌ಫಾರ್ಮ್‌ಗಳನ್ನು ಸಂಯೋಜಿಸುವ ಓಮ್ನಿಚಾನಲ್ ವಿಧಾನದ ಮೇಲೆ ಕೇಂದ್ರೀಕರಿಸಿದ್ದೇವೆ ಎಂದಿದ್ದಾರೆ. ❖



ಪ್ರಸ್ತುತಿ: ಪಿವಿ ಬ್ರ್ಯಾಂಡ್ ಸ್ಪಾಟ್

ಬಾಬು ಸಾ ಪಾಳ್ಯದಲ್ಲಿ ಏಳು ಅಂತಸ್ತಿನ ಕಟ್ಟಡ ಕುಸಿತ ಪ್ರಕರಣ ● ಡಿಆರ್‌ಡಿಒ ಸಾಧನ ಬಳಸಿ ಕಾರ್ಮಿಕರು ಸಿಲುಕಿದ್ದ ಸ್ಥಳ ಪತ್ತೆ

ಕಟ್ಟಡದ ಮಾಲೀಕ, ಮಾಲೀಕನ ಪುತ್ರ, ಗುತ್ತಿಗೆದಾರ ಸೆರೆ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಅನುಮತಿ ಪಡೆಯದೆ 7 ಅಂತಸ್ತಿನ ಕಟ್ಟಡ ನಿರ್ಮಾಣ
- ಕಳಪೆ ಗುಣಮಟ್ಟದ ಸಾಮಗ್ರಿ ಬಳಕೆ ಆರೋಪ

ಬೆಂಗಳೂರು: ಬಾಬು ಸಾ ಪಾಳ್ಯದಲ್ಲಿ ಏಳು ಅಂತಸ್ತಿನ ಕಟ್ಟಡ ಕುಸಿದ ಪ್ರಕರಣದಲ್ಲಿ ಕಟ್ಟಡದ ಮಾಲೀಕ, ಆಂಧ್ರಪ್ರದೇಶದ ಮುನಿರೆಡ್ಡಿ, ಅವರ ಪುತ್ರ ಭುವನ್ ರೆಡ್ಡಿ ಹಾಗೂ ಕಟ್ಟಡ ನಿರ್ಮಾಣ ಕಾಮಗಾರಿಯ ಮೊದಲನೇ ಗುತ್ತಿಗೆದಾರ ಮುನಿಯಪ್ಪ ಅವರನ್ನು ಹೆಣ್ಣೂರು ಠಾಣೆ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಕಟ್ಟಡ ನಿರ್ಮಾಣ ಕಾಮಗಾರಿಯನ್ನು ನಿರ್ವಹಿಸುತ್ತಿದ್ದ ಎರಡನೇ ಗುತ್ತಿಗೆದಾರ ಏಳುಮಲೈ ವಿರುದ್ಧವೂ ಎಫ್‌ಐಆರ್ ದಾಖಲಾಗಿದ್ದು, ಅವರು ಕಟ್ಟಡದ ಅವಶೇಷಗಳ ಅಡಿ ಸಿಲುಕಿದ್ದಾರೆ. ಅವರು ಇನ್ನೂ ಪತ್ತೆಯಾಗಿಲ್ಲ.

‘ಸಿವಿಲ್ ಎಂಜಿನಿಯರ್, ಗುತ್ತಿಗೆದಾರರು, ಮೇಸ್ತ್ರಿ ಅವರ ಜೊತೆಗೆ ಕಟ್ಟಡದ ಮಾಲೀಕರು ಸೇರಿಕೊಂಡು ಜನವಸತಿ ಪ್ರದೇಶದಲ್ಲಿ ಉತ್ತಮ ಗುಣಮಟ್ಟದ ಸಾಮಗ್ರಿ ಬಳಸದೇ ಹಣ ಉಳಿಸುವ ಉದ್ದೇಶದಿಂದ ಕಳಪೆ ಸಾಮಗ್ರಿ ಬಳಸಿ ಕಟ್ಟಡ ನಿರ್ಮಿಸಿದ್ದಾರೆ. ಭವಿಷ್ಯದಲ್ಲಿ ಅನಾಹುತ ಸಂಭವಿಸುವ ಸಾಧ್ಯತೆಯ ಅರಿವಿದ್ದರೂ ನಿರ್ಲಕ್ಷ್ಯ ವಹಿಸಲಾಗಿದೆ. ಕಟ್ಟಡ ಕಾಮಗಾರಿ ಸ್ಥಳದಲ್ಲಿ ಯಾವುದೇ ಸುರಕ್ಷತಾ ಕ್ರಮ ಅನುಸರಿಸಿಲ್ಲ. ಸಂಬಂಧಿಸಿದ ಪ್ರಾಧಿಕಾರದ ಅನುಮತಿ ಪಡೆಯದೇ ಕಟ್ಟಡ ನಿರ್ಮಿಸಲಾಗಿದೆ’ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

‘ಮುನಿರಾಜು ರೆಡ್ಡಿ ಅವರು ಕೆಲವು ವರ್ಷಗಳ ಹಿಂದೆಯೇ ಆಂಧ್ರಪ್ರದೇಶದಿಂದ ನಗರಕ್ಕೆ ಬಂದಿದ್ದರು. ಮಲ್ಲೇಶ್ವರದಲ್ಲಿ ನೆಲಸಿದ್ದರು. ಬಾಬು ಸಾ ಪಾಳ್ಯದ ಅಂಜನಾದ್ರಿ ಎನ್‌ಕ್ಲೇವ್‌ನಲ್ಲಿ ಕೆಲವು ವರ್ಷಗಳ ಹಿಂದೆ 60X40 ಅಡಿ ಅಳತೆಯ ನಿವೇಶನ ಖರೀದಿಸಿದ್ದರು. ಅಲ್ಲಿ ಕಟ್ಟಡ ನಿರ್ಮಿಸುತ್ತಿದ್ದರು’ ಎಂದು ಮೂಲಗಳು ತಿಳಿಸಿವೆ.

‘ಮುನಿರಾಜು ಕಟ್ಟಡ ನಿರ್ಮಾಣದ ಸ್ಥಳಕ್ಕೆ ಹೆಚ್ಚಾಗಿ ಬರುತ್ತಿರಲಿಲ್ಲ. ಭುವನ್ ರೆಡ್ಡಿಯೇ ಕಟ್ಟಡ ನಿರ್ಮಾಣದ ಉಸ್ತುವಾರಿ ನೋಡಿಕೊಳ್ಳುತ್ತಿದ್ದರು’ ಎಂದು ಸ್ಥಳೀಯ ತಿಳಿಸಿದ್ದಾರೆ.

ನಿರ್ಮಿಸಿದ್ದು ಏಳು ಅಂತಸ್ತು: ಭುವನ್ ರೆಡ್ಡಿ ಯಾವುದೇ ಅನುಮತಿ ಪಡೆಯದೇ ಏಳು ಮಹಡಿಯ ಕಟ್ಟಡ ಕಟ್ಟಿಸುತ್ತಿದ್ದರು. ಅಲ್ಲದೇ ಕಟ್ಟಡ ಕುಸಿಯಲು ಕಳಪೆ ಕಾಮಗಾರಿ ಕಾರಣ ಎಂಬುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ.

‘ಬಾಡಿಗೆ ಉದ್ದೇಶಕ್ಕೆ ಮನೆ ನಿರ್ಮಿಸುತ್ತಿದ್ದರು. ಆರನೇ ಅಂತಸ್ತಿನಲ್ಲಿ ಮಾಲೀಕರು ವಾಸಕ್ಕೆ ಡ್ಯುಪ್ಲೆಕ್ಸ್ ಮಾದರಿಯಲ್ಲಿ ಮನೆ ನಿರ್ಮಾಣ ಮಾಡಿಸಿದ್ದರು’ ಎಂದು ಸ್ಥಳೀಯರು ಹೇಳಿದರು.

‘ತಳಪಾಯದಲ್ಲಿ ಕಬ್ಬಿಣದ ರಾಡುಗಳನ್ನು ಸರಿಯಾಗಿ ಅಳವಡಿಕೆ ಮಾಡಿರಲಿಲ್ಲ. ಕಾಂಪೌಂಡ್ ನಿರ್ಮಾಣಕ್ಕೆ ಅಗೆಯಲಾಗಿದ್ದ ಗುಂಡಿಯಲ್ಲಿ ಅಪಾರ ಪ್ರಮಾಣದ ಮಳೆ ನೀರು ಶೇಖರಣೆಗೊಂಡು ಭೂಮಿ ಸಡಿಲವಾಗಿತ್ತು. ತಳಪಾಯದಲ್ಲಿ 22 ಎಂ.ಎಂನ ಕಬ್ಬಿಣದ ರಾಡು ಬಳಸಬೇಕಿತ್ತು. 12 ಹಾಗೂ 16 ಎಂ.ಎಂ ಕಬ್ಬಿಣದ ರಾಡು ಬಳಸಲಾಗಿದೆ. ಮಣ್ಣು ಪರೀಕ್ಷೆ ಮಾಡಿಸಿ ವರದಿ ಆಧರಿಸಿ ಕಟ್ಟಡದ ಸಾಮರ್ಥ್ಯ ಹೆಚ್ಚಿಸಬೇಕಿತ್ತು. ಮಣ್ಣು ಸಡಿಲವಾಗಿದ್ದರೆ ಅದರ ಸಾಮರ್ಥ್ಯಕ್ಕೆ ಅನುಗುಣವಾಗಿ ಕಾಮಗಾರಿ ನಡೆಸಬೇಕಿತ್ತು. ಈ ರೀತಿಯ ಕ್ರಮ ಅನುಸರಿಸಿಲ್ಲ ಎಂಬುದು ಮೇಲ್ನೋಟಕ್ಕೆ ಗೊತ್ತಾಗಿದೆ’ ಎಂದು ಅಗ್ನಿಶಾಮಕದ ದಳದ ಅಧಿಕಾರಿಯೊಬ್ಬರು ತಿಳಿಸಿದರು.

‘ಕಾಮಗಾರಿ ವೇಳೆ ಗುತ್ತಿಗೆದಾರ ಹಾಗೂ ಮಾಲೀಕರ ಮಧ್ಯೆ ಭಿನ್ನಾಭಿಪ್ರಾಯ ಉಂಟಾಗಿತ್ತು. ಮೂರು ಅಂತಸ್ತಿನ ಕಾಮಗಾರಿ ಮುಕ್ತಾಯವಾದ ಮೇಲೆ ಬೇರೊಬ್ಬರಿಗೆ ಗುತ್ತಿಗೆ ನೀಡಲಾಗಿತ್ತು ಎಂಬುದು ಗೊತ್ತಾಗಿದೆ’ ಎಂದು ಪೊಲೀಸರು ತಿಳಿಸಿದ್ದಾರೆ.

ಡಿಆರ್‌ಡಿಒ ಸಾಧನ ಬಳಸಿ ಕಾರ್ಮಿಕರು ಸಿಲುಕಿದ್ದ ಸ್ಥಳವನ್ನು ಪತ್ತೆ ಹಚ್ಚಲಾಯಿತು. ಗ್ಯಾಸ್ ಕಟ್ಟರ್ ಸಹಾಯದಿಂದ ಕಬ್ಬಿಣದ ರಾಡು ತುಂಡು ಮಾಡಿ ಕಾರ್ಯಾಚರಣೆ ನಡೆಸಲಾಯಿತು. ಸ್ಥಳದಲ್ಲಿ ನಾಲ್ಕು ಆಂಬುಲೆನ್ಸ್‌ಗಳು ಬೀಡುಬಿಟ್ಟಿದ್ದವು. ಗಾಯಾಳುಗಳನ್ನು ಹೊರಕ್ಕೆ ತಂದ ತಕ್ಷಣವೇ ಆಸ್ಪತ್ರೆಗೆ ಕರೆದೊಯ್ಯಲಾಯಿತು.

‘ಕಟ್ಟಡದ ಪಕ್ಕದಲ್ಲೇ ಶೆಡ್ ಇತ್ತು ಎಂದು ಸ್ಥಳೀಯರು ತಿಳಿಸಿದ್ದಾರೆ. ಅವರ ಮೇಲೆ ಅವಶೇಷಗಳು ಬಿದ್ದಿರುವ ಸಾಧ್ಯತೆ ಇದೆ. ಕಟ್ಟಡದ ಅವಶೇಷಗಳನ್ನು ಪೂರ್ಣ ತೆರವುಗೊಳಿಸಿದ ಬಳಿಕ ಕಾರ್ಯಾಚರಣೆ ಸ್ಥಗಿತ ಮಾಡಲಾಗುವುದು’ ಎಂದು ಎನ್‌ಡಿಆರ್‌ಎಫ್ ಸಿಬ್ಬಂದಿ ತಿಳಿಸಿದರು.

ಬೆಂಗಳೂರಿನ ಬಾಬು ಸಾ ಪಾಳ್ಯದಲ್ಲಿ ಕಟ್ಟಡ ಕುಸಿದ ದುರಂತದಲ್ಲಿ ಮೃತಪಟ್ಟ ಕಾರ್ಮಿಕರೊಬ್ಬರ ಮೃತದೇಹ ಹೊರಕ್ಕೆ ತಂದ ರಕ್ಷಣಾ ಸಿಬ್ಬಂದಿ (ಎಡಚಿತ್ರ) ಕಾರ್ಮಿಕರ ಕುಟುಂಬಸ್ಥರು ಆತಂಕದಲ್ಲೇ ಬುಧವಾರ ರಕ್ಷಣಾ ಕಾರ್ಯಾಚರಣೆ ವೀಕ್ಷಿಸಿದರು ಪ್ರಜಾವಾಣಿ ಚಿತ್ರಗಳು: ಬಿ.ಕೆ.ಜನಾರ್ದನ್

ಬಿಬಿಎಂಪಿ ಅಧಿಕಾರಿಗಳ ವಿರುದ್ಧ ಸ್ವಯಂ ಪ್ರೇರಿತ ಪ್ರಕರಣ

ದುರಂತ ಸ್ಥಳಕ್ಕೆ ಲೋಕಾಯುಕ್ತ ಬಿ.ಎಸ್.ಪಾಟೀಲ, ಉಪ ಲೋಕಾಯುಕ್ತರಾದ ಕೆ.ಎನ್.ಫಣೀಂದ್ರ, ಬಿ.ವೀರಪ್ಪ ಅವರು ಬುಧವಾರ ರಾತ್ರಿ ಭೇಟಿ ನೀಡಿ ಪರಿಶೀಲಿಸಿದರು.

ಬಿಬಿಎಂಪಿ ಮತ್ತು ಪೊಲೀಸ್ ಅಧಿಕಾರಿಗಳಿಂದ ಸಮಗ್ರ ಮಾಹಿತಿ ಪಡೆದುಕೊಂಡರು. ಅನಧಿಕೃತ ಕಟ್ಟಡ ನಿರ್ಮಾಣವಾಗುತ್ತಿದ್ದರೂ ನಿರ್ಲಕ್ಷ್ಯ ವಹಿಸಿದ್ದಕ್ಕಾಗಿ ಬಿಬಿಎಂಪಿ ಅಧಿಕಾರಿಗಳನ್ನು ತೀವ್ರ ತರಾಟೆಗೆ ತೆಗೆದುಕೊಂಡರು. ಅಲ್ಲದೆ, ಕಟ್ಟಡ ನಿರ್ಮಾಣಕ್ಕೆ ಪರವಾನಗಿ ನೀಡಲಾಗಿತ್ತೆ? ಇಲ್ಲವೇ ಎಂಬುದುರ ಕುರಿತು ಸಮಗ್ರ ಮಾಹಿತಿ ನೀಡುವಂತೆ ಲೋಕಾಯುಕ್ತರು ಸೂಚಿಸಿದರು.

ಸ್ಥಳದಲ್ಲಿದ್ದ ಬಿಬಿಎಂಪಿಯ ವಲಯ ಆಯುಕ್ತ, ಸಹಾಯಕ ಆಯುಕ್ತ, ಕಾರ್ಯ ನಿರ್ವಾಹಕ ಎಂಜಿನಿಯರ್, ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್‌ಗಳನ್ನು ಲೋಕಾಯುಕ್ತರು ಪ್ರಾಥಮಿಕ ವಿಚಾರಣೆ ನಡೆಸಿದರು.

‘ಪ್ರಾಥಮಿಕ ತನಿಖೆ ಪ್ರಕಾರ ಯಾವುದೇ ಅನುಮತಿ ಪಡೆಯದೇ ಕಟ್ಟಡ ನಿರ್ಮಾಣ ಮಾಡುತ್ತಿರುವುದು ಪತ್ತೆಯಾಗಿದೆ. ಅನುಮತಿ ಪಡೆಯದೇ ಕಟ್ಟಡ ನಿರ್ಮಾಣ ಮಾಡುತ್ತಿದ್ದರೂ ಯಾವುದೇ ಕ್ರಮ ತೆಗೆದುಕೊಳ್ಳದ ಅಧಿಕಾರಿಗಳ ವಿರುದ್ಧ ಸ್ವಯಂ ಪ್ರೇರಿತ ದೂರು ದಾಖಲು ಮಾಡಲಾಗಿದೆ. ಶುಕ್ರವಾರ ವಿಚಾರಣೆಗೆ ಬರುವಂತೆ ಸೂಚಿಸಲಾಗಿದೆ’ ಎಂದು ಲೋಕಾಯುಕ್ತ ಬಿ.ಎಸ್.ಪಾಟೀಲ್ ತಿಳಿಸಿದ್ದಾರೆ. ಅನಧಿಕೃತವಾಗಿ ಕಾಮಗಾರಿ ಮಾಡಿದಲ್ಲದೆ, ಬಿಬಿಎಂಪಿ ಅಧಿಕಾರಿಗಳು ನೋಟಿಸ್ ಕೊಡುತ್ತಾರೆ ಎಂಬ ಭಯದಲ್ಲಿ ಕಾರ್ಮಿಕರಿಂದ ಹಗಲು–ರಾತ್ರಿ ಕೆಲಸ ಮಾಡಿಸಿ ಅಮಾಯಕರ ಜೀವ ತೆಗೆದಿದ್ದಾರೆ. ಈ ಘಟನೆಯನ್ನು ಲೋಕಾಯುಕ್ತ ಗಂಭೀರವಾಗಿ ಪರಿಗಣಿಸಿದೆ ಎಂದರು.

ಎರಡು ತಿಂಗಳ ಹಿಂದೆಯೇ ಬಿಬಿಎಂಪಿ ಅಧಿಕಾರಿಗಳಿಗೆ ಅನಧಿಕೃತ ಕಟ್ಟಡ ಎಂಬ ಮಾಹಿತಿ ಲಭ್ಯವಾಗಿತ್ತು. ಆದರೂ ನಿರ್ಲಕ್ಷ್ಯ ವಹಿಸಿದ್ದಾರೆ. ಬಿಬಿಎಂಪಿ ಅಧಿಕಾರಿಗಳಿಂದ ಕರ್ತವ್ಯಲೋಪ ಆಗಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ ಎಂದರು.

ಕಟ್ಟಡ ಕುಸಿತ ಎಇಇ ಅಮಾನತು

ಬಾಬುಸಾ ಪಾಳ್ಯದಲ್ಲಿ ನಕ್ಷೆಗೆ ವ್ಯತಿರಿಕ್ತವಾಗಿ ಕಟ್ಟಡ ನಿರ್ಮಾಣವಾಗುತ್ತಿದ್ದರೂ ಕ್ರಮ ಕೈಗೊಳ್ಳದ ಆರೋಪದಡಿ ಹೊರಮಾವು ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಕೆ. ವಿನಯ್ ಅವರನ್ನು ಅಮಾನತು ಗೊಳಿಸಲಾಗಿದೆ.

ಹೊರಮಾವು ಉಪ ವಿಭಾಗ ವ್ಯಾಪ್ತಿಯ ಬಾಬುಸಾ ಪಾಳ್ಯದ ಅಂಜನಾದ್ರಿ ಎನ್‌ಕ್ಲೇವ್‌ನ 7ನೇ ಬಿ ಅಡ್ಡರಸ್ತೆಯಲ್ಲಿ ನಿವೇಶನ ಸಂಖ್ಯೆ 24ರಲ್ಲಿ ನಕ್ಷೆಗೆ ವ್ಯತಿರಿಕ್ತವಾಗಿ ಕಟ್ಟಡ ನಿರ್ಮಾಣ ಮಾಡಲಾಗುತ್ತಿತ್ತು. ಬಿಬಿಎಂಪಿ –2020 ಕಾಯ್ದೆ ಪ್ರಕಾರ ಉಪವಿಧಿಗಳನ್ನು ಉಲ್ಲಂಘಿಸಿ ನಿರ್ಮಾಣ ಮಾಡಿರುವ ಕಟ್ಟಡದ ಭಾಗಗಳನ್ನು ತೆರವುಗೊಳಿಸಲು ಸ್ಥಿರೀಕರಣದ ಆದೇಶವನ್ನು ವಿನಯ್ ಸೆಪ್ಟೆಂಬರ್ 21ರಂದು ಹೊರಡಿಸಿದ್ದರು.

ಈ ಆದೇಶದ ನಂತರ ಯಾವುದೇ ಕ್ರಮ ಕೈಗೊಂಡಿಲ್ಲ. ಈ ಕಟ್ಟಡವು ಅ.22ರಂದು ಉರುಳಿಬಿದ್ದಿದೆ. ಆದ್ದರಿಂದ, ಕರ್ತವ್ಯ ಲೋಪ ಎಸಗಿದ ಆರೋಪದಡಿ ವಿನಯ್ ಅವರನ್ನು ಅಮಾನತುಗೊಳಿಸಿ ಆಡಳಿತ ವಿಭಾಗದ ಉಪ ಆಯುಕ್ತರು ಬುಧವಾರ ಆದೇಶ ಹೊರಡಿಸಿದ್ದಾರೆ.

ಬಿಬಿಎಂಪಿ ವ್ಯಾಪ್ತಿಯಲ್ಲಿ ನಕ್ಷೆ ಉಲ್ಲಂಘಿಸುವ ಕಟ್ಟಡ ನಿರ್ಮಾಣದ ಮೇಲೆ ತೀವ್ರ ನಿಗಾ

ವಲಯ ಆಯುಕ್ತರಿಗೆ ಕಟ್ಟಡ ತೆರವು ಜವಾಬ್ದಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ನಕ್ಷೆ ಉಲ್ಲಂಘಿಸಿ ನಿರ್ಮಿಸಲಾಗುತ್ತಿರುವ ಕಟ್ಟಡಗಳು ಹಾಗೂ ಅನಧಿಕೃತ ನಿರ್ಮಾಣಗಳನ್ನು ತೆರವುಗೊಳಿಸಲು ವಲಯ ಆಯುಕ್ತರಿಗೆ ಜವಾಬ್ದಾರಿ ನೀಡಿ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಆದೇಶ ಹೊರಡಿಸಿದ್ದಾರೆ.

ಮಂಜೂರು ನಕ್ಷೆಗಳ ಉಲ್ಲಂಘನೆ, ಅನಧಿಕೃತ ಕಟ್ಟಡಗಳ ನಿರ್ಮಾಣ ತಡೆಗೆ ಸಂಬಂಧಿಸಿದಂತೆ ಅಧಿಕಾರ ಪ್ರತ್ಯಾಯೋಜನೆ ಆದೇಶವನ್ನು ಹೊರಡಿಸಿರುವ ಮುಖ್ಯ ಆಯುಕ್ತರು, ಎಲ್ಲ ರೀತಿಯ ಉಲ್ಲಂಘನೆಗಳನ್ನು ತಡೆಯಲು ಸೂಚಿಸಿದ್ದಾರೆ.

ನಗರದಲ್ಲಿ ಮಂಜೂರಾಗುವ ಕಟ್ಟಡ ನಕ್ಷೆಗಳನ್ನು ಆನ್‌ಲೈನ್‌ನಲ್ಲಿ ಪ್ರಕಟಿಸಲಾಗುತ್ತದೆ. ಈ ನಕ್ಷೆ ಮಂಜೂರಾದ 30 ದಿನಗಳೊಳಗೆ ಕಟ್ಟಡ ಮಾಲೀಕರು ಅಥವಾ ಅವರ ಪ್ರತಿನಿಧಿಗಳ ಸಮ್ಮುಖದಲ್ಲಿ ‘ಬಿಲ್ಡಿಂಗ್ ಪ್ಲಿಂಥ್ ಲೈನ್’ ಅನ್ನು ನಗರ ಯೋಜನೆ ಅಧಿಕಾರಿಗಳು ಗುರುತು ಮಾಡಿಕೊಡಬೇಕು. ಅದನ್ನು ಕೇಂದ್ರ ಹಾಗೂ ವಲಯ ಕಚೇರಿಯ ಜಂಟಿ ನಿರ್ದೇಶಕರು ದೃಢೀಕರಿಸಬೇಕು.

ವಾರ್ಡ್‌ನಲ್ಲಿ ಕಿರಿಯ, ಸಹಾಯಕ ಎಂಜಿನಿಯರ್, ಸಹಾಯಕ ಕಾರ್ಯ ಪಾಲಕ ಎಂಜಿನಿಯರ್ (ಎಇಇ), ಕಾರ್ಯಪಾಲಕ ಎಂಜಿನಿಯರ್‌ಗಳು ಮಂಜೂರಾದ ನಕ್ಷೆಯ ವಿವರ ಪಡೆದುಕೊಂಡು, ಅದರ ಅನುಸಾರ ಕಟ್ಟಡ ನಿರ್ಮಾಣ ಪ್ರಗತಿಯಲ್ಲಿರುವುದನ್ನು ಕಾಲಕಾಲಕ್ಕೆ ಖಾತರಿಪಡಿಸಿಕೊಳ್ಳಬೇಕು.

ಕಟ್ಟಡ ನಿರ್ಮಾಣದ ಬಗ್ಗೆ ಸಾರ್ವಜನಿಕರಿಂದ ದೂರುಗಳು ಬಂದರೆ, ಉಪ ವಿಭಾಗದ ಎಇಇ ಅವರು ಕಿರಿಯ ಎಂಜಿನಿಯರ್ ಅವರನ್ನು ಪರಿಶೀಲನೆಗೆ ಕಳುಹಿಸಬೇಕು. ದೂರು ಸ್ವೀಕೃತವಾದ 24 ಗಂಟೆಯೊಳಗೆ ಆ ಕಟ್ಟಡದ ಸಮಗ್ರ ವರದಿಯನ್ನು ಎಇಇಗೆ ಸಲ್ಲಿಸಬೇಕು.

ಕಟ್ಟಡ ನಿರ್ಮಾಣದಲ್ಲಿನ ನಕ್ಷೆ ಉಲ್ಲಂಘನೆಗಳನ್ನು ಮಾಲೀಕರ ಸಮಕ್ಷಮದಲ್ಲಿ ಪರಿಶೀಲಿಸಲು ಎಇಇ ಅವರು ನೋಟಿಸ್ ಜಾರಿ ಮಾಡಬೇಕು. 15 ದಿನದಲ್ಲಿ ಸ್ಥಳ ಪರಿಶೀಲನೆ ಮಾಡಬೇಕು. ಉಲ್ಲಂಘನೆಯ ವರದಿಯನ್ನು ವಲಯ ಆಯುಕ್ತರು ಪರಾಮರ್ಶಿಸಿದ ನಂತರ, ಎಇಇ ಅವರು ಕಟ್ಟಡ ನಿರ್ಮಾಣ ತಡೆಯಲು ಮಾಲೀಕರಿಗೆ ನೋಟಿಸ್ ನೀಡಿ 15 ದಿನ ಕಾಲಾವಕಾಶ ನೀಡಬೇಕು. ಈ ಅವಧಿಯಲ್ಲಿ ಎಲ್ಲ ರೀತಿಯ ತನಿಖೆಗಳನ್ನು ಮಾಡಿ, ವಲಯ ಆಯುಕ್ತರು 30 ದಿನಗಳ ಕಾಲಾವಕಾಶ ನೀಡಿ ನಿರ್ಮಾಣವಾಗುತ್ತಿರುವ ಕಟ್ಟಡವನ್ನು ತೆರವು ಮಾಡಲು ಆದೇಶ ಜಾರಿ ಮಾಡಬೇಕು ಎಂದು ತುಷಾರ್ ಗಿರಿನಾಥ್ ಸೂಚಿಸಿದ್ದಾರೆ.

‘ಎಂಜಿನಿಯರ್‌ಗಳ ಮೇಲೆ ಶಿಸ್ತುಕ್ರಮ’

ಕಟ್ಟಡ ನಿರ್ಮಾಣ ತಡೆಯಲು ಮಾಲೀಕರಿಗೆ ನೋಟಿಸ್ ಜಾರಿಯಾದ ಮೇಲೆ ಯಾವುದೇ ನಿರ್ಮಾಣವಾಗದಂತೆ ತಡೆಯುವ ಜವಾಬ್ದಾರಿ ಆಯಾ ವಾರ್ಡ್‌ನ ಕಿರಿಯ/ಸಹಾಯಕ ಎಂಜಿನಿಯರ್ ಹಾಗೂ ಎಇಇ ಅವರದ್ದಾಗಿರುತ್ತದೆ. ಅವರು ನಿರ್ಲಕ್ಷ್ಯ ವಹಿಸಿದರೆ ಶಿಸ್ತುಕ್ರಮ ಜರುಗಿಸಲಾಗುತ್ತದೆ.

ನಿಯಮ ಉಲ್ಲಂಘಿಸಿರುವ ಕಟ್ಟಡಗಳನ್ನು ತೆರವುಗೊಳಿಸಲು ವಲಯ ಆಯುಕ್ತರು ಆದೇಶ ಹೊರಡಿಸಿ, ಕಾಲಮಿತಿಯಲ್ಲಿ ತೆರವು ಕಾರ್ಯವನ್ನು ಪೂರ್ಣಗೊಳಿಸಬೇಕು. ದರಪಟ್ಟಿಗಳ ಅನುಸಾರ ಅನಧಿಕೃತ ಕಟ್ಟಡ ನಿರ್ಮಾಣಗಳನ್ನು ತೆರವುಗೊಳಿಸಲು, ಅಂತಸ್ತುವಾರು ಪ್ರತಿ ಚದರ ಮೀಟರ್ ವೆಚ್ಚವನ್ನು ಸಿದ್ಧಮಾಡಿ, ಅದನ್ನು ವಲಯ ಆಯುಕ್ತರಿಂದ ಕಾರ್ಯಪಾಲಕ ಎಂಜಿನಿಯರ್ ಅವರು ಅನುಮೋದನೆ ಪಡೆಯಬೇಕು. ಕಟ್ಟಡ ತೆರವು ಕಾರ್ಯಕ್ಕೆ ಏಜೆನ್ಸಿಯನ್ನು ನೇಮಿಸಿಕೊಳ್ಳಬೇಕು.

ಕಟ್ಟಡ ತೆರವಿನ ವೆಚ್ಚವನ್ನು ವಲಯದ ಆವರ್ತ ನಿಧಿಯಿಂದ ಒದಗಿಸಬೇಕು. ನಂತರ ಆ ವೆಚ್ಚವನ್ನು ಕಂದಾಯ ವಿಭಾಗದಿಂದ ಕಟ್ಟಡ ಮಾಲೀಕರಿಂದ ವಸೂಲಿ ಮಾಡಲು ಕ್ರಮ ಕೈಗೊಳ್ಳಬೇಕು ಎಂದು ಬಿಬಿಎಂಪಿ ಕಾಯ್ದೆ–2020ರ ಹಲವು ಕಲಂಗಳನ್ನು ನಮೂದಿಸಿ ಮುಖ್ಯ ಆಯುಕ್ತರು ಆದೇಶ ಹೊರಡಿಸಿದ್ದಾರೆ.

ಜಿಂಗಲಕುಂಟೆ: 61 ಎಕರೆ ಒತ್ತುವರಿ ತೆರವಿಗೆ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋಲಾರ ಜಿಲ್ಲೆಯ ಶ್ರೀನಿವಾಸಪುರ ಅರಣ್ಯ ವಲಯದ ಜಿಂಗಲಕುಂಟೆ ಗ್ರಾಮದಲ್ಲಿ 61 ಎಕರೆ 39 ಗುಂಟೆ ವಿಸ್ತೀರ್ಣದ ರಾಜ್ಯ ಅರಣ್ಯ ಜಮೀನು ಒತ್ತವರಿಯಾಗಿದೆ ಎಂಬ ಆರೋಪದ ಕುರಿತು ಜಂಟಿ ಸರ್ವೆ ನಡೆಸಿ, ಒತ್ತುವರಿ ಕಂಡುಬಂದರೆ ತೆರವುಗೊಳಿಸುವಂತೆ ಕೋಲಾರ ಉಪ ಅರಣ್ಯ ಸಂರಕ್ಷಣಾಧಿಕಾರಿಗೆ ಬೆಂಗಳೂರು ವೃತ್ತದ ಅರಣ್ಯ ಸಂರಕ್ಷಣಾಧಿಕಾರಿ ನಿರ್ದೇಶನ ನೀಡಿದ್ದಾರೆ.

‘ವಿವಾದಿತ ಜಮೀನಿನ ಜಂಟಿ ಸರ್ವೆ ನಡೆಸಿ ಅರಣ್ಯ ಜಮೀನು ಒತ್ತುವರಿ ಆಗಿರುವುದು ಕಂಡುಬಂದಲ್ಲಿ ತೆರವುಗೊಳಿಸಲು ಕ್ರಮ ಜರುಗಿಸಬೇಕು’ ಎಂದು ಹೈಕೋರ್ಟ್ 2013ರ ಜುಲೈ 11ರಂದು ನೀಡಿದ್ದ ತೀರ್ಪನ್ನು ಈವರೆಗೂ ಪಾಲಿಸಿಲ್ಲ ಎಂದು ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವಾಲಯಕ್ಕೆ ದೂರು ಸಲ್ಲಿಕೆಯಾಗಿತ್ತು. ಈ ಕುರಿತು ಕ್ರಮ ಕೈಗೊಂಡು ಅನುಪಾಲನಾ ವರದಿ ಸಲ್ಲಿಸುವಂತೆ ಸಚಿವಾಯಲಯವು ಆಗಸ್ಟ್ 9 ಮತ್ತು ಸೆಪ್ಟೆಂಬರ್ 6ರಂದು ರಾಜ್ಯ ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರಿಗೆ ಪತ್ರ ಬರೆದಿತ್ತು.

ಸೆ. 11ರಂದು ಮತ್ತೊಂದು ನೆನಪೋಲೆಯನ್ನು ರಾಜ್ಯ ಅರಣ್ಯ ಇಲಾಖೆಗೆ ಕಳುಹಿಸಲಾಗಿತ್ತು. ಅಕ್ಟೋಬರ್ 8ರಂದು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಯವರಿಗೆ ಪತ್ರ ಬರೆದಿರುವ ಕೇಂದ್ರ ಅರಣ್ಯ ಸಚಿವಾಲಯ, ಎರಡು ತಿಂಗಳೊಳಗೆ ಅನುಪಾಲನಾ ವರದಿ ಸಲ್ಲಿಸುವಂತೆ ಗಡುವು ನೀಡಿದೆ.

ಅರಣ್ಯ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರು ಸೆ. 18ರಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರಿಗೆ (ಅರಣ್ಯ ಪಡೆ ಮುಖ್ಯಸ್ಥರು) ಪತ್ರ ಬರೆದು, ಜಿಂಗಲಕುಂಟೆಯಲ್ಲಿ 61 ಎಕರೆ 39 ಗುಂಟೆ ಅರಣ್ಯ ಜಮೀನು ಒತ್ತುವರಿಯಾಗಿದೆ ಎಂಬ ಆರೋಪದ ಕುರಿತು ಜಂಟಿ ಸರ್ವೆ ನಡೆಸಿ, ಒತ್ತುವರಿ ತೆರವುಗೊಳಿಸಲು ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿದ್ದರು.

ಸೆ.23ರಂದು ಕೋಲಾರ ಉಪ ಅರಣ್ಯ ಸಂರಕ್ಷಣಾಧಿಕಾರಿಯವರಿಗೆ ಪತ್ರ ಬರೆದಿರುವ ಬೆಂಗಳೂರು ವೃತ್ತದ ಅರಣ್ಯ ಸಂರಕ್ಷಣಾಧಿಕಾರಿ, ಜಿಂಗಲಕುಂಟೆ ಗ್ರಾಮದಲ್ಲಿ ಜಂಟಿ ಸರ್ವೆ ನಡೆಸಿ ಅರಣ್ಯ ಜಮೀನು ಒತ್ತುವರಿ ತೆರವುಗೊಳಿಸಿ, ಅನುಪಾಲನಾ ವರದಿ ಸಲ್ಲಿಸುವಂತೆ ನಿರ್ದೇಶನ ನೀಡಿದ್ದಾರೆ.

ಫಾರ್ಮಾಸುಟಿಕಲ್ ಪಾರ್ಕ್ ಸ್ಥಾಪನೆಗೆ ತೀರ್ಮಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನನಿಲ್ದಾಣಕ್ಕೆ ಹತ್ತಿರವಿರುವ ಕೋಲಾರ ಅಥವಾ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಫಾರ್ಮಾಸುಟಿಕಲ್ ಪಾರ್ಕ್ ಸ್ಥಾಪಿಸಲು ತೀರ್ಮಾನಿಸಲಾಗಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದ್ದಾರೆ.

ಖನಿಜ ಭವನದಲ್ಲಿ ನಡೆದ ಇಂಡಸ್ಟ್ರಿ 5.0 ಮತ್ತು ಫಾರ್ಮಾಸುಟಿಕಲ್ಸ್ ವಿಷನ್ ಗ್ರೂಪ್‌ಗಳ ವರ್ಚುವಲ್ ಸಭೆಯಲ್ಲಿ ಭಾಗವಹಿಸಿ ವಿವಿಧ ಔಷಧ ತಯಾರಿಕಾ ಕಂಪನಿಗಳ ಪ್ರಮುಖರೊಂದಿಗೆ ಅವರು ಮಾತನಾಡಿದರು.

ವಿದೇಶಿ ಹೂಡಿಕೆದಾರರು ಭಾರತದಲ್ಲಿ ಬಂಡವಾಳ ಹೂಡಲು ಹತ್ತು ಕ್ಷೇತ್ರಗಳನ್ನು ಆಕರ್ಷಣೀಯವೆಂದು ಗುರುತಿಸಿದ್ದು, ಇವುಗಳಲ್ಲಿ ಫಾರ್ಮಸುಟಿಕಲ್ಸ್ ಕೂಡ ಒಂದಾಗಿದೆ ಎಂದು ಅವರು ಹೇಳಿದರು.

ಐಎಎಸ್ ಬಡ್ತಿ: ಸಿಎಟಿಗೆ ಹೈಕೋರ್ಟ್ ನಿರ್ದೇಶನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೆಎಎಸ್ ವೃಂದದಿಂದ ಐಎಎಸ್ ವೃಂದಕ್ಕೆ ಬಡ್ತಿ ನೀಡುವ ವಿಚಾರದಲ್ಲಿ ಕೇಂದ್ರ ಆಡಳಿತ ನ್ಯಾಯಮಂಡಳಿ (ಸಿಎಟಿ) ಆದೇಶ ಪಾಲನೆ ಮಾಡಿಲ್ಲ ಎಂದು ಆರೋಪಿಸಿ ರಾಜ್ಯದ ಆರು ಮಂದಿ ಐಎಎಸ್ ಅಧಿಕಾರಿಗಳ ವಿರುದ್ಧ ದಾಖಲಿಸಲಾಗಿರುವ ನಿಂದನೆ ಪ್ರಕರಣದಲ್ಲಿ; ಹೈಕೋರ್ಟ್ ಮುಂದಿನ ಆದೇಶ ನೀಡುವವತನಕ ಯಾವುದೇ ನಿರ್ಣಯ ಕೈಗೊಳ್ಳಬಾರದು’ ಎಂದು ಹೈಕೋರ್ಟ್, ಸಿಎಟಿಗೆ ನಿರ್ದೇಶಿಸಿದೆ.

‘ನಮ್ಮ ವಿರುದ್ಧದ ನಿಂದನಾ ಪ್ರಕ್ರಿಯೆ ರದ್ದುಪಡಿಸಬೇಕು’ ಎಂದು ಕೋರಿ ರಾಜ್ಯ ಸರ್ಕಾರದ ಈ ಹಿಂದಿನ ಮುಖ್ಯ ಕಾರ್ಯದರ್ಶಿಗಳಾದ ಸುಭಾಷ್ ಕುಂಠಿಯಾ, ಪಿ.ರವಿಕುಮಾರ್, ವಂದಿತ ಶರ್ಮಾ ಹಾಗೂ ಈ ಹಿಂದೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಹೊಣೆಗಾರಿಕೆ ನಿಭಾಯಿಸಿದ್ದ ಟಿ.ಕೆ.ಅನಿಲ್ ಕುಮಾರ್, ಪಿ.ಹೇಮಲತಾ, ಎಂ.ಎಸ್. ಶ್ರೀಕರ್ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ಅರ್ಜಿ ಪರಿಶೀಲಿಸಿದ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರು, ‘ಈ ಅರ್ಜಿಯು ನನ್ನ ಹೊರತಾದ ಮತ್ತೊಂದು ಪೀಠದ ಮುಂದೆ ವಿಚಾರಣೆಗೆ ನಿಗದಿಯಾಗಲಿ. ಈ ಸಂಬಂಧ ಮುಖ್ಯ ನ್ಯಾಯಮೂರ್ತಿಗಳಿಂದ ನಿರ್ದೇಶನ ಪಡೆದು ಸಂಬಂಧಪಟ್ಟ ನ್ಯಾಯಪೀಠದ ಮುಂದೆ ಇದನ್ನು ವಿಚಾರಣೆಗೆ ನಿಗದಿಪಡಿಸಬೇಕು’ ಎಂದು ಹೈಕೋರ್ಟ್ ರಿಜಿಸ್ಟ್ರಿಗೆ ನಿರ್ದೇಶಿಸಿದರು.

ಅರ್ಜಿದಾರರ ಪರ ವಕೀಲರ ಮನವಿಯಂತೆ, ‘ಹೈಕೋರ್ಟ್‌ನ ಮುಂದಿನ ಆದೇಶದವರೆಗೆ ಈ ಪ್ರಕರಣದಲ್ಲಿ ಸಿಎಟಿ ಯಾವುದೇ ನಿರ್ಣಯಕೈಗೊಳ್ಳಬಾರದು. ಈ ಹಿಂದೆ ನೀಡಿರುವ ಮಧ್ಯಂತರ ಆದೇಶ ಮುಂದಿನ ವಿಚಾರಣಾ ದಿನಾಂಕದವರೆಗೆ ಮುಂದುವರಿಯಲಿದೆ’ ಎಂದು ತಿಳಿಸಿ ವಿಚಾರಣೆ ಮುಂದೂಡಿದರು.

ಈ ವರ್ಷ ಸಹಾಯಧನಕ್ಕೆ ಅರ್ಜಿ ಆಹ್ವಾನಿಸದ ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ಕನ್ನಡ ಕೆಲಸಕ್ಕೆ ಸಿಗದ ಧನಸಹಾಯದ ‘ಗ್ಯಾರಂಟಿ’

● ವರುಣ ಹೆಗಡೆ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು 2024–25ನೇ ಸಾಲಿನ ‘ಧನಸಹಾಯ’ ಮಂಜೂರಾತಿಗೆ ಸಾಂಸ್ಕೃತಿಕ ಸಂಘ–ಸಂಸ್ಥೆಗಳಿಂದ ಈವರೆಗೂ ಅರ್ಜಿ ಆಹ್ವಾನಿಸಿಲ್ಲ. ಕಳೆದ ಸಾಲಿನ ಬಾಕಿ ಪೂರ್ಣ ಪ್ರಮಾಣದಲ್ಲಿ ಬಿಡುಗಡೆಯಾಗದೇ ಇರುವುದರಿಂದ ಸಂಕಷ್ಟಕ್ಕೆ ಸಿಲುಕಿರುವ ಸಂಘ–ಸಂಸ್ಥೆಗಳಿಗೆ, ಈ ವರ್ಷ ಆರ್ಥಿಕ ನೆರವಿನ ಖಚಿತತೆ ಇಲ್ಲವಾಗಿದೆ.

ಸಾಂಸ್ಕೃತಿಕ ವಾತಾವರಣ ರೂಪಿಸಲು ಕೆಲಸ ಮಾಡುತ್ತಿರುವ ಸಂಘ–ಸಂಸ್ಥೆಗಳಲ್ಲಿ ಹೆಚ್ಚಿನವು ಇಲಾಖೆಯ ಧನಸಹಾಯವನ್ನೇ ಅವಲಂಬಿಸಿವೆ. ಈ ಭರವಸೆಯಿಂದಲೇ ಲಕ್ಷಾಂತರ ರೂಪಾಯಿ ವೆಚ್ಚ ಮಾಡಿ ಪ್ರತಿವರ್ಷ ಕಾರ್ಯಕ್ರಮಗಳನ್ನು ನೀಡುತ್ತಿವೆ. ಸಂಸ್ಕೃತಿ ಇಲಾಖೆಯು ಅನುದಾನದ ಕೊರತೆಯಿಂದ 2023–24ನೇ ಸಾಲಿನ ಧನಸಹಾಯವನ್ನು ಕಂತು ರೂಪದಲ್ಲಿ ಬಿಡುಗಡೆ ಮಾಡಿತ್ತು.

> **ಕಳೆದ ಸಾಲಿನ ಬಾಬ್ತು ಬಾಕಿ ಇರುವ ಧನಸಹಾಯದ ಮೊತ್ತವನ್ನು ಮೊದಲು ಬಿಡುಗಡೆ ಮಾಡಲಾಗುವುದು. ಬಳಿಕ ಈ ಸಾಲಿಗೆ ಅರ್ಜಿ ಆಹ್ವಾನಿಸಲಾಗುವುದು**
>
> **ಕೆ. ಧರಣೀದೇವಿ ಮಾಲಗತ್ತಿ,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ

ಕಳೆದ ಮಾರ್ಚ್‌ನಲ್ಲಿ ಮೊದಲ ಕಂತು ಬಿಡುಗಡೆ ಮಾಡಿದ್ದ ಇಲಾಖೆ, ಸೆಪ್ಟೆಂಬರ್‌ನಲ್ಲಿ ಎರಡನೇ ಕಂತು ಬಿಡುಗಡೆ ಮಾಡಿದೆ. ಮತ್ತೊಂದು ಕಂತಿನಲ್ಲಿಯೂ ಪೂರ್ಣ ಅನುದಾನ ಒದಗಿಸದಿರುವುದು ಸಾಂಸ್ಕೃತಿಕ ವಲಯದಲ್ಲಿ ಆಕ್ರೋಶಕ್ಕೆ ಕಾರಣವಾಗಿದೆ.

ಯೋಜನೆ ಮಾರ್ಗ ಸೂಚಿ ಪ್ರಕಾರ, ಪ್ರತಿವರ್ಷ ಜೂನ್ ತಿಂಗಳಲ್ಲೇ ಅರ್ಜಿ ಆಹ್ವಾನಿಸಿ ಸಂಘ–ಸಂಸ್ಥೆಗಳ ಕಾರ್ಯಚಟುವಟಿಕೆಗಳನ್ನು ಜಿಲ್ಲಾ ಹಂತದಲ್ಲಿ ಪರಿಶೀಲಿಸಬೇಕು. ಆದರೆ, ಈ ಪ್ರಕ್ರಿಯೆ ಪ್ರಾರಂಭಿಸದಿರುವುದರ ಜೊತೆಗೆ ಕಳೆದ ಸಾಲಿಗೆ ನಿಗದಿಪಡಿಸಲಾದ ಅನುದಾನದಲ್ಲಿ ಪರಿಶಿಷ್ಟ ಜಾತಿ ಉಪ ಯೋಜನೆಯಡಿ ಸಂಘ–ಸಂಸ್ಥೆಗಳಿಗೆ ಶೇ 14ರಷ್ಟು ಹಾಗೂ ಸಾಮಾನ್ಯ ವರ್ಗದಡಿ ಸಂಘ–ಸಂಸ್ಥೆಗಳಿಗೆ ಶೇ 13ರಷ್ಟು ಅನುದಾನ ಬಾಕಿ ಉಳಿಸಿಕೊಳ್ಳಲಾಗಿದೆ.

ಅಲ್ಪ ಧನ ಸಂದಾಯ: 2023–24ನೇ ಸಾಲಿನ ಧನಸಹಾಯಕ್ಕೆ ಸಾಮಾನ್ಯ ವರ್ಗದಲ್ಲಿ 831, ಪರಿಶಿಷ್ಟ ಜಾತಿ ಉಪಯೋಜನೆಯಡಿ 519 ಹಾಗೂ ಪರಿಶಿಷ್ಟ ಪಂಗಡ ಉಪಯೋಜನೆಯಡಿ 97 ಸಂಘ–ಸಂಸ್ಥೆಗಳು ಆಯ್ಕೆಯಾಗಿದ್ದವು. ಯೋಜನೆಯಡಿ ಗರಿಷ್ಠ ₹5 ಲಕ್ಷದವರೆಗೆ ಅನುದಾನ ಒದಗಿಸಲು ಅವಕಾಶವಿದ್ದರೂ ಜಿಲ್ಲಾ ಸಮಿತಿಯು ಬಹುತೇಕ ಸಂಘ–ಸಂಸ್ಥೆಗಳಿಗೆ ₹1 ಲಕ್ಷದಿಂದ ₹2 ಲಕ್ಷ ಮಾತ್ರ ಶಿಫಾರಸು ಮಾಡಿದ್ದರಿಂದ ಕೆಲವರಿಗೆ ₹15 ಸಾವಿರದಿಂದ ₹20 ಸಾವಿರ ಮೊದಲ ಕಂತಾಗಿ ಕೈಸೇರಿತ್ತು. ಸಾಮಾನ್ಯ ವರ್ಗದಲ್ಲಿ ಧನಸಹಾಯ ಸಮಿತಿ ಶಿಫಾರಸು ಮಾಡಿದ್ದ ₹14.71 ಕೋಟಿಯಲ್ಲಿ ಮೊದಲ ಕಂತಾಗಿ ₹5.88 ಕೋಟಿ ಹಾಗೂ ಎರಡನೇ ಕಂತಾಗಿ ₹4.14 ಕೋಟಿ ಬಿಡುಗಡೆಯಾಗಿದೆ.

‘ಎರಡನೇ ಕಂತಿನಲ್ಲಿಯೂ ಪೂರ್ಣ ಹಣ ಬಿಡುಗಡೆಯಾಗದಿರುವುದು ನಮ್ಮ ದುರದೃಷ್ಟ. ಪ್ರಸಕ್ತ ಸಾಲಿನ ಧನಸಹಾಯಕ್ಕೂ ಅರ್ಜಿ ಆಹ್ವಾನಿಸದಿರುವುದು ಗೊಂದಲವನ್ನುಂಟು ಮಾಡಿದೆ. ಈ ಬಗ್ಗೆ ಹೋರಾಟ ಅನಿವಾರ್ಯ’ ಎಂದು ಕಲಾವಿದ ಜಯಸಿಂಹ ಎಸ್. ತಿಳಿಸಿದರು.

ಕನ್ನಡ ಭವನಕ್ಕೆ ಅಲೆದಾಟ

ಬಾಕಿ ಉಳಿಸಿಕೊಂಡಿರುವ ಕಳೆದ ಸಾಲಿನ ಧನಸಹಾಯ ಪಡೆಯಲು ಕಲಾವಿದರು ಹಾಗೂ ಸಂಘ–ಸಂಸ್ಥೆಗಳ ಮುಖ್ಯಸ್ಥರು ಕನ್ನಡ ಭವನಕ್ಕೆ ಅಲೆದಾಡುತ್ತಿದ್ದಾರೆ. ರಾಜ್ಯದಲ್ಲಿ ಏಳು ಸಾವಿರಕ್ಕೂ ಅಧಿಕ ಸಾಂಸ್ಕೃತಿಕ ಸಂಘ–ಸಂಸ್ಥೆಗಳಿವೆ. ಅರ್ಜಿ ಅಲ್ಲಿಸುವ ನಾಲ್ಕು ಸಾವಿರಕ್ಕೂ ಹೆಚ್ಚು ಸಂಘ–ಸಂಸ್ಥೆಗಳಲ್ಲಿ ಒಂದು ಸಾವಿರದಿಂದ 1,500 ಸಂಘ–ಸಂಸ್ಥೆಗಳಿಗೆ ಧನಸಹಾಯ ಒದಗಿಸಲಾಗುತ್ತಿದೆ. ಈ ಹಿಂದೆ ಧನಸಹಾಯಕ್ಕೆ ಸರ್ಕಾರವು ವಾರ್ಷಿಕ ₹15 ಕೋಟಿಯಿಂದ ₹20 ಕೋಟಿ ಅನುದಾನ ಒದಗಿಸುತ್ತಿತ್ತು.

ವಿಲಕ್ಷಣ ಬೇಡಿಕೆಯ ಪಿಐಎಲ್‌ಗೆ ನ್ಯಾಯಾಲಯ ತವಕ

ಅರ್ಜಿದಾರ ಮಹಾನುಭಾವ ಯಾರು?: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಗೆ (ಬಿಬಿಎಂಪಿ) ಚುನಾವಣೆ ನಡೆಸುವುದು ಬೇಡ. ರಾಜ್ಯ ಸರ್ಕಾರ, ರಾಜ್ಯ ಚುನಾವಣಾ ಆಯೋಗ ಹಾಗೂ ಎಲ್ಲಾ ರಾಜಕೀಯ ಪಕ್ಷಗಳೂ ಒಟ್ಟಾಗಿ ಸೇರಿ ನನ್ನನ್ನೇ ಮಧ್ಯಂತರ ಮೇಯರ್ ಆಗಿ ಕಾರ್ಯ ನಿರ್ವಹಿಸುವಂತೆ ಮನವಿ ಮಾಡಿಕೊಳ್ಳಲು ಇವರಿಗೆಲ್ಲಾ ನಿರ್ದೇಶಿಸಬೇಕು’ ಎಂದು ಕೋರಲಾದ ವಿಲಕ್ಷಣ ಬೇಡಿಕೆಯೊಂದಕ್ಕೆ ಹೈಕೋರ್ಟ್ ಹುಬ್ಬೇರಿಸಿದೆ. ಇಂತಹ ಅರ್ಜಿ ಸಲ್ಲಿಸಿರುವ ಮಹಾನುಭಾವ ಯಾರೆಂಬುದನ್ನು ಕಣ್ಣಾರೆ ಕಾಣುವ ತವಕ ವ್ಯಕ್ತಪಡಿಸಿದೆ!

‘ಹೊಸ ಬಿಬಿಎಂಪಿ ಹಾಗೂ ವಾರ್ಡ್ ನಂಬರ್ 42ರ ತಂದೆ’ ಎಂದು ಸ್ವಯಂ ಘೋಷಿಸಿಕೊಂಡಿರುವ ನಗರದ ಲ್ಯಾವೆಲ್ಲೆ ರಸ್ತೆ ನಿವಾಸಿಯಾದ 66 ವರ್ಷದ ಮುರಳಿ ಕೃಷ್ಣ ಬ್ರಹ್ಮಾನಂದಂ ಎಂಬುವರು 2022ರಲ್ಲಿ ಸಲ್ಲಿಸಿರುವ ಈ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಅರ್ಜಿಯನ್ನು ವಿಚಾರಣೆಗೆ ಕೂಗಿದಾಗ ಅರ್ಜಿದಾರರು ಹಾಜರಿರಲಿಲ್ಲ. ಏತನ್ಮಧ್ಯೆ ಸರ್ಕಾರದ ಪರ ವಕೀಲರು, ‘ಅರ್ಜಿಯಲ್ಲಿನ ಅಂಶಗಳು ಮತ್ತು ಮನವಿ ಅಸಂಬದ್ಧವಾಗಿವೆ. ಹಾಗಾಗಿ, ಅರ್ಜಿಯನ್ನು ವಿಚಾರಣೆಗೆ ಪರಿಗಣಿಸದೆ ವಜಾಗೊಳಿಸಬೇಕು’ ಎಂದು ಮನವಿ ಮಾಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಇಲ್ಲ ನಾವು ಅರ್ಜಿಯನ್ನು ವಜಾ ಮಾಡುವುದಿಲ್ಲ. ಈ ಅರ್ಜಿ ಸಲ್ಲಿಸಿರುವ ಮಹಾನುಭಾವ ಯಾರು ಎಂಬುದನ್ನು ನೋಡಬೇಕಿದೆ’ ಎಂದು ಹೇಳಿ ವಿಚಾರಣೆ ಮುಂದೂಡಿತು.

ಏನಿದು ಅರ್ಜಿ?: ‘ಬಿಬಿಎಂಪಿ ಚುನಾವಣೆ ವಿಳಂಬ, ವಾರ್ಡ್ ಮರು ವಿಂಗಡಣೆ, ಬಿಬಿಎಂಪಿ ಕಾಯ್ದೆ-2020... ಇವೆಲ್ಲವೂ ಅವೈಜ್ಞಾನಿಕವಾಗಿವೆ’ ಎಂದು ದೂರಿರುವ ಅರ್ಜಿದಾರರು ಬಿಬಿಎಂಪಿ ಭೂಪ್ರದೇಶವನ್ನು ಸ್ತ್ರೀಲಿಂಗಕ್ಕೆ ಹೋಲಿಕೆ ಮಾಡಿದ್ದು, ‘ಆಕೆಗೆ’ ನ್ಯಾಯ ಸಿಗಬೇಕು ಎಂದು ಅರ್ಜಿಯಲ್ಲಿ ಅರಿಕೆ ಮಾಡಿಕೊಂಡಿದ್ದಾರೆ. ಅರ್ಜಿಯಲ್ಲಿ ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ರಾಜ್ಯ ಚುನಾವಣಾ ಆಯೋಗದ ಆಯುಕ್ತ ಮತ್ತು ಬಿಬಿಎಂಪಿ ಮುಖ್ಯ ಆಯುಕ್ತರನ್ನು ಪ್ರತಿವಾದಿಗಳನ್ನಾಗಿ ಮಾಡಲಾಗಿದೆ.

‘ನನ್ನ ಮನವಿ ಅಸ್ಪಷ್ಟವೂ ಅಲ್ಲ, ಅವೈಜ್ಞಾನಿಕವೂ ಅಲ್ಲ, ಕಾನೂನು ಬಾಹಿರವೂ ಅಲ್ಲ, ದುರದ್ದೇಶಪೂರಿತವೂ ಅಲ್ಲ. ಆದ್ದರಿಂದ, ಬಿಬಿಎಂಪಿಗೆ ಚುನಾವಣೆ ನಡೆಸಬಾರದು ಎಂದು ಸರ್ಕಾರ, ಚುನಾವಣಾ ಆಯೋಗ ಮತ್ತು ಬಿಬಿಎಂಪಿಗೆ ನಿರ್ದೇಶನ ನೀಡಬೇಕು. ಜತೆಗೆ ಸರ್ಕಾರ ಮತ್ತು ಎಲ್ಲಾ ರಾಜಕೀಯ ಪಕ್ಷಗಳು ಒಟ್ಟಾಗಿ ಸೇರಿ ನನ್ನನ್ನು ಮಧ್ಯಂತರ ಮೇಯರ್ ಆಗಿ ಕಾರ್ಯನಿರ್ವಹಿಸುವಂತೆ ಮನವಿ ಮಾಡಿಕೊಳ್ಳಲು ನಿರ್ದೇಶನ ನೀಡಬೇಕು’ ಎಂದು ಅರ್ಜಿದಾರರು ಕೋರಿದ್ದಾರೆ.

2023ರ ವಿಧಾನಸಭೆ ಚುನಾವಣೆ ವೇಳೆಯೂ ಇಂತಹದ್ದೇ ಅರ್ಜಿ ಸಲ್ಲಿಸಿದ್ದ ಇದೇ ಅರ್ಜಿದಾರರು, ವಿಧಾನಸಭೆ ಚುನಾವಣೆ ನಡೆಸದೆ, ನನ್ನನ್ನೇ ಕರ್ನಾಟಕ ಪ್ರತಿನಿಧಿಯನ್ನಾಗಿ ನೇಮಕ ಮಾಡುವಂತೆ ಸರ್ಕಾರ ಹಾಗೂ ಕೇಂದ್ರ ಚುನಾವಣಾ ಆಯೋಗಕ್ಕೆ ನಿರ್ದೇಶನ ನೀಡಬೇಕು’ ಎಂದು ಕೋರಿದ್ದರು. ಈ ಅರ್ಜಿಯನ್ನು ಹೈಕೋರ್ಟ್ ವಜಾಗೊಳಿಸಿತ್ತು.

ಗಮನಕ್ಕೆ ತನ್ನಿ: ಹೈಕೋರ್ಟ್ ನಿರ್ದೇಶನ

ಬೆಂಗಳೂರು: ‘ಹೈಕೋರ್ಟ್ ಗಮನಕ್ಕೆ ತಾರದೆ ಉದ್ದೇಶಿತ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ಜಾಹೀರಾತು ಬೈ-ಲಾ-2024ರ (ಫ್ಲೆಕ್ಸ್, ಹೋರ್ಡಿಂಗ್ಸ್) ಅಂತಿಮ ಅಧಿಸೂಚನೆ ಹೊರಡಿಸಬಾರದು’ ಎಂದು ಹೈಕೋರ್ಟ್, ರಾಜ್ಯ ಸರ್ಕಾರ ಮತ್ತು ಬಿಬಿಎಂಪಿಗೆ ನಿರ್ದೇಶಿಸಿದೆ.

‘ಅನಧಿಕೃತ ಜಾಹೀರಾತು ಫಲಕಗಳ ಹಾವಳಿ ತಡೆಯಲು ಬಿಬಿಎಂಪಿಗೆ ನಿರ್ದೇಶಿಸಬೇಕು’ ಎಂದು ಕೋರಿ ಸಾಮಾಜಿಕ ಕಾರ್ಯಕರ್ತ ಮಾಯಿಗೇಗೌಡ ಸಲ್ಲಿಸಿರುವ ಹಾಗೂ ಹೈಕೋರ್ಟ್ ಸ್ವಯಂಪ್ರೇರಣೆಯಿಂದ ದಾಖಲಿಸಿಕೊಂಡಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಎನ್. ವಿ.ಅಂಜಾರಿಯಾ

ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ಹಾಜರಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಪ್ರತಿಮಾ ಹೊನ್ನಾಪುರ ಅವರು, ‘ಬೈ–ಲಾ ನಿಯಮಗಳ ತಿದ್ದುಪಡಿಗೆ ಸಂಬಂಧಿಸಿದಂತೆ ಸಾರ್ವಜನಿಕರಿಂದ ಸ್ವೀಕರಿಸಿರುವ ಆಕ್ಷೇಪಣೆಗಳನ್ನು ಪರಿಶೀಲಿಸಲಾಗುತ್ತಿದೆ. ಇವುಗಳ ಪರಿಶೀಲನೆ ಬಳಿಕೆ ಅಂತಿಮ ಅಧಿಸೂಚನೆ ಹೊರಡಿಸಲಾಗುವುದು’ ಎಂದು ನ್ಯಾಯಪೀಠಕ್ಕೆ ವಿವರಿಸಿದರು.

ಇದಕ್ಕೆ ನ್ಯಾಯಪೀಠ, ‘ಬಿಬಿಎಂಪಿ ವ್ಯಾಪ್ತಿಯಲ್ಲಿನ ಅನಧಿಕೃತ ಫ್ಲೆಕ್ಸ್, ಹೋರ್ಡಿಂಗ್ಸ್ ಮತ್ತು ಅಕ್ರಮ ಜಾಹೀರಾತುಗಳನ್ನು ಆಕ್ಷೇಪಿಸಲಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳು ಹೈಕೋರ್ಟ್‌ನಲ್ಲಿ ವಿಚಾರಣಾ ಹಂತದಲ್ಲಿವೆ. ಹಾಗಾಗಿ, ಉದ್ದೇಶಿತ ಬೈ–ಲಾ ತಿದ್ದುಪಡಿ ಸಂಬಂಧ ಅಂತಿಮ ಅಧಿಸೂಚನೆ ಹೊರಡಿಸಬೇಕಾದರೆ ನ್ಯಾಯಪೀಠದ ಅನುಮತಿ ಪಡೆಯಬೇಕು’ ಎಂದು ಸೂಚಿಸಿ ವಿಚಾರಣೆಯನ್ನು ನವೆಂಬರ್ 20ಕ್ಕೆ ಮುಂದೂಡಿತು.

ಶ್ರೀರಾಮ ಸೇವಾ ಮಂಡಳಿ ವತಿಯಿಂದ ರಾಜಾಜಿನಗರದ ಶ್ರೀರಾಮಮಂದಿರದಲ್ಲಿ ನಿರ್ಮಿಸಿರುವ 63 ಅಡಿ ಎತ್ತರದ ಶ್ರೀರಾಮಾಂಜನೇಯ ಪ್ರತಿಮೆಯನ್ನು ಬುಧವಾರ ಲೋಕಾರ್ಪಣೆಗೊಳಿಸಲಾಯಿತು. ವಿಶ್ವಪ್ರಸನ್ನತೀರ್ಥ ಸ್ವಾಮೀಜಿ ಮತ್ತು ಮಾಜಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಉಪಸ್ಥಿತರಿದ್ದರು

ದಸಂಸ ಸಮಾವೇಶದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಆಗ್ರಹ

‘ಜಾತಿ ಗಣತಿ ವಿರೋಧಿಗಳನ್ನು ಕಿತ್ತುಹಾಕಿ’

ಪ್ರಜಾವಾಣಿ ವಾರ್ತೆ

ಸಮಾವೇಶದಲ್ಲಿ ಡಿಎಸ್ಎಸ್ (ಪರಿವರ್ತನವಾದ)ರಾಜ್ಯ ಪ್ರಧಾನ ಸಂಚಾಲಕ ಎಂ. ಗೋವಿಂದರಾಜ್, ಸಂಸ್ಥಾಪಕ ಅಧ್ಯಕ್ಷ ಶ್ರೀಧರ ಕಲಿವೀರ, ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಸಿ.ಎಸ್. ದ್ವಾರಕಾನಾಥ್ ಮತ್ತು ಡಿಎಸ್ಎಸ್ ಪದಾಧಿಕಾರಿಗಳು ಡಾ.ಬಿ.ಆರ್. ಅಂಬೇಡ್ಕರ್ ಪುತ್ಥಳಿಗೆ ಪುಷ್ಪ ನಮನ ಸಲ್ಲಿಸಿದರು ಪ್ರಜಾವಾಣಿ ಚಿತ್ರ

ಬೆಂಗಳೂರು: ‘ಜಾತಿವಾರು ಜನಗಣತಿ ಅಗತ್ಯ ಎಂದು ರಾಹುಲ್ ಗಾಂಧಿ ಅವರೇ ಹೇಳುತ್ತಿದ್ದಾರೆ. ಅದೇ ಪಕ್ಷದಲ್ಲಿರುವ ರಾಜ್ಯದ ನಾಯಕರು ಜಾತಿ ಗಣತಿ ವರದಿಯನ್ನು ವಿರೋಧಿಸುತ್ತಿದ್ದಾರೆ. ಕಾಂಗ್ರೆಸ್ ಇಬ್ಭಾಗವಾದರೂ ಪರವಾಗಿಲ್ಲ. ಅಂಥವರನ್ನು ಕೂಡಲೇ ಕಾಂಗ್ರೆಸ್‌ನಿಂದ ಕಿತ್ತುಹಾಕಿ’ ಎಂದು ಡಾ.ಬಿ.ಆರ್. ಅಂಬೇಡ್ಕರ್ ದಲಿತ ಸಂಘಟನೆಗಳ ಒಕ್ಕೂಟದ ಸಂಸ್ಥಾಪಕ ಅಧ್ಯಕ್ಷ ಶ್ರೀಧರ ಕಲಿವೀರ ಆಗ್ರಹಿಸಿದರು.

ದಸಂಸ ಚಳವಳಿಗೆ 50 ವರ್ಷದ ಸಂಭ್ರಮ, ಸಂವಿಧಾನದ ಸಂಪೂರ್ಣ ಅನುಷ್ಠಾನಕ್ಕಾಗಿ ಕೇಂದ್ರ ಮತ್ತು ರಾಜ್ಯ ಸರ್ಕಾರವನ್ನು ಆಗ್ರಹಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಪರಿವರ್ತನವಾದ) ಬುಧವಾರ ಹಮ್ಮಿಕೊಂಡಿದ್ದ ಕಾರ್ಯಕರ್ತರ ಸಮಾವೇಶದಲ್ಲಿ ಅವರು ಮಾತನಾಡಿದರು.

ಈ ಸರ್ಕಾರ ಕರ್ನಾಟಕ ಪರಿಶಿಷ್ಟ ಜಾತಿ (ಎಸ್‌ಸಿ) ಮತ್ತು ಪಂಗಡಗಳ (ಎಸ್‌ಟಿ) (ಕೆಲವು ಭೂಮಿಗಳ ವರ್ಗಾವಣೆ ನಿಷೇಧ- ಪಿಟಿಸಿಎಲ್) ಕಾಯ್ದೆಗೆ ತಿದ್ದುಪಡಿ ಮಾಡಿದೆ. ಪರಿಶಿಷ್ಟ ಪಂಗಡಗಳ ಉಪ ಯೋಜನೆ (ಎಸ್‌ಸಿಎಸ್‌ಪಿ) ಮತ್ತು ಪರಿಶಿಷ್ಟ ಪಂಗಡಗಳ ಉಪ ಯೋಜನೆ (ಟಿಎಸ್‌ಪಿ) ಕಾಯ್ದೆಯ ಸೆಕ್ಷನ್ 7 ‘ಡಿ’ ಅನ್ನು ರದ್ದುಮಾಡಿದೆ. ಇದೆಲ್ಲದರಿಂದ ದಲಿತರಿಗೆ ಅನುಕೂಲವಾಗಿದೆ. ಇದರೊಂದಿಗೆ ಸೆಕ್ಷನ್ 7‘ಸಿ’ ಅನ್ನೂ ರದ್ದು ಮಾಡಬೇಕು ಎಂದು ಒತ್ತಾಯಿಸಿದರು.

ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಸಿ.ಎಸ್. ದ್ವಾರಕಾನಾಥ್ ಮಾತನಾಡಿ, ‘ಗಾಂಧೀಜಿ, ಪೆರಿಯಾರ್, ಫುಲೆ, ಲೋಹಿಯಾ ಹೀಗೆ ಎಲ್ಲ ಚಿಂತಕರ ಆಶಯವನ್ನು ನಮ್ಮ ಸಂವಿಧಾನ ಹೊಂದಿದೆ. ಎಲ್ಲ ಒಳ್ಳೆಯ ಆಶಯಗಳನ್ನು ಅಂಬೇಡ್ಕರ್ ಹೊಂದಿದ್ದರಿಂದ ಇದು ಸಾಧ್ಯವಾಗಿದೆ. ಅಂಬೇಡ್ಕರ್ ಚಿಂತನೆಗೆ ಸಮಾನವಾದ ಚಿಂತನೆಯನ್ನು ಹೊಂದಿರುವ ನಾಯಕ ವಿಶ್ವದಲ್ಲಿ ಬೇರೆ ಯಾರೂ ಇಲ್ಲ’ ಎಂದು ಹೇಳಿದರು.

ದಸಂಸ (ಪರಿವರ್ತನವಾದ) ರಾಜ್ಯ ಪ್ರಧಾನ ಸಂಚಾಲಕ ಎಂ. ಗೋವಿಂದರಾಜು ಅಧ್ಯಕ್ಷತೆ ವಹಿಸಿದ್ದರು. ಅಂಬೇಡ್ಕರ್ ವಿಚಾರ ಪ್ರತಿಪಾದಕಿ ವಿನಿತಾ ಬಿ., ಅರವಿಂದ ಬೌದ್ಧ, ಸಮಿತಿಯ ಸಂಘಟನಾ ಸಂಚಾಲಕರು, ಪದಾಧಿಕಾರಿಗಳು ಭಾಗವಹಿಸಿದ್ದರು.

ಬಾಲ್ಯ ಸ್ನೇಹಿತೆ ಮನೆಯಲ್ಲಿ ಚಿನ್ನ ಕದ್ದ ಗೆಳೆಯ

ಬೆಂಗಳೂರು: ಬಾಲ್ಯ ಸ್ನೇಹಿತೆಯ ಮನೆಯಲ್ಲಿ ಚಿನ್ನಾಭರಣ ಕಳ್ಳತನ ಮಾಡಿದ್ದ ಆರೋಪದಡಿ ವ್ಯಕ್ತಿಯನ್ನು ಪುಟ್ಟೇನಹಳ್ಳಿ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಕೋಲಾರ ಜಿಲ್ಲೆಯ ಚಿರಂಜೀವಿ ಬಂಧಿತ ಆರೋಪಿ.

ಕೃತ್ಯ ನಡೆದು ಒಂದೂವರೆ ವರ್ಷದ ಬಳಿಕ ಆರೋಪಿಯನ್ನು ಬಂಧಿಸಲಾಗಿದೆ. ಆರೋಪಿಯಿಂದ ಒಟ್ಟು ₹6 ಲಕ್ಷ ಮೌಲ್ಯದ 95 ಗ್ರಾಂ. ಚಿನ್ನದ ಗಟ್ಟಿಯನ್ನು ಜಪ್ತಿ ಮಾಡಿಕೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದರು.

‘ಆರೋಪಿಯು ಸ್ನೇಹಿತೆಯಿಂದ 63 ಗ್ರಾಂ. ಚಿನ್ನಾಭರಣಗಳನ್ನು ಪಡೆದುಕೊಂಡು, ಅಂಗಡಿಯಲ್ಲಿ ಅಡಮಾನವಿಟ್ಟು ಹಣ ಪಡೆದಿದ್ದ. ಬಳಿಕ ಅಡಮಾನವಿಟ್ಟಿದ್ದ ಚಿನ್ನದ ಆಭರಣಗಳನ್ನು ಹಿಂದಿರುಗಿಸುವುದಾಗಿ ಹೇಳಿ 2023ರ ಏಪ್ರಿಲ್ 13ರಂದು ರಾತ್ರಿ ಸ್ನೇಹಿತೆಯ ಮನೆಗೆ ಬಂದಿದ್ದ. ಆ ಸಂದರ್ಭದಲ್ಲಿ ಸ್ನೇಹಿತೆ, ಆತನಿಗೆ ಉಪಚಾರ ಮಾಡಲು ಜ್ಯೂಸ್ ತೆಗೆದುಕೊಂಡು ಬರಲು ಹೋಗಿದ್ದರು. ವಾಪಸ್ ಮನೆಗೆ ಬಂದು ನೋಡಿದಾಗ ಆರೋಪಿ ಚಿರಂಜೀವಿ ಮನೆಯಲ್ಲಿದ್ದ ಚಿನ್ನದ ಓಲೆ, ಏಳು ಚಿನ್ನದ ಉಂಗುರ, ಒಂದು ಚಿನ್ನದ ಚೈನ್ ಸೇರಿ ಒಟ್ಟು 83 ಗ್ರಾಂ. ಚಿನ್ನಾಭರಣ ಕದ್ದು ಪರಾರಿಯಾಗಿದ್ದ’ ಎಂದು ಮೂಲಗಳು ತಿಳಿಸಿವೆ.

‘ಈ ಕುರಿತು ಪುಟ್ಟೇನಹಳ್ಳಿ ಪೊಲೀಸ್ ಠಾಣೆಯಲ್ಲಿ ಕಳವು ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ಪ್ರಕರಣದ ತನಿಖೆಯನ್ನು ಮುಂದುವರೆಸಿದ ಪೊಲೀಸರಿಗೆ ಆರೋಪಿಯ ಕುರಿತು ಸುಳಿವು ಸಿಕ್ಕಿರಲಿಲ್ಲ. ಆದರೆ, ಇತ್ತೀಚಿಗೆ ಕೋಲಾರದ ಮುಳಬಾಗಿಲು ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪೋಕ್ಸೊ ಪ್ರಕರಣವೊಂದರಲ್ಲಿ ಆರೋಪಿಯು ಬಂಧಿತನಾಗಿ ಜಿಲ್ಲಾ ಕಾರಾಗೃಹದಲ್ಲಿ ವಿಚಾರಣಾಧೀನ ಕೈದಿ ಆಗಿರುವ ಬಗ್ಗೆ ಪುಟ್ಟೇನಹಳ್ಳಿ ಠಾಣೆ ಪೊಲೀಸರಿಗೆ ಮಾಹಿತಿ ಸಿಕ್ಕಿತ್ತು. ಬಾಡಿ ವಾರಂಟ್ ಮೇಲೆ ಆರೋಪಿಯನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಚಿನ್ನಾಭರಣಗಳನ್ನು ಕಳ್ಳತನ ಮಾಡಿರುವುದಾಗಿ ತಪ್ಪೊಪ್ಪಿಕೊಂಡಿದ್ದಾನೆ’ ಎಂದು ತಿಳಿಸಿದ್ದಾರೆ.

‘ಆರೋಪಿಯು ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ಪುಂಗನೂರು ಪಟ್ಟಣ ಹಾಗೂ ವಿ.ಕೋಟಾದಲ್ಲಿರುವ ಜ್ಯುವೆಲ್ಲರಿ ಅಂಗಡಿಗಳಲ್ಲಿ ಮಾರಾಟ ಮಾಡಿದ್ದ’ ಎಂದು ಪೊಲೀಸರು ತಿಳಿಸಿದರು.

ತಂಗಿಗೆ ಬ್ಲ್ಯಾಕ್‌ಮೇಲ್ ಮಾಡಿದ ಅಕ್ಕನ ವಿರುದ್ಧ ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ತನ್ನ ಸ್ನೇಹಿತನ ಜೊತೆ ಸೇರಿ ತಂಗಿಯನ್ನು ಬ್ಲ್ಯಾಕ್‌ಮೇಲ್ ಮಾಡಿದ ಆರೋಪದ ಮೇಲೆ ಸಂತ್ರಸ್ತೆಯ ಅಕ್ಕ, ಆಕೆಯ ಸ್ನೇಹಿತ ಮತ್ತು ಸಂತ್ರಸ್ತೆಯ ಸ್ನೇಹಿತನ ವಿರುದ್ಧ ಕೆಂಗೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘37 ವರ್ಷದ ಮಹಿಳೆಯೊಬ್ಬರು ನೀಡಿದ ದೂರಿನ ಮೇರೆಗೆ ಮೂವರ ವಿರುದ್ಧ ಎಫ್ಐಆರ್ ದಾಖಲಿಸಿಕೊಳ್ಳಲಾಗಿದೆ. ಮಹಿಳೆಯು ವಿವಾಹಿತಳಾಗಿದ್ದು, ತನ್ನ ಬಾಲ್ಯ ಸ್ನೇಹಿತನ ಜೊತೆಗೆ ಪ್ರೀತಿ ಮುಂದುವರೆಸಿದ್ದರು. 2022ರಿಂದ 2023ರವರೆಗೆ ಕೆಂಗೇರಿಯಲ್ಲಿರುವ ತನ್ನ ಅಕ್ಕನ ಮನೆಯಲ್ಲಿ ತನ್ನ ಸ್ನೇಹಿತನನ್ನು ಹಲವು ಬಾರಿ ಭೇಟಿಮಾಡಿದ್ದರು. ಆ ಸಂದರ್ಭದಲ್ಲಿ ಇಬ್ಬರ ಮಧ್ಯೆ ದೈಹಿಕ ಸಂಪರ್ಕ ನಡೆದಿತ್ತು’ ಎಂದು ಪೊಲೀಸರು ತಿಳಿಸಿದರು.

‘ಸಂತ್ರಸ್ತೆಯ ಸ್ನೇಹಿತ ವಿಡಿಯೊ ಕರೆ ಮಾಡುತ್ತಿದ್ದ. ಈ ಸಂದರ್ಭದಲ್ಲಿ ನಗ್ನವಾಗಿದ್ದ ವಿಡಿಯೊ ಕಾಲ್‌ವೊಂದನ್ನು ರೆಕಾರ್ಡ್ ಮಾಡಿಕೊಂಡಿದ್ದ. ಆತ ಅದನ್ನು ಸಂತ್ರಸ್ತೆಯ ಅಕ್ಕ ಹಾಗೂ ಆಕೆಯ ಸ್ನೇಹಿತನಿಗೆ ಕಳುಹಿಸಿದ್ದಾನೆ. ನಂತರ ಮೂವರೂ ಆರೋಪಿಗಳು ಸೇರಿ ₹80 ಸಾವಿರ ನೀಡುವಂತೆ ಸಂತ್ರಸ್ತೆಗೆ ಬೇಡಿಕೆ ಇಟ್ಟಿದ್ದರು. ಹಣ ನೀಡದಿದ್ದರೆ ವಿಡಿಯೊಗಳನ್ನು ಸಾಮಾಜಿಕ ಜಾಲತಾಣಗಳಲ್ಲಿ ಬಹಿರಂಗಪಡಿಸುವುದಾಗಿ ಬೆದರಿಸಿದ್ದರು’ ಎಂಬ ಉಲ್ಲೇಖ ಎಫ್ಐಆರ್‌ನಲ್ಲಿದೆ.

‘ಪೊಲೀಸರಿಗೆ ದೂರು ನೀಡಿದರೆ ನಿನ್ನ ಮಕ್ಕಳನ್ನು ಕೊಲೆ ಮಾಡುತ್ತೇವೆಂದು ಬೆದರಿಸಿದ್ದಾರೆ’ ಎಂದೂ ಎಫ್ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಅಪರಿಚಿತ ವ್ಯಕ್ತಿಯ ಕೊಲೆ

ಬೆಂಗಳೂರು: ಅಪರಿಚಿತ ವ್ಯಕ್ತಿಯೊಬ್ಬರನ್ನು ಚಾಕುವಿನಿಂದ ಇರಿದು ಕೊಲೆ ಮಾಡಿರುವ ಘಟನೆ ಬಸವೇಶ್ವರನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ನಡೆದಿದೆ.

‘ಮಂಜುನಾಥನಗರದ ವೆಸ್ಟ್ ಆಫ್ ಕಾರ್ಡ್ ರಸ್ತೆ ಮೋದಿ ಬ್ರಿಡ್ಜ್‌ನ ಹತ್ತಿರದ ಶಿವನಹಳ್ಳಿ ಸರ್ವೀಸ್ ರಸ್ತೆಯಲ್ಲಿ ಸುಮಾರು 40 ರಿಂದ 45 ವರ್ಷದ ವ್ಯಕ್ತಿಯನ್ನು ದುಷ್ಕರ್ಮಿಗಳು ಮಾರಕಾಸ್ತ್ರಗಳಿಂದ ಹಲ್ಲೆ ನಡೆಸಿ, ಕೊಲೆ ಮಾಡಿದ್ದಾರೆ. ಅಪರಿಚಿತರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಳ್ಳಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಟರ್ಕಿ: ರಕ್ಷಣಾ ಕಂಪನಿ ಮೇಲೆ ದಾಳಿ, 4 ಸಾವು

ಅಂಕಾರಾ(ಎಪಿ): ಟರ್ಕಿಯ ರಕ್ಷಣಾ ಉಪಕರಣಗಳ ಉತ್ಪಾದನಾ ಕಂಪನಿ ಟಿಯುಎಸ್ಎಎಸ್ ಗುರಿಯಾಗಿಸಿ ಉಗ್ರರು ಬುಧವಾರ ನಡೆಸಿದ ದಾಳಿಯಲ್ಲಿ ನಾಲ್ವರು ಮೃತಪಟ್ಟು, ಇತರ 14 ಮಂದಿ ಗಾಯಗೊಂಡಿದ್ದಾರೆ.

‘ಭದ್ರತಾ ಪಡೆಗಳು ನಡೆಸಿದ ಪ್ರತಿದಾಳಿಯಲ್ಲಿ ಇಬ್ಬರು ಉಗ್ರರನ್ನು ಹೊಡೆದುರುಳಿಸಲಾಗಿದೆ’ ಎಂದು ಗೃಹ ಸಚಿವ ಅಲಿ ಯರ್ಲಿಕಾಯಾ ತಿಳಿಸಿದ್ದಾರೆ.

ಟರ್ಕಿ ರಾಜಧಾನಿ ಅಂಕಾರಾ ಹೊರವಲಯದ ಕಹ್ರಾಮಂಕಜಾನ್ ನಗರದಲ್ಲಿ ಈ ದಾಳಿ ನಡೆದಿದೆ.

ಪುರಸಭಾ ಕಾರ್ಯಾಲಯ, ಕೋನಪ್ಪನ ಅಗ್ರಹಾರ

ಬೆಂಗಳೂರು ದಕ್ಷಿಣ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ – 560100.
ಇ–ಮೇಲ್: ka.konappanaagrahara.tmc@gmail.com

ಸಂಖ್ಯೆ: ಪು.ಸ/ಕೋ.ಅ/ಮ್ಯಾ.ಸ್ಕ್ಯಾ/ಸಿ.ಆರ್/01/2024–25 ದಿನಾಂಕ: 23.10.2024

ಸಾರ್ವಜನಿಕ ಪ್ರಕಟಣೆ

ನಗರಾಭಿವೃದ್ಧಿ ಇಲಾಖೆ ಮತ್ತು ಸಮಾಜ ಕಲ್ಯಾಣ ಇಲಾಖೆಯ ಸಹಯೋಗದಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಸಮೀಕ್ಷೆ (ನಗರ).

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ರಾಜ್ಯ ಸರ್ಕಾರಕ್ಕೆ ಮ್ಯಾನ್ಯುಯಲ್ ಸ್ಕ್ಯಾವೆಂಜರ್ ಸಮೀಕ್ಷೆ (ನಗರ)ಯನ್ನು ಕೋನಪ್ಪನ ಅಗ್ರಹಾರ ಪುರಸಭೆ ವ್ಯಾಪ್ತಿಯಲ್ಲಿ ದಿನಾಂಕ 24–10–2024 ರಿಂದ 12–11–2024 ರವರೆಗೆ ಹಮ್ಮಿಕೊಳ್ಳಲಾಗಿದ್ದು The Prohibition of Employment as Manual Scavengers and their Rehabilitation Act,2013 ರ ಸೆಕ್ಷನ್ 2(1)(ಜಿ)ರಲ್ಲಿ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗಳ ಕುರಿತು ವ್ಯಾಖ್ಯಾನಿಸಿರುವಂತೆ ಈ ಕೆಳಕಂಡ ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗೆ ಕಾರ್ಯದಲ್ಲಿ ದೈಹಿಕವಾಗಿ ತೊಡಗಿರುವವರು ಅಂದರೆ,

(ಎ) ಒಣ ಶೌಚಾಲಯಗಳನ್ನು ಸ್ವಚ್ಛಗೊಳಿಸುವುದು. (ಬಿ) ಅನೈರ್ಮಲ್ಯ ಶೌಚಾಲಯಗಳಿಂದ ಹೊರಹೋಗಿ ತೆರೆದ ಚರಂಡಿಯಲ್ಲಿ ಸಂಗ್ರಹವಾಗುವ ಮಾನವ ಮಲವನ್ನು ಸ್ವಚ್ಛಗೊಳಿಸುವುದು. (ಸಿ) ಶೌಚಾಲಯದ ಮಲಗುಂಡಿಗಳನ್ನು ದೈಹಿಕವಾಗಿ ಸ್ವಚ್ಛಗೊಳಿಸುವುದು.

ಈ ಮೇಲಿನ ವರ್ಗದಲ್ಲಿನ ಯಾವುದೇ ವ್ಯಕ್ತಿಗಳು ಇದ್ದಲ್ಲಿ, ನೊಂದಣಿ ಮಾಡಿಸಲು ಸಲ್ಲಿಸಬೇಕಾದ ಮಾಹಿತಿ ಮತ್ತು ದಾಖಲೆಗಳು:–

1. ಪಾಸ್‌ಪೋರ್ಟ್ ಅಳತೆಯ ಒಂದು ಭಾವಚಿತ್ರ. 2. ಕುಟುಂಬದ ಸದಸ್ಯರುಗಳನ್ನು ಒಳಗೊಂಡ ಒಂದು ಭಾವಚಿತ್ರ (ಅಳತೆ 6*4). 3. ಬ್ಯಾಂಕ್ ಖಾತೆಯ ಪಾಸ್‌ಬುಕ್‌ನ ಮುಖಪುಟದ ಪ್ರತಿ (ಮೂಲ ಪುಸ್ತಕವನ್ನು ಸಹ ತರುವುದು). 4. ಆಧಾರ್ ಪ್ರತಿ (ಮೂಲ ಪ್ರತಿಯನ್ನು ಸಹ ತರುವುದು). 5. ಮ್ಯಾನ್ಯುಯಲ್ ಸ್ಕ್ಯಾವೆಂಜರ್‌ಗೆ ಕಾರ್ಯ ನಿರ್ವಹಿಸುತ್ತಿರುವ ಅನೈರ್ಮಲ್ಯ ಶೌಚಾಲಯ ಸ್ಥಳದ ವಿವರ. ಕೋನಪ್ಪನ ಅಗ್ರಹಾರ ಪುರಸಭೆಯ ಅರ್ಜಿ ಸ್ವೀಕೃತಿ ಕೇಂದ್ರದಲ್ಲಿ ಅಗತ್ಯ ದಾಖಲೆಗಳೊಂದಿಗೆ ಹೆಸರನ್ನು ನೊಂದಾಯಿಸಿಕೊಳ್ಳುವುದು. ಹೆಚ್ಚಿನ ವಿವರಗಳಿಗೆ ಈ ಕಛೇರಿಯ ವೇಳೆಯಲ್ಲಿ ಕೋನಪ್ಪನ ಅಗ್ರಹಾರ ಪುರಸಭೆಯ ಆರೋಗ್ಯ ಶಾಖೆಯನ್ನು ಸಂಪರ್ಕಿಸುವುದು.

ಸಹಿ/– ಮುಖ್ಯಾಧಿಕಾರಿಗಳು, ಪುರಸಭೆ, ಕೋನಪ್ಪನ ಅಗ್ರಹಾರ. ಸಹಿ/– ಆಡಳಿತಾಧಿಕಾರಿಗಳು, ಪುರಸಭೆ, ಕೋನಪ್ಪನ ಅಗ್ರಹಾರ.

ವಾಸಾಸಂಇ/ವಾ.ಪ್ರ/2725/ಅಡ್ವರ್ಟೋ/2024–25

ಪುರಸಭೆ ಕಾರ್ಯಾಲಯ, ಹುಣಸಮಾರನಹಳ್ಳಿ

ಯಲಹಂಕ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ–562157
ಇ–ಮೇಲ್: itstaff_ulb_hmhalli@gmail.com ದೂ: 080–23901864

ಸಂ: ಹು.ಪು/ತಾ.ಶಾ/ಸಿ.ಆರ್/07/2024–25 ದಿನಾಂಕ: 23–10–2024

ಟೆಂಡರ್ ಪ್ರಕಟಣೆ

(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಹುಣಸಮಾರನಹಳ್ಳಿ ಪುರಸಭಾ ವ್ಯಾಪ್ತಿಯಲ್ಲಿ 2022–23ನೇ ಸಾಲಿನ 15ನೇ ಹಣಕಾಸು ಯೋಜನೆಯ ಉಳಿಕೆ ಅನುದಾನ ಮತ್ತು ಪುರಸಭಾ ನಿಧಿ ಅನುದಾನದಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲು ಲೋಕೋಪಯೋಗಿ ಇಲಾಖೆ ಮತ್ತು ವಿದ್ಯುತ್ ಪರಿವೀಕ್ಷಣಾಲಯ ಇಲಾಖೆಯಲ್ಲಿ ನೊಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರಿಂದ ಕಾಮಗಾರಿಗಳನ್ನು ನಿರ್ವಹಿಸಲು ಮೊಹರಾದ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ವರ್ಗ
1	DMA/2024-25/WS/WORK_INDENT27698	26.50	ಸಾಮಾನ್ಯ
2	DMA/2024-25/BD/WORK_INDENT31140	3.30	ಸಾಮಾನ್ಯ
3	DMA/2024-25/OW/WORK_INDENT31138	6.20	ಸಾಮಾನ್ಯ
4	DMA/2024-25/OW/WORK_INDENT31147	21.85	ಸಾಮಾನ್ಯ

ಟೆಂಡರ್ ಸಲ್ಲಿಸುವ ವಿವರಗಳು: (1) ಆಕ್ಷೇಪಣೆ / ಮಾಹಿತಿಯನ್ನು ಸಲ್ಲಿಸಲು ದಿನಾಂಕ: **06.11.2024ರ ಸಂಜೆ 5.00 ಗಂಟೆಯವರೆಗೆ.** (2) ಕಾಮಗಾರಿಗೆ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: **07.11.2024ರ ಸಂಜೆ 5.00 ಗಂಟೆಯವರೆಗೆ.** (3) ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ: **08.11.2024ರ ಸಂಜೆ 5.15 ಗಂಟೆಯ ನಂತರ.** (4) ಟೆಂಡರ್‌ನ ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **11.11.2024ರ ಬೆಳಗ್ಗೆ 11.00 ಗಂಟೆಗೆ.** ಹೆಚ್ಚಿನ ವಿವರಗಳಿಗೆ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸಿ ತಿಳಿದುಕೊಳ್ಳುವುದು ಮತ್ತು ಯಾವುದೇ ತಿದ್ದುಪಡಿ / ಬದಲಾವಣೆಯಿದ್ದಲ್ಲಿ ಕೆ.ಪಿ.ಪಿ ಪೋರ್ಟಲ್ ವಿಳಾಸ https://kppp.karnataka.gov.in ಮೂಲಕ ಮಾತ್ರ ತಿಳಿಸಲಾಗುವುದು.

ವಾಸಾಸಂಇ/ವಾಪ್ರ/2710/ಸ್ಕ್ಯಾನ್/2024–25

ಸಹಿ/– ಮುಖ್ಯಾಧಿಕಾರಿಗಳು, ಪುರಸಭೆ, ಹುಣಸಮಾರನಹಳ್ಳಿ ಸಹಿ/– ಆಡಳಿತಾಧಿಕಾರಿಗಳು, ಪುರಸಭೆ, ಹುಣಸಮಾರನಹಳ್ಳಿ

ಕರ್ನಾಟಕ ಗೃಹ ಮಂಡಳಿ

#104, ಹೆಚ್.ಬಿ–2, ಸೂರ್ಯನಗರ ಸಮನ್ವಯ ಕಛೇರಿ, ಚಂದಾಪುರ, ಆನೇಕಲ್ ಮೈನ್ ರೋಡ್, ಬೆಂಗಳೂರು. ದೂ: 080–29600401

ಸಂಖ್ಯೆ: ಕಗೃಮಂ/ಕಾಅ/ಸಕಾಅ/ಸಕಂಅ/ಸೂನ/ಬೆಂ/227/2024–25 ದಿನಾಂಕ: 05.10.2024

ಪ್ರಕಟಣೆ

ಬೆಂಗಳೂರು ನಗರ, ಆನೇಕಲ್ ತಾಲ್ಲೂಕು, ಕರ್ನಾಟಕ ಗೃಹ ಮಂಡಳಿ ಸೂರ್ಯನಗರ 1ನೇ ಹಂತದ ಬಡಾವಣೆಯಲ್ಲಿ **ಎಲ್ಐಜಿ–2 ವರ್ಗದ ನಿವೇಶನ ಸಂಖ್ಯೆ: 226** ಸ್ವತ್ತನ್ನು **ಶ್ರೀ ಹೇಮೇಶಪ್ಪ. ಕೆ.ಪಿ.** ಇವರಿಗೆ ದಿನಾಂಕ: 31.05.2007ರಂದು ಹಂಚಿಕೆ ಮಾಡಲಾಗಿರುತ್ತದೆ. ಶ್ರೀ ಹೇಮೇಶಪ್ಪ. ಕೆ.ಪಿ. ರವರು ದಿನಾಂಕ: 03.12.2021 ರಂದು ಮರಣ ಹೊಂದಿದ್ದು, ಇವರ ಪತ್ನಿಯಾದ ಶ್ರೀಮತಿ ಲಲಿತಮ್ಮ ಪಾಳ್ಯದ ರವರು ಕಂದಾಯ ದಾಖಲಾತಿಗಳೊಂದಿಗೆ ಮನವಿ ಸಲ್ಲಿಸಿ, ಸದರಿ ನಿವೇಶನವನ್ನು ಅವರ ಹೆಸರಿಗೆ ವರ್ಗಾವಣೆ ಮಾಡುವಂತೆ ಕೋರಿರುತ್ತಾರೆ. ನೀಡಿರುವ ದಾಖಲಾತಿಯನ್ವಯ ಶ್ರೀಮತಿ ಲಲಿತಮ್ಮ ಪಾಳ್ಯದ ಇವರ ಹೆಸರಿಗೆ ವರ್ಗಾವಣೆ ಮಾಡಲು ಈ ಪ್ರಕಟಣೆ ಹೊರಡಿಸಿದ್ದು, ಈ ಪ್ರಕಟಣೆ ದಿನಪತ್ರಿಕೆಯಲ್ಲಿ ಪ್ರಕಟಣೆಗೊಂಡ ದಿನಾಂಕದಿಂದ **15 ದಿನಗಳೊಳಗಾಗಿ** ಸಂಬಂಧಿಸಿದ ವಾರಸುದಾರರಿಂದ ಸ್ವತ್ತು ವರ್ಗಾವಣೆ ಸಂಬಂಧ ಯಾವುದೇ ತಕರಾರು/ಆಕ್ಷೇಪಣೆ ಇದ್ದಲ್ಲಿ ಸೂಕ್ತ ದಾಖಲೆಗಳೊಂದಿಗೆ ತಕರಾರು ಅರ್ಜಿಯನ್ನು **ಸಹಾಯಕ ಕಾರ್ಯಪಾಲಕ ಅಭಿಯಂತರರು, ಸೂರ್ಯನಗರ 2ನೇ ಹಂತ, ಫ್ಲ್ಯಾಟ್ ಸಂಖ್ಯೆ 104, ಹೆಚ್.ಬಿ–2, ಸೂರ್ಯನಗರ 1ನೇ ಹಂತ, ಚಂದಾಪುರ, ಆನೇಕಲ್ ರಸ್ತೆ, ಬೆಂಗಳೂರು–560081,** ಇಲ್ಲಿ ಸಲ್ಲಿಸಬಹುದಾಗಿದೆ. ನಿಗದಿತ ದಿನಾಂಕದೊಳಗೆ ಯಾವುದೇ ಆಕ್ಷೇಪಣೆ ಬಾರದಿದ್ದಲ್ಲಿ ಸದರಿ ಸ್ವತ್ತನ್ನು ಮೃತರ ಪತ್ನಿಯಾದ ಸುಮಾರು 60 ವರ್ಷ ವಯಸ್ಸುಳ್ಳ **ಶ್ರೀಮತಿ ಲಲಿತಮ್ಮ ಪಾಳ್ಯದ, #17, 2ನೇ ಕ್ರಾಸ್, ಸನ್‌ರೈಸ್ ಕಾಲೋನಿ, ಚೋಳನಾಯಕನಹಳ್ಳಿ, ಬೆಂಗಳೂರು–560032** ಇವರಿಗೆ ವರ್ಗಾವಣೆ ಮಾಡಿಕೊಡಲಾಗುವುದೆಂದು ಹಾಗೂ ನಂತರ ಬರುವ ಯಾವುದೇ ತಕರಾರು/ಮನವಿಗಳನ್ನು ಪರಿಗಣಿಸಲಾಗುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು
ಕಗೃಮಂ, ಸೂರ್ಯನಗರ ಸಮನ್ವಯ ಕಛೇರಿ–1, ಬೆಂಗಳೂರು.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ

ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020.

ಸಂಖ್ಯೆ:ಬಿಡಿಎ/ಆ/ಉಕಾ–1/ಟೆಂಡರ್/702/2024–25 ದಿನಾಂಕ: 22.10.2024

ಪ್ರಕಟಣೆ

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು ಮಾನವ ಸಂಪನ್ಮೂಲ ಸೇವೆಗಳನ್ನು ಅಂದರೆ ಸಹಾಯಕ ಅಭಿಯಂತರರು (ಸಿವಿಲ್), ನೋಡಲ್ ಅಧಿಕಾರಿ ಅಡ್ವೊಕೇಟ್ಸ್, ಸೇವಾ ವಿಚಾರಗಳ ಬಗ್ಗೆ ಸಲಹೆಗಾರರು, ಹಣಕಾಸು ವ್ಯವಸ್ಥಾಪಕರು, ಲೆಕ್ಕಪತ್ರ ಸಹಾಯಕರು, ಮಾರ್ಕೆಟಿಂಗ್ ಸಹಾಯಕರು, ಪ್ರಥಮ ದರ್ಜೆ ಸಹಾಯಕರು, ಡೇಟಾ ಎಂಟ್ರಿ ಆಪರೇಟರ್‌ಗಳು, ಗ್ರೂಪ್–‘ಡಿ’ ಸಿಬ್ಬಂದಿ ಮತ್ತು ಸೆಕ್ಯೂರಿಟಿ ಗಾರ್ಡ್‌ಗಳ ಸೇವೆಗಳನ್ನು ಒದಗಿಸಲು ಅರ್ಹ ಸೇವಾ ಪೂರೈಕೆದಾರರುಗಳಿಂದ ದ್ವಿ ಲಕೋಟೆ ಪದ್ಧತಿಯಲ್ಲಿ ಪ್ರಸ್ತಾವನೆಗಳನ್ನು ಆಹ್ವಾನಿಸಿದೆ.

ಪ್ರಸ್ತಾವನೆ ಕೋರಿಕೆಗಳ (ಆರ್‌ಎಫ್‌ಪಿ) ವಿವರಗಳು: (1) ಆರ್‌ಎಫ್‌ಪಿ ಉಲ್ಲೇಖ ಸಂಖ್ಯೆ: ಬಿಡಿಎ/2024–25/ಎಸ್‌ಇ0015 (2) ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್‌ನಿಂದ ಆರ್‌ಎಫ್‌ಪಿ ದಸ್ತಾವೇಜುಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ಪ್ರಾರಂಭಿಕ ದಿನಾಂಕ: **22.10.2024 ರ ನಂತರದಿಂದ.** (3) ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಆನ್‌ಲೈನ್ ವಿಚಾರಣೆಗಳನ್ನು ಅಪ್‌ಲೋಡ್ ಮಾಡುವ ಕಡೆಯ ದಿನಾಂಕ ಮತ್ತು ಸಮಯ: **29.10.2024 ರಂದು ಸಂಜೆ 5.00 ಗಂಟೆಗೆ.** (4) ಬಿಡ್‌ಪೂರ್ವ ಸಭೆಯ ದಿನಾಂಕ ಮತ್ತು ಸಮಯ: **30.10.2024 ರಂದು ಬೆಳಿಗ್ಗೆ 11.00 ಗಂಟೆಗೆ** ಉಪ ಕಾರ್ಯದರ್ಶಿ–1 ಇವರ ಕಛೇರಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020 ಇಲ್ಲಿ. (5) ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್‌ನಲ್ಲಿ ಆರ್ ಎಫ್ ಪಿ ಅಪ್‌ಲೋಡ್ ಮಾಡುವ ಕಡೇ ದಿನಾಂಕ ಮತ್ತು ಸಮಯ: **22.11.2024 ಸಂಜೆ 5.00 ಗಂಟೆಗೆ.** (6) ಆರ್.ಎಫ್.ಪಿ ಅರ್ಜಿಯನ್ನು ಆನ್‌ಲೈನ್‌ನಲ್ಲಿ ತೆರೆಯುವ ದಿನಾಂಕ ಮತ್ತು ಸಮಯ: **25.11.2024, ಬೆಳಿಗ್ಗೆ 11.00 ಗಂಟೆಗೆ.** (7) ಆರ್ ಎಫ್ ಪಿ ತೆರೆಯುವ ಸ್ಥಳ: ಆನ್‌ಲೈನ್‌ನಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ https://kppp.karnataka.gov.in (8) ಪತ್ರ ವ್ಯವಹಾರದ ವಿಳಾಸ: ಉಪಕಾರ್ಯದರ್ಶಿ–1, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020, ದೂರವಾಣಿ ಸಂಖ್ಯೆ: **080–23442273/23442274/23445005** web: kbda.karnataka.gov.in

ಹೆಚ್ಚಿನ ವಿವರಗಳಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆ ಪೋರ್ಟಲ್ (https://kppp.karnataka.gov.in) ಗೆ ಭೇಟಿನೀಡಿ ಅಥವಾ ಉಪ ಕಾರ್ಯದರ್ಶಿ–1 ಇವರ ಕಛೇರಿ, ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಟಿ. ಚೌಡಯ್ಯ ರಸ್ತೆ, ಕುಮಾರ ಪಾರ್ಕ್ ಪಶ್ಚಿಮ, ಬೆಂಗಳೂರು–560020, ಇವರನ್ನು ಸಂಪರ್ಕಿಸಿ.

ಸಹಿ/– ಉಪ ಕಾರ್ಯದರ್ಶಿ–1,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ, ಬೆಂಗಳೂರು.

ಜಿಲ್ಲಾ ಪಂಚಾಯತ್ ಕೋಲಾರ

ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ

ಕಾರ್ಯಪಾಲಕ ಅಭಿಯಂತರರವರ ಕಛೇರಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ವಿಭಾಗ, ಕೋಲಾರ–563101. ದೂರವಾಣಿ ಸಂಖ್ಯೆ: 08152–222570, ಇ–ಮೇಲ್ ವಿಳಾಸ: eepredkolar1@gmail.com

ಅಲ್ಪಾವದಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ ಟೆಂಡರ್ ಪ್ರಕಟಣೆ ಸಂಖ್ಯೆ: 08/2024–25 ದಿ: 22.10.2024

ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ KW-I & II ರ ನಿಬಂಧನೆಗೊಳಪಟ್ಟಂತೆ ಟೆಂಡರ್‌ಗಳಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಕರ್ನಾಟಕ ಪಾರದರ್ಶಕತೆ ಅಧಿನಿಯಮ 2000ರ ಪ್ರಕಾರ ಐಟಂವಾರು ಇ–ಪ್ರಕ್ಯೂರ್‌ಮೆಂಟ್ ಏಕ–ಲಕೋಟೆ ಪದ್ಧತಿಯಲ್ಲಿ **(Single Cover System)** ಸೂಕ್ತ ದರ್ಜೆಯಲ್ಲಿ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿಸಿರುವ ಅಧಿಕೃತ ಗುತ್ತಿಗೆದಾರರಿಂದ ಕೋಲಾರ ಜಿಲ್ಲೆಯ ಕೋಲಾರ, ಮಾಲೂರು, ಬಂಗಾರಪೇಟೆ, ಕೆಜಿಎಫ್, ಶ್ರೀನಿವಾಸಪುರ ತಾಲ್ಲೂಕುಗಳಿಗೆ ಸಂಬಂಧಿಸಿದಂತೆ ಒಟ್ಟು 24 ಸಂಖ್ಯೆ ಕಾಮಗಾರಿಗಳಿಗೆ ಟೆಂಡರುಗಳನ್ನು ಆಹ್ವಾನಿಸುತ್ತಿದ್ದು, **ಟೆಂಡರ್‌ಗಿಟ್ಟ ಮೊತ್ತ ಸರಾಸರಿ ರೂ. 5.00 ಲಕ್ಷ ರಿಂದ 50.00 ಲಕ್ಷಗಳಾಗಿದ್ದು, ಸದರಿ ಕಾಮಗಾರಿಗಳಿಗೆ ಟೆಂಡರುಗಳನ್ನು ಕರ್ನಾಟಕ ಸರ್ಕಾರದ ಅಧಿಕೃತ ವೆಬ್‌ಸೈಟ್ https://kppp.karnataka.gov.in/ ಮುಖಾಂತರ ಇ–ಟೆಂಡರ್‌ಗಳಲ್ಲಿ ಭಾಗವಹಿಸಲು ಕೋರಲಾಗಿದೆ.** ಕೆಪಿಪಿಪಿ ಮುಖಾಂತರ ಟೆಂಡರ್ ಅರ್ಜಿ ಸಲ್ಲಿಸುವ ಹಾಗೂ ಷೆಡ್ಯೂಲ್–ಬಿಗಳನ್ನು ವೆಬ್‌ಸೈಟ್‌ನಲ್ಲಿ ಭರ್ತಿ ಮಾಡಿದ ಫಾರಂಗಳನ್ನು ಆರೋಹಿಸಲು ಸಲ್ಲಿಸುವ ಕೊನೆಯ **ದಿನಾಂಕ: 23.11.2024 ರಿಂದ 06.11.2024 ರ ಸಂಜೆ 4.00 ರವರೆಗೆ.** (2) ಟೆಂಡರ್‌ಗಳನ್ನು ಕೆ.ಪಿ.ಪಿ–ಪ್ರೋಟಾಲ್‌ನಲ್ಲಿ ತೆರೆಯುವ **ದಿನಾಂಕ: 08.11.2024 ರಂದು ಬೆಳಗ್ಗೆ 11.30 ಗಂಟೆಗೆಂದು ನಿಗದಿ ಪಡಿಸಲಾಗಿದೆ.** ಸದರಿ ಟೆಂಡರ್ ಅಧಿಸೂಚನೆಯ ವಿವರಗಳನ್ನು ಪಡೆಯಲು ಈ ವಿಭಾಗ ಕಛೇರಿಯ ಕೆಲಸದ ದಿನಗಳಂದು ಕೆಲಸದ ವೇಳೆಯಲ್ಲಿ ಸಂಪರ್ಕಿಸಬಹುದಾಗಿದೆ. ಟೆಂಡರ್ ಡೌನ್‌ಲೋಡ್ ಮತ್ತು ಅಪ್‌ಲೋಡ್‌ಗೆ ಸಂಬಂಧಿಸಿದಂತೆ ಕೆಪಿಪಿಪಿ ಸಹಾಯವಾಣಿ ದೂರವಾಣಿ ಸಂಖ್ಯೆ: **+91 8046010000 & +91 8022631200, 080–22230960 & 22234115** ಅನ್ನು ಸಂಪರ್ಕಿಸಲು ಕೋರಲಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಪಂ.ರಾ.ಇಂ. ವಿಭಾಗ, ಕೋಲಾರ

ವಾಸಾಸಂಇ/ಕೋಲಾರ/ಆರ್.ಓ.ಸಂಖ್ಯೆ:284/ಕೆಎಸ್ಎಂಸಿಎ/2024–25

ರಾಷ್ಟ್ರೀಯ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ಸಂಸ್ಥೆ

ಗ್ರಾಮೀಣಾಭಿವೃದ್ಧಿ ಸಚಿವಾಲಯ, ಭಾರತ ಸರ್ಕಾರ

5ನೇ ಮಹಡಿ, 15–ಎನ್‌ಬಿಸಿಸಿ ಟವರ್, ಭಿಕಾಜಿ ಕಾಮಾ ಪ್ಲೇಸ್, ನವದೆಹಲಿ–110066

ಭಾರತ ಸರ್ಕಾರದ ಒಂದು ಕೇಂದ್ರಿಯ ಪ್ರಾಯೋಜಿತ ಕಾರ್ಯಕ್ರಮವಾಗಿರುವ ಪ್ರಧಾನ ಮಂತ್ರಿ ಗ್ರಾಮ್ ಸಡಕ್ ಯೋಜನಾ (ಪಿಎಂಜಿಎಸ್‌ವೈ) ಎಂಬ ಯೋಜನೆಯು, ದೇಶದ ಗ್ರಾಮೀಣ ಪ್ರದೇಶಗಳಿಗೆ ಉತ್ತಮ ಗುಣಮಟ್ಟದ ರಸ್ತೆ ಸಂಪರ್ಕ ಒದಗಿಸುತ್ತದೆ.

ಗ್ರಾಮೀಣಾಭಿವೃದ್ಧಿ ಸಚಿವಾಲಯದ (ಎಂಒಆರ್‌ಡಿ) ಅಡಿಯಲ್ಲಿನ ರಾಷ್ಟ್ರೀಯ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ಸಂಸ್ಥೆ (ಎನ್‌ಆರ್‌ಐಡಿಎ) ಇವರು, ಸದರಿ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ರಾಜ್ಯಗಳಿಗೆ/ಕೇಂದ್ರಾಡಳಿತ ಪ್ರದೇಶಗಳಿಗೆ ತಾಂತ್ರಿಕ ಮತ್ತು ನಿರ್ವಹಣಾ ನೆರವು ನೀಡುತ್ತಾರೆ. ಇದೀಗ ಎನ್‌ಆರ್‌ಐಡಿಎ ಇವರು ಕೆಳಕಂಡ ವಿವರಗಳ ಪ್ರಕಾರ ಡೆಪ್ಯುಟೇಶನ್ ಆಧಾರದಲ್ಲಿ ನೇಮಕಾತಿಗಾಗಿ ಅರ್ಜಿಗಳನ್ನು ಆಹ್ವಾನಿಸಿದ್ದಾರೆ:

ಕ್ರ.ಸಂ.	ಹುದ್ದೆಯ ಹೆಸರು	ವೇತನ ಹಂತ (7ನೇ ಸಿಪಿಸಿ ಪ್ರಕಾರ)	ನೇಮಕಾತಿ ವಿಧಾನ	ಹುದ್ದೆಗಳ ಸಂಖ್ಯೆ
1.	ಸಹಾಯಕ ನಿರ್ದೇಶಕ (ಎಫ್&ಎ)	11	ಡೆಪ್ಯುಟೇಶನ್	02*

*ಖಾಲಿಹುದ್ದೆಗಳ ಸಂಖ್ಯೆಯು ವಾಸ್ತವಿಕ ಅವಶ್ಯಕತೆಯ ಮೇರೆಗೆ ಬದಲಾಗಬಹುದು.

ಎನ್‌ಆರ್‌ಐಡಿಎ ಇವರಲ್ಲಿ ಅರ್ಜಿ ಸ್ವೀಕರಿಸುವ ಕೊನೆಯ ದಿನಾಂಕ 08.12.2024

ವಿವರವಾದ ಅರ್ಹತಾ ಮಾನದಂಡಗಳು ಮತ್ತು ಅರ್ಜಿ ನಮೂನೆಗಾಗಿ ದಯವಿಟ್ಟು www.pmgsy.nic.in ವೆಬ್‌ಸೈಟ್‌ನಲ್ಲಿನ ‘ಅಡ್ವರ್ಟೈಸ್‌ಮೆಂಟ್/ಸರ್ಕ್ಯೂಲಾರ್ಸ್’ ಐಕಾನ್‌ಗೆ ಅಥವಾ https://rural.nic.in ವೆಬ್‌ಸೈಟ್‌ನಲ್ಲಿನ ‘ಅಡ್ವರ್ಟೈಸ್‌ಮೆಂಟ್/ಟೆಂಡರ್ಸ್’ ಐಕಾನ್‌ಗೆ ಭೇಟಿ ಕೊಡಿ.

ಡೆಪ್ಯುಟಿ ಡೈರೆಕ್ಟರ್ (ಎಫ್&ಎ)

ಜಾಹೀರಾತು ಸಂಖ್ಯೆ 03/2024 CBC 35104/11/0005/2425

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ.: 12-CWM-UBLS-2024-25
ದಿನಾಂಕ: 15.10.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರ	ಅಂದಾಜು ಮೌಲ್ಯ
ಕರ್ನಾಟಕ ರಾಜ್ಯ ಸರ್ಕಾರದ (ಕಾರ್ಖಾನೆ & ಬಾಯ್ಲರ್‌ಗಳ ಇಲಾಖೆ) ಅಧೀಕೃತ ಏಜೆನ್ಸಿಗಳ ಮೂಲಕ 36 ತಿಂಗಳುಗಳ ಅವಧಿಗೆ ಹುಬ್ಬಳ್ಳಿ, ಕ್ಯಾರಿಯೇಜ್ ರಿಪೇರಿ ಕಾರ್ಯಾಗಾರ ದಲ್ಲಿ ಲಭ್ಯವಿರುವ ಯಂತ್ರಗಳು / ಉಪಕರಣಗಳ ಪರಿಶೀಲನೆ ಮತ್ತು ಪ್ರಮಾಣೀಕರಣ ಕಾರ್ಯಗಳು.	ರೂ. 18,38,736/- (ಜಿಎಸ್‌ಟಿ ಸೇರಿದಂತೆ)

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 08.11.2024, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ
ಕೊನೆಯ ದಿನಾಂಕದವರೆಗೆ ಯಾವುದಾದರೂ ತಿದ್ದುಪಡಿ ಇದ್ದಲ್ಲಿ ವೆಬ್‌ಸೈಟ್‌ಅನ್ನು ನೋಡುತ್ತಿರಿ

ಮುಖ್ಯ ಕಾರ್ಯಾಗಾರ ವ್ಯವಸ್ಥಾಪಕರು
ಕ್ಯಾರಿಯೇಜ್ ರಿಪೇರಿ ಕಾರ್ಯಾಗಾರ, ಹುಬ್ಬಳ್ಳಿ

PUB/510/AAF/PRB/SWR/2024-25
South Western Railway - SWR | SWRRLY | SWRRLY

ನೈಋತ್ಯ ರೈಲ್ವೆ

ಇ–ಟೆಂಡರು ಸೂಚನೆ ಸಂ.: CAO/CN/BNC/28/2024
ದಿನಾಂಕ: 17.10.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕ್ರಸಂ.	ಕಾಮಗಾರಿಯ ಹೆಸರು	ಅಂದಾಜು ಮೌಲ್ಯ
1	ಲೋಂಡಾ – ಮೀರಜ್	ರೂ. 38,14,97,642/-
	ವಿಭಾಗ: ಅಳ್ನಾವರ ಮತ್ತು ತಾವರಗಟ್ಟಿ ನಿಲ್ದಾಣಗಳ ನಡುವೆ ಕಿಮೀ. 553/300–400 ರಲ್ಲಿ ಸ್ಪಾನ್ 1x36ಮೀ ಕಾಂಪೋಸಿಟ್ ಗಿರ್ಡರ್ (ರೈಲ್ವೇ ಪೋರ್ಷನ್) + 20x18ಮೀ ಪಿಎಸ್‌ಸಿ ಗಿರ್ಡರ್ & ಸಿಸಿ ಬ್ಲಾಕ್ ಜೊತೆಗೆ ಜಿಯೋಗ್ರಿಡ್ (ಅಪ್ರೋಚ್ ಪೋರ್ಷನ್) ಮೂಲಕ ಎಲ್‌ಸಿ ನಂ. 331 ಗೆ ಬದಲಾಗಿ ಪ್ರಸ್ತಾವಿತ ರೋಡ್ ಓವರ್ ಬ್ರಿಡ್ಜ್‌ನ ನಿರ್ಮಾಣ ಕಾರ್ಯಗಳು. (ಸಂಯುಕ್ತ ಕಾಮಗಾರಿ) (**ಟೆಂಡರು ಉಲ್ಲೇಖ ಸಂ.: LD-MRJ-ROB-LC-331**)	
2	ಹುಬ್ಬಳ್ಳಿ – ಬಳ್ಳಾರಿ ವಿಭಾಗ:	ರೂ. 22,76,87,441/-
	ಗಿಣಿಗೇರ ಮತ್ತು ಮುನಿರಾಬಾದ ನಿಲ್ದಾಣಗಳ ನಡುವೆ ಕಿಮೀ. 134/700–800 ರಲ್ಲಿ ಕ್ಲೀಯರ್ ಸ್ಪಾನ್ 1x30.0 ಮೀ. ಕಾಂಪೋಸಿಟ್ ಗಿರ್ಡರ್ (ರೈಲ್ವೇ ಸ್ಪಾನ್) ಮತ್ತು 3x18.46ಮೀ. ಪಿಎಸ್‌ಸಿ ಗಿರ್ಡರ್ & ಅಪ್ರೋಚ್‌ಗಳಾಗಿ ಸಿಸಿ ಬ್ಲಾಕ್ ಜೊತೆಗೆ ರಸ್ತೆಯ ಎರಡೂ ಬದಿಗಳಲ್ಲಿ ತಾತ್ಕಾಲಿಕ ಡೈವರ್ಷನ್ ರಸ್ತೆ ಹಾಗೂ ಸರ್ವೀಸ್ ರಸ್ತೆ ಮತ್ತು ಡ್ರೈನೇಜ್ ವ್ಯವಸ್ಥೆಯೊಂದಿಗೆ ಎಲ್‌ಸಿ ನಂ. 77 ಗೆ ಬದಲಾಗಿ ಪ್ರಸ್ತಾವಿತ ರೋಡ್ ಓವರ್ ಬ್ರಿಡ್ಜ್‌ನ (ಆರ್‌ಓಬಿ) ನಿರ್ಮಾಣ ಕಾರ್ಯಗಳು. (**ಟೆಂಡರು ಉಲ್ಲೇಖ ಸಂ.: UBL-ROB-LC-77**)	

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 08.11.2024, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಇಂಜಿನಿಯರ್/ನಿರ್ಮಾಣ/ಕಾಮಗಾರಿ
ಬೆಂಗಳೂರು ದಂಡು

PUB/513/AAF/PRB/SWR/2024-25
South Western Railway - SWR | SWRRLY | SWRRLY

ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್

DIAGEO INDIA

ನೋಂದಾಯಿತ ಕಛೇರಿ: ‘ಯುಬಿ ಟವರ್’, # 24, ವಿಠ್ಠಲ್ ಮಲ್ಯ ರಸ್ತೆ, ಬೆಂಗಳೂರು - 560 001.
ಫೋನ್: +91 80 4544 8000, 2221 0705; ಫ್ಯಾಕ್ಸ್: +91 80 3985 6862
ಇಮೇಲ್: contactus.India@diageo.com ವೆಬ್‌ಸೈಟ್: www.diageoindia.com
ಕಾರ್ಪೋರೇಟ್ ಐಡೆಂಟಿಟಿ ನಂಬರ್: L01551KA1999PLC024991

ಸೆಪ್ಟೆಂಬರ್ 30, 2024ಕ್ಕೆ ಅಂತ್ಯವಾದ ತ್ರೈಮಾಸಿಕ ಮತ್ತು ಆರು ತಿಂಗಳುಗಳಿಗೆ ಪ್ರತ್ಯೇಕಿತ ಮತ್ತು ಕ್ರೋಢೀಕೃತ ಪರಿಶೋಧಿಸದಿರುವ ಆರ್ಥಿಕ ಫಲಿತಾಂಶಗಳ ವಿವರಣೆ

(₹ ಕೋಟಿಗಳಲ್ಲಿ ಪ್ರತಿ ಷೇರಿನ ಡೇಟಾದ ಆದಾಯವನ್ನು ಹೊರತುಪಡಿಸಿ)

ಕ್ರ. ಸಂಖ್ಯೆ	ವಿವರಗಳು	ಪ್ರತ್ಯೇಕಿತ			ಕ್ರೋಢೀಕೃತ		
		ಸೆಪ್ಟೆಂಬರ್ 30, 2024ಕ್ಕೆ ಕೊನೆಗೊಂಡ ತ್ರೈಮಾಸಿಕ	ಸೆಪ್ಟೆಂಬರ್ 30, 2024ಕ್ಕೆ ಕೊನೆಗೊಂಡ ಆರು ತಿಂಗಳುಗಳಿಗೆ	ಸೆಪ್ಟೆಂಬರ್ 30, 2023ಕ್ಕೆ ಕೊನೆಗೊಂಡ ತ್ರೈಮಾಸಿಕ	ಸೆಪ್ಟೆಂಬರ್ 30, 2024ಕ್ಕೆ ಕೊನೆಗೊಂಡ ತ್ರೈಮಾಸಿಕ	ಸೆಪ್ಟೆಂಬರ್ 30, 2024ಕ್ಕೆ ಕೊನೆಗೊಂಡ ಆರು ತಿಂಗಳುಗಳಿಗೆ	ಸೆಪ್ಟೆಂಬರ್ 30, 2023ಕ್ಕೆ ಕೊನೆಗೊಂಡ ತ್ರೈಮಾಸಿಕ
		ಪರಿಶೋಧಿಸದಿರುವ	ಪರಿಶೋಧಿಸದಿರುವ	ಪರಿಶೋಧಿಸದಿರುವ	ಪರಿಶೋಧಿಸದಿರುವ	ಪರಿಶೋಧಿಸದಿರುವ	ಪರಿಶೋಧಿಸದಿರುವ
1.	ಕಾರ್ಯಾಚರಣೆಗಳಿಂದ ಆದಾಯ	6,671	12,500	6,733	6,672	12,910	6,737
2.	ಅವಧಿಗೆ ನಿವ್ವಳ ಲಾಭ (ಅಸಾಧಾರಣ ವಸ್ತುಗಳು ಮತ್ತು ತೆರಿಗೆಯ ಮೊದಲು)	447	850	417	460	1,113	415
3.	ತೆರಿಗೆಗೆ ಮುಂಚಿನ ಅವಧಿಯ ನಿವ್ವಳ ಲಾಭ (ಅಸಾಧಾರಣ ವಸ್ತುಗಳ ನಂತರ)	447	850	448	460	1,113	446
4.	ತೆರಿಗೆಯ ನಂತರದ ಅವಧಿಗೆ ನಿವ್ವಳ ಲಾಭ (ಅಸಾಧಾರಣ ವಸ್ತುಗಳ ನಂತರ)	335	634	341	341	826	339
5.	ಅವಧಿಯ ಒಟ್ಟು ಸಮಗ್ರ ಆದಾಯ	335	634	336	345	829	335
6.	ಈಕ್ವಿಟಿ ಷೇರು ಬಂಡವಾಳ	145	145	145	145	145	145
7.	ಇತರ ಈಕ್ವಿಟಿ	7,102	7,102	6,374	7,487	7,487	6,665
8.	ಗಳಿಕೆ ಪ್ರತಿ ಷೇರಿಗೆ (₹ 2/- ಪ್ರತಿ) [ಕೆಳಗೆ ಟಿಪ್ಪಣಿ (ಬಿ) ಗಮನಿಸಿ] ಮೂಲ ಮತ್ತು ದುರ್ಬಲ (₹ ಗಳಲ್ಲಿ)	4.61	8.72	4.69	4.80	11.63	4.78

ಟಿಪ್ಪಣಿಗಳು

ಎ) ಮೇಲಿನದು 2015ರ ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ನಿಯಂತ್ರಣಗಳ (ಪಟ್ಟಿ ಮಾಡುವಿಕೆ ಮತ್ತು ಇತರೆ ಘೋಷಣೆಗಳ ಅವಶ್ಯಕತೆಗಳು) 33ನೇ ನಿಯಂತ್ರಣದಡಿ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಫೈಲ್ ಮಾಡಿರುವ ತ್ರೈಮಾಸಿಕ ಫಲಿತಾಂಶಗಳ ವಿವರವಾದ ನಮೂನೆಯ ಸಾರಂಶವಾಗಿದೆ. ತ್ರೈಮಾಸಿಕ ಫಲಿತಾಂಶಗಳ ವಿವರವಾದ ನಮೂನೆಯು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್ www.bseindia.com ಮತ್ತು www.nseindia.com ಮತ್ತು ಕಂಪನಿಯ ವೆಬ್‌ಸೈಟ್ www.diageoindia.com ನಲ್ಲಿ ಲಭ್ಯವಿರುತ್ತದೆ.

ಬಿ) ಏಕೀಕೃತ ಹಣಕಾಸು ಅಡಿಯಲ್ಲಿ ವರ್ಷದ ಬಾಕಿ ಇರುವ ಈಕ್ವಿಟಿ ಷೇರುಗಳ ಸರಾಸರಿ ಸಂಖ್ಯೆಯನ್ನು ಲೆಕ್ಕಹಾಕುವಲ್ಲಿ, ಕಂಪನಿಯು ಯುಎಸ್ಎಲ್ ಬೆನಿಫಿಟ್ ಟ್ರಸ್ಟ್‌ನಲ್ಲಿ ಹೊಂದಿರುವ (ಕಂಪೆನಿಯ ಏಕೈಕ ಫಲಾನುಭವಿಯಾಗಿರುವ) ಸ್ವಂತ ಷೇರುಗಳನ್ನು ಕಡಿಮೆ ಮಾಡಿದೆ.

ನಿರ್ದೇಶಕರ ಮಂಡಳಿಯ ನಿಮಿತ್ತ ಮತ್ತು ಅವರ ಪರವಾಗಿ
ಸಹಿ/–
ಹಿನಾ ನಾಗರಾಜನ್
ವ್ಯವಸ್ಥಾಪಕ ನಿರ್ದೇಶಕರು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ

ಸ್ಥಳ : ಗೋವಾ
ದಿನಾಂಕ : ಅಕ್ಟೋಬರ್ 23, 2024

ಜಾರ್ಖಂಡ್: ಮೊದಲ ಪಟ್ಟಿ ನಂತರ ರಾಜೀನಾಮೆ ಪ್ರಹಸನ

ಪ್ರಜಾವಾಣಿ ವಾರ್ತೆ

ರಾಂಚಿ: ಜಾರ್ಖಂಡ್ ವಿಧಾನಸಭಾ ಚುನಾವಣೆಗೆ ಆಡಳಿತಾರೂಢ ಜೆಎಂಎಂ ಮತ್ತು ಬಿಜೆಪಿ ಎರಡೂ ಪಕ್ಷಗಳು ಬಿಡುಗಡೆ ಮಾಡಿರುವ ಅಭ್ಯರ್ಥಿಗಳ ಮೊದಲ ಪಟ್ಟಿಯು ವಾಕ್ಸಮರ, ರಾಜೀನಾಮೆ ಪ್ರಹಸನಗಳಿಗೂ ಕಾರಣವಾಗಿದೆ.

ಕಾರ್ಯಕರ್ತರ ಹಿತಾಸಕ್ತಿ ಬದಿಗೊತ್ತಿ ಪ್ರಬಲ ರಾಜಕೀಯ ಕುಟುಂಬಗಳ ಸದಸ್ಯರಿಗೆ ಮಣೆಹಾಕಿವೆ. ಇದು ಉಭಯ ಪಕ್ಷಗಳು ಸ್ವಜನಪಕ್ಷಪಾತದ ಬಗ್ಗೆ ಆರೋಪ– ಪ್ರತ್ಯಾರೋಪದಲ್ಲಿ ತೊಡಗುವಂತೆ ಮಾಡಿವೆ.

ಗೆಲ್ಲುವ ಸಾಮರ್ಥ್ಯವನ್ನೇ ಮಾನದಂಡವಾಗಿಸಿಕೊಂಡು ಬಿಜೆಪಿ ಮೊದಲ ಪಟ್ಟಿಯಲ್ಲಿ, ಜೆಎಂಎಂ ತೊರೆದು ಬಂದಿರುವ ಮಾಜಿ ಸಿ.ಎಂ ಚಂಪೈ ಸೊರೇನ್ ಮತ್ತು ಅವರ ಮಗ ಬಾಬುಲಾ ಸೊರೇನ್ ಅವರಿಗೆ ಟಿಕೆಟ್ ನೀಡಿದೆ. ಮತ್ತೊಬ್ಬ ನಾಯಕಿ ಸೀತಾ ಸೊರೇನ್ ಅವರನ್ನು ಜಮ್ತಾರ ಕ್ಷೇತ್ರದಿಂದ ಕಣಕ್ಕಿಳಿಸಿದೆ. ಸೀತಾ ಅವರು ಜೆಎಂಎಂ ಸ್ಥಾಪಕ ಮತ್ತು ಮಾಜಿ ಮುಖ್ಯಮಂತ್ರಿ ಶಿಬು ಸೊರೇನ್ ಅವರ ಸೊಸೆ.

ಜಾರ್ಖಂಡ್‌ನ ಇತರ ಇಬ್ಬರು ಮಾಜಿ ಸಿ.ಎಂಗಳ ಪತ್ನಿಯರಿಗೂ ಬಿಜೆಪಿ ಟಿಕೆಟ್ ನೀಡಿದೆ. ಜಗನ್ನಾಥಪುರದಿಂದ ಮಧು ಕೋಡಾ ಅವರ ಪತ್ನಿ ಗೀತಾ ಕೋಡಾ ಮತ್ತು ಪೊಟ್ಕಾದಿಂದ ಅರ್ಜುನ್ ಮುಂಡಾ ಅವರ ಪತ್ನಿ ಮೀರಾ ಅವರನ್ನು ಬಿಜೆಪಿ ಕಣಕ್ಕಿಳಿಸಿದೆ.

ಬಿಜೆಪಿಯ ಮಾಜಿ ಸಿ.ಎಂ ಮತ್ತು ಸದ್ಯ ಒಡಿಶಾ ರಾಜ್ಯಪಾಲರಾಗಿರುವ ರಘುವರ್ ದಾಸ್ ಅವರ ಸೊಸೆ ಪೂರ್ಣಿಮಾ ದಾಸ್ ಸಾಹು ಕೂಡ ಜೆಮ್‌ಶೆಡ್‌ಪುರ ಕ್ಷೇತ್ರದಿಂದ ಕಣಕ್ಕಿಳಿಯುತ್ತಿದ್ದಾರೆ.

‘ಟಿಕೆಟ್ ಆಯ್ಕೆಯು ಪಕ್ಷದ ಹಲವು ಕಾರ್ಯಕರ್ತರನ್ನು ನಿರಾಸೆಗೊಳಿಸಿದೆ. ಲೋಕಸಭೆ ಚುನಾವಣೆಯಲ್ಲಿ ಸೋತವರು ಮತ್ತು ರಾಜಕಾರಣಿಗಳ ಸಂಬಂಧಿಗಳಿಗೆ ಮಣೆ ಹಾಕಲಾಗಿದೆ’ ಎಂದು ಬಿಜೆಪಿ ಟಿಕೆಟ್ ಆಕಾಂಕ್ಷಿ ಸಂದೀಪ್ ವರ್ಮಾ ಹೇಳಿದ್ದಾರೆ.

ಜೆಎಂಎಂ: 36 ಮಂದಿ ಪಟ್ಟಿ ಬಿಡುಗಡೆ

ಜಾರ್ಖಂಡ್ ಮುಕ್ತಿ ಮೋರ್ಚಾ (ಜೆಎಂಎಂ) ಪಕ್ಷವು ಅಭ್ಯರ್ಥಿಗಳ ಎರಡು ಪಟ್ಟಿಗಳನ್ನು ಬುಧವಾರ ಬಿಡುಗಡೆ ಮಾಡಿದೆ.

ಮೊದಲ ಪಟ್ಟಿಯಲ್ಲಿ 35 ಮಂದಿಗೆ ಮತ್ತು ಎರಡನೇ ಪಟ್ಟಿಯಲ್ಲಿ ಒಬ್ಬರಿಗೆ ಟಿಕೆಟ್ ನೀಡಲಾಗಿದೆ. ಮುಖ್ಯಮಂತ್ರಿ ಹೇಮಂತ್ ಸೊರೇನ್ ಅವರು ಬರ್ಹೈತ್‌ನಿಂದ ಮತ್ತು ಅವರ ಪತ್ನಿ ಕಲ್ಪನಾ ಸೊರೇನ್ ಅವರು ಗಂಡೆ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ. ಹೇಮಂತ್ ಅವರ ಸಹೋದರ ಬಸಂತ್ ಸೊರೇನ್ ಅವರು ದುಮ್ಕಾದಿಂದ ಸ್ಪರ್ಧಿಸಲಿದ್ದಾರೆ. ರಾಜ್ಯಸಭಾ ಸದಸ್ಯೆ ಮಹುವಾ ಮಾಜಿ ಅವರನ್ನು ರಾಂಚಿಯಿಂದ ಕಣಕ್ಕಿಳಿಸಲಾಗಿದೆ.

ಶಿಗ್ಗಾವಿ: ಹೆಚ್ಚಿದ ಬಂಡಾಯದ ಕಾವು

ಪ್ರಜಾವಾಣಿ ವಾರ್ತೆ

ಹಾವೇರಿ: ಶಿಗ್ಗಾವಿ ವಿಧಾನಸಭಾ ಕ್ಷೇತ್ರದಲ್ಲಿ ಭರತ್ ಬೊಮ್ಮಾಯಿ ಅವರಿಗೆ ಬಿಜೆಪಿ ಟಿಕೆಟ್ ನೀಡಿದ್ದಕ್ಕೆ ಪಕ್ಷದ ಕೆಲ ಮುಖಂಡರು ಅಸಮಾಧಾನ ವ್ಯಕ್ತಪಡಿಸಿದ್ದು, ಬಂಡಾಯದ ಕಾವು ಹೆಚ್ಚುತ್ತಿದೆ.

ಕ್ಷೇತ್ರದ ಬಿಜೆಪಿ ಪ್ರಮುಖ ಮುಖಂಡ ಶ್ರೀಕಾಂತ ದುಂಡಿಗೌಡ್ರ, ‘ರಾಜಕೀಯ ಗುರು ಬಸವರಾಜ ಬೊಮ್ಮಾಯಿ ಅವರು ನನಗೆ ಅನ್ಯಾಯ ಮಾಡಿದರು. ಟಿಕೆಟ್ ಕೊಡಿಸುವುದಾಗಿ ಹೇಳುತ್ತ, ತಮ್ಮ ಮಗನಿಗೆ ಟಿಕೆಟ್ ಕೊಡಿಸಿದರು. ನನಗೆ ಹಾಗೂ ಕಾರ್ಯಕರ್ತರಿಗೆ ನೋವಾಗಿದೆ’ ಎಂದು ‘ಪ್ರಜಾವಾಣಿ’ಗೆ ತಿಳಿಸಿದರು.

‘ನಮ್ಮ ಮುಂದಿನ ನಡೆ ಬಗ್ಗೆ ಚರ್ಚಿಸಲು ಅಕ್ಟೋಬರ್ 24ರಂದು ಸಂಜೆ ಹಿರಿಯರು ಮತ್ತು ಹಿತೈಷಿಗಳ ಸಭೆ ಕರೆದಿರುವೆ. ಅವರ ಅಭಿಪ್ರಾಯ ಪಡೆದು ನನ್ನ ನಿರ್ಧಾರ ಪ್ರಕಟಿಸುವೆ’ ಎಂದು ಅವರು ತಿಳಿಸಿದರು.

ಬಂಡಾಯವಿಲ್ಲ: ‘ಕ್ಷೇತ್ರದಲ್ಲಿ ಬಂಡಾಯವಿಲ್ಲ. ಇಂಥ ಬೆಳವಣಿಗೆಗಳು ಸಹಜ’ ಎಂದು ಸಂಸದ ಬಸವರಾಜ ಬೊಮ್ಮಾಯಿ ಸುದ್ದಿಗಾರರಿಗೆ ತಿಳಿಸಿದರು.

ಬೆಂಬಲಿಗರ ಪ್ರತಿಭಟನೆ

‘ಶಿಗ್ಗಾವಿ ಕ್ಷೇತ್ರದ ಕಾಂಗ್ರೆಸ್‌ನ ಪ್ರಭಾವಿ ಮುಖಂಡರಾದ ಮಾಜಿ ಶಾಸಕ ಸೈಯದ್ ಅಜ್ಜಂಪೀರ ಖಾದ್ರಿ ಅವರಿಗೆ ಟಿಕೆಟ್ ನೀಡಬೇಕು’ ಎಂದು ಆಗ್ರಹಿಸಿ ಅವರ ಬೆಂಬಲಿಗರು ಶಿಗ್ಗಾವಿಯಲ್ಲಿ ಬುಧವಾರ ಪ್ರತಿಭಟನೆ ನಡೆಸಿದರು.

ಕಿತ್ತೂರು ರಾಣಿ ಚನ್ನಮ್ಮ ವೃತ್ತದಲ್ಲಿ ಸೇರಿದ್ದ ಬೆಂಬಲಿಗರು, ‘ಖಾದ್ರಿ ಅವರ ಬಗ್ಗೆ ಕೆಲ ಮಾಜಿ ಶಾಸಕರು ಅಪಪ್ರಚಾರ ನಡೆಸುತ್ತಿದ್ದಾರೆ. ಇದಕ್ಕೆ ವರಿಷ್ಠರು ಕಿವಿಗೊಡಬಾರದು’ ಎಂದರು. ಮುಖಂಡ ಜಾಫರ್‌ಸಾಬ್ ಭಾಗವಾನ್, ‘ಮುಸ್ಲಿಂ ಸಮುದಾಯದವರು ಕೇವಲ ಮತ ಹಾಕುವುದಕ್ಕಷ್ಟೇ ಬೇಕಾ’ ಎಂದು ಪ್ರಶ್ನಿಸಿದರು.

ಪುರಸಭೆ ಸದಸ್ಯ ಮುಕ್ತಿಯಾರ್ ತಿಮ್ಮಾಪೂರ, ‘ಖಾದ್ರಿ ಅವರ ನೇತೃತ್ವದಲ್ಲಿ ಶಿಗ್ಗಾವಿ ಪುರಸಭೆಯಲ್ಲಿ ಕಾಂಗ್ರೆಸ್ ಮೇಲುಗೈ ಸಾಧಿಸಿದೆ. ಅವರಿಗೆ ಟಿಕೆಟ್ ನೀಡಿದರೆ, ಬಿಜೆಪಿ ವಿರುದ್ಧ ಗೆಲುವು ಸಾಧಿಸಲಿದ್ದಾರೆ’ ಎಂದರು.

‘ಮಹಾ’ ಚುನಾವಣೆ: ಶರದ್ ಪವಾರ್ ಮಧ್ಯಸ್ಥಿಕೆ ಫಲ; ಒಮ್ಮತದ ಸೂತ್ರಕ್ಕೆ ಬಂದ ಮೈತ್ರಿಕೂಟ

ಎಂವಿಎ: 85–85–85 ಸೀಟು ಹಂಚಿಕೆ

ಮುಂಬೈನಲ್ಲಿ ಬುಧವಾರ ನಡೆದ ‘ಮಹಾ ವಿಕಾಸ ಆಘಾಡಿ’ಯ ಜಂಟಿ ಪತ್ರಿಕಾ ಗೋಷ್ಠಿಗೆ ಬಂದ ಎನ್‌ಸಿಪಿ (ಎಸ್‌ಪಿ) ನಾಯಕಿ ಸುಪ್ರಿಯಾ ಸುಳೆ –ಪಿಟಿಐ ಚಿತ್ರ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- 15 ಸೀಟುಗಳಿಗೆ ಮುಂದುವರಿದ ಜಗ್ಗಾಟ
- ಸಣ್ಣ ಪಕ್ಷಗಳಿಗೆ 18 ಸ್ಥಾನ ಹಂಚಿದ ಎಂವಿಎ

ಮುಂಬೈ: ಮಹಾ ವಿಕಾಸ್ ಆಘಾಡಿ (ಎಂವಿಎ) ಮೈತ್ರಿಕೂಟ ಮಹಾರಾಷ್ಟ್ರದ ವಿಧಾನಸಭೆ ಚುನಾವಣೆಯ ಸೀಟು ಹಂಚಿಕೆಯಲ್ಲಿ 85-85-85 ಸ್ಥಾನಗಳ ಒಮ್ಮತದ ಸೂತ್ರಕ್ಕೆ ಬರುವಲ್ಲಿ ಬುಧವಾರ ಯಶಸ್ವಿಯಾಗಿದೆ. ಆದರೆ ಇನ್ನೂ 15 ಸ್ಥಾನಗಳಿಗೆ ಚರ್ಚೆ ಮುಂದುವರಿದಿದೆ.

ಮಹಾರಾಷ್ಟ್ರ ವಿಧಾನಸಭೆಯ 288 ಸ್ಥಾನಗಳಲ್ಲಿ, ಎಂವಿಎ ಮೈತ್ರಿಕೂಟದ ಪ್ರಮುಖ ಮಿತ್ರಪಕ್ಷಗಳಾದ ಕಾಂಗ್ರೆಸ್, ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನಾ (ಯುಬಿಟಿ) ಮತ್ತು ಶರದ್ ಪವಾರ್ ನೇತೃತ್ವದ ಎನ್‌ಸಿಪಿ (ಎಸ್‌ಪಿ) ಒಟ್ಟು 270 ಸ್ಥಾನಗಳಲ್ಲಿ ಸ್ಪರ್ಧಿಸಲಿವೆ. ಅಲ್ಲದೆ, 18 ಸ್ಥಾನಗಳನ್ನು ಮೈತ್ರಿಕೂಟದಲ್ಲಿನ ಇತರ ಸಣ್ಣ ಪಕ್ಷಗಳಿಗೆ ಎಂವಿಎ ಹಂಚಿಕೆ ಮಾಡಿದೆ.

ಹಲವು ದಿನಗಳ ಗೊಂದಲ, ವಾಕ್ಸಮರ, ತಿಕ್ಕಾಟದ ನಂತರ ಎಂವಿಎ ಈ ತೀರ್ಮಾನಕ್ಕೆ ಬಂದಿದೆ. ಆಗಿರುವ ಸೀಟು ಹಂಚಿಕೆ ಸೂತ್ರವು ಒಟ್ಟು 255 ಸ್ಥಾನಗಳನ್ನು ಒಳಗೊಂಡಿದೆ. ಉಳಿದ 15 ಸ್ಥಾನಗಳ ಕುರಿತು ಗುರುವಾರ ನಿರ್ಧಾರವಾಗಲಿದೆ.

ಮೈತ್ರಿಕೂಟವು ಸೀಟು ಹಂಚಿಕೆ ನಿರ್ಧಾರವನ್ನು ರಾಜ್ಯ ಕಾಂಗ್ರೆಸ್ ಅಧ್ಯಕ್ಷ ನಾನಾ ಪಟೋಲೆ, ಎನ್‌ಸಿಪಿ ಅಧ್ಯಕ್ಷ ಜಯಂತ್ ಪಾಟೀಲ್ ಮತ್ತು ಶಿವಸೇನಾ ರಾಜ್ಯಸಭಾ ಸದಸ್ಯ ಸಂಜಯ್ ರಾವುತ್ ಅವರು ಜಂಟಿ ಪತ್ರಿಕಾಗೋಷ್ಠಿಯಲ್ಲಿ ಘೋಷಿಸಿದರು.

ಎಐಸಿಸಿ ಪ್ರಧಾನ ಕಾರ್ಯದರ್ಶಿ ರಮೇಶ್ ಚೆನ್ನಿತ್ತಲ ಅವರು ಕಾಂಗ್ರೆಸ್ ಶಾಸಕಾಂಗ ಪಕ್ಷದ ನಾಯಕ ಬಾಳಾಸಾಹೇಬ್ ಥೋರಟ್ ಅವರಿಗೆ ಶರದ್ ಪವಾರ್ ಮತ್ತು ಉದ್ಧವ್ ಠಾಕ್ರೆ ಅವರನ್ನು ಖುದ್ದು ಭೇಟಿ ಮಾಡುವಂತೆ ಸೂಚಿಸಿದ ಒಂದೆರಡು ದಿನಗಳಲ್ಲೇ ಒಮ್ಮತದ ಮೂಲಕ ಸೀಟು ಹಂಚಿಕೆ ಸೂತ್ರರೂಪಿಸಲಾಗಿದೆ. ಠಾಕ್ರೆ ಅವರ ಪುತ್ರ ಆದಿತ್ಯ ಠಾಕ್ರೆ ಕೂಡ ಪವಾರ್ ಅವರನ್ನು ಪ್ರತ್ಯೇಕವಾಗಿ ಭೇಟಿಯಾಗಿದ್ದರು.

ಕಳೆದ ಎರಡು ತಿಂಗಳಿಂದ ಮಾತುಕತೆಗಳು ಹಲವು ಬಾರಿ ಮುರಿದು ಬೀಳುವ ಹಂತ ತಲುಪಿದ್ದವು. ಆದಾಗ್ಯೂ ಎಂವಿಎ ಪ್ರಮುಖ ರೂವಾರಿ ಶರದ್ ಪವಾರ್ ಅವರು ಮಧ್ಯಪ್ರವೇಶಿಸಿ, ಎಲ್ಲರೂ ಒಗ್ಗಟ್ಟಾಗಿ ಹೋಗಬೇಕಿರುವ ಅಂಶವನ್ನು ಮನದಟ್ಟು ಮಾಡಿಸಿ, ಸೀಟು ಹಂಚಿಕೆಯಲ್ಲಿ ಒಮ್ಮತಕ್ಕೆ ಬರುವಂತೆ ಮಾಡಿದ್ದಾರೆ.

‘ನಾವು 85-85-85 ಸೂತ್ರದ ಪ್ರಕಾರ ಸೀಟುಗಳನ್ನು ಹಂಚಿಕೊಳ್ಳಲು ನಿರ್ಧರಿಸಿದ್ದೇವೆ. ಉಳಿದ 15 ಸ್ಥಾನಗಳಿಗೆ ನಮ್ಮ ಮೈತ್ರಿ ಪಾಲುದಾರರೊಂದಿಗೆ ಚರ್ಚೆ ನಡೆಸಲು ಬಯಸಿದ್ದೇವೆ. ಅದು ಕೂಡ ಒಂದು ದಿನದಲ್ಲಿ ನಿರ್ಧಾರವಾಗಲಿದೆ. ಮೈತ್ರಿಕೂಟದಲ್ಲಿನ ಸಣ್ಣ ಪಕ್ಷಗಳಿಗೆ 18 ಸ್ಥಾನಗಳನ್ನು ನೀಡಲು ನಿರ್ಧರಿಸಿದ್ದೇವೆ’ ಎಂದು ಪಟೋಲೆ ಹೇಳಿದರು.

ಬಾರಾಮತಿಯಿಂದ ಅಜಿತ್ ಸ್ಪರ್ಧೆ

ಮುಂಬೈ (ಪಿಟಿಐ): ಮಹಾರಾಷ್ಟ್ರ ವಿಧಾನಸಭೆ ಚುನಾವಣೆಗೆ ಸ್ಪರ್ಧಿಸುವ 38 ಅಭ್ಯರ್ಥಿಗಳನ್ನು ಒಳಗೊಂಡ ಮೊದಲ ಪಟ್ಟಿಯನ್ನು ಎನ್‌ಸಿಪಿ (ಅಜಿತ್ ಪವಾರ್ ಬಣ) ಬುಧವಾರ ಬಿಡುಗಡೆ ಮಾಡಿದೆ.

ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಅವರು ಬಾರಾಮತಿ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ. ಉಳಿದಂತೆ 26 ಶಾಸಕರಿಗೆ ಪುನಃ ಟಿಕೆಟ್ ನೀಡಲಾಗಿದೆ.

ಕಾಂಗ್ರೆಸ್‌ನ ಹಿರಿಯ ನಾಯಕ ದಿ.ಮಾಣಿಕ್‌ರಾವ್ ಗಾವಿತ್ ಅವರ ಪುತ್ರ ಭರತ್ ಗಾವಿತ್ ಅವರಿಗೆ ನವಪುರ ಕ್ಷೇತ್ರದಿಂದ ಟಿಕೆಟ್ ನೀಡಲಾಗಿದೆ.

ಇತ್ತೀಚೆಗೆ ಕಾಂಗ್ರೆಸ್ ತೊರೆದು ಎನ್‌ಸಿಪಿ ಸೇರಿದ್ದ ಹಿರಾಮನ್ ಖೋಸ್ಕರ್ ಅವರನ್ನು ಇಗತ್‌ಪುರಿಯಿಂದ ಕಣಕ್ಕಿಳಿಸಿದೆ.

ಶಿವಸೇನಾ ಉದ್ಧವ್ ಬಣದ ಮೊದಲ ಪಟ್ಟಿ ಬಿಡುಗಡೆ

ಮುಂಬೈ (ಪಿಟಿಐ): ಮಹಾ ವಿಕಾಸ ಆಘಾಡಿ (ಎಂವಿಎ) ಮೈತ್ರಿಕೂಟವು ಸೀಟು ಹಂಚಿಕೆ ಸೂತ್ರವನ್ನು ಅಂತಿಮಗೊಳಿಸಿರುವ ಬೆನ್ನಲ್ಲೇ ತನ್ನ ಪಾಲಿನ 85 ಸ್ಥಾನಗಳ ಪೈಕಿ 65 ಸ್ಥಾನಗಳಿಗೆ ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಶಿವಸೇನಾ (ಉದ್ಧವ್ ಬಣ) ಬುಧವಾರ ಬಿಡುಗಡೆಗೊಳಿಸಿದೆ.

ಬಹುಪಾಲು ಹಾಲಿ ಶಾಸಕರಿಗೆ ಶಿವಸೇನಾ ಈ ಬಾರಿಯು ಟಿಕೆಟ್ ನೀಡಿದ್ದು, ಮಾಜಿ ಸಚಿವ ಆದಿತ್ಯ ಠಾಕ್ರೆ ಅವರು ವರ್ಲಿ ಕ್ಷೇತ್ರದಿಂದ ಮತ್ತೆ ಕಣಕ್ಕಿಳಿಯಲಿದ್ದಾರೆ.

ಆದಿತ್ಯ ಠಾಕ್ರೆ ಸಹೋದರ, ಯುವಸೇನಾ ನಾಯಕ ವರುಣ್ ಸರ್ದೇಸಾಯಿ ಬಾಂದ್ರಾ(ಪೂರ್ವ)ದಿಂದ ಸ್ಪರ್ಧಿಸಲಿದ್ದಾರೆ. ಮುಖ್ಯಮಂತ್ರಿ ಏಕನಾಥ ಶಿಂದೆ ಅವರ ಕೊಪರಿ–ಪಂಚ್‌ಪಖಾಡಿ ಕ್ಷೇತ್ರದಲ್ಲಿ ಶಿವಸೇನಾವು (ಉದ್ಧವ್ ಬಣ) ಕೇದಾರ್ ದಿಘೆ ಅವರನ್ನು ಕಣಕ್ಕಿಳಿಸಿದೆ. ಕೇದಾರ್ ದಿಘೆ ಅವರು ಸೇನಾದ ನಾಯಕ ದಿವಂಗತ ಆನಂದ್ ದಿಘೆ ಅವರ ಸೋದರಳಿಯ. ಇವರನ್ನು ಶಿಂಧೆ ಅವರ ರಾಜಕೀಯ ಮಾರ್ಗದರ್ಶಕನೆಂದೇ ಪರಿಗಣಿಸಲಾಗಿತ್ತು.

ಎಸ್‌ಪಿ 5 ಅಭ್ಯರ್ಥಿಗಳ ಘೋಷಣೆ: ಅಖಿಲೇಶ್ ಯಾದವ್ ನೇತೃತ್ವದ ಎಸ್‌ಪಿ, ಎಂವಿಎ ಕೋಟಾದಿಂದ 12 ಸ್ಥಾನಗಳಿಗೆ ಬೇಡಿಕೆ ಇಟ್ಟಿದ್ದು, ಸದ್ಯ ಐದು ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಘೋಷಿಸಿದೆ

ಕರ್ನಾಟಕ, ತೆಲಂಗಾಣ ಗಡಿ ಬಂದ್‌ಗೆ ಆಗ್ರಹ

ಮುಂಬೈ: ಕಾಂಗ್ರೆಸ್ ಆಡಳಿತವಿರುವ ಕರ್ನಾಟಕ ಮತ್ತು ತೆಲಂಗಾಣದಿಂದ ಮಹಾರಾಷ್ಟ್ರಕ್ಕೆ ನೂರಾರು ಕೋಟಿ ಹಣ ಹರಿದು ಬರುತ್ತಿದೆ ಎಂದು ಆರೋಪಿಸಿರುವ ಏಕನಾಥ ಶಿಂದೆ ನೇತೃತ್ವದ ಶಿವಸೇನಾ ಪಕ್ಷವು, ಈ ಎರಡೂ ರಾಜ್ಯಗಳ ಗಡಿಗಳನ್ನು ಬಂದ್ ಮಾಡುವಂತೆ ಚುನಾವಣಾ ಆಯೋಗವನ್ನು ಆಗ್ರಹಿಸಿದೆ.

ಈ ಎರಡೂ ರಾಜ್ಯಗಳ ಜತೆ ಮಹಾರಾಷ್ಟ್ರ ಗಡಿ ಹಂಚಿಕೊಂಡಿದೆ. ಈ ರಾಜ್ಯಗಳೇ ಅಲ್ಲದೆ, ಇಲ್ಲಿನ ವಿಧಾನಸಭಾ ಚುನಾವಣೆಗೆ ವಿದೇಶಗಳಿಂದಲೂ ಹಣ ಬರುತ್ತಿದೆ ಎಂದು ಅದು ದೂರಿದೆ.

ಕಾಂಗ್ರೆಸ್ ಆಡಳಿತವಿರುವ ಈ ಎರಡೂ ರಾಜ್ಯಗಳಿಂದ ನೂರಾರು ಕೋಟಿ ಹಣ ಮಹಾ ವಿಕಾಸ್ ಆಘಾಡಿಗೆ (ಎಂವಿಎ) ಹರಿದು ಬರುತ್ತಿದೆ ಎಂದು ಸೇನಾ ಕಾರ್ಯದರ್ಶಿ ಮತ್ತು ಮುಖ್ಯ ವಕ್ತಾರ ಕಿರಣ್ ಪಾವಸ್ಕರ್ ತಿಳಿಸಿದ್ದಾರೆ. ಈ ಸಂಬಂಧ ಶಿವಸೇನಾ ಚುನಾವಣಾ ಆಯೋಗಕ್ಕೆ ಅರ್ಜಿ ಸಲ್ಲಿದೆ.

ಚುನಾವಣೆ ವೇಳೆ ಈ ಎರಡೂ ರಾಜ್ಯಗಳು ಮತ್ತು ವಿದೇಶಗಳಿಂದ ಬರುತ್ತಿರುವ ಹಣದ ಬಗ್ಗೆ ತನಿಖೆ ಆಗಬೇಕಿದೆ ಎಂದು ಅವರು ಆಗ್ರಹಿಸಿದ್ದಾರೆ.

ವಯನಾಡ್: ನಾಮಪತ್ರ ಸಲ್ಲಿಸಿದ ನೆಹರೂ ಕುಟುಂಬದ ಕುಡಿ ಪ್ರಿಯಾಂಕಾ ಗಾಂಧಿ

‘35 ವರ್ಷದ ರಾಜಕೀಯ ಅನುಭವವಿದೆ’

ವಯನಾಡ್ (ಕೇರಳ) (ಪಿಟಿಐ): ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರು ವಯನಾಡ್ ಲೋಕಸಭಾ ಕ್ಷೇತ್ರದ ಉಪಚುನಾವಣೆಗೆ ಬುಧವಾರ ನಾಮಪತ್ರ ಸಲ್ಲಿಸುವ ಮೂಲಕ ಮೊದಲ ಬಾರಿಗೆ ಚುನಾವಣಾ ಅಖಾಡಕ್ಕೆ ಧುಮುಕಿದ್ದಾರೆ.

ನಾಮಪತ್ರ ಸಲ್ಲಿಸುವ ಮೊದಲು ಕಲ್ಪೆಟ್ಟಾದಲ್ಲಿ ಆಯೋಜಿಸಿದ್ದ ಬೃಹತ್ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಅವರು, ‘ನಾನು 17ನೇ ವಯಸ್ಸಿನಲ್ಲಿದ್ದಾಗ ನಮ್ಮ ತಂದೆ ದಿವಂಗತ ರಾಜೀವ್ ಗಾಂಧಿ ಪರವಾಗಿ 1989ರಲ್ಲಿ ಮೊದಲ ಬಾರಿಗೆ ಚುನಾವಣಾ ಪ್ರಚಾರ ನಡೆಸಿದ್ದೆ. ನನಗೆ 35 ವರ್ಷಗಳ ರಾಜಕಾರಣದ ಅನುಭವವಿದೆ’ ಎಂದು ಹೇಳಿದರು.

ಅಂದಿನಿಂದ ಇಲ್ಲಿಯವರೆಗೆ ನಾನು, ತಾಯಿ ಸೋನಿಯಾ ಗಾಂಧಿ, ಸಹೋದರ ರಾಹುಲ್ ಗಾಂಧಿ ಮತ್ತು ಪಕ್ಷದ ಇತರ ಸಹೋದ್ಯೋಗಿಗಳ ಪರ ಪ್ರಚಾರ ನಡೆಸಿದ್ದೇನೆ ಎಂದರು.

ವಯನಾಡ್ ಲೋಕಸಭಾ ಉಪಚುನಾವಣೆಯ ಬಿಜೆಪಿ ಅಭ್ಯರ್ಥಿ ನವ್ಯಾ ಹರಿದಾಸ್ ಅವರು ತಾನು ಪ್ರಿಯಾಂಕಾ ಅವರಿಗಿಂತ ಜನರನ್ನು ಪ್ರತಿನಿಧಿಸುವಲ್ಲಿ ಹೆಚ್ಚು ಅನುಭವಿ ಎಂದು ಹೇಳಿಕೆ ನೀಡಿದ ಮರುದಿನವೇ ಪ್ರಿಯಾಂಕಾ ಅವರಿಂದ ಈ ಹೇಳಿಕೆ ಬಂದಿದೆ.

ವಯನಾಡ್ ಜನರನ್ನು ಪ್ರತಿನಿಧಿಸಲು ಪಕ್ಷವು ತನ್ನನ್ನು ಆಯ್ಕೆ ಮಾಡಿರುವುದು ನನಗೆ ಸಿಕ್ಕ ಗೌರವವೆಂದು ಭಾವಿಸುವೆ. ಜಿಲ್ಲೆಯಲ್ಲಿ ಭೂಕುಸಿತ ಸಂಭವಿಸಿದಾಗ ವಯನಾಡ್‌ನ ಜನರು ತೋರಿದ ಧೈರ್ಯವು ನನ್ನನ್ನು ಗಾಢವಾಗಿ ತಟ್ಟಿದೆ ಎಂದು ಹೇಳಿದರು.

ಪ್ರಿಯಾಂಕಾ ಭಾಷಣದ ವೇಳೆ ವೇದಿಕೆಯಲ್ಲಿ ಕಾಂಗ್ರೆಸ್ ಸಂಸದೀಯ ಪಕ್ಷದ ಅಧ್ಯಕ್ಷೆ ಸೋನಿಯಾ ಗಾಂಧಿ, ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ, ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಕರ್ನಾಟಕದ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಪಕ್ಷದ ಇನ್ನಿತರ ಹಿರಿಯ ನಾಯಕರು ಇದ್ದರು.

ಮಲ್ಲಿಕಾರ್ಜುನ ಖರ್ಗೆ ಮಾತನಾಡಿ, ‘ಪ್ರಿಯಾಂಕಾ ಅವರು ನಾಮಪತ್ರ ಸಲ್ಲಿಸಲು ಮಾತ್ರ ವಯನಾಡ್‌ನಲ್ಲಿಲ್ಲ. ಗುಡ್ಡಗಾಡಿನ ಈ ಜಿಲ್ಲೆಯ ಜನರ ಪಾಲಿಗೆ ಅವಿಶ್ರಾಂತ ನಾಯಕಿಯಾಗಿದ್ದಾರೆ. ಪ್ರಿಯಾಂಕಾ ಅವರಿಗೆ ಮತದಾರರು ಆಶೀರ್ವದಿಸಬೇಕು. ಅವರು ತಮ್ಮನ್ನು ಆಯ್ಕೆ ಮಾಡುವ ಜನರಿಗೆ ಖಂಡಿತವಾಗಿಯೂ ನ್ಯಾಯ ನೀಡಲಿದ್ದಾರೆ’ ಎಂದರು.

ಭಾಷಣ ಮುಗಿದ ನಂತರ, ಪ್ರಿಯಾಂಕಾ ಅವರು ಜಿಲ್ಲಾಧಿಕಾರಿ ಕಚೇರಿಗೆ ತೆರಳಿ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಮತ್ತು ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರ ಸಮ್ಮುಖದಲ್ಲಿ ನಾಮಪತ್ರ ಸಲ್ಲಿಸಿದರು.

ಕೇರಳದ ವಯನಾಡ್‌ನಲ್ಲಿ ಬುಧವಾರ ನಾಮಪತ್ರ ಸಲ್ಲಿಸುವ ಮುನ್ನ ಅಭ್ಯರ್ಥಿ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಸಹೋದರ, ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಜತೆ ರೋಡ್ ಶೋ ನಡೆಸಿದರು – ಪಿಟಿಐ ಚಿತ್ರ

‘ವಯನಾಡ್‌ಗೆ ಇಬ್ಬರು ಸಂಸದರು’

‘ಸಂಸತ್ತಿನಲ್ಲಿ ಇಬ್ಬರು ಸದಸ್ಯರನ್ನು ಹೊಂದಲಿರುವ ದೇಶದ ಏಕೈಕ ಕ್ಷೇತ್ರವೆಂದರೆ ವಯನಾಡ್’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಬುಧವಾರ ಹೇಳಿದ್ದಾರೆ.

‘ನನ್ನ ವಿಷಯದಲ್ಲಿ ಹೇಗೆ ಕಾಳಜಿ ತೋರಿ, ಅಗತ್ಯಬಿದ್ದಾಗ ನನ್ನನ್ನು ರಕ್ಷಿಸಿದ್ದೀರೊ ಅದೇ ರೀತಿ ನನ್ನ ಸಹೋದರಿ ಪ್ರಿಯಾಂಕಾಗೂ ಕಾಳಜಿ ತೋರಿ’ ಎಂದು ವಯನಾಡ್‌ನ ಸಂಸದರೂ ಆಗಿದ್ದ ಅವರು ಗುಡ್ಡಗಾಡಿನ ಜನರಲ್ಲಿ ಮನವಿ ಮಾಡಿದರು.

ನಾಮಪತ್ರ ಸಲ್ಲಿಸುವ ಮುನ್ನ ಪ್ರಿಯಾಂಕಾ ಅವರು ನಡೆಸಿದ ಬೃಹತ್ ರೋಡ್ ಶೋ ನಂತರ ಇಲ್ಲಿನ ಕಲ್ಪೆಟ್ಟಾದಲ್ಲಿ ಸಾರ್ವಜನಿಕ ಸಭೆ ಉದ್ದೇಶಿಸಿ ರಾಹುಲ್ ಗಾಂಧಿ ಮಾತನಾಡಿದರು.

ತಾವು ಧರಿಸಿದ್ದ ರಾಖಿಯನ್ನು ಜನರತ್ತ ತೋರಿಸಿ, ‘ಇದು ಆಕೆಗೆ ಸಹೋದರನ ರಕ್ಷಣೆಯ ಸಂಕೇತ. ಆಕೆಯನ್ನು ನೀವೆಲ್ಲರೂ ರಕ್ಷಿಸಿ, ಆಕೆಗೆ ವಯನಾಡ್‌ನ ಸಮಸ್ಯೆ ಪರಿಹರಿಸಲು ಶಕ್ತಿ ನೀಡಿ, ನಿಮ್ಮನ್ನೂ ರಕ್ಷಿಸುತ್ತಾಳೆ’ ಎಂದರು.

ಪ್ರಿಯಾಂಕಾ ₹11 ಕೋಟಿ ಮೌಲ್ಯದ ಆಸ್ತಿ ಒಡತಿ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ವಯನಾಡ್ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಪ್ರಿಯಾಂಕಾ ಗಾಂಧಿ ಅವರು ಕಳೆದ ಹಣಕಾಸು ವರ್ಷದಲ್ಲಿ ₹46.39 ಲಕ್ಷ ಆದಾಯ ಗಳಿಸಿದ್ದಾರೆ. ಇದು ಅವರ ಪತಿ ರಾಬರ್ಟ್ ವಾದ್ರಾ ಅವರ ಆದಾಯಕ್ಕಿಂತ ಮೂರು ಪಟ್ಟು ಹೆಚ್ಚು. ಪ್ರಿಯಾಂಕಾ ಅವರು ₹11.99 ಕೋಟಿ ಮೌಲ್ಯದ ಆಸ್ತಿ ಹೊಂದಿದ್ದಾರೆ.

ಉದ್ಯಮಿ ಆಗಿರುವ ರಾಬರ್ಟ್ ವಾದ್ರಾ ಅವರ ಆದಾಯ ಕಳೆದ ಹಣಕಾಸು ವರ್ಷ ₹15.09 ಲಕ್ಷ ಇತ್ತು.

ಲೋಕಸಭಾ ಉಪಚುನಾವಣೆಗೆ ಪ್ರಿಯಾಂಕಾ ಗಾಂಧಿ ಅವರು ನಾಮಪತ್ರ ಸಲ್ಲಿಸಿದ್ದು, ಈ ವೇಳೆ ಸಲ್ಲಿಸಿರುವ ಆದಾಯ ತೆರಿಗೆ ರಿಟರ್ನ್ಸ್‌ನಲ್ಲಿ ಅವರು ಈ ಮಾಹಿತಿ ನೀಡಿದ್ದಾರೆ.

ರಾಬರ್ಟ್ ಅವರ ಆದಾಯದಲ್ಲಿ ಕುಸಿತ ಕಂಡುಬಂದಿದೆ. 2019–20ನೇ ಹಣಕಾಸು ವರ್ಷದಲ್ಲಿ ಅವರ ಆದಾಯ ₹55.58 ಲಕ್ಷ ಇತ್ತು. ಆದರೆ, 2023–24ನೇ ಹಣಕಾಸು ವರ್ಷದಲ್ಲಿ ಆದಾಯವು ₹15.09 ಲಕ್ಷಕ್ಕೆ ಇಳಿದಿದೆ.

ಕಳೆದ ಹಣಕಾಸು ವರ್ಷದಲ್ಲಿ ಪತಿಯ ಆದಾಯಕ್ಕಿಂತ ಪ್ರಿಯಾಂಕಾ ಅವರ ಆದಾಯದಲ್ಲಿ ಹೆಚ್ಚಳ ಕಂಡುಬಂದಿದ್ದರೂ, ಅದರ ಹಿಂದಿನ ವಿತ್ತೀಯ ವರ್ಷಗಳಿಗೆ ಹೋಲಿಸಿದಲ್ಲಿ ಆದಾಯದಲ್ಲಿ ಕುಸಿತ ಕಂಡುಬಂದಿದೆ.

2019–20ರಲ್ಲಿ ಪ್ರಿಯಾಂಕಾ ಅವರ ಆದಾಯ ₹69.3 ಲಕ್ಷ ಇದ್ದಿದ್ದರೆ, 2020–21ರಲ್ಲಿ ಅದು ₹19.89 ಲಕ್ಷಕ್ಕೆ ಇಳಿದಿತ್ತು. ಆದಾಯದಲ್ಲಿ ಕುಸಿತಕ್ಕೆ ಕೋವಿಡ್–19 ಪಿಡುಗು ಕಾರಣ ಎನ್ನಲಾಗಿದೆ. ಆದರೆ, ನಂತರದ ವರ್ಷಗಳಲ್ಲಿ ಆದಾಯದಲ್ಲಿ ಏರಿಕೆ ಕಂಡುಬಂದಿದೆ ಎಂಬುದು ಅವರು ಸಲ್ಲಿಸಿರುವ ದಾಖಲೆಗಳಿಂದ ತಿಳಿದುಬರುತ್ತದೆ. ಬಾಡಿಗೆ, ಬ್ಯಾಂಕುಗಳಿಂದ ಸಿಗುವ ಬಡ್ಡಿ ಹಾಗೂ ಹೂಡಿಕೆಗಳಿಂದ ಸಿಗುವ ಲಾಭಗಳೇ ಪ್ರಿಯಾಂಕಾ ಅವರ ಆದಾಯದ ಮೂಲ ಎಂದು ಉಲ್ಲೇಖಿಸಲಾಗಿದೆ.

ಪ್ರಿಯಾಂಕಾ ಗಾಂಧಿ ₹11.99 ಕೋಟಿ ಮೌಲ್ಯದ ಆಸ್ತಿ ಹೊಂದಿದ್ದರೆ, ಪತಿ ರಾಬರ್ಟ್ ಅವರ ಆಸ್ತಿ ಮೌಲ್ಯ ₹75.61 ಕೋಟಿ. ಪ್ರಿಯಾಂಕಾ ಅವರು ₹15.75 ಲಕ್ಷ ಸಾಲ ಹೊಂದಿದ್ದರೆ, ಅವರ ಪತಿ ಹೊಂದಿರುವ ಸಾಲದ ಪ್ರಮಾಣ ₹10.03 ಕೋಟಿ

ಪ್ರಿಯಾಂಕಾ ಅವರು ಸುಲ್ತಾನ ಪುರದಲ್ಲಿ ಕೃಷಿ ಭೂಮಿ ಹಾಗೂ ಫಾರ್ಮ್‌ಹೌಸ್ ಹೊಂದಿದ್ದಾರೆ.

‘ಸಿಪಿವೈ ಬಿಟ್ಟಿದ್ದು ಅನಿರೀಕ್ಷಿತವಲ್ಲ’

ಪ್ರಜಾವಾಣಿ ವಾರ್ತೆ

ವಿಜಯೇಂದ್ರ

ಬೆಂಗಳೂರು: ‘ಯೋಗೇಶ್ವರ್ ಬಿಜೆಪಿ ಬಿಟ್ಟು ಕಾಂಗ್ರೆಸ್ ಸೇರಿದ್ದು ನಿರೀಕ್ಷಿತವೇ ಆಗಿತ್ತು. ಅವರಿಗೆ ಒಳ್ಳೆಯದಾಗಲಿ ಎಂದಷ್ಟೇ ಹೇಳುತ್ತೇನೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದರು.

ಬಿಜೆಪಿ ಮತ್ತು ಜೆಡಿಎಸ್ ಸಮನ್ವಯ ಸಭೆ ಮುಂದೂಡಿಕೆ ಆದ ಬಳಿಕ ಅವರು ಸುದ್ದಿಗಾರರ ಜತೆ ಮಾತನಾಡಿ, ‘ಜೆಡಿಎಸ್ ತೀರ್ಮಾನಿಸುವ ಅಭ್ಯರ್ಥಿಯನ್ನು ನಾವು ಒಪ್ಪಿಕೊಳ್ಳುತ್ತೇವೆ. ನಾಳೆ ಎರಡೂ ಪಕ್ಷಗಳ ನಾಯಕರು ಸೇರಿ ಗೆಲುವಿಗೆ ಕಾರ್ಯತಂತ್ರ ರೂಪಿಸುತ್ತೇವೆ’ ಎಂದು ಹೇಳಿದರು.

‘ಯೋಗೇಶ್ವರ್ ಬಿಟ್ಟು ಹೋಗಿದ್ದರಿಂದ ಪಕ್ಷಕ್ಕೆ ನಷ್ಟವಿಲ್ಲ. ಹಳೇ ಮೈಸೂರು ಭಾಗದಲ್ಲಿ ಪಕ್ಷದ ಸಂಘಟನೆ ಬಲವಾಗಿಯೇ ಇದೆ. ಅವರನ್ನು ನೆಚ್ಚಿ ಕುಳಿತಿರಲಿಲ್ಲ. ನಾವೆಲ್ಲ ಸೇರಿ ಸಂಘಟನೆಯನ್ನು ಇನ್ನಷ್ಟು ಬಲಪಡಿಸುತ್ತೇವೆ’ ಎಂದು ತಿಳಿಸಿದರು.

‘ಪಕ್ಷಕ್ಕೆ ದ್ರೋಹ’

ಆರ್. ಅಶೋಕ

‘ಜೆಡಿಎಸ್ ನಾಯಕರು ಸಿ.ಪಿ.ಯೋಗೇಶ್ವರ್ ಅವರಿಗೆ ಟಿಕೆಟ್ ಕೊಡಲು ಸಿದ್ಧರಿದ್ದರು. ಆದರೆ, ಅವರು ಕಾಂಗ್ರೆಸ್ ಸೇರುವ ಮೂಲಕ ತಮ್ಮ ರಾಜಕೀಯ ಭವಿಷ್ಯ ಹಾಳು ಮಾಡಿಕೊಂಡಿದ್ದು, ಅಲ್ಲದೆ ಪಕ್ಷಕ್ಕೆ ದ್ರೋಹ ಮಾಡಿದ್ದಾರೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದ್ದಾರೆ.

ಸುದ್ದಿಗೋಷ್ಠಿ ನಡೆಸಿದ ಅವರು, ಕಾಂಗ್ರೆಸ್ ಪಕ್ಷದಿಂದ ಚನ್ನಪಟ್ಟಣದಲ್ಲಿ ಸ್ಪರ್ಧಿಸಿದರೆ ಅವರಿಗೆ ಲೀಡ್ ಸಿಗುವುದಿಲ್ಲ. ಗೆಲ್ಲುವುದೂ ಇಲ್ಲ ಎಂದರು.

‘ಅಧಿಕಾರದ ದಾಹಕ್ಕೆ ಪಕ್ಷಾಂತರ’

ನಿಖಿಲ್

ಬೆಂಗಳೂರು: ಎರಡೂವರೆ ವರ್ಷ ರಾಜಕೀಯ ಮಾಡಿದವರಿಗೆ ಬದ್ಧತೆ ಇಲ್ಲ. ಸದಾ ಅಧಿಕಾರ ಸಿಗುವ ಜಾಗಕ್ಕೆ ಹಾರುತ್ತಾರೆ ಎಂದು ಯುವ ಜೆಡಿಎಸ್ ರಾಜ್ಯ ಘಟಕದ ಅಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಟೀಕಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 136 ಶಾಸಕರಿರುವ ಕಾಂಗ್ರೆಸ್‌ಗೆ ಚನ್ನಪಟ್ಟಣದಲ್ಲಿ ಕಣಕ್ಕಿಳಿಸಲು ಅಭ್ಯರ್ಥಿಯೇ ಇಲ್ಲ. ಬಿಜೆಪಿ ತೊರೆಯಲು ಯೋಗೇಶ್ವರ್ ಅವರಿಗೆ ಕುಮ್ಮಕ್ಕು ಕೊಟ್ಟಿದ್ದು ಯಾರು ಎಂದು ರಾಜ್ಯದ ಜನರಿಗೆ ಗೊತ್ತಾಗಿದೆ ಎಂದರು.

ಕಾಂಗ್ರೆಸ್‌ಗೆ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿಯೇ ಟಾರ್ಗೆಟ್. ಲೋಕಸಭಾ ಚುನಾವಣೆಯ ಫಲಿತಾಂಶ ಅವರ ನಿದ್ದೆಗೆಡಿಸಿದೆ. ಅದಕ್ಕಾಗಿ ರಾಜಕೀಯ ಪಿತೂರಿ ನಡೆಸುತ್ತಿದ್ದಾರೆ ಎಂದು ಆರೋಪಿಸಿದರು.

ಸಿ.ಪಿ.ಯೋಗೇಶ್ವರ್ ಅವರು ಕಾಂಗ್ರೆಸ್ ಸೇರಿದ್ದು ದುರಂತ. ಚನ್ನಪಟ್ಟಣ ಕ್ಷೇತ್ರದಲ್ಲಿ ಕಾಂಗ್ರೆಸ್‌ಗೆ ಯಾರೂ ಅಭ್ಯರ್ಥಿ ಇರಲಿಲ್ಲ. ಅಲ್ಲಿ ಕುಮಾರಸ್ವಾಮಿ ಅವರ ಪ್ರಭಾವವಿದ್ದು, ಅಲ್ಲಿ ಸುಲಭವಾಗಿ ಎನ್‌ಡಿಎ ಅಭ್ಯರ್ಥಿ ಗೆಲ್ಲಬಹುದು

ಬಸವರಾಜ ಬೊಮ್ಮಾಯಿ, ಸಂಸದ

ಯೋಗೇಶ್ವರ್ ಅವಕಾಶವಾದಿ ರಾಜಕಾರಣಿ ಎನಿಸಿಕೊಂಡಿದ್ದಾರೆ. ಸಮಾಧಾನದಿಂದ ಕಾಯಬೇಕಿತ್ತು. ರಾಜಕಾರಣದಲ್ಲಿ ಅವಕಾಶಗಳಷ್ಟೇ ಮುಖ್ಯ ಅಲ್ಲ

ಡಾ.ಸಿ.ಎನ್.ಅಶ್ವತ್ಥನಾರಾಯಣ, ಶಾಸಕ

ಸಿ.ಪಿ.ಯೋಗೇಶ್ವರ್ ಆತುರ ಪಟ್ಟಿದ್ದಾರೆ. ರಾಜಕಾರಣದಲ್ಲಿ ಕೆಲ ಸಮಯದಲ್ಲಿ ಏರುಪೇರು ಆಗುತ್ತದೆ. ಸ್ವಲ್ಪ ಸಮಾಧಾನದಿಂದ ಯೋಚಿಸಿ ತೀರ್ಮಾನಿಸಬೇಕಿತ್ತು.

ಡಾ.ಕೆ.ಸುಧಾಕರ್, ಚಿಕ್ಕಬಳ್ಳಾಪುರ ಸಂಸದ

ಯೋಗೇಶ್ವರ್ ಅವರು ಮತ್ತೆ ಪಕ್ಷಕ್ಕೆ ಸೇರಿರು ವುದರಿಂದ ಚನ್ನಪಟ್ಟಣ, ರಾಮನಗರ ಜಿಲ್ಲೆ ಯಲ್ಲಿ ಮತ್ತೆ ನಮ್ಮ ಪಕ್ಷಕ್ಕೆ ಶಕ್ತಿ ಬಂದಿದೆ

ರಾಮಲಿಂಗಾ ರೆಡ್ಡಿ, ರಾಮನಗರ ಜಿಲ್ಲಾ ಉಸ್ತುವಾರಿ ಸಚಿವ

ಚನ್ನಪಟ್ಟಣ ಕುಮಾರಸ್ವಾಮಿ ಅವರ ಕ್ಷೇತ್ರ. ಅಲ್ಲಿ ಯಾರನ್ನೇ ಕಣಕ್ಕೆ ಇಳಿಸಿದರೂ ಬಿಜೆಪಿಯ ಎಲ್ಲ ಕಾರ್ಯಕರ್ತರು, ನಾಯಕರು ಗೆಲುವಿಗೆ ಶ್ರಮಿಸುತ್ತೇವೆ

ಪ್ರೀತಂಗೌಡ, ಬಿಜೆಪಿ ರಾಜ್ಯ ಪ್ರಧಾನ ಕಾರ್ಯದರ್ಶಿ

ಮೊದಲ ಚುನಾವಣೆಯಲ್ಲೇ ಬಂಡಾಯ • ಪಕ್ಷಾಂತರದಿಂದಲೇ ರಾಜಕೀಯ ಅಸ್ತಿತ್ವ

ಚನ್ನಪಟ್ಟಣ ‘ಸೈನಿಕ’ನದು 6ನೇ ಪಕ್ಷಾಂತರ!

• ಓದೇಶ ಸಕಲೇಶಪುರ

ಸಿ.ಪಿ. ಯೋಗೇಶ್ವರ್

ರಾಮನಗರ: ಪಕ್ಷಾಂತರದಿಂದಲೇ ರಾಜಕೀಯ ಅಸ್ತಿತ್ವ ಉಳಿಸಿಕೊಂಡು ಬಂದಿರುವ ಸಿ.ಪಿ. ಯೋಗೇಶ್ವರ್ ಅವರಿಗೆ ಪಕ್ಷಾಂತರ ಹೊಸದಲ್ಲ. ಇದು ಅವರ ಆರನೇ ಪಕ್ಷಾಂತರ.

25 ವರ್ಷದಿಂದ ರಾಜಕಾರಣದಲ್ಲಿರುವ ಯೋಗೇಶ್ವರ್ ಕಾಂಗ್ರೆಸ್, ಬಿಜೆಪಿ, ಸಮಾಜವಾದಿ ಪಕ್ಷಗಳಿಗೆ ಹೋಗಿ ಬಂದಿದ್ದಾರೆ. ಒಮ್ಮೆ ಸಮಾಜವಾದಿ ಪಕ್ಷಕ್ಕೆ, ತಲಾ ಎರಡು ಸಲ ಕಾಂಗ್ರೆಸ್ ಮತ್ತು ಬಿಜೆಪಿಗೆ ಪಕ್ಷಾಂತರ ಮಾಡಿದ್ದ ಅವರು ಇದೀಗ ಮತ್ತೆ ಕಾಂಗ್ರೆಸ್‌ಗೆ ಮರಳಿದ್ದಾರೆ.

ಸಿನಿಮಾ ನಟ, ಚಿತ್ರ ನಿರ್ಮಾಣದ ಜೊತೆ ಉದ್ಯಮಿಯೂ ಆಗಿದ್ದ ಯೋಗೇಶ್ವರ್ ರಾಜಕೀಯ ಪಯಣ ಶುರುವಾಗಿದ್ದು ಕಾಂಗ್ರೆಸ್‌ನಿಂದ. ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿ (ಕೆಪಿಸಿಸಿ) ಕಾರ್ಯದರ್ಶಿಯಾಗಿದ್ದ ಅವರು 1999ರ ಚುನಾವಣೆಯಲ್ಲಿ ಟಿಕೆಟ್ ಸಿಗದಿದ್ದಾಗ ಸ್ವತಂತ್ರವಾಗಿ ಸ್ಪರ್ಧಿಸಿ ಗೆದ್ದರು.

ಮೊದಲ ಚುನಾವಣೆಯಲ್ಲೇ ಬಂಡಾಯದ ಬಾವುಟ ಹಾರಿಸಿ ಗೆದ್ದು ಬಂದ ಅವರು ನಂತರ 2004 ಮತ್ತು 2008ರಲ್ಲಿ ಚುನಾವಣೆಯಲ್ಲಿ ಕಾಂಗ್ರೆಸ್ ಸೇರಿ ಗೆಲುವು ಸಾಧಿಸಿದರು.

2008ರಲ್ಲಿ ರಾಜ್ಯದಲ್ಲಿ ಬಿ.ಎಸ್. ಯಡಿಯೂರಪ್ಪ ನೇತೃತ್ವದಲ್ಲಿ ಬಿಜೆಪಿ ಸರ್ಕಾರ ಅಸ್ತಿತ್ವಕ್ಕೆ ಬಂದ ನಂತರ ನಡೆದ ‘ಆಪರೇಷನ್ ಕಮಲ’ದಿಂದ ಒಂದೇ ವರ್ಷದಲ್ಲಿ ಕಾಂಗ್ರೆಸ್ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಬಿಜೆಪಿ ಸೇರಿದರು. ಮಾರನೇ ವರ್ಷ 2009ರಲ್ಲಿ ನಡೆದ ಉಪ ಚುನಾವಣೆಯಲ್ಲಿ ಜೆಡಿಎಸ್ ಅಭ್ಯರ್ಥಿ ಎಂ.ಸಿ. ಅಶ್ವಥ್ ವಿರುದ್ಧ ಪರಾಭಗೊಂಡರು.

ಜೆಡಿಎಸ್‌ನಿಂದ ಗೆದ್ದ ಎಂ.ಸಿ. ಅಶ್ವಥ್ ಸಹ ವರ್ಷದ ಬಳಿಕ 2010ರಲ್ಲಿ ‘ಆಪರೇಷನ್ ಕಮಲ’ದ ಮೂಲಕ ಬಿಜೆಪಿ ಸೇರಿದರು. ಕ್ಷೇತ್ರಕ್ಕೆ 2011ರಲ್ಲಿ ಉಪ ಚುನಾವಣೆ ಎದುರಾಯಿತು. ಆಗ ಬಿಜೆಪಿಯಿಂದ ಮತ್ತೆ ಅದೃಷ್ಟ ಪರೀಕ್ಷೆಗೆ ಇಳಿದ ಯೋಗೇಶ್ವರ್, ಜೆಡಿಎಸ್‌ನ ಸಿಂ.ಲಿಂ. ನಾಗರಾಜು ವಿರುದ್ಧ ಜಯ ಸಾಧಿಸಿದರು. ಮುಖ್ಯಮಂತ್ರಿ ಸದಾನಂದಗೌಡ ಸಂಪುಟದಲ್ಲಿ 2013ರವರೆಗೆಅರಣ್ಯಸಚಿವರಾಗಿದ್ದರು.

2013ರಲ್ಲಿ ನಡೆದ ಸಾರ್ವತ್ರಿಕ ಚುನಾವಣೆಯ ಹೊತ್ತಿಗೆ ಮತ್ತೆ ಕಾಂಗ್ರೆಸ್‌ನತ್ತ ವಾಲಿದ ಯೋಗೇಶ್ವರ್ ಅವರಿಗೆ ಪಕ್ಷ ‘ಬಿ ಫಾರಂ’ ನೀಡಲಿಲ್ಲ. ನಾಮಪತ್ರ ಸಲ್ಲಿಕೆಗೆ ಒಂದು ದಿನ ಬಾಕಿ ಇರುವಾಗ ಸಮಾಜವಾದಿ ಪಕ್ಷದ (ಎಸ್‌ಪಿ) ಟಿಕೆಟ್ ತಂದು ಸ್ಪರ್ಧಿಸಿ ಗೆಲುವು ಸಾಧಿಸಿದರು. 2018ರ ಚುನಾವಣೆ ಸಂದರ್ಭದಲ್ಲಿ ಮತ್ತೆ ಬಿಜೆಪಿ ಸೇರಿದ ಅವರು ಜೆಡಿಎಸ್‌ನ ಎಚ್.ಡಿ.ಕುಮಾರಸ್ವಾಮಿ ವಿರುದ್ಧ ಸೋತರು.

ಸೋತರೂ ಸಚಿವ ಸ್ಥಾನ: ಆ ವರ್ಷ ಮತ್ತೆ ಅಧಿಕಾರ ಹಿಡಿದ ಬಿಜೆಪಿಯು, ಸೋತಿದ್ದ ಯೋಗೇಶ್ವರ್ ಅವರನ್ನು ವಿಧಾನ ಪರಿಷತ್ ಸದಸ್ಯನನ್ನಾಗಿ ಮಾಡಿ ಸಚಿವ ಸ್ಥಾನ ನೀಡಿತು. ಆಗ ಬಿ.ಎಸ್. ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಕೆಳಕ್ಕಿಳಿಸಿ ಬಸವರಾಜ ಬೊಮ್ಮಾಯಿ ಅವರನ್ನು ಸಿ.ಎಂ ಕುರ್ಚಿಗೆ ಕೂರಿಸುವಲ್ಲಿ ಮಹತ್ವದ ಪಾತ್ರ ವಹಿಸಿದ್ದ ಅವರಿಗೆ ಮತ್ತೆ ಸಚಿವನಾಗುವ ಭಾಗ್ಯ ಸಿಗಲಿಲ್ಲ.

2023ರ ಚುನಾವಣೆಯಲ್ಲಿ ಯೋಗೇಶ್ವರ್ ಮತ್ತೆ ಬಿಜೆಯಿಂದ ಕುಮಾರಸ್ವಾಮಿ ವಿರುದ್ಧ ಕಣಕ್ಕಿಳಿದರೂ ಗೆಲುವು ದಕ್ಕದೆ, ಪರಿಷತ್ ಸ್ಥಾನದಲ್ಲೇ ಮುಂದುವರಿದಿದ್ದರು. 2024 ಲೋಕಸಭಾ ಚುನಾವಣೆಯಲ್ಲಿ ಕುಮಾರಸ್ವಾಮಿ ಮಂಡ್ಯದಿಂದ ಸ್ಪರ್ಧಿಸಿ ಗೆದ್ದಿದ್ದರಿಂದ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿದರು.

ತೆರವಾಗಿರುವ ಸ್ಥಾನಕ್ಕೆ ನಡೆಯುತ್ತಿರುವ ಉಪ ಚುನಾವಣೆಗೆ ಸ್ಪರ್ಧಿಸಲು ಶುರುವಾದ ಟಿಕೆಟ್ ರಾಜಕಾರಣದಲ್ಲಿ ಮತ್ತೆ ಕಾಂಗ್ರೆಸ್ ಸೇರಿದ್ದಾರೆ. ವಿಧಾನ ಪರಿಷತ್ ಸದಸ್ಯತ್ವಕ್ಕೆ ರಾಜೀನಾಮೆ ನೀಡಿರುವ ಅವರು ಕಾಂಗ್ರೆಸ್ ಅಭ್ಯರ್ಥಿಯಾಗಿ ಸ್ಪರ್ಧಿಸುವುದು ಖಚಿತವಾಗಿದೆ.

‘ಎನ್‌ಡಿಎ ನನ್ನ ಬೆಳವಣಿಗೆಗೆ ಅಡ್ಡಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನಾನಿದ್ದ ಬಿಜೆಪಿ ಜತೆಗೆ ಜೆಡಿಎಸ್ ಪಕ್ಷ ಸೇರಿಕೊಂಡ ಬಳಿಕ ಎನ್‌ಡಿಎ ಮೈತ್ರಿಕೂಟದಲ್ಲಿ ಇದ್ದ ವಾತಾವರಣ ನನ್ನ ರಾಜಕೀಯ ಬೆಳವಣಿಗೆಗೆ ಪೂರಕ ಆಗಿರಲಿಲ್ಲ. ಹೀಗಾಗಿ ಸ್ವಯಂಪ್ರೇರಿತವಾಗಿ ಕಾಂಗ್ರೆಸ್ ಪಕ್ಷ ಸೇರಿದ್ದೇನೆ’ ಎಂದು ಸಿ.ಪಿ. ಯೋಗೇಶ್ವರ ಸಮರ್ಥನೆ ನೀಡಿದರು.

ಕಾಂಗ್ರೆಸ್ ಪಕ್ಷ ಸೇರಿದ ಬಳಿಕ ಮಾತನಾಡಿದ ಅವರು, ‘ಕಳೆದ ಮೂರ್ನಾಲ್ಕು ತಿಂಗಳಲ್ಲಿ ನಡೆದಿರುವ ರಾಜಕೀಯ ಬೆಳವಣಿಗೆಯಲ್ಲಿ ಬೇಸರವಾಗಿದೆ. ಕೆಲವೊಮ್ಮೆ ನಮಗಾಗಿ ನಾವು ಕಟ್ಟಿದ ಮನೆಯಲ್ಲಿ ನಾವು ವಾಸ ಮಾಡಲು ಆಗುವುದಿಲ್ಲ. ಅದೇ ಸಂದರ್ಭ ನನಗೆ ಬಂದಿದೆ’ ಎಂದರು.

‘ನನ್ನ ರಾಜಕೀಯ ಜೀವನವನ್ನು ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ಕಾಂಗ್ರೆಸ್ ಪಕ್ಷದಿಂದ ಆರಂಭಿಸಿದ್ದೆ. ಈಗ ಮತ್ತೆ ಬಂದಿದ್ದೇನೆ. ಡಿ.ಕೆ. ಸುರೇಶ್ ಅವರ 2–3 ಗೆಲುವಿನಲ್ಲಿ ನನ್ನ ಪಾತ್ರವೂ ಇದೆ. ಒಂದು ಬಾರಿ ಅವರ ಸೋಲಿನಲ್ಲೂ ನನ್ನ ಪಾತ್ರವಿದೆ. ರಾಜಕಾರಣದಲ್ಲಿ ಏರಿಳಿತಗಳು ಇರುತ್ತವೆ. ಪಕ್ಷ ಬಿಟ್ಟ ನಂತರ ಅನೇಕ ಟೀಕೆ ಟಿಪ್ಪಣಿ ಬರುತ್ತವೆ. ನಾನದನ್ನು ಸಕಾರಾತ್ಮಕವಾಗಿ ಸ್ವೀಕರಿಸುತ್ತೇನೆ’ ಎಂದರು.

‘ಕ್ಷೇತ್ರ ಅಭಿವೃದ್ಧಿ ಮಾಡುವುದು ನಮ್ಮ ಗುರಿ. ಡಿ.ಕೆ. ಶಿವಕುಮಾರ್ ಮತ್ತು ರಾಮಲಿಂಗಾ ರೆಡ್ಡಿ ಅವರು ಕಳೆದ ಮೂರ್ನಾಲ್ಕು ತಿಂಗಳಲ್ಲಿ ಕ್ಷೇತ್ರದಲ್ಲಿ ಹಲವು ಅಭಿವೃದ್ಧಿ ಯೋಜನೆಗಳನ್ನು ಕೈಗೊಂಡಿದ್ದಾರೆ. ಅಭಿವೃದ್ಧಿ ಚಟುವಟಿಕೆಯಲ್ಲಿ ನಾನೂ ಪಾಲುದಾರನಾಗಬೇಕು. ಸರ್ಕಾರದ ಜತೆ ಕೈಜೋಡಿಸಿ ಕಾಂಗ್ರೆಸ್ ಪಕ್ಷದಲ್ಲಿ ಕೆಲಸ ಮಾಡಬೇಕೆಂದು ಈ ತೀರ್ಮಾನ ಮಾಡಿದ್ದೇನೆ’ ಎಂದರು.

ಎಲ್ಲರ ಒಪ್ಪಿಗೆ ಪಡೆದು ಸೇರ್ಪಡೆ– ಡಿಕೆಶಿ

‘ಕಾಂಗ್ರೆಸ್ ಪಕ್ಷದಿಂದಲೇ ಯೋಗೇಶ್ವರ್ ಅವರ ರಾಜಕಾರಣ ಆರಂಭವಾಗಿತ್ತು. ಮತ್ತೊಮ್ಮೆ ಅದೇ ಪಕ್ಷದಿಂದಲೇ ರಾಜಕಾರಣ ಮಾಡಬೇಕು ಎಂದು ಅವರು ಬುಧವಾರ (ಅ. 23) ಬೆಳಿಗ್ಗೆ ನನ್ನನ್ನು ಭೇಟಿ ಮಾಡಿ ಅಭಿಪ್ರಾಯ ಹಂಚಿಕೊಂಡರು. ಮತ್ತೆ ಕಾಂಗ್ರೆಸ್ಸಿಗನಾಗಿ ಮುಂದುವರಿಯಬೇಕೆಂದು ಪಕ್ಷ ಸೇರ್ಪಡೆಯಾಗಿದ್ದಾರೆ’ ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಹೇಳಿದರು.

‘ಮುಖ್ಯಮಂತ್ರಿ ನಿವಾಸಕ್ಕೆ ತೆರಳಿ ಸಿದ್ದರಾಮಯ್ಯ ಅವರ ಜೊತೆ ಚರ್ಚೆ ನಡೆಸಿದ ಬಳಿಕ, ವರಿಷ್ಠರ ಗಮನಕ್ಕೆ ತಂದು ಎಲ್ಲರ ಒಪ್ಪಿಗೆ ಮೇರೆಗೆ ಯೋಗೇಶ್ವರ್ ಅವರಿಗೆ ಕಾಂಗ್ರೆಸ್ ಪಕ್ಷದ ಸದಸ್ಯತ್ವ ನೀಡಲಾಗಿದೆ’ ಎಂದರು.

‘ರಾಜಕಾರಣ ಸಾಧ್ಯತೆಗಳ ಕಲೆ. ಎಸ್‌ಪಿ, ಬಿಜೆಪಿ, ಪಕ್ಷೇತರ ಅಭ್ಯರ್ಥಿಯಾಗಿ ಯೋಗೇಶ್ವರ್ ಕೆಲಸ ಮಾಡಿದ್ದಾರೆ. ಜೆಡಿಎಸ್ ಜೊತೆಗೂ ಜಿಲ್ಲೆಯಲ್ಲಿ ಮೈತ್ರಿ ಮಾಡಿಕೊಂಡು ಎನ್‌ಡಿಎ ಅಭ್ಯರ್ಥಿಯನ್ನು ಗೆಲ್ಲಿಸಿದ್ದರು. ರಾಜಕೀಯ ಸನ್ನಿವೇಶ ಬದಲಾದ ಕಾರಣಕ್ಕೆ ಮತ್ತೆ ನಮ್ಮೊಡನೆ ಕೈಜೋಡಿಸಿದ್ದಾರೆ’ ಎಂದರು.

ಚನ್ನಮ್ಮನ ಕಿತ್ತೂರಿನಲ್ಲಿ ಬುಧವಾರ ನಡೆದ ಜಾನಪದ ಕಲಾವಾಹಿನಿ ಮೆರವಣಿಗೆಯಲ್ಲಿ ಅಪಾರ ಸಂಖ್ಯೆಯಲ್ಲಿ ಜನ ಸೇರಿದ್ದರು ಪ್ರಜಾವಾಣಿ ಚಿತ್ರ: ಏಕನಾಥ ಅಗಸಿಮನಿ

ನವದೆಹಲಿಯ ಸಂಸತ್ ಆವರಣದಲ್ಲಿರುವ ರಾಣಿ ಚನ್ನಮ್ಮ ಪ್ರತಿಮೆಗೆ ವಿ. ಸೋಮಣ್ಣ, ಓಂ ಬಿರ್ಲಾ ಪುಷ್ಪನಮನ ಸಲ್ಲಿಸಿದರು. ಪ್ರಲ್ಹಾದ ಜೋಶಿ, ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಇದ್ದಾರೆ

ಕಿತ್ತೂರು ವಿಜಯೋತ್ಸವದ 200ನೇ ವರ್ಷಾಚರಣೆ • ವಿಜಯ ಜ್ಯೋತಿಗೆ ಸ್ವಾಗತ • ಜನಸಾಗರ

ಕಿತ್ತೂರು ಹಿರಿಮೆ ಸಾರಿದ ಮೆರವಣಿಗೆ

• ಸಂತೋಷ ಈ. ಚಿನಗುಡಿ

ಚನ್ನಮ್ಮನ ಕಿತ್ತೂರು (ಬೆಳಗಾವಿ ಜಿಲ್ಲೆ): ಕಿತ್ತೂರು ವಿಜಯೋತ್ಸವದ 200ನೇ ವರ್ಷಾಚರಣೆ ಪ್ರಯುಕ್ತ ಬುಧವಾರ ನಡೆದ ಜಾನಪದ ಕಲಾವಾಹಿನಿ ಮೆರವಣಿಗೆಯು ಕ್ರಾಂತಿ ನೆಲದ ಹಿರಿಮೆ ಸಾದರಪಡಿಸಿತು.

ರಾಜಬೀದಿಯುದ್ದಕ್ಕೂ ಜನಸಾಗರ ಇತ್ತು, ಸಂಭ್ರಮವು ಎಲ್ಲೆಡೆ ಆವರಿಸಿತ್ತು, ಎಲ್ಲರೂ ಜೊತೆಗೂಡಿ ಕಿತ್ತೂರ ಲೋಕೋತ್ಸವ ಸೃಷ್ಟಿಸಿದ್ದರು.

ರಾಜ್ಯಾದ್ಯಂತ ಸಂಚರಿಸಿ ಬಂದ 'ವಿಜಯ ಜ್ಯೋತಿ'ಯನ್ನು ಜಿಲ್ಲಾ ಉಸ್ತುವಾರಿ ಸಚಿವ ಸತೀಶ ಜಾರಕಿಹೊಳಿ ಸ್ವಾಗತಿಸಿದರೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಲಕ್ಷ್ಮಿ ಹೆಬ್ಬಾಳಕರ ಮೆರವಣಿಗೆಗೆ ಚಾಲನೆ ನೀಡಿದರು.

ರಾಜಗುರು ಸಂಸ್ಥಾನ ಕಲ್ಮಠದ ಮಡಿವಾಳ ರಾಜಯೋಗೀಂದ್ರ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ನೂರಡಿ ವಿಸ್ತಾರದ ರಾಜಬೀದಿಯಲ್ಲಿ ಜನ ನದಿಯಂತೆ ಹರಿದು ಬಂದರು.

ವೇಷಭೂಷಣ, ಶಿಳ್ಳೆ, ಚಪ್ಪಾಳೆ, ಕೇಕೆಗಳ ಮಧ್ಯೆ ಕಲಾತಂಡಗಳು ಹೆಜ್ಜೆ ಹಾಕಿದವು. ಗೆಜ್ಜೆನಾದ, ಹಲಗೆಮೇಳ, ಡೊಳ್ಳು– ಢಮರುಗ, ಜಾಂಜ್‌ಪಥಕ್, ಕೀಲುಕುದುರೆ, ಕೋಳಿನೃತ್ಯ, ಗೊರವರ ಕುಣಿತ, ದೊಡ್ಡಸಂಬಾಳ ಮೇಳ, ನಗಾರಿ, ನಂದಿಧ್ವಜ, ಜಗ್ಗಲಿಗೆ ಮೇಳ, ಯಕ್ಷಗಾನ, ವೀರಗಾಸೆ ಕಲಾವಿದರು ಮೆರವಣಿಗೆಯಲ್ಲಿ ಪಾಲ್ಗೊಂಡರು.

ಕಿತ್ತೂರು ರಾಜಬೀದಿಯಲ್ಲಿ ವಿಜಯಜ್ಯೋತಿ ಬರುತ್ತಿದ್ದಂತೆಯೇ ಜನರು ರಸ್ತೆಗೆ ನೀರು ಹಾಕಿದರು. ಜ್ಯೋತಿಗೆ ಎಣ್ಣೆಹಾಕಿ, ಕರ್ಪೂರ ಹಚ್ಚಿ, ತೆಂಗಿನಕಾಯಿ ಒಡೆದು, ನೈವೇದ್ಯ ಅರ್ಪಿಸಿದರು. ರಾಣಿ ಚನ್ನಮ್ಮನ ಮೂರ್ತಿಗೆ ಪುಷ್ಪಾರ್ಚನೆ ಮಾಡಿದರು. ವಿಜಯೋತ್ಸವ ಮುಂದಿನ 501 ಪೂರ್ಣಕುಂಭ ಕಳಶ ಹೊತ್ತ ವನಿತೆಯರು ಬರಿಗಾಲಿನಲ್ಲಿ ಸಾಗಿದರು.

1824ರ ಅಕ್ಟೋಬರ್ 23ರಂದು ಕಿತ್ತೂರು ಸೇನೆ ಬ್ರಿಟಿಷ್ ಸೈನ್ಯದ ವಿರುದ್ಧ ವಿಜಯ ಸಾಧಿಸಿತು. ಆ ವಿಜಯಕ್ಕೆ 200 ವಸಂತಗಳು ತುಂಬಿವೆ. ಈ ಹಿಂದೆಂದಿಗಿಂತಲೂ ದ್ವಿಶತಮಾನೋತ್ಸವ ವೈಭವೋಪೇತವಾಗಿ ನಡೆಯಿತು.

ವಿಜಯೋತ್ಸವಕ್ಕೆ ಅದ್ದೂರಿ ಚಾಲನೆ

ಚನ್ನಮ್ಮನ ಕಿತ್ತೂರು: ಐತಿಹಾಸಿಕ ಕಿತ್ತೂರು ವಿಜಯೋತ್ಸವದ 200ನೇ ಸಂಭ್ರಮಾಚರಣೆ ಕಾರ್ಯಕ್ರಮವನ್ನು ಸಚಿವ ಸತೀಶ ಜಾರಕಿಹೊಳಿ ಉದ್ಘಾಟಿಸಿದರು. ಕಿತ್ತೂರು ಕೋಟೆ ಆವರಣದಲ್ಲಿನ ವರ್ಣರಂಜಿತ ವೇದಿಕೆ ಮೇಲೆ ಮೂರು ದಿನ ನಡೆಯುವ ವೈವಿಧ್ಯಮಯ ಕಾರ್ಯಕ್ರಮಗಳಿಗೂ ಅವರು ಚಾಲನೆ ನೀಡಿದರು.

ಕೇಂದ್ರ ಸರ್ಕಾರ ಹೊರತಂದ 200ನೇ ವಿಜಯೋತ್ಸವದ ಅಂಚೆಚೀಟಿ ಹಾಗೂ ಶಾಶ್ವತ ಅಂಚೆ ಲಕೋಟೆ ಪ್ರತಿಯನ್ನು ಸಂಸದ ವಿಶ್ವೇಶ್ವರ ಹೆಗಡೆ ಕಾಗೇರಿ ಬಿಡುಗಡೆ ಮಾಡಿದರು. ಸಂತೋಷ ಹಾನಗಲ್ ಸಂಪಾದಕತ್ವದ 'ದಿ ಫೋರ್ಟ್‌ರೆಸ್ ಆಫ್ ಫಿಯರ್‌ಲೆಸ್ ಡ್ರೀಮ್ಸ್' ಹಾಗೂ ಯ.ರು.ಪಾಟೀಲ ಅವರ 'ಸ್ವಾತಂತ್ರ್ಯ ಶ್ರೀ' ಕೃತಿಗಳನ್ನು ಸಚಿವೆ ಲಕ್ಷ್ಮಿ ಹೆಬ್ಬಾಳಕರ ಬಿಡುಗಡೆ ಮಾಡಿದರು.

ಕಿತ್ತೂರು ರಾಜಗುರು ಸಂಸ್ಥಾನ ಕಲ್ಮಠದ ಮಡಿವಾಳ ರಾಜಯೋಗೀಂದ್ರ ಸ್ವಾಮೀಜಿ, ಬೈಲೂರು ನಿಷ್ಕಲ ಮಂಟಪದ ನಿಜಗುಣಾನಂದ ಸ್ವಾಮೀಜಿ, ನಿಚ್ಚಣಕಿಯ ಮಡಿವಾಳೇಶ್ವರ ಮಠದ ಪಂಚಾಕ್ಷರಿ ಸ್ವಾಮೀಜಿ ಆಶೀರ್ವಚನ ನೀಡಿದರು. ಶಾಸಕ ಬಾಬಾಸಾಹೇಬ ಪಾಟೀಲ ಅಧ್ಯಕ್ಷತೆ ವಹಿಸಿದ್ದರು. ಶಾಸಕರಾದ ಮಹಾಂತೇಶ ಕೌಜಲಗಿ, ಆಸಿಫ್ ಸೇಠ್ ಇದ್ದರು.

ಸಂಸತ್ ಆವರಣದಲ್ಲಿ ಚನ್ನಮ್ಮ ಸ್ಮರಣೆ

ನವದೆಹಲಿ: ವೀರ ವನಿತೆ ಕಿತ್ತೂರು ಚನ್ನಮ್ಮ ಜನ್ಮದಿನಾಚರಣೆ ಹಾಗೂ ಕಿತ್ತೂರು ವಿಜಯೋತ್ಸವಕ್ಕೆ 200 ವರ್ಷಗಳು ಸಂದ ಸಂದರ್ಭದಲ್ಲಿ ಸಂಸತ್ ಆವರಣದಲ್ಲಿ ಚನ್ನಮ್ಮ ಅವರ ಸಾಧನೆಯನ್ನು ಸ್ಮರಿಸಲಾಯಿತು.

ಚನ್ನಮ್ಮ ಪ್ರತಿಮೆಗೆ ಲೋಕಸಭೆಯ ಸ್ಪೀಕರ್ ಓಂ ಬಿರ್ಲಾ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ, ಕೂಡಲ ಸಂಗಮ ಮಠದ ಬಸವ ಜಯ ಮೃತ್ಯುಂಜಯ ಸ್ವಾಮೀಜಿ, ಹರಿಹರ ಪಂಚಮಸಾಲಿ ಪೀಠದ ವಚನಾನಂದ ಸ್ವಾಮೀಜಿ, ರಾಜ್ಯಸಭಾ ಸದಸ್ಯ ಈರಣ್ಣ ಕಡಾಡಿ, ಬಿಜೆಪಿ ಶಾಸಕರಾದ ಬಸನಗೌಡ ಪಾಟೀಲ ಯತ್ನಾಳ, ಅರವಿಂದ ಬೆಲ್ಲದ ಪುಷ್ಪನಮನ ಸಲ್ಲಿಸಿದರು.

ವಿ.ಸೋಮಣ್ಣ ಮಾತನಾಡಿ, 'ಬ್ರಿಟಿಷರ ವಿರುದ್ಧ ಬಂಡಾಯ ಸಾರಿದ ಮೊದಲ ಧೀರ ಮಹಿಳೆ ಚನ್ನಮ್ಮ. ಬ್ರಿಟಿಷರ ವಿರುದ್ಧ ಹೋರಾಟದ ಮೂಲಕ ಸಂಚಲನ ಮೂಡಿಸಿ, ಸ್ವಾತಂತ್ರ್ಯ ಹೋರಾಟಕ್ಕೆ ಪ್ರೇರಣೆ ನೀಡಿದವರು' ಎಂದರು.

ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಮಾತನಾಡಿ, 'ಸಂಸತ್ ಆವರಣದಲ್ಲಿ ಪ್ರತಿವರ್ಷ ಕಾರ್ಯಕ್ರಮ ನಡೆಸಬೇಕು. ಈ ಮೂಲಕ ಉತ್ತರ ಭಾರತದ ಜನರಿಗೆ ಚನ್ನಮ್ಮನ ಶೌರ್ಯ ಸಾಹಸ ತಿಳಿಯುವಂತೆ ಆಗಬೇಕು' ಎಂದರು.

ರಂಗೇರಿದ ಚುನಾವಣಾ ಅಖಾಡ

ಒಂದನೇ ಪುಟದಿಂದ...

ಶಿಗ್ಗಾವಿ ಕ್ಷೇತ್ರದ ಗೆಲುವು ದಕ್ಕಿಸಿಕೊಳ್ಳುವ ಅಭ್ಯರ್ಥಿ ಆಯ್ಕೆಯ 'ಲೆಕ್ಕಾಚಾರ'ದಲ್ಲಿದ್ದಾರೆ.

ತನ್ನ ನೆಲೆ ಭದ್ರವಲ್ಲದ ಚನ್ನಪಟ್ಟಣದಲ್ಲಿ ಸೂಕ್ತ ಅಭ್ಯರ್ಥಿಯನ್ನು ಕಣಕ್ಕಿಳಿಸಿ ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿಗೆ ತಿರುಗೇಟು ನೀಡಬೇಕೆಂದು ಡಿ.ಕೆ. ಶಿವಕುಮಾರ್– ಡಿ.ಕೆ. ಸುರೇಶ್ ಹಲವು ತಿಂಗಳುಗಳಿಂದ ಕ್ಷೇತ್ರಕ್ಕೆ ಧುಮುಕಿದ್ದರು. ಇಲ್ಲಿಂದ ಕಣಕ್ಕಿಳಿಯಲೇಬೇಕೆಂಬ ಮಹದಾಸೆಯಿಂದ ವಿಧಾನ ಪರಿಷತ್ ಸದಸ್ಯ ಸ್ಥಾನಕ್ಕೆ ರಾಜೀನಾಮೆ ನೀಡಿದ್ದ ಯೋಗೇಶ್ವರ್, 'ಮೈತ್ರಿ' ಟಿಕೆಟ್ ಸಿಗುವುದಿಲ್ಲವೆಂದು ಖಚಿತ ಆಗುತ್ತಿದ್ದಂತೆ ಕೆಪಿಸಿಸಿ ಅಧ್ಯಕ್ಷರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಸದಾಶಿವನಗರದ ಮನೆಯ ಅಂಗಳದಲ್ಲಿ ಬುಧವಾರ ಬೆಳಿಗ್ಗೆ ಕಾಣಿಸಿಕೊಂಡಿದ್ದರು. ಆ ಮೂಲಕ, ಕಾಂಗ್ರೆಸ್‌ನಿಂದ ಅವರು ಕಣಕ್ಕಿಳಿಯುವುದೂ ಖಚಿತವಾಗಿತ್ತು.

ಚನ್ನಪಟ್ಟಣದಲ್ಲಿ ತಮ್ಮದೇ 'ಮತ ಬ್ಯಾಂಕ್' ಹೊಂದಿರುವ ಯೋಗೇಶ್ವರ್ ಅವರನ್ನು ಪಕ್ಷದ ಮದ್ದೂರು ಶಾಸಕ ಕದಲೂರು ಉದಯ್‌ಗೌಡ ಮತ್ತು ಮಾಗಡಿ ಶಾಸಕ ಎಚ್.ಸಿ. ಬಾಲಕೃಷ್ಣ ಮೂಲಕ ಗಾಳ ಹಾಕಿದ್ದ ಡಿಕೆ ಸಹೋದರರು ತಮ್ಮ ಯತ್ನದಲ್ಲಿ ಯಶಸ್ಸು ಕಂಡಿದ್ದಾರೆ. ಹಳೆ ಮೈಸೂರು ಭಾಗದಲ್ಲಿ 'ದಳಪತಿ'ಗಳನ್ನು ಕಟ್ಟಿ ಹಾಕುವ ತಂತ್ರಗಾರಿಕೆ ಹೆಣೆದಿದ್ದಾರೆ.

ರಾಜ್ಯ ಸರ್ಕಾರದ ವಿರುದ್ಧ ನಿತ್ಯ ವಾಗ್ದಾಳಿ ನಡೆಸುತ್ತಲೇ ಇರುವ ಕುಮಾರಸ್ವಾಮಿ, ಸರ್ಕಾರವನ್ನು ಅಸ್ಥಿರಗೊಳಿಸುವ ಮಾತುಗಳನ್ನೂ ಆಡುತ್ತಿದ್ದಾರೆ. ಕುಮಾರಸ್ವಾಮಿ ಅವರ ಈ ಲೆಕ್ಕಾಚಾರಗಳನ್ನು ಬುಡಮೇಲು ಮಾಡಬೇಕಿದ್ದರೆ ಅವರ ಪಕ್ಷವನ್ನು ರಾಮನಗರ ಜಿಲ್ಲೆಯಿಂದಲೇ ಹೊರಗಟ್ಟಬೇಕೆಂದು ಶಿವಕುಮಾರ್ ಅವರ ತಂತ್ರ. ಚನ್ನಪಟ್ಟಣ ಕ್ಷೇತ್ರವನ್ನೂ ಕೈವಶ ಮಾಡಿಕೊಂಡು ಇಡೀ ಜಿಲ್ಲೆಯಲ್ಲಿ ಜೆಡಿಎಸ್ ಅಸ್ತಿತ್ವದಲ್ಲಿ ಇಲ್ಲದಂತೆ ಮಾಡಬೇಕೆಂಬುದು ಅವರ ಕಾರ್ಯತಂತ್ರ. ಮಂಡ್ಯ ಮತ್ತು ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರಗಳಲ್ಲಿನ ಸೋಲಿನ ಸೇಡು ತೀರಿಸಿಕೊಳ್ಳುವುದರ ಭಾಗವಾಗಿ ಶಿವಕುಮಾರ್ ಅವರು ಯೋಗೇಶ್ವರ್ ಅವರನ್ನು ಪಕ್ಷದ ತೆಕ್ಕೆಗೆ ತೆಗೆದುಕೊಳ್ಳುವ ನಿರ್ಧಾರ ಕೈಗೊಂಡರು ಎಂಬ ಚರ್ಚೆಯೂ ಕಾಂಗ್ರೆಸ್ ವಲಯದಲ್ಲಿದೆ.

'ಕೈ' ಹಿಡಿದ ಯೋಗೇಶ್ವರ್: ಬುಧವಾರ ಬೆಳಿಗ್ಗೆ ಡಿ.ಕೆ. ಶಿವಕುಮಾರ್ ಅವರ ಸದಾಶಿವನಗರದ ನಿವಾಸಕ್ಕೆ ಯೋಗೇಶ್ವರ್ ಬಂದಿದ್ದರು. ಅಲ್ಲಿಂದ ಶಿವಕುಮಾರ್ ಜೊತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮನೆಗೆ ಹೋಗಿದ್ದರು. ಅಲ್ಲಿ ಕೆಲಹೊತ್ತು ಮಾತುಕತೆ ನಡೆಸಿದ ನೇರವಾಗಿ ಕೆಪಿಸಿಸಿ ಕಚೇರಿಗೆ ತೆರಳಿದ ಅವರು ಕಾಂಗ್ರೆಸ್ ಸೇರಿದರು. ಸಚಿವರಾದ ರಾಮಲಿಂಗಾರೆಡ್ಡಿ, ಜಮೀರ್ ಅಹಮದ್ ಖಾನ್, ಎನ್. ಚಲುವರಾಯಸ್ವಾಮಿ, ಕೃಷ್ಣ ಬೈರೇಗೌಡ, ಡಾ. ಎಂ.ಸಿ. ಸುಧಾಕರ್, ಮಾಜಿ ಸಂಸದ ಡಿ.ಕೆ. ಸುರೇಶ್, ಕೆಪಿಸಿಸಿ ಕಾರ್ಯಾಧ್ಯಕ್ಷ ಜಿ.ಸಿ. ಚಂದ್ರಶೇಖರ್, ರಾಮನಗರ ಜಿಲ್ಲಾ ಕಾಂಗ್ರೆಸ್ ಘಟಕದ ಅಧ್ಯಕ್ಷ ಗಂಗಾಧರ್, ಶಾಸಕರಾದ ಬಾಲಕೃಷ್ಣ, ರಂಗನಾಥ್, ಕದಲೂರು ಉದಯ್ ಗೌಡ, ರವಿ ಕುಮಾರ್ ಗಣಿಗ, ಎ.ಎಸ್. ಪೊನ್ನಣ್ಣ, ವಿಧಾನ ಪರಿಷತ್ ಸದಸ್ಯರಾದ ಪುಟ್ಟಣ್ಣ, ನಜೀರ್ ಅಹ್ಮದ್, ದಿನೇಶ್ ಗೂಳಿಗೌಡ ಉಪಸ್ಥಿತರಿದ್ದರು.

ಬಿಜೆಪಿ ಮುಖಂಡ ಸಿ.ಪಿ. ಯೋಗೇಶ್ವರ್, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ಸಮ್ಮುಖದಲ್ಲಿ ಬುಧವಾರ ಕಾಂಗ್ರೆಸ್ ಪಕ್ಷಕ್ಕೆ ಸೇರ್ಪಡೆಯಾದರು.

'ಬಸವಣ್ಣನ ತತ್ವಕ್ಕೆ ವಿರುದ್ಧ'

ಬೆಂಗಳೂರು: 'ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆ (ಜಾತಿ ಜನಗಣತಿ) ವರದಿಯನ್ನು ಜಾರಿ ಮಾಡಬಾರದೆಂಬ ವಾದ ಬಸವಣ್ಣನವರ ತತ್ವಕ್ಕೆ ವಿರುದ್ಧವಾಗಿದೆ' ಎಂದು ಆಲ್ ಇಂಡಿಯಾ ಬಹುಜನ ಸಮಾಜ ಪಾರ್ಟಿ ತಿಳಿಸಿದೆ.

ಅಖಿಲ ಭಾರತ ವೀರಶೈವ/ ಲಿಂಗಾಯತ ಮಹಾಸಭಾ ಕೈಗೊಂಡ ನಿರ್ಣಯವನ್ನು ಖಂಡಿಸಿರುವ ಪಾರ್ಟಿ ಅಧ್ಯಕ್ಷ ಮಾರಸಂದ್ರ ಮುನಿಯಪ್ಪ, 'ಸಿದ್ದರಾಮಯ್ಯ ಅವರ ಸರ್ಕಾರ ₹ 160 ಕೋಟಿ ವೆಚ್ಚದಲ್ಲಿ ವೈಜ್ಞಾನಿಕವಾಗಿ ಸಮೀಕ್ಷೆ ನಡೆಸಿ, ವರದಿ ಸಿದ್ಧಪಡಿಸಿದೆ. ಈ ವರದಿಯನ್ನು ಜಾರಿ ಮಾಡಬಾರದೆಂಬುದು ಸರಿಯಲ್ಲ' ಎಂದು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಕೆಪಿಎಸ್‌ಸಿ ಪರೀಕ್ಷೆ ಎಡವಟ್ಟು ಕಾರ್ಯದರ್ಶಿ ರಾಕೇಶ್ ವರ್ಗ

ಬೆಂಗಳೂರು: ಗೆಜೆಟೆಡ್ ಪ್ರೊಬೇಷನರಿ 384 ಹುದ್ದೆಗಳ ನೇಮಕಾತಿಗೆ ಆಗಸ್ಟ್ 27ರಂದು ನಡೆದ ಪೂರ್ವಭಾವಿ ಪರೀಕ್ಷೆಯ ಕನ್ನಡ ಪ್ರಶ್ನೆಪತ್ರಿಕೆಯಲ್ಲಿ ಇಂಗ್ಲಿಷ್‌ನಿಂದ ಕನ್ನಡಕ್ಕೆ ಭಾಷಾಂತರಿಸಿದ ಪ್ರಶ್ನೆ– ಉತ್ತರಗಳಲ್ಲಿ ತಪ್ಪುಗಳು ಕಾಣಿಸಿಕೊಂಡ ಕಾರಣಕ್ಕೆ ಸುದ್ದಿಯಲ್ಲಿದ್ದ ಕರ್ನಾಟಕ ಲೋಕಸೇವಾ ಆಯೋಗದ (ಕೆಪಿಎಸ್‌ಸಿ) ಕಾರ್ಯದರ್ಶಿ ಕೆ. ರಾಕೇಶ್ ಕುಮಾರ್ ಅವರನ್ನು ಹೊಣೆಯಿಂದ ಮುಕ್ತಗೊಳಿಸಲಾಗಿದೆ.

ಸ್ಥಳ ನಿರೀಕ್ಷೆಯಲ್ಲಿದ್ದ ಐಎಎಸ್ ಅಧಿಕಾರಿ ರಮಣದೀಪ್ ಚೌಧರಿ ಅವರನ್ನು ತಕ್ಷಣ ದಿಂದ ಜಾರಿಗೆ ಬರುವಂತೆ ಕಾರ್ಯದರ್ಶಿಯಾಗಿ ನೇಮಿಸಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಆದೇಶ ಹೊರಡಿಸಿದೆ. ಸಮಾಜ ಕಲ್ಯಾಣ ಇಲಾಖೆಯ ಆಯುಕ್ತ ಹುದ್ದೆ ಜೊತೆಗೆ ಕೆಪಿಎಸ್‌ಸಿ ಹೊಣೆಯನ್ನೂ ರಾಕೇಶ್ ಕುಮಾರ್ ಅವರಿಗೆ ನೀಡಲಾಗಿತ್ತು.

ಅಲ್ಲದೆ, ಖಾಲಿ ಇದ್ದ ಕೆಪಿಎಸ್‌ಸಿ ಜಂಟಿ ಪರೀಕ್ಷಾ ನಿಯಂತ್ರಕ ಹುದ್ದೆಯನ್ನು ಲೋಖಂಡೆ ಸ್ನೇಹಲ್ ಸುಧಾಕರ್ ಅವರಿಗೆ ಹೆಚ್ಚುವರಿಯಾಗಿ ನೀಡಲಾಗಿದೆ.

ಭಾಷಾಂತರ ಲೋಪದ ಕಾರಣಕ್ಕೆ ಆಗಸ್ಟ್ 27ರ ಪರೀಕ್ಷೆಯನ್ನು ರದ್ದುಪಡಿಸಿರುವ ಕೆಪಿಎಸ್‌ಸಿ, ಡಿ. 29ರಂದು ಮರು ಪರೀಕ್ಷೆ ನಡೆಸಲಿದೆ. ರದ್ದುಪಡಿಸಿದ ಪರೀಕ್ಷೆಗೆ ₹13.40 ಕೋಟಿ ವೆಚ್ಚವಾಗಿದೆ ಎಂದು ಕೆಪಿಎಸ್‌ಸಿ ಸಭೆಗೆ ಕಾರ್ಯದರ್ಶಿ ಮಾಹಿತಿ ನೀಡಿದ್ದರು. ಈ ನಷ್ಟಕ್ಕೆ ಕಾರಣರಾದ ಯಾವುದೇ ಅಧಿಕಾರಿ, ನೌಕರರ ಮೇಲೆ ಕೆಪಿಎಸ್‌ಸಿಯಾಗಲಿ ರಾಜ್ಯ ಸರ್ಕಾರವಾಗಲಿ ಯಾವುದೇ ಕ್ರಮ ತೆಗೆದುಕೊಂಡಿಲ್ಲ ಎಂದು ಅ. 21ರ 'ಪ್ರಜಾವಾಣಿ'ಯಲ್ಲಿ ವರದಿ ಪ್ರಕಟವಾಗಿತ್ತು.

ಉಳಿದಂತೆ ವರ್ಗಾವಣೆ: ಮನೋಜ್ ಜೈನ್– ಮುಖ್ಯ ಮೌಲ್ಯಮಾಪನ ಅಧಿಕಾರಿ, ಕೆಎಂಇಎ (ಹೆಚ್ಚುವರಿ ಹೊಣೆ), ಸುಷ್ಮಾ ಗೋಡ್ಬೋಲೆ– ಕಾರ್ಯದರ್ಶಿ, ಕರ್ನಾಟಕ ಮಾಹಿತಿ ಆಯೋಗ. ನಿತೇಶ್ ಪಾಟೀಲ್– ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ (ಹೆಚ್ಚುವರಿ ಹೊಣೆ). ಎಚ್. ಬಸವರಾಜೇಂದ್ರ– ಅಧ್ಯಕ್ಷ, ಕರ್ನಾಟಕ ಶಾಲಾ ಪರೀಕ್ಷಾ ಮತ್ತು ಮೌಲ್ಯ ನಿರ್ಣಯ ಮಂಡಳಿ.

ಮಂಡ್ಯ ಸಮ್ಮೇಳನ: ₹25 ಕೋಟಿಗೆ ಶಿಫಾರಸು– ಚಲುವರಾಯಸ್ವಾಮಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಡ್ಯದಲ್ಲಿ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ₹25 ಕೋಟಿ ಬಿಡುಗಡೆ ಮಾಡುವಂತೆ ಆರ್ಥಿಕ ಇಲಾಖೆಗೆ ಶಿಫಾರಸು ಮಾಡಲಾಗಿದ್ದು, ಇದರ ಇತಿಮಿತಿಯೊಳಗೆ ವೆಚ್ಚ ನಿಯಂತ್ರಣ ಮಾಡಿಕೊಳ್ಳಬೇಕು ಎಂದು ಮಂಡ್ಯ ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ಹೇಳಿದರು.

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಅವರು ಮಾತನಾಡಿದರು.

ಮಂಡ್ಯ ಜಿಲ್ಲೆಯ ಸೊಗಡಿನ ಜತೆಗೆ ರಾಜ್ಯದ ಬದುಕನ್ನು ಬೆಸೆಯುವ ಸ್ವರೂಪದಲ್ಲಿ ಕಾರ್ಯಕ್ರಮ ಆಯೋಜಿಸಬೇಕು. ಇದರಲ್ಲಿ ಜಿಲ್ಲೆಯ ಎಲ್ಲ ಜನಪ್ರತಿನಿಧಿಗಳು ಸಂಘ– ಸಂಸ್ಥೆಗಳು, ಸಾಹಿತಿಗಳು, ಚಿಂತಕರು, ಅಧಿಕಾರಿ, ಸಿಬ್ಬಂದಿ ಹೆಚ್ಚಿನ ಕಾಳಜಿ ಮತ್ತು ಪರಿಶ್ರಮ ವಹಿಸಬೇಕು ಎಂದು ಸೂಚಿಸಿದರು.

ಜಿಲ್ಲೆಯಾದ್ಯಂತ ಹಬ್ಬದ ವಾತಾವರಣ ನಿರ್ಮಾಣವಾಗಬೇಕು. ವ್ಯಾಪಕ ಪ್ರಚಾರ, ಉತ್ತಮ ಅಲಂಕಾರ ಮಾಡಬೇಕು. ಮೆರವಣಿಗೆ, ವಿಚಾರ ಗೋಷ್ಠಿ, ಕಾರ್ಯಕ್ರಮಗಳು, ಮುದ್ದೆ–ಬಸ್ಸಾರು ಸೇರಿದಂತೆ ಸ್ಥಳೀಯ ಆಹಾರ ಹಾಗೂ ಉತ್ತರ ಕರ್ನಾಟಕದ ತಿನಿಸುಗಳ ಸಮ್ಮಿಶ್ರ ಊಟೋಪಚಾರ ವ್ಯವಸ್ಥೆ ಮಾಡುವಂತೆಯೂ ಸಲಹೆ ನೀಡಿದರು.

ಸಾಹಿತ್ಯ ಸಮ್ಮೇಳನದ ಮೊದಲೆರಡು ದಿನ ಸಂಜೆಯ ನಂತರ ಅತ್ಯುತ್ತಮ ಸಾಂಸ್ಕೃತಿಕ ಕಾರ್ಯಕ್ರಮ ಆಯೋಜಿಸಬೇಕು. ಜಿಲ್ಲೆಯ ಎಲ್ಲ ತಾಲ್ಲೂಕುಗಳಿಂದ ಸಮ್ಮೇಳನಕ್ಕೆ ವಿಶೇಷ ಬಸ್ ಸಂಪರ್ಕ ವ್ಯವಸ್ಥೆ ಮಾಡಬೇಕು ಎಂದೂ ಅವರು ಹೇಳಿದರು.

ನಾಗೇಂದ್ರ ಜಾಮೀನು ರದ್ದು ಕೋರಿ ಇ.ಡಿ ಅರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಬ್ಯಾಂಕ್ ಖಾತೆಯಿಂದ ಅಕ್ರಮವಾಗಿ ₹95 ಕೋಟಿ ವರ್ಗಾವಣೆ ಮಾಡಲಾಗಿದೆ' ಎಂಬ ಪ್ರಕರಣದ ಆರೋಪಿ ಮಾಜಿ ಸಚಿವ ಬಿ.ನಾಗೇಂದ್ರ ಅವರಿಗೆ ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ನೀಡಿರುವ ಜಾಮೀನು ರದ್ದುಪಡಿಸುವಂತೆ ಕೋರಿ ಜಾರಿ ನಿರ್ದೇಶನಾಲಯವು (ಇ.ಡಿ) ಹೈಕೋರ್ಟ್ ಮೆಟ್ಟಿಲೇರಿದೆ.

ಈ ಸಂಬಂಧ ಇ.ಡಿ ಸಲ್ಲಿಸಿರುವ ಕ್ರಿಮಿನಲ್ ಅರ್ಜಿ (11089/2024) ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರ ಏಕಸದಸ್ಯ ನ್ಯಾಯಪೀಠದ ಮುಂದೆ ಗುರುವಾರ (ಅ.24) ವಿಚಾರಣೆಗೆ ನಿಗದಿಯಾಗಿದೆ.

'ಈ ಪ್ರಕರಣದಲ್ಲಿ ನಾಗೇಂದ್ರ ಅವರು ಚುನಾವಣೆ ಬಳಕೆಗೆ ಹಣ ವರ್ಗಾವಣೆ ಮಾಡಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ ಮತ್ತು ಈ ಕುರಿತಂತೆ ಸಾಕ್ಷ್ಯಗಳನ್ನು ತನಿಖೆಯ ವೇಳೆ ಪತ್ತೆ ಮಾಡಲಾಗಿದೆ. ಅಂತೆಯೇ, ಹಣ ಅಕ್ರಮ ವರ್ಗಾವಣೆ ಕಾಯ್ದೆ-2002ರ ಕಲಂ 45ರ ಅನುಸಾರ ಆರೋಪಿಗೆ ಜಾಮೀನು ನೀಡಲು ಸಾಧ್ಯವಿಲ್ಲ. ಹಾಗಾಗಿ, ಪ್ರಕರಣದ ಪ್ರಮುಖ ಆರೋಪಿಯಾದ ಬಿ.ನಾಗೇಂದ್ರ ಅವರಿಗೆ ವಿಚಾರಣಾ ನ್ಯಾಯಾಲಯ ನೀಡಿರುವ ಜಾಮೀನು ಆದೇಶವನ್ನು ರದ್ದುಪಡಿಸಬೇಕು' ಎಂದು ಇ.ಡಿ ತನ್ನ ಅರ್ಜಿಯಲ್ಲಿ ಪ್ರತಿಪಾದಿಸಿದೆ.

ಬಳ್ಳಾರಿ ಗ್ರಾಮೀಣ ಕ್ಷೇತ್ರದ ಕಾಂಗ್ರೆಸ್ ಶಾಸಕ ಬಿ.ನಾಗೇಂದ್ರ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು, 'ಶಾಸಕರು– ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಪುರಸ್ಕರಿಸಿ ಷರತ್ತುಬದ್ಧ ಜಾಮೀನು ಮಂಜೂರು ನೀಡಿದ್ದರು.

ಪ್ರಕರಣಕ್ಕೆ ಸಂಬಂಧಿಸಿದಂತೆ ಇ.ಡಿ 144 ಪುಟಗಳ ದೂರನ್ನು ಸಲ್ಲಿಸಿತ್ತು. ದೂರಿನನ್ವಯ, ಅಕ್ರಮ ಹಣ ವರ್ಗಾವಣೆ ಕಾಯ್ದೆ–2002ರ ಕಲಂ 3 ಮತ್ತು 4ರ ಅಡಿಯಲ್ಲಿ ವಿಚಾರಣಾ ನ್ಯಾಯಾಲಯಕ್ಕೆ 4,970 ಪುಟಗಳ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ. ಈ ಪ್ರಕರಣದಲ್ಲಿ ನಾಗೇಂದ್ರ ಮೊದಲ ಆರೋಪಿಯಾಗಿದ್ದಾರೆ.

ಪೇಜಾವರ ಮಠದ ಸ್ವಾಮೀಜಿ ಹೇಳಿಕೆಗೆ ಹರಿಪ್ರಸಾದ್ ಕಿಡಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಜಾತಿ ಗಣತಿ ಕುರಿತು ಹೇಳಿಕೆ ನೀಡಿರುವ ಪೇಜಾವರ ಮಠದ ವಿಶ್ವಪ್ರಸನ್ನ ಸ್ವಾಮೀಜಿ ವಿರುದ್ಧ ಹರಿಹಾಯ್ದ ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್, 'ಸ್ವಾಮೀಜಿ ಅವರು ಪುಡಿ ರಾಜಕಾರಣಿಗಳಂತೆ ಹೇಳಿಕೆ ನೀಡುತ್ತಿದ್ದಾರೆ' ಎಂದರು.

ಬುಧವಾರ ಇಲ್ಲಿ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, 'ಅಯೋಧ್ಯೆಯಿಂದ ಹಿಡಿದು ಎಲ್ಲ ವಿಷಯಗಳ ಕುರಿತು ಹೇಳಿಕೆ ನೀಡುತ್ತಿದ್ದಾರೆ' ಎಂದರು.

'ಜಾತಿ ಗಣತಿ ಕುರಿತು ಮಾತನಾಡುವ ಮೊದಲು ತಮ್ಮ ಮಠದಲ್ಲಿ ಏನು ನಡೆಯುತ್ತಿದೆ ಎಂಬುದನ್ನು ನೋಡಲಿ. ಸ್ವಾಮೀಜಿ ಪಂಕ್ತಿಭೋಜನ, ಮಡೆಸ್ನಾನಕ್ಕೆ ಉತ್ತೇಜನ ನೀಡುತ್ತಾರೆ. ಸ್ವಾಮೀಜಿಗಳು ಸರ್ವ ಸಂಘ ಪರಿತ್ಯಾಗಿಗಳು ಎಂಬ ಮಾತಿದೆ. ಆದರೆ, ಈಗ ಬದಲಾಗಿದ್ದಾರೆ' ಎಂದು ಅವರು ಹೇಳಿದರು.

'ಪೇಜಾವರ ಸ್ವಾಮೀಜಿ ಅವರು ಕಾವಿ ಬಟ್ಟೆ ತ್ಯಜಿಸಿ ಬಂದರೆ ಅವರಿಗೆ ನಾವು ತಕ್ಕ ಉತ್ತರ ನೀಡುತ್ತೇವೆ' ಎಂದರು.

ಬೆಂಗಳೂರು ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಬೆಂಗಳೂರು ಜಲಮಂಡಳಿಯು ಅರ್ಹ ಗುತ್ತಿಗೆದಾರರರಿಂದ ದ್ವಿ–ಹಂತದ ಟೆಂಡರ್ ಪದ್ಧತಿಯಲ್ಲಿ ಕೆಳಕಂಡ ಕಾಮಗಾರಿಗಳಿಗಾಗಿ ಟೆಂಡರುಗಳನ್ನು ಆಹ್ವಾನಿಸಿದೆ.

ಮುಖ್ಯ ಅಭಿಯಂತರರ ಕಚೇರಿ(ಪಶ್ಚಿಮ), 6ನೇ ಮಹಡಿ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು–560 009.

ಕ್ರ. ಸಂ	ಕಾಮಗಾರಿಯ ಹೆಸರು	ಟೆಂಡರಿಗಿಟ್ಟ ಮೌಲ್ಯ / ಇಎಂಡಿ
	ಐ.ಎಫ್.ಟಿ. ಸಂಖ್ಯೆ: ಬೆಂಜಮಂ/ಪ್ರಮುಅ/ಮುಅ(ಪ)/ಅಮುಅ(ಪ)–I/ಉಮುಅ(ನಿ)–2/ತಾಂಸ(ಪ)/6210/2024–25	ದಿನಾಂಕ:23.10.2024
1.	ಸಕಾನಿಅ(ಪಶ್ಚಿಮ)–1 ಉಪ–ವಿಭಾಗದ ಮಾಗಡಿ ರಸ್ತೆ–2 ಸೇವಾ ಠಾಣೆಯಡಿ ಬರುವ ಮಾಗಡಿ ರಸ್ತೆಯ 2ನೇ ಅಡ್ಡರಸ್ತೆಯಿಂದ 12ನೇ ಅಡ್ಡ ರಸ್ತೆಯವರೆಗೆ ವಿವಿಧ ವ್ಯಾಸದ ಡಿಐ ನೀರು ಸರಬರಾಜು ಮಾರ್ಗವನ್ನು ಒದಗಿಸಿ, ಅಳವಡಿಸುವ ಕಾಮಗಾರಿ – 3ನೇ ಕರೆ.	ರೂ. 264.96 ಲಕ್ಷಗಳು / ರೂ. 3.975 ಲಕ್ಷಗಳು
	ಐ.ಎಫ್.ಟಿ. ಸಂಖ್ಯೆ: ಬೆಂಜಮಂ/ಪ್ರಮುಅ/ಮುಅ(ಪ)/ಅಮುಅ(ಪ)–I/ಉಮುಅ(ನಿ)–2/ತಾಂಸ(ಪ)/6212/2024–25	ದಿನಾಂಕ:23.10.2024
2.	ಸಕಾನಿಅ(ಉತ್ತರ ಪಶ್ಚಿಮ)–2 ಉಪ–ವಿಭಾಗದ ಪೀಣ್ಯ ಸೇವಾ ಠಾಣೆಯಡಿ ಬರುವ ದೊಡ್ಡಣ್ಣ ಕೈಗಾರಿಕಾ ಪ್ರದೇಶ, 5ನೇ, 6ನೇ, 7ನೇ, 8ನೇ, 9ನೇ ಮತ್ತು 10ನೇ ಹಾಗೂ ದೊಡ್ಡಣ್ಣ ಕೈಗಾರಿಕಾ ಪ್ರದೇಶದ ಮುಖ್ಯ ರಸ್ತೆಯಲ್ಲಿ 230ಮಿ.ಮೀ ವ್ಯಾಸದ ಜಿಎಸ್‌ಡಬ್ಲ್ಯೂ ಮಾರ್ಗ ಮತ್ತು 300 ಮಿ.ಮೀ ವ್ಯಾಸದ ಆರ್‌ಸಿಸಿ ಎನ್‌ಪಿ3 ಒಳಚರಂಡಿ ಮಾರ್ಗವನ್ನು ಒದಗಿಸಿ, ಅಳವಡಿಸುವ ಕಾಮಗಾರಿ.	ರೂ. 131.66 ಲಕ್ಷಗಳು / ರೂ. 2.00 ಲಕ್ಷಗಳು
	ಐ.ಎಫ್.ಟಿ. ಸಂಖ್ಯೆ: ಬೆಂಜಮಂ/ಪ್ರಮುಅ/ಮುಅ(ಪ)/ಅಮುಅ(ಪ)–I/ಉಮುಅ(ನಿ)–2/ತಾಂಸ(ಪ)/6214/2024–25	ದಿನಾಂಕ:23.10.2024
3.	ಸಕಾನಿಅ(ಪಶಿಮ)–2–1 ಉಪ–ವಿಭಾಗದ ಕೆಎಸ್‌ಟಿ ಸೇವಾ ಠಾಣೆಯಡಿ ಬರುವ ವಿಶ್ವೇಶ್ವರಯ್ಯ 1ನೇ ಬ್ಲಾಕ್‌ನಿಂದ ಶಿರ್ಕೆ ವೃತ್ತದವರೆಗೆ 400ಮಿ.ಮೀ ವ್ಯಾಸದ ಎಂಎಸ್ ನೀರು ಸರಬರಾಜು ಮಾರ್ಗವನ್ನು ಒದಗಿಸಿ, ಅಳವಡಿಸುವ ಮೂಲಕ ಶಿರ್ಕೆ ವೃತ್ತದಲ್ಲಿ 600ಮಿ.ಮೀ ವ್ಯಾಸದ ಎಂಎಸ್ ಫೀಡರ್ ಮುಖ್ಯ ಮಾರ್ಗದಿಂದ 400ಮಿ.ಮೀ ವ್ಯಾಸದ ಎಂಎಸ್ ಮಾರ್ಗವನ್ನು ಸಂಪರ್ಕಗೊಳಿಸುವ ಕಾಮಗಾರಿ.	ರೂ. 148.55 ಲಕ್ಷಗಳು / ರೂ. 2.23 ಲಕ್ಷಗಳು
	ಐ.ಎಫ್.ಟಿ. ಸಂಖ್ಯೆ: ಬೆಂಜಮಂ/ಪ್ರಮುಅ/ಮುಅ(ಪ)/ಅಮುಅ(ಪ)–I/ಉಮುಅ(ನಿ)–2/ತಾಂಸ(ಪ)/6215/2024–25	ದಿನಾಂಕ:23.10.2024
4.	ಸಕಾನಿಅ(ಉತ್ತರ ಪಶ್ಚಿಮ)–1 ಉಪ–ವಿಭಾಗದ ನಂದಿನಿ ಬಡಾವಣೆ ಸೇವಾ ಠಾಣೆಯಡಿ ಬರುವ ಯಶವಂತಪುರ ಎಪಿಎಂಸಿ ಯಾರ್ಡ್ ಆವರಣದಲ್ಲಿರುವ ಮಳೆ ನೀರಿನ ಚರಂಡಿಯ ಒಳಭಾಗದಲ್ಲಿ 300ಮಿ.ಮೀ ವ್ಯಾಸದ ಆರ್‌ಸಿಸಿ ಒಳಚರಂಡಿ ಕೊಳವೆ ಮಾರ್ಗ ಮತ್ತು 300ಮಿ.ಮೀ ವ್ಯಾಸದ ಡಿಡಬ್ಲ್ಯೂಸಿ ಕೊಳವೆ ಮಾರ್ಗವನ್ನು ಒದಗಿಸಿ, ಅಳವಡಿಸುವ ಕಾಮಗಾರಿ.	ರೂ. 364.41 ಲಕ್ಷಗಳು / ರೂ. 5.47 ಲಕ್ಷಗಳು
	ಐ.ಎಫ್.ಟಿ. ಸಂಖ್ಯೆ: ಬೆಂಜಮಂ/ಪ್ರಮುಅ/ಮುಅ(ಪ)/ಅಮುಅ(ಪ)–I/ಉಮುಅ(ನಿ)–2/ತಾಂಸ(ಪ)/6216/2024–25	ದಿನಾಂಕ:23.10.2024
5.	ಸಕಾನಿಅ(ಪಶ್ಚಿಮ)–2–1 ಉಪ–ವಿಭಾಗದ ಐಡಿಯಲ್ ಹೋಮ್ ಸೇವಾ ಠಾಣೆಯಡಿ ಬರುವ ಐಡಿಯಲ್ ಹೋಮ್ಸ್ ಸೇವಾಠಾಣೆಯ ವಿವಿಧ ಸ್ಥಳಗಳಲ್ಲಿ 150ಮಿ.ಮೀ ವ್ಯಾಸದ ಎಸ್‌ಡಬ್ಲ್ಯೂ ಮಾರ್ಗ ಮತ್ತು 230ಮಿ.ಮೀ ವ್ಯಾಸದ ಮಾರ್ಗಗಳ ಬದಲಾಗಿ ಹೊಸ ಮ್ಯಾನ್‌ಹೋಲ್ ನಿರ್ಮಾಣದೊಂದಿಗೆ 230ಮಿ.ಮೀ. ವ್ಯಾಸದ ಮತ್ತು 300ಮಿ.ಮೀ ವ್ಯಾಸದ ಆರ್‌ಸಿಸಿ ಎನ್‌ಪಿ3 ಕೊಳವೆ ಮಾರ್ಗವನ್ನು ಒದಗಿಸಿ, ಅಳವಡಿಸುವ ಕಾಮಗಾರಿ.	ರೂ. 244.62 ಲಕ್ಷಗಳು / ರೂ. 3.67 ಲಕ್ಷಗಳು

ಮೇಲಿನ ಕಾಮಗಾರಿಗಳಿಗೆ, ಭರ್ತಿ ಮಾಡಿದ ಟೆಂಡರ್ ದಾಖಲೆಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **08.11.2024 ರಂದು ಸಂಜೆ 4:00 ಗಂಟೆಯವರೆಗೆ.** ಬಿಡ್‌ಗಳನ್ನು ತೆರೆಯುವ ದಿನಾಂಕ: **11.11.2024 ರಂದು ಸಂಜೆ 5:00 ಗಂಟೆಯ ನಂತರ.**

ಟೆಂಡರ್ ಮತ್ತು ಇ–ಪ್ರೊಕ್ಯೂರ್‌ಮೆಂಟ್‌ನಲ್ಲಿ ಭಾಗವಹಿಸುವ ಬಗ್ಗೆ ವಿವರಗಳನ್ನು **https://kppp.karnataka.gov.in** ಗೆ ಲಾಗಿನ್‌ಆಗಿ ಪಡೆಯಬಹುದು. ಹೆಚ್ಚಿನ ವಿವರಗಳಿಗಾಗಿ ಕೆಳಸಹಿದಾರರ ಕಚೇರಿಯನ್ನು ಕೆಲಸದ ಸಮಯದಲ್ಲಿ ಸಂಪರ್ಕಿಸಬಹುದು.

ಸಹಿ/–
ಮುಖ್ಯ ಅಭಿಯಂತರರು(ಪಶ್ಚಿಮ).

ವಾ.ಸಾ.ಸಂ.ಇ/ವಾ.ಪ್ರ/ರೆ.ಅ/2717/2024–25

ಕಂದಾಯ ಇಲಾಖೆ

ವಿಶೇಷಾಧಿಕಾರಿ ಮತ್ತು ಸಕ್ಷಮ ಪ್ರಾಧಿಕಾರಿಯವರ ಕಾರ್ಯಾಲಯ,
(ಐ.ಎಂ.ಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು)

ಪೋಡಿಯಂ ಬ್ಲಾಕ್, 3ನೇ ಮಹಡಿ, ವಿಶ್ವೇಶ್ವರಯ್ಯ ಗೋಪುರ, ಬೆಂಗಳೂರು–560001
E-Mail: splocaima21@gmail.com ದೂರವಾಣಿ ಸಂಖ್ಯೆ : 080–29565353, 29604556

No. SPLOCA/ADM/30/2024-25 — Date: 23.10.2024

ಪ್ರಕಟಣೆ

ವಿಶೇಷಾಧಿಕಾರಿ ಮತ್ತು ಸಕ್ಷಮಪ್ರಾಧಿಕಾರಿ (ಐಎಂಎ ಹಾಗೂ ಇತರೆ ಕಂಪನಿ ವಂಚನೆ ಪ್ರಕರಣಗಳು) ಗಳವರ ಕಛೇರಿಯ ಕಾನೂನು ಕೋಶವನ್ನು ಬಲಪಡಿಸಲು 2 ತಿಂಗಳ ಅವಧಿಗೆ ಈ ಕೆಳಕಂಡ ಸೇವೆಯನ್ನು ಒದಗಿಸಲು ಆಸಕ್ತ ವ್ಯಕ್ತಿಗಳಿಂದ **Resume** ಅನ್ನು ಆಹ್ವಾನಿಸಲಾಗಿದ್ದು, ದಿನಾಂಕ: 28/10/2024 ರ ಸಂಜೆ 5.00 ಘಂಟೆ ಒಳಗಾಗಿ ಪ್ರಸ್ತಾವನೆಯನ್ನು/ **Resume** ನ್ನು ಈ ಕಛೇರಿಗೆ ಸಲ್ಲಿಸುವುದು.

ಹುದ್ದೆಗಳ ವಿವರ:

Post/ Designation	Qualification and nature of work	No. of Post	Pay/Renumeration per Month
Legal Research Intern	LLB/Final Year LLB: Internet and other research on any case. Research shall include Cause list, Constitutional position, Legal Position, Procedures etc. as well as background check of advocates and previous orders of the Judiciary. Two Kinds of Research: a) case by case for objections, arguments, and caveats, petitions etc. b) General research on special matters. c) Authorized representative should be present for 1 weekly briefing. d) Presentation of draft findings, citation copies etc. All reporting shall be with copies in PDF and word.	1	6,000/-

ಮಾನ್ಯ ಪ್ರಾದೇಶಿಕ ಆಯುಕ್ತರು ಬೆಂಗಳೂರು ವಿಭಾಗ ರವರ ಕಛೇರಿಗೆ ಅವಶ್ಯವಿರುವ ಈ ಕೆಳಕಂಡ ಹುದ್ದೆಗೆ ಸಿಬ್ಬಂದಿಯನ್ನು ಗುತ್ತಿಗೆ ಆಧಾರದ ಮೇಲೆ ಒದಗಿಸಲು ಆಸಕ್ತ ಏಜೆನ್ಸಿಗಳಿಂದ/ಆಸಕ್ತ ವೈಯಕ್ತಿಕ ವ್ಯಕ್ತಿಗಳಿಂದ ಪ್ರಸ್ತಾವನೆ/**Resume** ಆಹ್ವಾನಿಸಲಾಗಿದ್ದು, ದಿನಾಂಕ:29/10/2024 ರ ಒಳಗಾಗಿ ಸೂಕ್ತ ಪ್ರಸ್ತಾವನೆಯನ್ನು /**Resume** ಈ ಕಛೇರಿಗೆ ಸಲ್ಲಿಸುವುದು.

ಹುದ್ದೆಗಳ ವಿವರ:

Sl. No	Post/ Designation	Qualification		Relevant Experience		No. of Post	Contract wage per Month
		Basic	Preference	Basic	Preference		
1	Legal counsel/ Advisor	LLB, Registered at BAR council of Karnataka	LLM, Registered at BAR council of Karnataka	Basic Advocate with 15 Years experience Registered at BAR council of High Court Karnataka	Legal Advisor and counsel to RBI/CBI/ED. Age not to exceed 60 years.	1	Based qualification on and experience, up to Rs.100,000/- inclusive of all taxes

It is a post on contract renewable on satisfactory performance with periodic enhancement of salary scales, **not permanent government service.**

ಸಹಿ/–
ಸಹಾಯಕ ಆಯುಕ್ತರು,
ವಿಶೇಷಾಧಿಕಾರಿ ಹಾಗೂ ಸಕ್ಷಮ ಪ್ರಾಧಿಕಾರಿಗಳ ಕಛೇರಿ
ಐ.ಎಂ.ಎ ಮತ್ತು ಇತರೆ ವಂಚನೆ ಪ್ರಕರಣಗಳು, ಬೆಂಗಳೂರು.

DIPR/CP/2722/Zenkar/2024-25

ಕರ್ನಾಟಕ ಸರ್ಕಾರ

ಕಂದಾಯ ಇಲಾಖೆ

ತಹಶೀಲ್ದಾರ್‌ರವರ ಕಾರ್ಯಾಲಯ ಬೆಂಗಳೂರು ಪೂರ್ವ ತಾಲ್ಲೂಕು,

ಕೆ.ಆರ್.ಪುರಂ ಬೆಂಗಳೂರು–560 036. ದೂರವಾಣಿ ಸಂಖ್ಯೆ 080–281948, e-Mail : tah.bangaloreesttq@gmail.com

ನಂ.ಎಂಎಸ್‌ಸಿ/ರೇರಾ/ಸಿಆರ್/01/2022–23 ಮತ್ತು ಇತರೆ ಕಡತ — ದಿನಾಂಕ: 21.10.2024

ಸಾರ್ವಜನಿಕ ಹರಾಜು ಪ್ರಕಟಣೆ

ವಿಷಯಃ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಆದೇಶದಂತೆ ಹಾಗೂ ರಿಯಲ್ ಎಸ್ಟೇಟ್ (ನಿಯಂತ್ರಣ ಮತ್ತು ಅಭಿವೃದ್ಧಿ) ಅಧಿನಿಯಮ, 2016 ರ ಕಲಂ 40 (1) ಅಡಿ ದಂಡ/ಪರಿಹಾರದ ಮೊತ್ತವನ್ನು ಭೂ ಕಂದಾಯ ಬಾಕಿ ಎಂದು ಪರಿಗಣಿಸಿ ವಸೂಲಿ ಮಾಡುವ ಸಂಬಂಧ ಹರಾಜು ನಡೆಸುವ ಬಗ್ಗೆ.

ಉಲ್ಲೇಖ: 1) ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ ಪ್ರಕರಣ ಸಂಖ್ಯೆ ಸಿಸಿಸಿ34/2024, 2) ಕಾರ್ಯದರ್ಶಿಗಳು, ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರ, ಬೆಂಗಳೂರು ರವರ ನ್ಯಾಯಾಲಯದ ಆದೇಶದಂತೆ. 3) ಮಾನ್ಯ ಜಿಲ್ಲಾಧಿಕಾರಿಗಳ ಕಾರ್ಯಾಲಯದ ಆದೇಶದಂತೆ. 4) ಉಪನೋಂದಣಾಧಿಕಾರಿ ಮಹದೇವಪುರ, ಬೆಂಗಳೂರು ರವರ ಪತ್ರ ಸಂಖ್ಯೆ: ಕ್ರ.ಸಂ.ಉ.ನೋ.(ಮು)149/2024-25 ದಿ14–10–2024. 5) ರಾಜಸ್ವ ನಿರೀಕ್ಷಕರುಗಳು/ಗ್ರಾಮ ಆಡಳಿತಾಧಿಕಾರಿಗಳು ವೈಟ್ ಫೀಲ್ಡ್ ವೃತ್ತರವರ ವರದಿ ದಿ : 04–05–2024.

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ಭೂ ಕಂದಾಯ ಬಾಕಿಯೆಂದು ವಸೂಲಿ ಮಾಡಿ ನ್ಯಾಯಾಲಯದ ಆದೇಶದಂತೆ ರೇರಾ ಪ್ರಾಧಿಕಾರಕ್ಕೆ ಕಳುಹಿಸಿ ಕೊಡುವ ಸಂಬಂಧ **ದಿನಾಂಕ: 05–11–2024 ರಂದು ಬೆಳಗ್ಗೆ 11:00 ಗಂಟೆಗೆ.** ಬಾಕಿದಾರರ ಸ್ಥಿರಾಸ್ತಿಯಾದ Temple Tree, M/s ARV Infrastructures No.728, V. T. Kanakaraja Building, 26th Cross, Gunjur Main Road, Opp Varthur Government Hospital, Bengaluru - 560087, Temple Tree, M/s ARV Infrastructures Whitefield ಅನ್ನು ಸ್ಥಿರಾಸ್ತಿಯ ವೈಟ್ ಫೀಲ್ಡ್ ವಿಳಾಸದಲ್ಲಿ ಕರ್ನಾಟಕ ಭೂ ಕಂದಾಯ ಕಾಯ್ದೆ 1964 ನಿಯಮದಡಿ ಸಾರ್ವಜನಿಕ ಬಹಿರಂಗ ಹರಾಜು ಪ್ರಕ್ರಿಯೆಯನ್ನು ನಡೆಸಲು ನಿಗಧಿಪಡಿಸಲಾಗಿದೆ.

Block and Flat No	Flat Type	Square Feet	Parking Slot Value (in Rs.)	Sub Register Value (in Rs.)	Total Flat with Car parking Value (in Rs.)	25% of the amount payable at the auction venue (in Rs.)
B-001	3 BHK	1695	2,50,000	5,130	89,45,350	22,36,337.5
B-003	3 BHK	1695	2,50,000	5,130	89,45,350	22,36,337.5
B-103	3 BHK	1695	2,50,000	5,130	89,45,350	22,36,337.5
B-401	3 BHK	1695	2,50,000	5,130	89,45,350	22,36,337.5
B-102	2 BHK	1413	2,50,000	5,130	74,98,690	18,74,672
B-002	2 BHK	1413	2,50,000	5,130	74,98,690	18,74,672

ಪಾಲಿಸಬೇಕಾದ ಹರಾಜಿನ ಷರತ್ತುಗಳು

1) ಮೇಲ್ಕಂಡ ಹರಾಜು ಮಾಡುವ ಅಧಿಕಾರಿ ತನ್ನ ಸ್ವಂತ ವಿವೇಚನೆ ಮೇರೆಗೆ 3 ದಿನಗಳ ಮಟ್ಟಿಗೆ ಹರಾಜನ್ನು ಮುಂದೂಡಲು ಅವಕಾಶವಿರುತ್ತದೆ.
2) ಬಾಕಿದಾರರಾದ Temple Tree, M/s ARV Infrastructures ಮೇಲ್ಕಂಡ ಹರಾಜಿನಲ್ಲಿ ಭಾಗವಹಿಸುವುದಾಗಲೀ ಅಥವಾ ಕೊಳ್ಳುವುದಾಗಲೀ ಜಿಲ್ಲಾಧಿಕಾರಿಗಳ ಅನುಮತಿ ಇಲ್ಲದೆ ಮಾಡುವಂತಿಲ್ಲ.
3) ಜಿಲ್ಲಾಧಿಕಾರಿಗಳ ಆದೇಶವಿಲ್ಲದೇ ಬಾಕಿದಾರರು ಹರಾಜಿನಲ್ಲಿ ಭಾಗವಹಿಸಿ ತಾನೇ ಮೇಲ್ಕಂಡ ಸ್ವತ್ತನ್ನು ಕೊಂಡಲ್ಲಿ ಅಥವಾ ಬೇರೆಯವರ ಮೂಲಕ ತಾನು ಕೊಂಡು ಹರಾಜು ಮೊಬಲಗನ್ನು ಕೊಡಬೇಕಾದಲ್ಲಿ ವಿಶೇಷ ತಹಶೀಲ್ದಾರ್ ಬೆಂಗಳೂರು ಉತ್ತರ ತಾಲ್ಲೂಕು, ಬೆಂಗಳೂರು ರವರು ಬಾಕಿದಾರರ ಅಥವಾ ಯಾವ ವ್ಯಕ್ತಿಯ ಹಿತಾಸಕ್ತಿಗೆ ಹರಾಜಿನಿಂದ ಧಕ್ಕೆಯಾಗಿರುತ್ತದೆಯೋ ಅದನ್ನು ರದ್ದು ಮಾಡತಕ್ಕದ್ದು ಮತ್ತು ಅಂತಹ ಆದೇಶದಿಂದ ಮರು ಹರಾಜಿನಲ್ಲಿ ಮೊದಲನೆಯ ಹರಾಜಿಗಿಂತ ಕಡಿಮೆ ಬಂದಲ್ಲಿ ಮತ್ತು ಅದಕ್ಕೆ ತಗಲುವ ಎಲ್ಲಾ ಖರ್ಚುಗಳು ಸೇರಿದಂತೆ ವ್ಯಕ್ತಿಯ ಪ್ರೇರಣೆಯ ಮೇಲೆ ಹರಾಜನ್ನು ಮಾಡಿರುತ್ತದೆಯೋ ಅವರಿಂದ ವಸೂಲಿ ಮಾಡಲಾಗುವುದು.
4) ಮೇಲ್ಕಂಡ ಬಹಿರಂಗ ಹರಾಜಿಗೆ ಸೇರಿದಂತೆ ಕರ್ತವ್ಯ ನಿರ್ವಹಿಸಬೇಕಾದ ಯಾವ ಅಧಿಕಾರಿಯೇ ಆಗಲೀ ಅಥವಾ ಅಂತಹ ಅಧಿಕಾರಿ ನೇಮಕ ಮಾಡಿಕೊಂಡಿರುವ ಯಾವ ವ್ಯಕ್ತಿಯೇ ಆಗಲೀ ಅಥವಾ ಅಂತಹ ಅಧಿಕಾರಿಯ ಅಧೀನ ನೌಕರರೇ ಆಗಲೀ, ಪ್ರತ್ಯೇಕವಾಗಲೀ ಅಥವಾ ಪರೋಕ್ಷವಾಗಲೀ, ಬಿಡ್‌ನಲ್ಲಿ ಭಾಗವಹಿಸುವಂತಿಲ್ಲ ಹಾಗೂ ಹರಾಜಿಗೊಳಪಟ್ಟ ಸ್ವತ್ತನ್ನು ಪಡೆಯಲು ಅವಕಾಶವಿರುವುದಿಲ್ಲ.
5) ಹರಾಜು ಮಾಡತಕ್ಕ ಅಧಿಕಾರಿ ಗರಿಷ್ಟ ಹರಾಜು ಮೊಬಲಗನ್ನು ಒಪ್ಪುವ ಅಥವಾ ನಿರಾಕರಿಸುವ ಅಧಿಕಾರ ಹೊಂದಿರುತ್ತಾರೆ.
6) ಹರಾಜಿನ ದಿನಾಂಕದಂದು ಹರಾಜಿನಲ್ಲಿ ಭಾಗವಹಿಸಲು ಸವಾಲುದಾರರ ಅಭಾವ ಇದ್ದಲ್ಲಿ ಮೇಲ್ಕಂಡ ಸ್ವತ್ತನ್ನು ಸರ್ಕಾರ ಕೊಳ್ಳಲಾಗುವುದು.
7) ಬಿಡ್ ಸವಾಲಿನಲ್ಲಿ ಭಾಗವಹಿಸಿದ ಅಖೈರು ಬಿಡ್ಡುದಾರರು ಅಖೈರು ಹರಾಜು ಮೊಬಲಗಿನ ಶೇಕಡ 25 ರಷ್ಟನ್ನು ಹರಾಜು ಖೈದಾದ ತಕ್ಷಣ ಪಾವತಿ ಮಾಡತಕ್ಕದ್ದು ಮತ್ತು ಉಳಿದ ಶೇಕಡ 75 ರಷ್ಟನ್ನು ನಂತರದ 15 ದಿನಗಳೊಳಗೆ ಪಾವತಿಸತಕ್ಕದ್ದು.
8) ಮೇಲೆ ತಿಳಿಸಿರುವ ಸಂಖ್ಯೆ 7ನೇ ಷರತ್ತಿನಂತೆ. ಹರಾಜು ಮೊಬಲಗನ್ನು ಕ್ರಯದಾರರು ಪಾವತಿಸಲು ವಿಫಲರಾದಲ್ಲಿ ಮೇಲ್ಕಂಡ ಸ್ವತ್ತನ್ನು ಮರುಹರಾಜು ಮಾಡಲಾಗುತ್ತದೆ. ಮೊದಲನೇ ಹರಾಜಿಗೆ ಸೇರಿದಂತೆ ಮಾಡಿದ ವೆಚ್ಚವನ್ನು ಮೊದಲನೇ ಹರಾಜಿನ ಅಖೈರು ಬಿಡ್ಡುದಾರನ ತಪ್ಪಿನಿಂದ ಆಗಿರುವ ಕಾರಣ ಸದರಿ ಮೊಬಲಗನ್ನು ಕೊರತೆಯಾಗಿಯೂ ಮತ್ತು ಮರು ಹರಾಜಿಗೆ ಸೇರಿದಂತೆ ಮಾಡಿದ ಖರ್ಚನ್ನು ತಪ್ಪಿತಸ್ಥ ಕ್ರಯದಾರನಿಂದ ಕಂದಾಯ ಬಾಕಿಯಂತೆ ವಸೂಲು ಮಾಡಲಾಗುತ್ತದೆ.
9) ಮೇಲ್ಕಂಡ 7ನೇ ಷರತ್ತಿನಂತೆ ಅಖೈರು ಹರಾಜು ಮೊಬಲಗನ್ನು ಸ್ಥಿರ ಸ್ವತ್ತಿನ ಕ್ರಯದಾರ ನಿಗಧಿತ ಅವಧಿಯಲ್ಲಿ ಪಾವತಿಸದಿದ್ದಲ್ಲಿ ಅಖೈರು ಬಿಡ್ಡುದಾರ ಹರಾಜು ಖೈದಾದ ತಕ್ಷಣ ಶೇಕಡಾ 25ರಂತೆ ಪಾವತಿಸಿರುವ ಮೊಬಲಗಿನಲ್ಲಿ ಹರಾಜಿಗೆ ಸೇರಿದಂತೆ ಸರ್ಕಾರ ಮಾಡಿರುವ ಎಲ್ಲಾ ಖರ್ಚು ಮತ್ತು ವೆಚ್ಚಗಳನ್ನು ಮುಟ್ಟುಗೋಲು ಹಾಕಿಕೊಳ್ಳಲಾಗುತ್ತೆ ಮತ್ತು ಸ್ವತ್ತನ್ನು ಮರು ಹರಾಜು ಮಾಡಲಾಗುತ್ತದೆ.
10) ಹರಾಜು ಜಿಲ್ಲಾಧಿಕಾರಿಗಳು, ಬೆಂಗಳೂರು ಜಿಲ್ಲೆ, ಬೆಂಗಳೂರು ರವರಿಂದ ಸ್ಥಿರೀಕರಿಸುವ ಷರತ್ತಿಗೆ ಒಳಪಟ್ಟಿರುತ್ತದೆ.
11) ಒಂದು ವೇಳೆ ಹರಾಜನ್ನು ರದ್ದು ಮಾಡಿದಲ್ಲಿ ಅಖೈರು ಬಿಡ್ಡುದಾರ / ಕ್ರಯದಾರನಿಗೆ ಕಟ್ಟಿರುವ ಮೊಬಲಗನ್ನು ಹಿಂದಿರುಗಿಸಲಾಗುತ್ತದೆ.
12) ಹರಾಜು ಸ್ಥಿರೀಕರಣಗೊಂಡ ನಂತರ ಕ್ರಯದಾರನಿಗೆ ಮೇಲ್ಕಂಡ ಸ್ವತ್ತಿನ ಮೇಲಿನ ಹಕ್ಕಿನ ಬಗ್ಗೆ ಪ್ರಪತ್ರ (ಪರ್ಚೆಸ್ ಸರ್ಟಿಫಿಕೆಟ್) ನೀಡಲಾಗುತ್ತದೆ.
13) ಮೇಲ್ಕಂಡ ಸ್ವತ್ತಿನ ಕ್ರಯದಾರನಿಗೆ ಪ್ರಪತ್ರ ಕೊಟ್ಟ ನಂತರ ಅಂತಹ ಕ್ರಯದಾರ ತಾನು ಕೊಂಡ ಸ್ವತ್ತಿನ ಮೇಲೆ ಹರಾಜು ದಿನಾಂಕದಿಂದ ಹಿಂದಿನ ಬಾಕಿ ಇರುವ ಭೂಕಂದಾಯವನ್ನು ಪಾವತಿ ಮಾಡುವ ಹೊಣೆ ಇರುವುದಿಲ್ಲ.
14) ಹರಾಜಿನಲ್ಲಿ ಭಾಗವಹಿಸಲು ಇಚ್ಛಿಸುವ ಬಿಡ್ಡುದಾರರು ತಮ್ಮ ಸ್ವಂತ ಬ್ಯಾಂಕ್ ಖಾತೆಯ 2 ಚೆಕ್ಕುಗಳನ್ನು. ಆಧಾರ್ ಕಾರ್ಡ್ ಮತ್ತು ಪ್ಯಾನ್ ಕಾರ್ಡ್‌ಗಳ ಮೂಲ ಮತ್ತು ಜೆರಾಕ್ಸ್ ಪ್ರತಿಗಳನ್ನು ಮತ್ತು ಪಾಸ್ ಪೋರ್ಟ್ ಸೈಜ್ ಫೋಟೋಗಳನ್ನು ತರುವುದು ಕಡ್ಡಾಯವಾಗಿರುತ್ತದೆ.
15) ಈ ಬಗ್ಗೆ ಹೆಚ್ಚಿನ ಮಾಹಿತಿ/ವಿವರಗಳ ಅವಶ್ಯಕತೆ ಇದ್ದಲ್ಲಿ ವಿಶೇಷ ತಹಶೀಲ್ದಾರ್ ಬೆಂಗಳೂರು ಪೂರ್ವ ತಾಲ್ಲೂಕು ಬೆಂಗಳೂರು ಇವರ ಕಛೇರಿ ವೇಳೆಯಲ್ಲಿ ಖುದ್ದಾಗಿ ಬಂದು ಮಾಹಿತಿಯನ್ನು ಪಡೆಯಬಹುದು.
16) ಸದರಿ ಹರಾಜಿಗೆ ತಗುಲುವ ಎಲ್ಲಾ ವೆಚ್ಚಗಳನ್ನು ಸಹ ಭರಿಸತಕ್ಕದ್ದು.

ವಿಶೇಷ ತಹಶೀಲ್ದಾರ್,
ಬೆಂಗಳೂರು ಪೂರ್ವ ತಾಲ್ಲೂಕು, ಕೆ. ಆರ್. ಪುರಂ, ಬೆಂಗಳೂರು

DIPR/CP/RO2706/AAPL/2024-25

ಸುಭಾಷಿತ

ನೀವು ಬೇರೆಯವರನ್ನು ದೂಷಿಸುತ್ತಾ, ಟೀಕಿಸುತ್ತಾ ಇರುವಾಗ, ನಿಮ್ಮ ಬಗೆಗಿನ ಕೆಲವು ಸತ್ಯ ಸಂಗತಿಗಳನ್ನು ಮರೆಮಾಚುತ್ತಾ ಇರುತ್ತೀರಿ. -ದೀಪಕ್ ಚೋಪ್ರಾ

ವಿಮಾನಗಳಿಗೆ ಹುಸಿ ಬಾಂಬ್ ಬೆದರಿಕೆ ಮೂಲ ಪತ್ತೆಯಾಗಲಿ, ಸಮಸ್ಯೆ ಕೊನೆಗೊಳ್ಳಲಿ

ವಿಮಾನಗಳಲ್ಲಿ ಬಾಂಬ್ ಇರಿಸಲಾಗಿದೆ ಎಂಬ ಹುಸಿ ಬೆದರಿಕೆ ಸಂದೇಶಗಳು ಒಂದರ ಹಿಂದೆ ಒಂದರಂತೆ ಬರಲು ಆರಂಭವಾಗಿ ವಾರ ಕಳೆದಿದೆ. ಇಂತಹ ಬೆದರಿಕೆ ಸಂದೇಶಗಳು ಈ ಅವಧಿಯಲ್ಲಿ ಪ್ರತಿ ದಿನವೂ ಬರುತ್ತಿವೆ. ಇವುಗಳ ಪರಿಣಾಮವಾಗಿ ದೇಶಿ ಹಾಗೂ ವಿದೇಶಿ ವಿಮಾನಯಾನ ಕಂಪನಿಗಳ ಕಾರ್ಯಾಚರಣೆಗೆ ದೊಡ್ಡ ಮಟ್ಟದಲ್ಲಿ ಏಟು ಬಿದ್ದಿದೆ. ಈ ಸಂದೇಶಗಳು ವಿಮಾನ ಪ್ರಯಾಣಕ್ಕೆ ಅಡ್ಡಿ ಉಂಟುಮಾಡುತ್ತಿವೆ. ಸಂದೇಶ ಸ್ವೀಕರಿಸಿದ ವಿಮಾನಗಳ ಹಾರಾಟ ವಿಳಂಬ ಆಗುತ್ತದೆ ಅಥವಾ ಅವುಗಳ ಮಾರ್ಗವನ್ನು ಬದಲಾಯಿಸಬೇಕಾಗುತ್ತದೆ. ಮಂಗಳವಾರ ಇಂತಹ ಬೆದರಿಕೆ ಸಂದೇಶಗಳು ಸರಿಸುಮಾರು 50 ವಿಮಾನಗಳಿಗೆ ಬಂದಿವೆ. ಅಂದರೆ, ಅಕ್ಟೋಬರ್ 14ರ ನಂತರ ಬಂದಿರುವ ಹುಸಿ ಬೆದರಿಕೆ ಸಂದೇಶಗಳ ಸಂಖ್ಯೆಯು ಸರಿಸುಮಾರು 170 ಆಗಿದೆ. ಭಾರತೀಯ ವಿಮಾನಯಾನ ಕಂಪನಿಗಳೇ ಈ ಸಂದೇಶಗಳ ಮುಖ್ಯ ಗುರಿಯಾಗಿವೆ. ಆದರೆ ಅಮೆರಿಕನ್ ಏರ್‌ಲೈನ್ಸ್, ಜೆಟ್ ಬ್ಲ್ಯೂ, ಏರ್ ನ್ಯೂಜಿಲೆಂಡ್ ವಿಮಾನಯಾನ ಕಂಪನಿಗಳು ಕೂಡ ಈ ಬಗೆಯ ಸಂದೇಶಗಳನ್ನು ಸ್ವೀಕರಿಸಿವೆ. 2014ರಿಂದ 2017ರ ನಡುವಿನ ಅವಧಿಯಲ್ಲಿ ಭಾರತದ ವಿಮಾನಗಳು ಒಟ್ಟು 120 ಹುಸಿ ಬಾಂಬ್ ಬೆದರಿಕೆ ಸಂದೇಶಗಳನ್ನು ಸ್ವೀಕರಿಸಿದ್ದವು. ಈಗ ಬರುತ್ತಿರುವ ಸಂದೇಶಗಳಿಂದಾಗಿ ವಿಮಾನಯಾನ ಸೇವೆಗಳಿಗೆ ಉಂಟಾಗಿರುವ ಅಡ್ಡಿಯ ಪರಿಣಾಮವಾಗಿ ಪ್ರಯಾಣಿಕರಿಗೆ ತೀರಾಅನನುಕೂಲ ಆಗಿದೆ. ಅಲ್ಲದೆ, ಪ್ರಯಾಣದ ವಿಚಾರವಾಗಿ ಅನಿಶ್ಚಿತತೆ ಸೃಷ್ಟಿಯಾಗಿದೆ. ಒಂಬತ್ತು ದಿನಗಳ ಅವಧಿಯಲ್ಲಿ ಇಂತಹ ಬೆದರಿಕೆ ಸಂದೇಶಗಳು ವಿಮಾನಯಾನ ಕಂಪನಿಗಳಿಗೆ ಒಟ್ಟು ₹600 ಕೋಟಿ ನಷ್ಟ ಉಂಟುಮಾಡಿವೆ ಎಂದು ಅಂದಾಜು ಮಾಡಲಾಗಿದೆ.

ಇಂತಹ ಬೆದರಿಕೆ ಸಂದೇಶಗಳ ಹಿಂದೆ ಇರುವ ವ್ಯಕ್ತಿಗಳನ್ನು ಗುರುತಿಸಲು, ಅವರನ್ನು ಶಿಕ್ಷಿಸಲು ಅನುವಾಗುವಂತೆ ಸೂಕ್ತ ತನಿಖೆ ಆಗಬೇಕು

ಹುಸಿ ಬೆದರಿಕೆ ಸಂದೇಶಗಳ ಸಮಸ್ಯೆಯನ್ನು ತಾಂತ್ರಿಕವಾಗಿ ಹಾಗೂ ಕಾನೂನಿನ ಮೂಲಕ ಎದುರಿಸಬೇಕಿದೆ. ಬಹುತೇಕ ಬೆದರಿಕೆಗಳು ಬಂದಿರುವುದು ಸಾಮಾಜಿಕ ಜಾಲತಾಣ ಖಾತೆಗಳ ಮೂಲಕ. ಅವುಗಳ ಐ.ಪಿ. ವಿಳಾಸ ಇರುವುದು ಯುರೋಪಿನಲ್ಲಿ. ಬೆದರಿಕೆ ಸಂದೇಶಗಳ ಮೂಲ ಪತ್ತೆಯನ್ನು ಕ್ಲಿಷ್ಟಕರ ಆಗಿಸುವ ಉದ್ದೇಶದಿಂದ, ವಿಪಿಎನ್ ಸೌಲಭ್ಯ ಬಳಸಿಕೊಳ್ಳಲಾಗುತ್ತದೆ. ಇದರ ಪರಿಣಾಮವಾಗಿ, ಬೆದರಿಕೆ ಒಡ್ಡುತ್ತಿರುವವರು ಯಾರು ಎಂಬುದನ್ನು ಪತ್ತೆ ಮಾಡುವುದು ಬಹಳ ಕಷ್ಟದ ಕೆಲಸವಾಗುತ್ತದೆ. ಕೆಲವು ಬೆದರಿಕೆ ಸಂದೇಶಗಳ ಮೂಲ ಇರುವುದು ಬ್ರಿಟನ್‌ನಲ್ಲಿ ಎಂದು ಶಂಕಿಸಲಾಗಿದೆ. ಬೆದರಿಕೆ ಸಂದೇಶ ರವಾನಿಸುತ್ತಿರುವವರ ಮೂಲ ಪತ್ತೆ ಮಾಡುವ ಉದ್ದೇಶದ ತನಿಖೆಯನ್ನು ತಪ್ಪುದಾರಿಗೆ ಎಳೆಯಲು ತಾಂತ್ರಿಕವಾಗಿ ಸಾಧ್ಯವಿದೆ. ದುಷ್ಕರ್ಮಿಗಳು ದೇಶದ ಒಳಗೇ ಇದ್ದಿರುವ ಸಾಧ್ಯತೆಯೂ ಇದೆ. ಮೂರು ವಿಮಾನಗಳಿಗೆ ಬೆದರಿಕೆ ಒಡ್ಡಿದ ಆರೋಪದ ಅಡಿಯಲ್ಲಿ ಛತ್ತೀಸಗಢದ ಒಬ್ಬ ಬಾಲಕನನ್ನು ಮುಂಬೈ ಪೊಲೀಸರು ಬಂಧಿಸಿದ್ದಾರೆ. ಈ ಬಾಲಕ ಇನ್ನೊಬ್ಬನ ಜೊತೆ ಹಣಕಾಸಿನ ತಕರಾರು ಹೊಂದಿದ್ದು, ಬೆದರಿಕೆಗಳನ್ನು ಒಡ್ಡಿದ್ದು ಆತನೇ ಎಂದು ಬಿಂಬಿಸಲು ಯತ್ನಿಸಿದ್ದ ಎಂಬ ವರದಿಗಳಿವೆ. ಆದರೆ ಈಗ ಬಂದಿರುವ ಎಲ್ಲ ಬೆದರಿಕೆ ಸಂದೇಶಗಳೂ ವ್ಯಕ್ತಿಗತ ನೆಲೆಯಲ್ಲಿ ಬಂದಿರುವಂಥವು ಹಾಗೂ ಒಂದಕ್ಕೊಂದು ಸಂಬಂಧ ಇಲ್ಲದವು ಎಂದು ಭಾವಿಸುವುದು ಕಷ್ಟ. ಕಳೆದ ವರ್ಷ ಇದೇ ಸಂದರ್ಭದಲ್ಲಿ ಫ್ರಾನ್ಸ್‌ನ ಹಲವು ಶಾಲೆಗಳು, ವಸ್ತುಸಂಗ್ರಹಾಲಯಗಳು, ವಿಮಾನಯಾನ ಕಂಪನಿಗಳು ಹುಸಿ ಬೆದರಿಕೆ ಸಂದೇಶಗಳನ್ನು ಸ್ವೀಕರಿಸಿದ್ದವು. ಇಂತಹ ಸಂದೇಶಗಳನ್ನು ರವಾನಿಸಿದ್ದ ಬಹುತೇಕರು ಯುವಕರಾಗಿದ್ದರು. ಭಾರತದಲ್ಲಿಯೂ ಹಲವು ಶಾಲೆಗಳಿಗೆ ಬಾಂಬ್ ಬೆದರಿಕೆ ಸಂದೇಶಗಳು ಬಂದಿವೆ. ಇಂತಹ ಬೆದರಿಕೆ ಸಂದೇಶಗಳ ಹಿಂದೆ ಇರುವ ವ್ಯಕ್ತಿಗಳನ್ನು ಗುರುತಿಸಲು, ಅವರನ್ನು ಶಿಕ್ಷಿಸಲು ತನಿಖೆ ಆಗಬೇಕು.

ಕೇಂದ್ರ ನಾಗರಿಕ ವಿಮಾನಯಾನ ಸಚಿವ ಕೆ. ರಾಮಮೋಹನ್ ನಾಯ್ಡು ಅವರು ಬೆದರಿಕೆ ಸಂದೇಶಗಳನ್ನು ‘ಒಂದಕ್ಕೊಂದು ಸಂಬಂಧ ಇಲ್ಲದವು’ ಎಂದು ಹೇಳಿದ್ದರು. ಆದರೆ ಈಗ ಅವರು, ವಿಮಾನ ಭದ್ರತಾ ನಿಯಮಗಳಲ್ಲಿ ಬದಲಾವಣೆ ತಂದು, ಇಂತಹ ಬೆದರಿಕೆ ಸಂದೇಶ ರವಾನಿಸುವವರನ್ನು ವಿಮಾನಗಳಲ್ಲಿ ಪ್ರಯಾಣಿಸುವುದರಿಂದ ಹಲವು ವರ್ಷಗಳವರೆಗೆ ನಿರ್ಬಂಧಿಸುವ ಉದ್ದೇಶ ಸರ್ಕಾರಕ್ಕಿದೆ ಎಂದು ಹೇಳಿದ್ದಾರೆ. ಬಹುತೇಕ ಕಾನೂನುಗಳು ವಿಮಾನದ ಒಳಗೆ ಆಗುವ ಅಪರಾಧಗಳಿಗೆ ಸಂಬಂಧಿಸಿವೆ. ಸರ್ಕಾರದ ಉದ್ದೇಶ ಈ ಕಾನೂನುಗಳನ್ನು ವಿಮಾನಗಳ ಹೊರಗೆ ಆಗುವ ಅಪರಾಧ ಕೃತ್ಯಗಳಿಗೆ ವಿಸ್ತರಿಸುವುದು ಹಾಗೂ ಶಿಕ್ಷೆಯ ಪ್ರಮಾಣವನ್ನು ಹೆಚ್ಚು ಮಾಡುವುದು. ಬೆದರಿಕೆ ಸಂದೇಶ ರವಾನಿಸುವುದನ್ನು ಗಂಭೀರ ಸ್ವರೂಪದ ಅಪರಾಧ ಪ್ರಕರಣ ಎಂದು ಗುರುತಿಸಲಾಗುತ್ತದೆ ಎಂದೂ ಸಚಿವರು ಹೇಳಿದ್ದಾರೆ. ಈಗ ಹುಸಿ ಬೆದರಿಕೆ ಸಂದೇಶಗಳ ಬಗ್ಗೆ ಎಲ್ಲ ಆಯಾಮಗಳಿಂದ ತನಿಖೆ ನಡೆಸುವುದಕ್ಕೆ, ಅಪರಾಧಿಗಳನ್ನು ಗುರುತಿಸುವುದಕ್ಕೆ, ಅವರ ಉದ್ದೇಶ ಏನು ಎಂಬುದನ್ನು ತಿಳಿಯುವುದಕ್ಕೆ ಹಾಗೂ ಇಂತಹ ಸಂದೇಶಗಳಿಗೆ ಅಂತ್ಯ ಕಾಣಿಸುವುದಕ್ಕೆ ಆದ್ಯತೆ ನೀಡಬೇಕು. ಆಗ ಮಾತ್ರ ವಿಮಾನಯಾನ ಕಂಪನಿಗಳಿಗೆ ಆಗುತ್ತಿರುವ ಅಡ್ಡಿ, ಪ್ರಯಾಣಿಕರು ಎದುರಿಸುವ ಅನಿಶ್ಚಿತತೆಯನ್ನು ಕೊನೆಗೊಳಿಸಬಹುದು.

ದಿನದ ಟ್ವೀಟ್

ಗುಣಮಟ್ಟ ಆದ್ಯತೆಯಾಗಲಿ

ಶಿಕ್ಷಣದ ಗುಣಮಟ್ಟ ಉತ್ತಮಪಡಿಸಲು ಅವರಿಗೆ ಸಾಧ್ಯವಾಗಿಲ್ಲ... ಹೀಗಾಗಿ, ಅವರು ಗುಣಮಟ್ಟವನ್ನೇ ಕಡಿಮೆ ಮಾಡುತ್ತಿದ್ದಾರೆ. ಎಂತಹ ಕರಾಮತ್ತು.

(10ನೇ ತರಗತಿಯ ಗಣಿತ ಮತ್ತು ವಿಜ್ಞಾನ ವಿಷಯಗಳಲ್ಲಿ ಪಾಸಾಗುವುದಕ್ಕೆ ಇರುವ ಕನಿಷ್ಠ ಅಂಕಗಳ ಮಿತಿಯನ್ನು 35ರಿಂದ 20ಕ್ಕೆ ಇಳಿಸುವ ಬಗ್ಗೆ ಮಹಾರಾಷ್ಟ್ರ ಸರ್ಕಾರ ಚಿಂತನೆ ನಡೆಸಿರುವುದಕ್ಕೆ ಪ್ರತಿಕ್ರಿಯೆ)

ವೀಣಾ ಜೈನ್

ಕಿಡಿನುಡಿ

ರಾಹುಲ್ ಗಾಂಧಿ, ಸಿದ್ದರಾಮಯ್ಯ ಅವರು ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಸಮೀಕ್ಷೆಯ ಪರ ಇದ್ದರೆ, ಶಾಮನೂರು ಶಿವಶಂಕರಪ್ಪ ಸಹಿತ ಕಾಂಗ್ರೆಸ್‌ನಲ್ಲಿರುವ ಪ್ರಬಲ ಜಾತಿಗಳ ನಾಯಕರು ವಿರುದ್ಧ ಇದ್ದಾರೆ. ವರದಿಯಲ್ಲಿ ಏನಿದೆ ಎಂದು ತಿಳಿಯಲು ಕೂಡ ಬಿಡುವುದಿಲ್ಲ ಎಂದರೆ ಇದೆಂಥ ಪ್ರಜಾಪ್ರಭುತ್ವ?

ಶ್ರೀಧರ ಕಲಿವೀರ
ಅಧ್ಯಕ್ಷ, ಡಾ. ಬಿ.ಆರ್.ಅಂಬೇಡ್ಕರ್ ದಲಿತ ಸಂಘಟನೆಗಳ ಒಕ್ಕೂಟ

25 ವರ್ಷಗಳ ಹಿಂದೆ

ಭಾನುವಾರ, 24-10-1999

● ದಳ (ಎಸ್) ಆತ್ಮಾವಲೋಕನ ಸಮಾವೇಶ

ಬೆಂಗಳೂರು, ಅ. 23– ‘ರಾಜ್ಯದಲ್ಲಿ ಮತೀಯ ಶಕ್ತಿಗಳ ಕೈಗೆ ಅಧಿಕಾರ ನೀಡಬಾರದು ಎಂಬ ಉದ್ದೇಶದಿಂದ, ಕಾಂಗ್ರೆಸ್ ಪರ್ಯಾಯ ಎಂಬ ಭಾವನೆ ಹೊಂದಿ ಮತದಾರರು ಅನಿವಾರ್ಯವಾಗಿ ಆ ಪಕ್ಷದ ಕಡೆಗೆ ಹೆಚ್ಚಿನ ಒಲವು ತೋರಿಸಿದ್ದಾರೆ’ ಎಂದು ರಾಜ್ಯ ಜನತಾದಳ (ಎಸ್) ಅಧ್ಯಕ್ಷರಾದ ಸಿದ್ದರಾಮಯ್ಯ ಅವರು ಇಂದು ಇಲ್ಲಿ ವಿಶ್ಲೇಷಿಸಿದರು.

ರಾಜ್ಯದಲ್ಲಿ ಇತ್ತೀಚೆಗೆ ನಡೆದ ಲೋಕಸಭೆ ಹಾಗೂ ವಿಧಾನಸಭೆ ಚುನಾವಣೆಗಳಲ್ಲಿ ಪಕ್ಷವು ಹೀನಾಯ ಸೋಲು ಅನುಭವಿಸಿರುವ ಹಿನ್ನೆಲೆಯಲ್ಲಿ ಆತ್ಮಾವಲೋಕನ ಮಾಡಿಕೊಳ್ಳಲು ಪಕ್ಷವು ಇಂದಿನಿಂದ ಎರಡು ದಿನಗಳ ಕಾಲ ಏರ್ಪಡಿಸಿರುವ ಸಮಾವೇಶದ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

● ಖರ್ಗೆ ಅಧಿಕಾರ ಮೊಟಕು

ಬೆಂಗಳೂರು, ಅ. 23– ಮುಖ್ಯಮಂತ್ರಿ ಎಸ್.ಎಂ.ಕೃಷ್ಣ ಅವರು ಕೆಲವು ಸಚಿವರ ಖಾತೆಗಳ ಮರುಹಂಚಿಕೆ ಮಾಡುವುದರ ಜತೆಗೆ ಹಿರಿಯ ಸಚಿವ ಮಲ್ಲಿಕಾರ್ಜುನ ಖರ್ಗೆ ಅವರ ಅಧಿಕಾರವನ್ನು ಮೊಟಕು ಮಾಡಿದ್ದಾರೆ.

ಮುಖ್ಯಮಂತ್ರಿಗಳು ಖಾತೆಗಳ ಮರುಹಂಚಿಕೆ ಮಾಡಿ ರಾಜ್ಯಪಾಲರ ಅಂಗೀಕಾರಕ್ಕಾಗಿ ಅವರಿಗೆ ಕಳಿಸಿದ್ದಾರೆ ಎಂದು ವಿಶ್ವಸನೀಯ ಮೂಲಗಳಿಂದ ತಿಳಿದುಬಂದಿದೆ.

ಮರುಹಂಚಿಕೆ ಪ್ರಕಾರ, ಖರ್ಗೆ ಅವರಿಗೆ ವಹಿಸಲಾಗಿರುವ ಗೃಹ ಖಾತೆಯಲ್ಲಿದ್ದ ಗುಪ್ತಚರ ದಳ ವಿಭಾಗವನ್ನು ಮುಖ್ಯಮಂತ್ರಿ ತಾವೇ ಇಟ್ಟುಕೊಂಡಿದ್ದಾರೆ.

50 ವರ್ಷಗಳ ಹಿಂದೆ

ಗುರುವಾರ, 24-10-1974

● ಚುನಾವಣೆ ವ್ಯವಸ್ಥೆ ಸುಧಾರಣೆ ಮುಕ್ತ ಮನಸ್ಸಿನ ಚರ್ಚೆಗೆ ಕರೆ

ನವದೆಹಲಿ, ಅ. 23– ಚುನಾವಣೆ ವ್ಯವಸ್ಥೆ ಸುಧಾರಣೆ ಕುರಿತ ಜನಸಂಘದ ಆರು ಅಂಶಗಳ ಸೂತ್ರವನ್ನು ಪಕ್ಷದ ಅಧ್ಯಕ್ಷ ಎಲ್.ಕೆ.ಅಡ್ವಾಣಿ ಅವರು ಇಂದು ಸುದ್ದಿಗಾರರಿಗೆ ವಿವರಿಸಿದರು. ಈ ಪ್ರಶ್ನೆಯು ಮುಂದಿನ ಸಂಸತ್ ಅಧಿವೇಶನದ ಪ್ರಮುಖ ಚರ್ಚಾ ವಿಷಯವಾಗುವುದೆಂದು ಅವರು ಹೇಳಿದರು.

ಚುನಾವಣೆ ವ್ಯವಸ್ಥೆ ಸುಧಾರಣೆ ಪ್ರಶ್ನೆಯನ್ನು ಸರ್ಕಾರವು ಮುಕ್ತ ಮನಸ್ಸಿನಿಂದ ಪರಿಶೀಲಿಸಿದಾಗ ಮಾತ್ರವೇ ಸರ್ಕಾರ ಹಾಗೂ ರಾಜಕೀಯ ಪಕ್ಷಗಳ ನಡುವೆ ಹದಗೆಟ್ಟಿರುವ ಸಂಬಂಧವನ್ನು ಸರಿಪಡಿಸಲು ಸಾಧ್ಯ ಎಂದು ಅವರು ನುಡಿದರು.

● ಹಣದ ಹೊಳೆಗೆ ಅವಕಾಶ: ಕೃಪಲಾನಿ

ನವದೆಹಲಿ, ಅ. 23– ಜನತಾ ಪ್ರಾತಿನಿಧ್ಯ ಶಾಸನವನ್ನು ತಿದ್ದುಪಡಿಗೊಳಿಸಿ ಸರ್ಕಾರ ಈಚೆಗೆ ಹೊರಡಿಸಿದ ಸುಗ್ರೀವಾಜ್ಞೆಯೂ ಚುನಾವಣೆಗಳಿಗೆ ಧನಾಢ್ಯರ ಹಣ ನಿರಾತಂಕವಾಗಿ ಹರಿದುಬರುವುದಕ್ಕೆ ಅವಕಾಶ ಕೊಡುವುದೆಂದು ಆಚಾರ್ಯ ಜೆ.ಬಿ.ಕೃಪಲಾನಿ ಅವರು ಇಂದು ಹೇಳಿ, ಆ ಹಣವನ್ನು ಅಧಿಕಾರಾರೂಢ ಪಕ್ಷ ಮಾತ್ರ ಸಂಗ್ರಹಿಸಿಕೊಳ್ಳಬಹುದು ಎಂದರು.

ರಾಜಕೀಯ ಪಕ್ಷ, ಚುನಾವಣೆಯ ಅಭ್ಯರ್ಥಿ ಮತ್ತು ಮತದಾರರ ಜಾಲ ಅಭೇದ್ಯವೇ ಸರಿ!

ಅನಿಷ್ಟಗಳೇ ಸ್ವೀಕಾರಾರ್ಹ ಆದಾಗ...

ವಿಶ್ಲೇಷಣೆ

ಚಂದ್ರಕಾಂತ ವಡ್ಡು

ರಾಜಕಾರಣಿಗಳಿಗೆ ಸಂಬಂಧಿಸಿದಂತೆ ಭ್ರಷ್ಟಾಚಾರ ಮತ್ತು ಕುಟುಂಬಮೋಹ ಎಂಬ ಎರಡು ವಿಚಾರಗಳು ಈಗೀಗ ಸಾರ್ವಜನಿಕ ಬದುಕಿನ ಅನಿಷ್ಟಗಳಾಗಿ ಉಳಿದಿಲ್ಲ; ಅನಿವಾರ್ಯ ನಡವಳಿಕೆ ಎನ್ನಿಸಿವೆ, ಸಾರ್ವತ್ರಿಕ ಮನ್ನಣೆ ಗಳಿಸಿವೆ, ಸ್ವೀಕಾರಾರ್ಹ ನಿಲುವಾಗಿವೆ. ಇವೆಲ್ಲವೂ ಒಮ್ಮೆಗೇ ಘಟಿಸಿದ ವಿದ್ಯಮಾನಗಳೇನಲ್ಲ. ಕೆಲವೇ ದಿನಗಳ ಹಿಂದೆ ಟೀಕೆಗೆ, ಚರ್ಚೆಗೆ, ತಿರಸ್ಕಾರಕ್ಕೆ ಯೋಗ್ಯವೆನಿಸಿದ್ದ ಈ ದುರ್ಗುಣಗಳು ಸಾಂದರ್ಭಿಕ ನೆಪಗಳ ಒಂದೊಂದೇ ಮೆಟ್ಟಿಲು ಏರುತ್ತಾ ಸಮ್ಮತಿಯ ಉಪ್ಪರಿಗೆ ತಲುಪಿವೆ.

ಅಧಿಕಾರದಾಹಿ ರಾಜಕಾರಣಿಗಳು ಆರೋಹಣದ ದಾರಿಯುದ್ದಕ್ಕೂ ನೈತಿಕತೆ, ಪ್ರಾಮಾಣಿಕತೆ ಮತ್ತು ಸಾರ್ವಜನಿಕ ಹೊಣೆಗಾರಿಕೆಗಳನ್ನು ತ್ಯಾಜ್ಯರೂಪದಲ್ಲಿ ಚೆಲ್ಲುತ್ತಾ ಸಾಗಿರುವುದನ್ನು ಗಮನಿಸಬಹುದು. ಎಲ್ಲ ವಲಯಗಳಿಂದಲೂ ವಿಸರ್ಜನೆಯಾಗುತ್ತಿರುವ ಈ ತ್ಯಾಜ್ಯದ ಜಮಾವಣೆಯ ಪ್ರಮಾಣ ಕೂಡ ಸಣ್ಣದಲ್ಲ. ಇದರ ವಿಲೇವಾರಿಗೋ ಸಂಸ್ಕರಣೆಗೋ ಘಟಕಗಳನ್ನು ಸ್ಥಾಪಿಸುವ ಅನಿವಾರ್ಯ ಸ್ಥಿತಿ ಏರ್ಪಟ್ಟಿದೆ. ಇದರ ನಿರ್ವಹಣೆ ಗುತ್ತಿಗೆಗೂ ಇವರೇ ಮುಗಿಬಿದ್ದರೆ ಯಾರೂ ಅಚ್ಚರಿಪಡಬೇಕಿಲ್ಲ!

ಭ್ರಷ್ಟಾಚಾರ ಮತ್ತು ಕುಟುಂಬ ರಾಜಕಾರಣದ ಮೂಲದಲ್ಲಿ ಅಡಗಿರುವ ಎರಡು ಕಾರಣಗಳಲ್ಲಿ ಮೊದಲನೆಯದು ಸ್ವಾರ್ಥ. ಸ್ವಾರ್ಥದ ಅಂಕುರ ತೀರಾ ವೈಯಕ್ತಿಕ ನೆಲೆಯಲ್ಲಿ ಆದರೂ ಪರಿಣಾಮದಲ್ಲಿ ಸುತ್ತಲೂ ಆವರಿಸಿಕೊಳ್ಳುವ ಗುಣ ಹೊಂದಿರುತ್ತದೆ. ಮತ್ತೊಂದು ಕಾರಣವೆಂದರೆ, ಸುತ್ತಲಿನ ಸಾರ್ವಜನಿಕ ಪರಿಸರ ಸೃಷ್ಟಿಸುವ ಅನಿವಾರ್ಯ. ಇದು ಹೊರಗಿನ ಒತ್ತಡಗಳ ಪ್ರಭಾವದಿಂದ ವ್ಯಕ್ತಿಯ ಒಳಗನ್ನು ಹಳವಂಡ ಮಾಡುವ ಪ್ರಕ್ರಿಯೆ. ತೊಂಬತ್ತರ ದಶಕದ ನಂತರದ ರಿಯಲ್ ಎಸ್ಟೇಟ್, ಗಣಿಗಾರಿಕೆಯಂತಹ ವ್ಯಾಪಾರಿ ಹಿನ್ನೆಲೆಯ ಲಾಭಬಡುಕ ರಾಜಕಾರಣಿಗಳನ್ನು ಹೊರಗಿಟ್ಟು ಅವಲೋಕಿಸುವುದಾದರೆ, ಬಹಳಷ್ಟು ರಾಜಕಾರಣಿಗಳ ಸಾರ್ವಜನಿಕ ಅಸ್ತಿತ್ವ ಈ ಬಗೆಯ ‘ಅನಿವಾರ್ಯ’ದ ಸುಳಿಯಲ್ಲಿ ಸಿಲುಕಿದೆ ಎಂಬುದು ಗೋಚರಿಸುತ್ತದೆ.

ಸಿದ್ದರಾಮಯ್ಯ, ಎಚ್.ಡಿ.ದೇವೇಗೌಡ, ಬಿ.ಎಸ್. ಯಡಿಯೂರಪ್ಪ ಅವರಂತಹ ಮೊದಲ ತಲೆಮಾರಿನ ರಾಜಕಾರಣಿಗಳು ಸಾರ್ವಜನಿಕ ಬದುಕಿಗೆ ಪ್ರವೇಶ ಪಡೆದ ಸಂದರ್ಭ, ರೀತಿ, ನೀತಿ ಮತ್ತು ನಡಿಗೆಯಲ್ಲಿ ಸ್ವಾರ್ಥದ ತೂಕ ಹಾಗೂ ಅನಿವಾರ್ಯ ಸ್ಥಿತಿಯ ಪ್ರಮಾಣವನ್ನು ಅಳತೆ ಮಾಡಲು ಸಾಧ್ಯವಾದರೆ, ಬದಲಾದ ಸನ್ನಿವೇಶದ ನೈಜ ಸ್ಥಿತಿ ಇನ್ನಷ್ಟು ನಿಚ್ಚಳವಾಗಬಹುದು. ಇದೇ ಅಳತೆಗೋಲು ಅವರ ಮುಂದಿನ ಪೀಳಿಗೆಗೆ ಅನ್ವಯವಾಗಲು ಖಂಡಿತ ಸಾಧ್ಯವಿಲ್ಲ. ಇಂದು ಒಬ್ಬ ರಾಜಕಾರಣಿ ಸಾರ್ವಜನಿಕ ಜೀವನದಲ್ಲಿ ಇರುವುದಕ್ಕೆ ತಗಲುವ ವೆಚ್ಚ ಎಲ್ಲರ ಊಹೆಯನ್ನೂ ಮೀರಿಸಿದ ಹಂತ ಮುಟ್ಟಿರುವುದನ್ನು ಯಾರೂ ಮರೆಮಾಚಲಾಗದು. ಚುನಾವಣೆಗಳಷ್ಟೇ ಅಲ್ಲ, ರಾಜಕಾರಣಿಗಳ ದೈನಂದಿನ ಚಟುವಟಿಕೆಗಳೆಲ್ಲವೂ ಹಣ ವ್ಯಯಿಸುವ, ಹೂಡುವ ಕ್ರಿಯೆ ಆದಾಗ ಅವರಿಗಿರುವ ಆಯ್ಕೆಯಾದರೂ ಏನು? ವರಮಾನದ ಮೂಲಗಳನ್ನು ಹುಡುಕುವುದು ತಾನೇ?

ಈ ಮಾತುಗಳು ಮೇಲ್ನೋಟಕ್ಕೆ ಭ್ರಷ್ಟ ರಾಜಕಾರಣಿಗಳ ಸಮರ್ಥನೆಯಾಗಿಯೋ ಅನುಕಂಪ ಹುಟ್ಟಿಸುವಂತೆಯೋ ಕಾಣಿಸುವುದು ಸಹಜ. ಆದರ್ಶ ಗಣ್ಣುಗಳ ನೋಟಕ್ಕೆ ಧಕ್ಕೆ ಉಂಟು ಮಾಡುವ ಸಂಗತಿಯೂ ಹೌದು. ಆದರೆ ಗ್ರಾಮ ಪಂಚಾಯಿತಿ ಮಟ್ಟದ ರಾಜಕಾರಣಿಯಿಂದ ಹಿಡಿದು ಮುಖ್ಯಮಂತ್ರಿ ತನಕ ಹಣದ ವಹಿವಾಟಿಲ್ಲದೆ ಸಾರ್ವಜನಿಕ ಬದುಕಿನ ಅಸ್ತಿತ್ವವೇ ಇಲ್ಲದಂತಾಗಿದೆ. ಬಸನಗೌಡ ಪಾಟೀಲ ಯತ್ನಾಳ ಅವರು ಹಿಂದೊಮ್ಮೆ ಮುಖ್ಯಮಂತ್ರಿ ಹುದ್ದೆಗೆ ₹2,000 ಕೋಟಿ ಎಂದು ಬೆಲೆ ಕಟ್ಟಿದಾಗ ಅಥವಾ ಮುಖ್ಯಮಂತ್ರಿಯಾಗಲು ನಾಯಕರೊಬ್ಬರು ₹1,000 ಕೋಟಿ ಸಿದ್ಧ ಮಾಡಿಕೊಂಡಿದ್ದಾರೆ ಎಂದು ಈಚೆಗೆ ಆರೋಪಿಸಿದಾಗ ಯಾರಿಂದಲೂ ಹೇಳಿಕೊಳ್ಳುವಂತಹ ಪ್ರತಿರೋಧ ಕೇಳಿಬರಲಿಲ್ಲ. ಮೇಲಾಗಿ, ಇದನ್ನು ಕೇಳಿಸಿಕೊಂಡ ಸಾರ್ವಜನಿಕರಿಗೆ ಕೂಡ ಅಚ್ಚರಿ, ಆಘಾತ, ಅಸಹ್ಯ ಏನೂ ಆಗಲಿಲ್ಲ ಎಂಬುದು ಬಹಳ ಮಹತ್ವದ ಸಂಗತಿ!

ಚುನಾವಣೆ ಸಂದರ್ಭದಲ್ಲಿ ತಮ್ಮ ಮತಕ್ಷೇತ್ರಕ್ಕೆ ಹಣ ಸುರಿಯುವ ‘ಸಮರ್ಥ’ ಅಭ್ಯರ್ಥಿಯನ್ನು ಅಪೇಕ್ಷಿಸುವ ಮತದಾರರ ಸಂಖ್ಯೆಯೇ ಹೆಚ್ಚು. ಇನ್ನು, ರಾಜಕೀಯ ಪಕ್ಷಗಳಿಗೆ ಗೆಲ್ಲುವ ಅಭ್ಯರ್ಥಿ ಬಹಳ ಮುಖ್ಯ. ಕ್ಷೇತ್ರದಲ್ಲಿ ಹಣ, ಸಮಯ, ಸಂಯಮ ಹೂಡುವ ಅಭ್ಯರ್ಥಿಯಿಂದ ಇನ್ನೇನು ನಿರೀಕ್ಷಿಸಲು ಸಾಧ್ಯ? ಈ ನೆಟ್‌ವರ್ಕ್ ಅತ್ಯಂತ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಕಾಲವಿದು. ರಾಜಕೀಯ ಪಕ್ಷ, ಅಭ್ಯರ್ಥಿ ಮತ್ತು ಮತದಾರರ ತ್ರಿವೇಣಿ ಸಮಾಗಮ! ಹೀಗಿರುವಾಗ, ಯಾರನ್ನೋ ಭ್ರಷ್ಟಾಚಾರಿ ಎಂದಾಗಲೀ ಯಾವುದನ್ನೋ ಕುಟುಂಬ ರಾಜಕಾರಣ ಎಂತಾಗಲೀ ಜರಿಯುವ ಮುನ್ನ ಜನ ಒಮ್ಮೆ ಕನ್ನಡಿಯಲ್ಲಿ ಇಣುಕಿ ನೋಡಿಕೊಳ್ಳುವುದು ಒಳ್ಳೆಯದು ಎನ್ನಿಸುತ್ತದೆ.

ಸಂಕೀರ್ಣ ಸಂದರ್ಭಗಳಲ್ಲಿ, ಚಳವಳಿಗಳ ಕಾವಿನಲ್ಲಿ, ಹೋರಾಟಗಳ ಅಬ್ಬರದಲ್ಲಿ, ಕಾಲೇಜು ಕ್ಯಾಂಪಸ್ಸುಗಳಲ್ಲಿ ರೂಪುಗೊಳ್ಳುತ್ತಿದ್ದ ರಾಜಕೀಯ ನಾಯಕತ್ವಗಳು ಇತ್ತೀಚೆಗೆ ರಾಜಕಾರಣಿಗಳ ಮನೆಗಳಲ್ಲೇ ಹುಟ್ಟು ಪಡೆಯುತ್ತಿರುವುದರ ಗುಟ್ಟು ಇದೇ ಆಗಿದೆ. ಹಾಗೆ ನೋಡಿದರೆ ರಾಜಕಾರಣಿಯ ಕುಟುಂಬದಲ್ಲಿ ಹುಟ್ಟುವುದು

ರಾಜಕೀಯ ಕುಡಿಯೇ ವಿನಾ ರಾಜಕೀಯ ನಾಯಕತ್ವ ಅಲ್ಲವೇ ಅಲ್ಲ. ಕರ್ನಾಟಕದ ಮೇಲೆ ಹೇರಲಾಗಿರುವ ಮೂರು ವಿಧಾನಸಭಾ ಕ್ಷೇತ್ರಗಳ ಉಪಚುನಾವಣೆಗಳು ಮೂರೂ ರಾಜಕೀಯ ಪಕ್ಷಗಳು ಹಿಂದಿನ ಲೋಕಸಭಾ ಚುನಾವಣೆಯಲ್ಲಿ ಗೆಲ್ಲುವ ಅಭ್ಯರ್ಥಿಗೆ ಮಣೆ ಹಾಕಿದ್ದರ ಫಲ ಆಗಿವೆ. ಬಿಜೆಪಿಯ ಬಸವರಾಜ ಬೊಮ್ಮಾಯಿ, ಜೆಡಿಎಸ್‌ನ ಎಚ್.ಡಿ.ಕುಮಾರಸ್ವಾಮಿ ಮತ್ತು ಕಾಂಗ್ರೆಸ್ಸಿನ ಇ.ತುಕಾರಾಮ್ ಸಂಸದರಾಗಿ ಆಯ್ಕೆಯಾಗುವ ಮೂಲಕ ತಾವು ಪ್ರತಿನಿಧಿಸುತ್ತಿದ್ದ ಶಿಗ್ಗಾವಿ, ಚನ್ನಪಟ್ಟಣ ಮತ್ತು ಸಂಡೂರು ವಿಧಾನಸಭಾ ಕ್ಷೇತ್ರಗಳನ್ನು ‘ಖಾಲಿ’ ಮಾಡಿದ್ದರು. ಇದೀಗ ಆ ಸ್ಥಾನಗಳನ್ನು ತುಂಬುವ ಸರ್ಕಸ್ಸು ಆರಂಭವಾಗಿದೆ. ಈ ಕ್ಷೇತ್ರಗಳನ್ನು ಸತತ ‘ಪೋಷಣೆ’ ಮಾಡಿದವರು ಮತ್ತೆ ತಮ್ಮ ಕುಟುಂಬದ ಸದಸ್ಯರ ಮೂಲಕ ಆಪೋಶನ ತೆಗೆದುಕೊಳ್ಳಲು ಹವಣಿಸುತ್ತಿದ್ದಾರೆ. ಶಿಗ್ಗಾವಿಗೆ ಬಿಜೆಪಿಯಿಂದ ಭರತ್ ಬೊಮ್ಮಾಯಿ, ಸಂಡೂರಿನಲ್ಲಿ ಕಾಂಗ್ರೆಸ್ಸಿನಿಂದ ಅನ್ನಪೂರ್ಣ ತುಕಾರಾಮ್ ಉಮೇದುವಾರರಾಗಿದ್ದಾರೆ. ಚನ್ನಪಟ್ಟಣಕ್ಕೆ ಜೆಡಿಎಸ್‌ನಿಂದ ನಿಖಿಲ್ ಕುಮಾರಸ್ವಾಮಿ ಹೆಸರು ಕೇಳಿಬರುತ್ತಿದೆ.

ಹಾಲಿ ಶಾಸಕರನ್ನೇ ಸಂಸತ್ ಚುನಾವಣೆಗೆ ನಿಲ್ಲಿಸುವ ನಿರ್ಣಯ ಮಾಡುವಾಗ ಈ ಪಕ್ಷಗಳಿಗೆ ಬೇರಾವ ಕಾರ್ಯಕರ್ತರೂ ಕಣ್ಣಿಗೆ ಬೀಳಲೇ ಇಲ್ಲ. ಈಗಿನ ಉಪಚುನಾವಣೆಯಲ್ಲಿ ಕೂಡ ಗೆಲುವು ಮತ್ತು ಹೂಡಿಕೆ ಲೆಕ್ಕದಲ್ಲಿ ಕುಟುಂಬ ರಾಜಕಾರಣದ ಅನಿವಾರ್ಯವನ್ನು ಪುನಃ ರುಜುವಾತು ಮಾಡಲಾಗಿದೆ. ಇನ್ನು, ಈ ಜಾಲದ ಮತ್ತೊಂದು ಕೊಂಡಿಯಾದ ಮತದಾರ ತನ್ನ ಸಮ್ಮತಿಯ ಗುಂಡಿ ಒತ್ತುವುದೊಂದೇ ಬಾಕಿ.

ರಾಜಕಾರಣಿಗಳು, ರಾಜಕೀಯ ಪಕ್ಷಗಳ ಇಂಥ ಧೋರಣೆ ಕುರಿತು ಬಹಳಷ್ಟು ಸಮರ್ಥನೆಗಳು, ವಾಸ್ತವದ ಪಾಠಗಳು, ನೀತಿಕತೆಗಳು ಇರಲು ಸಾಧ್ಯ. ಆದರೆ ಶಿಗ್ಗಾವಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಭರತ್ ಬೊಮ್ಮಾಯಿ ಕುಟುಂಬ ರಾಜಕಾರಣವನ್ನು ಸಮರ್ಥಿಸಿಕೊಂಡ ರೀತಿ ಮಾತ್ರ ವಿಶೇಷವೂ ಸಾರಾಂಶರೂಪಿಯೂ ಆಗಿದೆ. ‘ಡಾಕ್ಟರ್ ಮಗ ಡಾಕ್ಟರ್, ಎಂಜಿನಿಯರ್ ಮಗ ಎಂಜಿನಿಯರ್, ಟೀಚರ್ ಮಗ ಟೀಚರ್ ಆಗಬೇಕು...’ ಎಂಬ ತರ್ಕ ಈ ಯುವಕನ ಬಾಯಿಂದ ಹೊರಟಿದೆ. ನಾಡಿಗೆ ಇಬ್ಬರು ಮುಖ್ಯಮಂತ್ರಿಗಳನ್ನು ನೀಡಿದ ಕುಟುಂಬದ ಕುಡಿಯಿದು!

ಎಡಪಂಥೀಯ ಸಿದ್ಧಾಂತಿ ಎಂ.ಎನ್.ರಾಯ್ ಅವರ ಅನುಯಾಯಿಯಾಗಿದ್ದ ಎಸ್.ಆರ್.ಬೊಮ್ಮಾಯಿಯವರು ‘ರಾಯಿಸ್ಟ್’ ಎಂದೇ ಗುರುತಿಸಿಕೊಂಡಿದ್ದರು. ಹಾಗಾದರೆ ‘ರಾಯಿಸ್ಟ್ ಮಗ ರಾಯಿಸ್ಟ್ ಏಕಾಗಲಿಲ್ಲ’ ಎಂದು ತಮ್ಮ ತಂದೆಯನ್ನು ಕೇಳಬೇಕಿತ್ತಲ್ಲವೇ? ಕುಟುಂಬ ರಾಜಕಾರಣದ ಅಹಂಕಾರದಲ್ಲಿ ರಾಜಕೀಯ ಸಿದ್ಧಾಂತಗಳ ಪ್ರಾಥಮಿಕ ಅರಿವನ್ನೂ ಪಡೆಯದ, ಜನರ ಒಡನಾಟವನ್ನೂ ಹೊಂದದ ಅನನುಭವಿಗಳನ್ನು ಮತದಾರರು ಸಹಿಸಬೇಕಾಗಿದೆ!

ಈ ಮಧ್ಯೆ ಮಳೆಯ ಆರ್ಭಟಕ್ಕೆ ನಾಡು ತತ್ತರಿಸಿದೆ. ನಗರಗಳ ಜನರ ಪರದಾಟ ಒಂದು ಬಗೆಯದಾದರೆ, ಗ್ರಾಮೀಣ ಭಾಗದ ಬವಣೆ ಹೇಳತೀರದು. ಅತಿಮಳೆಗೆ ಮುಂಗಾರು ಬೆಳೆ ಬಲಿಯಾಗಿ, ಹಿಂಗಾರಿಗೆ ಸಿದ್ಧಗೊಳ್ಳಲೂ ಸವುಡಿಲ್ಲದೆ ಬಹುತೇಕ ರೈತರು ಬಸವಳಿದಿದ್ದಾರೆ. ಮೂರೂ ಪಕ್ಷಗಳು ಉಪಚುನಾವಣೆಯ ಗೆಲುವಿನ ಲೆಕ್ಕಾಚಾರದಲ್ಲಿ ಮುಳುಗಿರುವಾಗ ರೈತರ ಸೋಲಿನ ಲೆಕ್ಕ ಕೇಳುವವರಾರು?

ಚುರುಮುರಿ

ಚನ್ನಪಟ್ಟಣದ ಗೊಂಬೆ!

● ಗುರು ಪಿ.ಎಸ್.

‘ಏನ್ ಮುದ್ದಣ್ಣ ನವರಾತ್ರಿ ಮುಗಿದು ವಾರವೇ ಆಯ್ತು, ಇನ್ನೂ ಈ ಗೊಂಬೆಗಳನ್ನ ಪ್ರದರ್ಶನಕ್ಕೆ ಇಟ್ಟಿದ್ದೀಯಲ್ಲ’ ಕೇಳಿದ ವಿಜಿ.

‘ಇವು ಚನ್ನಪಟ್ಟಣದ ಆಲ್ ಸೀಜನ್ಡ್ ಗೊಂಬೆಗಳು ಸರ್. ಒಂದೇ ಹಬ್ಬಕ್ಕೆ ಇವುಗಳನ್ನ ಸೀಮಿತ ಮಾಡಬೇಡಿ’ ಹೇಳಿದ ಮುದ್ದಣ್ಣ.

‘ಅಂದರೆ, ಯಾವಾಗಲೂ ಬೇಡಿಕೆಯಲ್ಲಿರೋ ಗೊಂಬೆಗಳು ಅನ್ನು...’

‘ಹೌದು ಸರ್, ಇವುಗಳಿಗೆಲ್ಲ ಒಂದೊಂದು ಹೆಸರೂ ಕೊಟ್ಟಿದ್ದೀನಿ’.

‘ಓಹ್ ಚೆನ್ನಾಗಿದೆ... ಏನೇನು ಹೆಸರು?’.

‘ಆ ದೇವಮೂಲೆಯಲ್ಲಿ ಶಿವನ ರೂಪದಲ್ಲಿದೆಯಲ್ಲ ಸರ್, ಅದರ ಹೆಸರು ‘ಅಭಿವೃದ್ಧಿ’.

‘ಗೊತ್ತಾಯ್ತು, ಲೋಕಸಭಾ ಎಲೆಕ್ಷನ್ ನಂತರ ಒಳ್ಳೆಯ ಪ್ರದರ್ಶನ ನೀಡ್ತಿರೋ ಗೊಂಬೆಯಲ್ವ ಅದು’.

‘ಹೌದು ಸರ್. ಇನ್ನು, ಜೊತೆಗಿರೋ ಗೊಂಬೆಯನ್ನ ಕಳೆದುಕೊಂಡು ಏನು ಮಾಡಬೇಕೆಂದು ತಿಳಿಯದೇ ಶೋಕಿಸುತ್ತಿರುವ ಈ ಗೊಂಬೆ ಹೆಸರು ‘ಮೈತ್ರಿ ಧರ್ಮ’.

‘ಅಕ್ಕ-ಪಕ್ಕ ಯಾರನ್ನೂ ಬಿಟ್ಟುಕೊಳ್ಳದೆ, ಹೆಗಲ ಮೇಲೆ ಟವೆಲ್ ಹಾಕಿಕೊಂಡು ದೂರ ನಿಂತಿದೆಯಲ್ಲ, ಅದರ ಹೆಸರು?’.

‘ಬೇಕಾದಾಗ ಹತ್ತಿರವಿಟ್ಟುಕೊಂಡು, ಬೇಡವಾದಾಗ ದೂರ ಮಾಡೋ ಗೊಂಬೆ ಸರ್ ಅದು, ಅದರ ಹೆಸರು ಸ್ವಾಭಿಮಾನ’.

‘ಕೆಳಗಿನ ಸಾಲಿನಲ್ಲಿ ಕುಳಿತು ಕಿಲಕಿಲ ನಗುತ್ತಿದೆಯಲ್ಲ, ಆ ಗೊಂಬೆ ಹೆಸರೇನು ಮುದ್ದಣ್ಣ?’

‘ಜನರ ಬಯಕೆ’.

‘ಇದೆಂಥಾ ಹೆಸರು?’

‘ತನ್ನ ಬಯಕೆಯೇ ಜನರ ಬಯಕೆ ಅಂತ ಹೇಳುವ ಅಭ್ಯಾಸದ ಗೊಂಬೆ ಸರ್ ಅದು, ಅದಕ್ಕೆ ಆ ಹೆಸರಿಟ್ಟಿದ್ದೇನೆ’ ನಕ್ಕ ಮುದ್ದಣ್ಣ.

‘ಫ್ಲ್ಯಾಟ್ ಕ್ಯಾಪ್ ಹಾಕ್ಕೊಂಡು, ಉದ್ದಕ್ಕೆ ಇದೆಯಲ್ಲ, ಆ ಗೊಂಬೆ ಹೆಸರೇನು? ಒಂದ್ ಕಡೆ ನಿಲ್ತಿಲ್ಲವಲ್ಲ ಅದು, ಅದರ ಕೈಯಲ್ಲಿ ಬೇರೆ ಬೇರೆ ಪಕ್ಷದ ಬಾವುಟಗಳನ್ನ ಬೇರೆ ಸಿಕ್ಕಿಸಿದ್ದೀಯ’

‘ಚನ್ನಪಟ್ಟಣಕ್ಕೆ ಈ ಗೊಂಬೆಯೇ ಈಗ ಕೇಂದ್ರಬಿಂದು ಸರ್?’

‘ಅದರ ಹೆಸರು?’

‘ತತ್ವ ಸಿದ್ಧಾಂತ’!

ಸಂಗತ

ಮನುಕುಲ–ಅಣ್ವಸ್ತ್ರ: ಸಹಬಾಳ್ವೆ ಅಸಾಧ್ಯ

ಶಾಂತಿ ಸ್ಥಾಪನೆಗೆ ಜರೂರಾದ ಪ್ರಯತ್ನ ಆಗತ್ಯ ಎಂಬುದನ್ನು ಮನಗಾಣಬೇಕಿದೆ

● **ಪ್ರೊ. ಎಂ.ಎಸ್.ರಘುನಾಥ್**

ಅಮೆರಿಕದ ಲೇಖಕ ಮಾರ್ಕ್ ಟ್ವೈನ್‌ನ ಒಂದು ಯುದ್ಧವಿರೋಧಿ ಕಾವ್ಯ, ‘ದ ವಾರ್ ಪ್ರೇಯರ್’. ಮೊದಲ ಮಹಾಯುದ್ಧದ ಸಮಯ, 1916ರ ಆಸುಪಾಸಿನಲ್ಲಿ ಇದು ಪ್ರಕಟವಾಯಿತು. ಇದರಲ್ಲಿ, ಯುದ್ಧ ಹೂಡಲು ಹೊರಟಿರುವ ಯೋಧರ ಒಳಿತಿಗಾಗಿ ಜನರ ಸಮೂಹವೊಂದು ಪ್ರಾರ್ಥನೆ ಸಲ್ಲಿಸುವ ದೃಶ್ಯ ಬರುತ್ತದೆ. ಚರ್ಚ್‌ನಲ್ಲಿ ಪಾದ್ರಿಯು ಪ್ರಾರ್ಥನೆ ಸಲ್ಲಿಸುವಾಗ, ತಮ್ಮ ದೇಶದ ಸೈನಿಕರು ಯುದ್ಧದಲ್ಲಿ ಜಯಶಾಲಿಗಳಾಗಲಿ ಎಂದು ಹಾರೈಸಲು ಅಧಿಕ ಸಂಖ್ಯೆಯಲ್ಲಿ ಜನ ಸೇರಿರುತ್ತಾರೆ. ಅವರಿಗೋ ಎಲ್ಲಿಲ್ಲದ ಉದ್ವೇಗ, ತವಕ. ಯುದ್ಧಸನ್ನದ್ಧರಾಗಿ ಹೊರಟಿರುವ ಯೋಧರಿಗೆ ತಮ್ಮ ಇಂಗಿತವನ್ನು ತಿಳಿಯಪಡಿಸುವ ಕಳಕಳಿ.

ಆಗ ಇದ್ದಕ್ಕಿದ್ದಂತೆ ಒಬ್ಬ ವೃದ್ಧ ಆ ಗುಂಪಿನಿಂದ ಎದ್ದು ನಿಂತು, ಏನೋ ಹೇಳಲು ಮುಂದೆ ಬರುತ್ತಾನೆ. ಎಲ್ಲರೂ ಕುತೂಹಲದಿಂದ ಅವನನ್ನು ನೋಡುತ್ತಾರೆ. ತಾನು ದೇವರ ಕಡೆಯಿಂದ ಬಂದವನೆಂದು ಮೊದಲು ಹೇಳುವ ಆತ ನಂತರ ವಿಷಾದದ ಧ್ವನಿಯಲ್ಲಿ, ‘ಯಾರಿಗಾಗಿ ಈ ಪ್ರಾರ್ಥನೆ?’ ಎಂದು ಕೇಳುತ್ತಾನೆ. ‘ನಿಮ್ಮ ಯೋಧರಿಗೆ ಜಯವಾಗಲಿ ಎಂದರೆ, ಮತ್ತೊಂದು ಗುಂಪಿನ ಜನ ಸಾಯಲಿ ಎಂದಲ್ಲವೇ? ಅದೇ ಯುದ್ಧದ ವ್ಯಂಗ್ಯ ಹಾಗೂ ಆತ್ಮವಂಚನೆ’ ಎಂದು ಹೇಳುತ್ತಾನೆ. ಯುದ್ಧದ ಕಠಿಣ ವಾಸ್ತವಿಕ ಚಿತ್ರಣವನ್ನು ಬಿಚ್ಚಿಡುತ್ತಾನೆ. ಈ ಮೂಲಕ, ಅಲ್ಲಿ ಸೇರಿದ್ದವರ ದೇಶಭಕ್ತಿಯ ಪ್ರದರ್ಶನದಲ್ಲಿ ಅಡಗಿದ್ದ ವಿರೋಧಾಭಾಸಗಳನ್ನು ಅನಾವರಣಗೊಳಿಸುತ್ತಾನೆ. ಅದು ಕೇಳುಗರನ್ನು ತಲ್ಲಣಗೊಳಿಸುತ್ತದೆ.

ಅಲ್ಲಿ ಸೇರಿದ್ದವರಿಗೆ ಬೇಕಾಗಿದ್ದುದು ಯುದ್ಧವೇ ವಿನಾ ಆ ವ್ಯಕ್ತಿಯ ಮಾತುಗಳಲ್ಲ. ಅದಕ್ಕಾಗಿ ಅಲ್ಲಿನ ಗಣ್ಯ ವ್ಯಕ್ತಿಗಳು ಮಾಡಿದ್ದೇನು ಗೊತ್ತೇ? ಅವನೊಬ್ಬ ಹುಚ್ಚ ಎಂದು ಅವನನ್ನು ಹೀಯಾಳಿಸಿ ಹೊರಗೆ ಕಳುಹಿಸುವ ಹುನ್ನಾರ. ಈ ಕವಿತೆ ಇಂದಿನ ದುರಿತ ಪರಿಸ್ಥಿತಿಗೆ ಬಹಳ ಪ್ರಸ್ತುತವಾಗಿದೆ. ಈಗಲೂ ಕೆಲವು ರಾಷ್ಟ್ರಗಳು ಹಿಂದೆ ಕಂಡರಿಯದ ರೀತಿಯಲ್ಲಿ ಯುದ್ಧದ ಬೇಗುದಿಗೆ ಒಳಗಾಗಿದ್ದರೂ, ಜಗತ್ತಿನ ಬಹುಪಾಲು ರಾಷ್ಟ್ರಗಳು ಅದನ್ನು ಕಂಡೂ ಕಾಣದಂತೆ ತಟಸ್ಥವಾಗಿವೆ ಅಥವಾ ಅದೇನಿದ್ದರೂ ಆ ರಾಷ್ಟ್ರಗಳ ಆಂತರಿಕ ವಿಚಾರ, ಮಧ್ಯ ಪ್ರವೇಶಿಸುವಂತಿಲ್ಲ ಎಂಬಂತೆ ಸೋಗು ಹಾಕಿಕೊಂಡಿವೆ. ನಮ್ಮ ಪ್ರಧಾನಿ ನರೇಂದ್ರ ಮೋದಿ ‘ಇದು ಯುದ್ಧದ ಸಮಯ ಅಲ್ಲ’ ಎಂಬ ಹೇಳಿಕೆಯನ್ನು ಬೃಹತ್ ರಾಷ್ಟ್ರಗಳೆದುರೇ ನೀಡಿದ್ದರು.

ರಷ್ಯಾವನ್ನು ಎದುರು ಹಾಕಿಕೊಳ್ಳಲು ಬಹುಶಃ ಯಾವ ರಾಷ್ಟ್ರಕ್ಕೂ ಇಷ್ಟವಿಲ್ಲವೆಂಬಂತೆ ಮೇಲ್ನೋಟಕ್ಕೆ ತೋರುತ್ತದೆ. ರಷ್ಯಾ- ಉಕ್ರೇನ್ ನಡುವಿನ ಯುದ್ಧಕ್ಕೆ ಆಗಲೇ ಎರಡು ವರ್ಷ ಎಂದು ಯುದ್ಧವನ್ನು ವೈಭವೀಕರಿಸುವಂತೆ ವರದಿ ಮಾಡಲಾಯಿತು. ಇದೀಗ ಇಸ್ರೇಲ್ ಹಾಗೂ ಇರಾನ್ ನಡುವೆಯೂ ಸಂಘರ್ಷ ನಡೆದಿದೆ.

ಇದು ಹೀಗೆಯೇ ಮುಂದುವರಿದರೆ, ಅದು ಜಗತ್ತಿನ ಮೂರನೇ ಮಹಾಯುದ್ಧಕ್ಕೆ ನಾಂದಿಯಾಗಬಹುದು ಎಂದು ಅಮೆರಿಕದ ಮಾಜಿ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೇರಿದಂತೆ ವಿಶ್ವದ ಅನೇಕ ನಾಯಕರು ನೀಡಿರುವ ಎಚ್ಚರಿಕೆಯನ್ನು ಲಘುವಾಗಿ ತೆಗೆದುಕೊಳ್ಳುವಂತಿಲ್ಲ. ಈ ಘರ್ಷಣೆಯನ್ನು ನಿವಾರಿಸಲು ಬೃಹತ್ ರಾಷ್ಟ್ರಗಳು ಏಕೆ ಸಫಲವಾಗಿಲ್ಲ ಎಂಬುದು ಮನುಜಕುಲವನ್ನೇ ಕಲಕಬೇಕಾದ ಗಂಭೀರ ಪ್ರಶ್ನೆ.

ಹಾಗೆ ನೋಡಿದರೆ, ವಿಶ್ವಶಾಂತಿ ಸ್ಥಾಪನೆಗೋಸ್ಕರ ಆರಂಭವಾದ ವಿಶ್ವಸಂಸ್ಥೆಯೂ ಆ ಮಹೋದ್ದೇಶವನ್ನು ಸಾಧಿಸುವ ದಿಸೆಯಲ್ಲಿ ಗಮನಾರ್ಹ ಕೊಡುಗೆಯನ್ನೇನೂ ನೀಡಿಲ್ಲ. ಯುದ್ಧಗಳು ನಡೆಯುತ್ತಲೇ ಇವೆ. ಎರಡು ಮಹಾಯುದ್ಧಗಳ ನಂತರವೂ ಮನುಷ್ಯ ಪಾಠ ಕಲಿತಿಲ್ಲ. ಆದರೆ, ಆ ಪ್ರಯತ್ನಗಳು ನಿಂತಿವೆಯೆಂದೇನೂ ಅಲ್ಲ. ಸುರಂಗ ಮುಗಿಯುತ್ತಿದ್ದಂತೆ ಬೆಳಕು ಮೂಡಿಯೇ ತೀರುತ್ತದೆ.

ಈ ವರ್ಷದ ನೊಬೆಲ್ ಶಾಂತಿ ಪುರಸ್ಕಾರವನ್ನು, ಜಪಾನ್‌ನಲ್ಲಿನ ಅಣುಬಾಂಬ್ ದಾಳಿಯಲ್ಲಿ ಬದುಕುಳಿದ ಗುಂಪನ್ನು ಪ್ರತಿನಿಧಿಸುವ ನಿಹಾನ್ ಹಿಡಾಂಕ್ಯೊ ಸಂಸ್ಥೆಗೆ ಪ್ರದಾನ ಮಾಡಲಾಗಿದೆ. ಈ ಹೆಜ್ಜೆಯು ಅಣ್ವಸ್ತ್ರಗಳು ಜಗತ್ತಿಗೆ ನೀಡುವ ಘೋರ ಬೆದರಿಕೆಯ ಸಕಾಲಿಕ ನೆನಪೋಲೆಯಾಗಿದೆ.

ಶಾಂತಿ ಸ್ಥಾಪನೆಗಾಗಿ ಮಾಡಬೇಕಾದ ಪ್ರಯತ್ನವು ಹವಾಮಾನ ಬದಲಾವಣೆ, ಬಡತನ ಹಾಗೂ ಅಸಮಾನತೆಯ ವಿರುದ್ಧ ನಡೆಸಬೇಕಾದ ಹೋರಾಟದಷ್ಟೇ ಜರೂರು ಎಂಬುದನ್ನು ಮನಗಾಣಬೇಕಿದೆ. ರಷ್ಯಾದ ಅಧ್ಯಕ್ಷ ಪುಟಿನ್ ಅಣ್ವಸ್ತ್ರ ಬಳಕೆಯ ಬೆದರಿಕೆಯನ್ನು ಉಕ್ರೇನ್ ಮೇಲಿನ ಯುದ್ಧದುದ್ದಕ್ಕೂ ಮಾಡಿಕೊಂಡೇ ಬಂದಿದ್ದಾರೆ. ಇನ್ನೂ ಕೆಲವು ದೇಶಗಳ ಅಣ್ವಸ್ತ್ರ ಬಳಕೆ ಸಾಧ್ಯತೆಗಳ ಬಗ್ಗೆ ಎಲ್ಲೆಡೆ ಕಳವಳ ವ್ಯಕ್ತವಾಗುತ್ತಿದೆ. ಈ ಕಾರಣದಿಂದ, ನೊಬೆಲ್ ಶಾಂತಿ ಪುರಸ್ಕಾರವನ್ನು ನಿಹಾನ್ ಹಿಡಾಂಕ್ಯೊಗೆ ನೀಡಿರುವುದು ಅತ್ಯಂತ ಅರ್ಥಪೂರ್ಣವಾಗಿದೆ. ಅಷ್ಟೇ ಅಲ್ಲ, ಇದು ವಿಶ್ವದ ನಾಯಕರಿಗೆ ನೀಡಿದ ಸಂದೇಶವೂ ಆಗಿದೆ ಎನ್ನಬಹುದು.

ನಿಹಾನ್ ಹಿಡಾಂಕ್ಯೊಗೆ ಶಾಂತಿ ಪುರಸ್ಕಾರ ನೀಡಿದ ಮಾತ್ರಕ್ಕೆ ಅಣ್ವಸ್ತ್ರಗಳ ಭಯ ಕಡಿಮೆಯಾಗದೇ ಇರಬಹುದು. ಆದರೆ, ಅವುಗಳಿಂದ ಜಗತ್ತಿಗೆ ಉಂಟಾಗಿರುವ ಬೆದರಿಕೆ ಹಾಗೂ ಅವುಗಳ ವಿರುದ್ಧ ಹೂಡಬೇಕಾದ ಚಳವಳಿಯನ್ನು ಗಟ್ಟಿಗೊಳಿಸುವ ಅನಿವಾರ್ಯವನ್ನು ಮುನ್ನೆಲೆಗೆ ತರಲು ಸಹಾಯ ಆಗಬಹುದು. ಮಾನವಕುಲ ಹಾಗೂ ಅಣ್ವಸ್ತ್ರಗಳು ಸಹಬಾಳ್ವೆ ಮಾಡಲು ಸಾಧ್ಯವಿಲ್ಲ ಎಂಬ ಸಂದೇಶವನ್ನು ವಿಶ್ವ ನಾಯಕರಿಗೆ ರವಾನೆ ಮಾಡುವುದೇ ತನ್ನ ಉದ್ದೇಶ ಎಂಬುದನ್ನೂ ನೊಬೆಲ್ ಶಾಂತಿ ಪುರಸ್ಕಾರ ಸಮಿತಿಯು ಸ್ಪಷ್ಟಪಡಿಸಿದೆ.

ವಾಚಕರ ವಾಣಿ

ಕನ್ನಡ ನೆಲದ ನೀರು ಕುಡಿದು...

ವಿಜಯಪುರ– ಮಂಗಳೂರು ಎಕ್ಸ್‌ಪ್ರೆಸ್ ರೈಲಿನಲ್ಲಿ ಈಚೆಗೆ ಬಾಗಲಕೋಟೆಯಿಂದ ಪುತ್ತೂರಿಗೆ ಪ್ರಯಾಣಿಸುತ್ತಿದ್ದೆ. ಗದಗ ಬಂದಾಗ ‘ವಾಟರ್-ಪಾನೀ...’ ಎಂದು ಜೋರಾಗಿ ಕೂಗುತ್ತ ನೀರು ಮಾರುವ ಯುವಕನೊಬ್ಬ ನಮ್ಮ ಬೋಗಿಗೆ ಬಂದ. ಅವನು ಕನ್ನಡಿಗನಾಗಿದ್ದ. ನಾನು ಅವನಿಗೆ ‘ವಾಟರ್-ಪಾನೀ’ ಎನ್ನುವ ಬದಲು ನೀರು ಎಂದು ಹೇಳಬಾರದಾ?’ ಎಂದೆ. ಅದಕ್ಕೆ ಅವನು ‘ನೀರು ಎಂದರೆ ಬೆಂಗಳೂರಿನವರಿಗೆ ಅರ್ಥ ಆಗುವುದಿಲ್ಲ’ ಎಂದ. ಆಗ ನಾನು ‘ಹಾಗಾದರೆ ಇನ್ನು ಮುಂದೆ ನೀನು ವಾಟರ್-ಪಾನೀ-ನೀರೂ ಎಂದು ಹೇಳು’ ಎಂದೆ. ಅವನು ‘ಆಯಿತು’ ಎನ್ನುತ್ತಾ ಅಲ್ಲಿಂದ ಹೊರಟ. ಸ್ವಲ್ಪವಾದರೂ ಕನ್ನಡ ಉಳಿಸಿದೆನಲ್ಲ ಎಂದು ನಾನು ಖುಷಿಪಟ್ಟೆ. ಮುಂದೆ ಹೋಗುತ್ತಾ ಅವನು ‘ವಾಟರ್-ಪಾನೀ...’ ಎಂದೇ ಕೂಗುತ್ತಾ ಹೋದ. ನನ್ನ ಮಾತು ಭೋರ್ಗಲ್ಲ ಮೇಲೆ ಮಳೆ ಸುರಿದಂತೆ ಆಯಿತು.

ಕನ್ನಡ ನೆಲದ ನೀರನ್ನು ಕುಡಿದು, ‘ನೀರು’ ಎಂದು ಹೇಳಿದರೆ ಹೊಟ್ಟೆಪಾಡು ಸಾಗದ ಬದುಕು ಕನ್ನಡದ ನೆಲದಲ್ಲೇ ಕನ್ನಡಿಗರಿಗೆ ಆಯಿತಲ್ಲ. ಇದಕ್ಕೆ ಏನು ಮಾಡುವುದು?

ಸಹನಾ ಕಾಂತಬೈಲು, ಬಾಲಂಬಿ, ಮಡಿಕೇರಿ

ಕೆರೆಯಲ್ಲಿ ಮನೆ!

ಕೆರೆಯ ಒಳಗೊಂದು ಮನೆಯ ಮಾಡಿ
ನೀರಿಗೆ ಅಂಜಿದೊಡೆಂತಯ್ಯ?
ಚೆನ್ನಮಲ್ಲಿಕಾರ್ಜುನ ದೇವ ಕೇಳಯ್ಯಾ,
ಬೆಂಗಳೂರಿನ ಕೆರೆಯಲಿ ಮನೆ ಕಟ್ಟಿ
ನೆಲಸಿದ ಬಳಿಕ, ಜಲಸಂಕಷ್ಟಗಳು ಬಂದಡೆ
ಸುಮ್ಮನೆ ‘ಬಿಡಿಎ’ಯನ್ನು ದೂರದೆ
ಜಲವಿಹಾರವನ್ನು ಆನಂದಿಸಬೇಕಯ್ಯ!
(ಅಕ್ಕನ ಕ್ಷಮೆ ಕೋರಿ)

ರಾಜಶೇಖರ ಕುಕ್ಕುಂದಾ, ಬಾಗಲಕೋಟೆ

ದೇಣಿಗೆ ಆರೋಪ: ವಿರೋಧ ಪಕ್ಷ ಮಾಡಿದ್ದೇನು?

‘ಸಂವಿಧಾನದೊಂದಿಗೆ ನೇರವಾಗಿ ಸಂಘರ್ಷಕ್ಕೆ ಇಳಿದಿರುವ ಆರ್‌ಎಸ್‌ಎಸ್‌ನ ಚಟುವಟಿಕೆಯಲ್ಲಿ ಭಾಗವಹಿಸಲು ಸರ್ಕಾರಿ ನೌಕರರಿಗೆ ಅವಕಾಶ ನೀಡಿರುವುದು ಸರಿಯೇ’ ಎಂದು ಪ್ರಶ್ನಿಸಿರುವ ಕಾಂಗ್ರೆಸ್ ಮುಖಂಡ ಬಿ.ಕೆ.ಚಂದ್ರಶೇಖರ್ ಅವರ ಪತ್ರಿಕಾ ಹೇಳಿಕೆಗೆ (ಪ್ರ.ವಾ., ಅ. 23) ಸಂಬಂಧಿಸಿದಂತೆ ಎರಡು ಸಂಗತಿಗಳ ಬಗ್ಗೆ ಇಲ್ಲಿ ಪ್ರಸ್ತಾಪಿಸಬೇಕು.
1. ದೇಣಿಗೆ ಮಾಹಿತಿ ಗೋಪ್ಯ. 2002ರಲ್ಲಿಯೇ ದೇಶದ ಪ್ರಮುಖ ಪತ್ರಿಕೆಗಳು ಈ ಸಂಘಟನೆಯ ಚಟುವಟಿಕೆಗಳಿಗೆ ದೇಣಿಗೆ ಎಲ್ಲಿಂದ ಬರುತ್ತಿದೆ ಎಂದು ಪ್ರಶ್ನಿಸಿದ್ದವು ಎಂದು ಚಂದ್ರಶೇಖರ್ ಹೇಳಿದ್ದಾರೆ. ಸಂಘದ ಪ್ರಮುಖರೇನೋ ಉತ್ತರ ನೀಡಲಿಲ್ಲ. ಆನಂತರ ಪತ್ರಿಕೆಗಳು ಮಾಡಿದ್ದೇನು? ಈ ದೇಶದಲ್ಲಿ ಐದು ದಶಕಗಳಿಗೂ ಹೆಚ್ಚು ಕಾಲ ಕಾಂಗ್ರೆಸ್ ಆಡಳಿತ ನಡೆಸಿದ್ದು ಹೌದು ತಾನೇ? ವಿದೇಶದಿಂದ ದೇಣಿಗೆ ಪಡೆಯುವಲ್ಲಿ ಕಾನೂನು ನಿಯಮಗಳನ್ನು ಆರ್‌ಎಸ್‌ಎಸ್ ಪರಿಪಾಲಿಸಿದೆಯೇ ಎನ್ನುವುದರ ಬಗ್ಗೆ ಅಂದಿನ ಸರ್ಕಾರ ಏಕೆ ತನಿಖೆ ಮಾಡಲಿಲ್ಲ? ಅಥವಾ ತನಿಖೆ ನಡೆಸಿ ಉಲ್ಲಂಘನೆ ಇಲ್ಲ ಎಂಬುದನ್ನು ಮನವರಿಕೆ ಮಾಡಿಕೊಂಡಿತ್ತೇ?

2. ಕೋವಿಡ್ ವೇಳೆ ಸಂಘಕ್ಕೆ 8.33 ಲಕ್ಷ ಡಾಲರ್ ಸಲ್ಲಿಕೆಯಾಗಿದೆ ಎಂಬ ಅಂಕಿ- ಅಂಶ ಕುರಿತು. ಇಲ್ಲಿಯೂ ಪತ್ರಿಕೆಗಳು ಮತ್ತು ವಿರೋಧ ಪಕ್ಷಗಳು, ಮುಖ್ಯವಾಗಿ ಕಾಂಗ್ರೆಸ್ ಪಕ್ಷ ಮಾಡಿದ್ದೇನು? ಕೇಂದ್ರದಲ್ಲಿದ್ದ ಬಿಜೆಪಿ ನೇತೃತ್ವದ ಸರ್ಕಾರವನ್ನು ಪ್ರಶ್ನಿಸಿದವೇ? ಏನು ಉತ್ತರ ಬಂತು? ಅಥವಾ ಸರ್ಕಾರ ಉತ್ತರಿಸಲು ನಿರಾಕರಿಸಿತೇ? ನಿರಾಕರಣೆಗೆ ಏನಾದರೂ ಕಾರಣಗಳನ್ನು ಸರ್ಕಾರ ಕೊಟ್ಟಿತೇ? ಪತ್ರಿಕೆಗಳು ಮತ್ತು ವಿರೋಧ ಪಕ್ಷಗಳು ಆಮೇಲೆ ಮಾಡಿದ್ದೇನು? ನ್ಯಾಯಾಲಯದಲ್ಲಿ ಈ ಬಗ್ಗೆ ಪ್ರಕರಣ ದಾಖಲಿಸಲು ಸಾಧ್ಯವಿರಲಿಲ್ಲವೇ? ಈಗಲೂ ಸಾಧ್ಯವಿಲ್ಲವೇ? ಈ ಪ್ರಶ್ನೆಗಳಿಗೆ ಉತ್ತರಿಸುವವರು ಯಾರು?

ಸಾಮಗ ದತ್ತಾತ್ರಿ, ಬೆಂಗಳೂರು

ನೇಮಕಾತಿ ನಡೆಯಲಿ, ತೊಂದರೆ ತಪ್ಪಲಿ

‘ರಾಜ್ಯದಲ್ಲಿ 48 ಲಕ್ಷ ಪಹಣಿಗಳು ಸತ್ತವರ ಹೆಸರಿನಲ್ಲೇ ಇವೆ’ ಎಂದು ಕಂದಾಯ ಸಚಿವರೇ ಹೇಳಿದ್ದಾರೆ (ಪ್ರ.ವಾ., ಅ. 23). ಯಾಕೆ ಹೀಗೆ ಆಗುತ್ತದೆ ಎಂಬ ಪ್ರಶ್ನೆಗೆ ಉತ್ತರ ತುಂಬ ಸರಳವಾಗಿ ದೊರೆಯುತ್ತದೆ. ಇಲಾಖೆಯ ಕಚೇರಿಗೆ ರೈತರು ಯಾವಾಗ ಹೋದರೂ ಅಧಿಕಾರಿಗಳು ಇನ್ನಿತರ ಯಾವುದೋ ಕೆಲಸಗಳಲ್ಲಿ ತೊಡಗಿರುತ್ತಾರೆ. ಹೀಗಾಗಿ, ಇಲಾಖೆಯಲ್ಲಿ ಅಗತ್ಯವಾದ ಸಿಬ್ಬಂದಿಯೇ ಇಲ್ಲದಂತಾಗಿ, ರೈತರ ಪೌತಿ ಖಾತೆ, ಹೊಲದ ದಾರಿ ತಕರಾರು, ಬೆಳೆ ನಾಶದ ಪರಿಹಾರ, ಹೊಲದ ಹಕ್ಕು ಬದಲಾವಣೆಯಂತಹ ನೂರಾರು ಸಮಸ್ಯೆಗಳು ಪರಿಹಾರ ಕಾಣದಾಗಿವೆ. ಸರ್ಕಾರ ಮೊದಲು ಅಗತ್ಯ ಸಿಬ್ಬಂದಿಯ ನೇಮಕಾತಿ ಮಾಡಿದರೆ ಮಾತ್ರ ರೈತರ ಸಮಸ್ಯೆಗಳಿಗೆ ಪರಿಹಾರ ಸಿಕ್ಕೀತು.

ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ, ಹಗರಿಬೊಮ್ಮನಹಳ್ಳಿ

ಜಾತಿ ಜನಗಣತಿಯಿಂದ ವಾಸ್ತವಾಂಶದ ಅರಿವು

‘ಜಾತ್ಯತೀತವಾಗಿರುವ ದೇಶದಲ್ಲಿ ಜಾತಿಗಣತಿ ಏಕೆ ಬೇಕು? ಅಷ್ಟೊಂದು ಹಣ ಖರ್ಚು ಮಾಡಿ ತಯಾರಿಸಲಾದ ಜಾತಿಗಣತಿ ವರದಿಯನ್ನು ಇಷ್ಟು ವರ್ಷ ಮುಚ್ಚಿಟ್ಟಿದ್ದು ಏಕೆ?’ ಎಂದು ಉಡುಪಿ ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಪ್ರಶ್ನಿಸಿರುವುದು (ಪ್ರ.ವಾ., ಅ. 22) ಅವರ ದ್ವಂದ್ವ ನಿಲುವನ್ನು ವ್ಯಕ್ತಪಡಿಸುತ್ತದೆ. ಪುರೋಹಿತಶಾಹಿ ವ್ಯವಸ್ಥೆಯೇ ಪ್ರಮುಖ ಕಾರಣವಾಗಿ ಹುಟ್ಟಿಕೊಂಡಿರುವ ನಮ್ಮ ಶ್ರೇಣೀಕರಣ ಸಮಾಜದಲ್ಲಿ ಕೆಲವು ಜನರು ಅಥವಾ ಗುಂಪುಗಳು ಸಾಮಾಜಿಕವಾಗಿ, ಶೈಕ್ಷಣಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದಿರಲು ಜಾತಿಯೇ ಪ್ರಮುಖ ಕಾರಣವಾಗಿದೆ. ಆದ್ದರಿಂದ ಯಾವ ಯಾವ ಜಾತಿಯವರು ಈ ಕ್ಷೇತ್ರಗಳಲ್ಲಿ ಎಷ್ಟೆಷ್ಟು ಪ್ರಮಾಣದಲ್ಲಿ ಹಿಂದುಳಿದಿದ್ದಾರೆ ಎಂಬುದು ಜಾತಿ ಜನಗಣತಿ ಮಾಡಿದಾಗಲೇ ಸ್ಪಷ್ಟವಾಗಿ ತಿಳಿಯುವುದು. ಆ ವಾಸ್ತವಾಂಶ ತಿಳಿಯದಿದ್ದರೆ ಯಾರ್‍ಯಾರಿಗೆ ಎಷ್ಟೆಷ್ಟು ಶೇಕಡಾವಾರು ಮೀಸಲಾತಿ ಎಂದು ತೀರ್ಮಾನ ಮಾಡುವುದಾದರೂ ಹೇಗೆ? ಆ ಕಾರಣದಿಂದ ಜಾತಿ ಜನಗಣತಿ ಮಾಡುವ ಅನಿವಾರ್ಯ ಇದೆಯೇ ವಿನಾ ಜಾತಿಭೇದ ಅಥವಾ ತಾರತಮ್ಯದ ಉದ್ದೇಶದಿಂದ ಅಲ್ಲ. ಅದರಿಂದಾಗಿ ತಾರತಮ್ಯ ಉಂಟಾಗುವುದೂ ಇಲ್ಲ.

ನಮ್ಮಲ್ಲಿ ಜಾತಿ ಕಾರಣದಿಂದಾಗಿಯೇ ಕೆಲವರು ತುಂಬಾ ಹಿಂದುಳಿದಿದ್ದಾರೆ ಅಥವಾ ಹಿಂದೂಡಲ್ಪಟ್ಟಿದ್ದಾರೆ. ಉದಾಹರಣೆಗೆ, ಒಕ್ಕಲಿಗರಲ್ಲಿಯೇ ಕೆಲವು ಉಪಜಾತಿಗಳವರು ಇಂದಿಗೂ ಅದೇ ಜಾತಿಯ ಪ್ರಭಾವಿ ಉಪಜಾತಿಗಳವರ ಹಾಗೆ ಪ್ರಗತಿ ಸಾಧಿಸಲಾಗಿಲ್ಲ. ಇಂತಹ ಅಂಶಗಳನ್ನು ನಾವು ಮನವರಿಕೆ ಮಾಡಿಕೊಳ್ಳಬೇಕಾಗಿದೆ.

ಪು.ಸೂ.ಲಕ್ಷ್ಮೀನಾರಾಯಣ ರಾವ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಗಡಿಯಲ್ಲಿ ನೆಲಸುವುದೇ ಶಾಂತಿ?

ಭಾರತ–ಚೀನಾ ಒಪ್ಪಂದ

ಭಾರತ ಮತ್ತು ಚೀನಾ ಸಂಬಂಧದಲ್ಲಿ ಹೊಸ ಬದಲಾವಣೆಯೊಂದು ಘಟಿಸುತ್ತಿದೆ. ಎರಡೂ ದೇಶಗಳ ನಡುವೆ ಗಡಿ ಗಸ್ತು ನಡೆಸುವುದರ ಸಂಬಂಧ ಒಪ್ಪಂದವೊಂದು ಏರ್ಪಟ್ಟಿದೆ. ಗಾಲ್ವಾನ್ ಕಣಿವೆಯಲ್ಲಿ ನಡೆದಿದ್ದ ಘರ್ಷಣೆ ನಂತರ ಉಭಯ ರಾಷ್ಟ್ರಗಳ ನಡುವೆ ಸೃಷ್ಟಿಯಾಗಿದ್ದ ಅಂತರ ಕಿರಿದಾಗಬಹುದೆನ್ನುವ ಬಗ್ಗೆ ಕೆಲವರು ಭರವಸೆ ವ್ಯಕ್ತಪಡಿಸುತ್ತಿದ್ದಾರೆ. ಆದರೆ, ಚೀನಾದ ಬದಲಾದ ನಿಲುವಿಗೆ ಏನು ಕಾರಣ, ಈಗಿನ ಒಪ್ಪಂದದಿಂದ ಭಾರತ ಎಷ್ಟು ದಿನ ನಿರಾಳವಾಗಿರಬಹುದು ಎನ್ನುವ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವುದು ಅಷ್ಟು ಸುಲಭವಲ್ಲ

ಪ್ರಜಾವಾಣಿ ವಾರ್ತೆ

ಭಾರತ–ಚೀನಾ ನಡುವಣ ಗಡಿ ವಿವಾದ ಸ್ವಲ್ಪ ಪ್ರಮಾಣದಲ್ಲಿ ಬಗೆಹರಿದಿದೆ; ಪೂರ್ವ ಲಡಾಖ್‌ನ ವಾಸ್ತವ ನಿಯಂತ್ರಣ ರೇಖೆಯ (ಎಲ್‌ಎಸಿ) ಬಳಿ ಗಸ್ತು ನಡೆಸುವ ಸಂಬಂಧ ಒಪ್ಪಂದ ಏರ್ಪಟ್ಟಿದೆ ಎಂದು ಎರಡೂ ದೇಶಗಳು ಘೋಷಿಸಿದೆ. ಈ ಒಪ್ಪಂದವು ಡೆಪ್ಸಾಂಗ್ ಮತ್ತು ಡೆಮ್‌ಚೋಕ್ ಪ್ರದೇಶಗಳಲ್ಲಿ ಗಸ್ತು ಕಾಯುವುದಕ್ಕೆ ಮಾತ್ರ ಸಂಬಂಧಿಸಿದ್ದಾಗಿದೆ. ಉಭಯ ರಾಷ್ಟ್ರಗಳ ನಡುವಿನ ಉಳಿದ ಸಮಸ್ಯೆಗಳನ್ನು ಪರಿಹರಿಸಲು ಮಾತುಕತೆ ನಡೆಯುತ್ತಿದೆ ಎಂದು ಭಾರತ ತಿಳಿಸಿದೆ.

ಎರಡೂ ದೇಶಗಳ ನಡುವಿನ ಸ್ನೇಹ ಮತ್ತು ಸಂಘರ್ಷಕ್ಕೆ ದಶಕಗಳ ಇತಿಹಾಸವಿದೆ. 1962ರ ಯುದ್ಧದ ನಂತರ ಎರಡೂ ದೇಶಗಳು ಪರಸ್ಪರ ಮಾತುಕತೆಯೊಂದಿಗೆ ಎಲ್‌ಎಸಿ ರೂಪಿಸಿಕೊಂಡಿದ್ದವು. 2020ರವರೆಗೆ ಆ ರೇಖೆಯಲ್ಲಿ ಬದಲಾವಣೆ ಆಗಿರಲಿಲ್ಲ. ಪ್ಯಾಂಗಾಂಗ್ ಸರೋವರದ ಉತ್ತರದ ದಂಡೆಯಲ್ಲಿರುವ ಎಂಟು ಫಿಂಗರ್‌ವರೆಗೆ (ಪರ್ವತದ ಚಾಚುಗಳು) ಭಾರತ ಗಸ್ತು ನಡೆಸಬಹುದಿತ್ತು.

ಆದರೆ, 2020ರ ಮೇ ತಿಂಗಳಲ್ಲಿ ಚೀನಾ ಒಪ್ಪಂದ ಮುರಿದು, ರೇಖೆಯನ್ನು ಬದಲಿಸಲು ಯತ್ನಿಸಿತ್ತು. ಅದು ಉಭಯ ರಾಷ್ಟ್ರಗಳ ನಡುವೆ ಘರ್ಷಣೆಗೆ ಕಾರಣವಾಗಿತ್ತು. ಗಾಲ್ವಾನ್‌ನಲ್ಲಿ ಜೂನ್ ತಿಂಗಳಲ್ಲಿ ಘರ್ಷಣೆ ನಡೆದ ಬಳಿಕ ಎರಡೂ ರಾಷ್ಟ್ರಗಳ ನಡುವಿನ ಬಿಕ್ಕಟ್ಟು ಉಲ್ಬಣಿಸಿತ್ತು. ಭಾರತದ 20 ಸೈನಿಕರು ಹುತಾತ್ಮರಾಗಿದ್ದರೆ, ಚೀನಾದ ಸೇನೆಗೂ ಹಾನಿಯಾಗಿತ್ತು. ಸಂಘರ್ಷದ ನಂತರ ಭಾರತೀಯ ಸೇನೆ ಮತ್ತು ಚೀನಾದ ಪೀಪಲ್ಸ್ ಲಿಬರೇಶನ್ ಆರ್ಮಿ (ಪಿಎಲ್‌ಎ) ನಡುವೆ ಹಲವು ಸುತ್ತಿನ ಮಾತುಕತೆ ನಡೆದು, ಸಂಘರ್ಷದ ತಾಣಗಳಾಗಿದ್ದ ಗಾಲ್ವಾನ್ ಕಣಿವೆ, ಪ್ಯಾಂಗಾಂಗ್ ಸರೋವರದ ಉತ್ತರ ಮತ್ತು ದಕ್ಷಿಣ ದಂಡೆ, ಗೋಗ್ರಾ–ಹಾಟ್ ಸ್ಪ್ರಿಂಗ್ಸ್‌ಗಳಲ್ಲಿ ನಿಯೋಜಿಸಲಾಗಿದ್ದ ಸೇನಾ ಪಡೆಗಳನ್ನು ವಾಪಸ್ ಕರೆಸಿಕೊಳ್ಳುವ ತೀರ್ಮಾನಕ್ಕೆ ಬರಲಾಗಿತ್ತು. ಇಲ್ಲೆಲ್ಲ ಎರಡೂ ಕಡೆಗಳಲ್ಲಿ ಬಫರ್ ವಲಯಗಳನ್ನು ಸೃಷ್ಟಿಸಿ, ಅಲ್ಲಿ ಗಸ್ತು ತಿರುವುದಕ್ಕೆ ಸ್ವಯಂ ನಿರ್ಬಂಧ ವಿಧಿಸಿಕೊಂಡಿದ್ದವು.

ಆದರೆ, ಡೆಪ್ಸಾಂಗ್ ಬಯಲು ಪ್ರದೇಶ ಮತ್ತು ಡೆಮ್‌ಚೋಕ್ ಪ್ರದೇಶಗಳಲ್ಲಿ ಭಾರತದ ಭೂಪ್ರದೇಶವನ್ನು ಅತಿಕ್ರಮಿಸಿದ್ದ ಚೀನಾ, ಸೇನೆಯನ್ನು ವಾಪಸ್ ಕರೆಸಿಕೊಳ್ಳಲು ಒಪ್ಪಿರಲಿಲ್ಲ. ಈ ಬಗ್ಗೆ ನಾಲ್ಕೂವರೆ ವರ್ಷಗಳಿಂದ ಭಾರತವು ಚೀನಾ ಮೇಲೆ ಸತತ ಒತ್ತಡ ಹೇರುತ್ತಲೇ ಇತ್ತು. ಅಂತಿಮವಾಗಿ ಚೀನಾ ಅದಕ್ಕೆ ಈಗ ಸಮ್ಮತಿಸಿದೆ.

ಈಗ ನಡೆದಿರುವ ಒಪ್ಪಂದವು ಈ ಎರಡು ಪ್ರದೇಶಗಳಿಗೆ ಮಾತ್ರ ಸೀಮಿತವಾಗಿದ್ದು, ಅಲ್ಲಿ ಗಾಲ್ವಾನ್ ಘರ್ಷಣೆಗೆ ಪೂರ್ವದಲ್ಲಿದ್ದಂತೆ ಭಾರತ ಗಸ್ತು ತಿರುಗಬಹುದು. ಆದರೆ, ಒಪ್ಪಂದವು ಗಾಲ್ವಾನ್ ಕಣಿವೆ, ಪ್ಯಾಂಗಾಂಗ್ ಸರೋವರದ ಉತ್ತರ ಮತ್ತು ದಕ್ಷಿಣ ದಂಡೆ, ಗೋಗ್ರಾ–ಹಾಟ್ ಸ್ಪ್ರಿಂಗ್ಸ್‌ಗಳಿಗೆ ಅನ್ವಯವಾಗುವುದಿಲ್ಲ.

ಹಿಂದೆ ಗಸ್ತು ತಿರುಗುತ್ತಿದ್ದ ಪ್ರದೇಶ ಈಗ ಭಾರತದ ನಿಯಂತ್ರಣದಲ್ಲಿ ಇಲ್ಲ. ಭಾರತವು ತನ್ನ ಗಡಿಯಲ್ಲಿನ ಬೆಟ್ಟ ಶ್ರೇಣಿಗಳ ಸುಮಾರು 300 ಚದರ ಕಿಲೋಮೀಟರ್ ನೆಲವನ್ನು ಕಳೆದುಕೊಂಡಿದೆ ಎಂದು ಹೇಳಲಾಗುತ್ತಿದೆ.

ಸುದೀರ್ಘ ಮಾತುಕತೆ: ಗಾಲ್ವಾನ್ ಘರ್ಷಣೆಯ ನಂತರ ಎರಡೂ ದೇಶಗಳ ನಡುವಿನ ವಾತಾವರಣ ಬಿಗುವಿನಿಂದ ಕೂಡಿತ್ತು. ಇದರ ನಡುವೆಯೂ ಶಾಂತಿ ಸ್ಥಾಪನೆಯ ಯತ್ನಗಳು ಮುಂದುವರಿದಿದ್ದವು. ನಾಲ್ಕೂವರೆ ವರ್ಷಗಳಲ್ಲಿ ಉಭಯ ದೇಶಗಳ ನಡುವೆ ಒಟ್ಟು 38 ಸುತ್ತುಗಳ ಮಾತುಕತೆ ನಡೆದಿದೆ.

ಒಪ್ಪಂದದಿಂದ ಲಾಭವಾಗಲಿದೆಯೇ? : ವಿಶ್ವದ ಪ್ರಮುಖ ಆರ್ಥಿಕತೆಗಳ ನಡುವಿನ ಈ ಒಪ್ಪಂದವು ಉಭಯ ದೇಶಗಳ ನಡುವೆ ಶಾಂತಿ ಸ್ಥಾಪಿಸುವ ವಿಚಾರದಲ್ಲಿ ಪ್ರಮುಖ ಹೆಜ್ಜೆ ಎನ್ನುವುದರಲ್ಲಿ ಅನುಮಾನವಿಲ್ಲ. ಗಡಿಯಲ್ಲಿ ಶಾಂತಿ ಸ್ಥಾಪನೆಯಿಂದ ಎರಡೂ ರಾಷ್ಟ್ರಗಳಿಗೆ ಹಲವು ಅನುಕೂಲಗಳಿವೆ. ಜಮ್ಮು ಕಾಶ್ಮೀರ ಸೇರಿದಂತೆ ಪಾಕಿಸ್ತಾನಕ್ಕೆ ಅಂಟಿಕೊಂಡಿರುವ ಗಡಿಗಳು, ಈಶಾನ್ಯ ರಾಜ್ಯಗಳ ಗಡಿಗಳತ್ತ ಹೆಚ್ಚು ಗಮನ ಹರಿಸಲು ಭಾರತದ ಸೇನೆಗೆ ಇದು ನೆರವಾಗಲಿದೆ. ಚೀನಾಕ್ಕೆ ಕೂಡ ಫಿಲಿಪ್ಪೀನ್ಸ್‌ನೊಂದಿಗಿನ ಸಂಘರ್ಷಕ್ಕೆ ಹೆಚ್ಚು ಒತ್ತು ಕೊಡಲು ಅನುಕೂಲವಾಗಲಿದೆ.

ಹಾಗೆಯೇ, ಇಷ್ಟು ವರ್ಷ ಹಟಮಾರಿ ಧೋರಣೆ ಅನುಸರಿಸುತ್ತಿದ್ದ ಚೀನಾ ತುಸು ಮೆತ್ತಗಾಗಿರುವುದೇಕೆ ಎನ್ನುವ ವಿಶ್ಲೇಷಣೆಯೂ ನಡೆಯುತ್ತಿದೆ. ಚೀನಾದ ವಸ್ತುಗಳು ಮತ್ತು ತಂತ್ರಜ್ಞಾನಕ್ಕೆ ಭಾರತ ಬಹುದೊಡ್ಡ ಮಾರುಕಟ್ಟೆ ಎನ್ನುವುದು ಮುಖ್ಯ ಕಾರಣ; ಅದರ ಜತೆಗೆ ಹಲವರು ರಾಜಕೀಯ ಕಾರಣಗಳನ್ನೂ ಗುರುತಿಸುತ್ತಾರೆ. ಅವುಗಳಲ್ಲಿ ಒಂದು, ಅಮೆರಿಕದ ಅಧ್ಯಕ್ಷೀಯ ಚುನಾವಣೆ. ಅದರಲ್ಲಿ ಡೊನಾಲ್ಡ್ ಟ್ರಂಪ್ ಪುನರಾಯ್ಕೆ ಆದರೆ, ಅದರಿಂದ ಮುಂದೊದಗಬಹುದಾದ ಪರಿಣಾಮಗಳನ್ನು ಎದುರಿಸುವ ಸಲುವಾಗಿಯೇ ಚೀನಾ ಒಪ್ಪಂದಕ್ಕೆ ಮುಂದಾಗಿದೆ ಎಂದೂ ವಿಶ್ಲೇಷಿಸಲಾಗುತ್ತಿದೆ.

ಇದೇ ವೇಳೆ, ಗಡಿಯಲ್ಲಿ ಶಾಂತಿ ಸ್ಥಾಪನೆಯ ವಿಚಾರದಲ್ಲಿ ಸಿಕ್ಕಿರುವ ಯಶಸ್ಸು ಎಷ್ಟು ಕಾಲ ಉಳಿಯಲಿದೆ ಎನ್ನುವುದರ ಬಗ್ಗೆಯೂ ಚರ್ಚೆಗಳು ನಡೆಯುತ್ತಿವೆ. ಚೀನಾ ಸರ್ಕಾರ ಮತ್ತು ಪೀಪಲ್ಸ್ ಲಿಬರೇಶನ್ ಆರ್ಮಿ ಎರಡೂ ಅಸ್ಥಿರ ವರ್ತನೆಗೆ ಹೆಸರಾಗಿದ್ದು, ಭಾರತ ನಿರಾಳವಾಗುವಂತಿಲ್ಲ ಎಂದು ಕೆಲವರು ಎಚ್ಚರಿಸಿದ್ದಾರೆ.

ಡೆಪ್ಸಾಂಗ್ ಭಾರತಕ್ಕೆ ಏಕೆ ಮುಖ್ಯ?

2020ರ ಗಾಲ್ವಾನ್ ಘರ್ಷಣೆಯ ನಂತರ ಚೀನಾ ಸೇನೆಯು ಲಡಾಖ್‌ನ ಉತ್ತರಕ್ಕಿರುವ ಡೆಪ್ಸಾಂಗ್ ಬಯಲು ಪ್ರದೇಶ ಮತ್ತು ದಕ್ಷಿಣಕ್ಕಿರುವ ಡೆಮ್‌ಚೋಕ್ ಪ್ರದೇಶದಲ್ಲಿ ಭಾರತಕ್ಕೆ ಸೇರಿದ ಭೂಪ್ರದೇಶದ ಪ್ರಮುಖ ಭಾಗಗಳನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಂಡಿತ್ತು.

ಸೇನಾ ಕಾರ್ಯತಂತ್ರದ ದೃಷ್ಟಿಯಿಂದ ಈ ಬಯಲು ಪ್ರದೇಶ ಭಾರತಕ್ಕೆ ಅತ್ಯಂತ ಮಹತ್ವದ್ದಾಗಿದೆ. ಎಲ್‌ಎಸಿಯು ಪೂರ್ತಿ ಕಡಿದಾದ ಬೆಟ್ಟಗಳಿಂದ ಆವರಿಸಿದೆ. ಅದರ ನಡುವೆ ಡೆಪ್ಸಾಂಗ್ ಮಾತ್ರ ಬಯಲು ಪ್ರದೇಶವಾಗಿದೆ. ಭಾರತದ ಅತಿ ಸೂಕ್ಷ್ಮ ದೌಲತ್ ಬೇಗ್ ಓಲ್ದಿ ಸೇನಾ ಠಾಣೆಯಿಂದ (ಕಾರಾಕೋರಂ ಪಾಸ್ ಹತ್ತಿರ) ಇದು ಕೇವಲ 30 ಕಿ.ಮೀ ದೂರದಲ್ಲಿದೆ. ಇಲ್ಲಿ ಚೀನಾ ಸೇನೆಯು ಭಾರತದ ಭೂಭಾಗದಲ್ಲಿ 15 ಕಿ.ಮೀ ಒಳಕ್ಕೆ ಬಂದಿತ್ತು.

ಈಗ ಉಭಯ ರಾಷ್ಟ್ರಗಳ ನಡುವೆ ಒಪ್ಪಂದ ನಡೆದಿರುವುದರಿಂದ 2020ಕ್ಕೂ ಮೊದಲಿದ್ದ ರೀತಿಯಲ್ಲಿ ಡೆಪ್ಸಾಂಗ್ ಬಯಲಿನ 10ರಿಂದ 13ನೇ ಸಂಖ್ಯೆಯ ಗಸ್ತು ಠಾಣೆವರೆಗೆ ಗಸ್ತು ತಿರುಗಬಹುದಾಗಿದೆ. ಡೆಮ್‌ಚೋಕ್‌ನಲ್ಲಿ ಚರ್ಡಿಂಗ್ ನುಲ್ಲಾ ಪ್ರದೇಶದವರೆಗೂ ಗಸ್ತು ನಡೆಸಬಹುದಾಗಿದೆ.



3,488 ಕಿ.ಮೀ. ಭಾರತ–ಚೀನಾ ನಡುವಿನ ಎಲ್‌ಎಸಿ ಉದ್ದ

20 ಗಾಲ್ವಾನ್ ಸಂಘರ್ಷದಲ್ಲಿ ಹುತಾತ್ಮರಾಗಿದ್ದ ಭಾರತದ ಸೈನಿಕರು

38 ಎರಡೂ ದೇಶಗಳ ನಡುವೆ ನಡೆದ ಮಾತುಕತೆ

ಸಂಘರ್ಷದ ಹಾದಿ

- **ಮೇ 5, 2020:** ಪ್ಯಾಂಗಾಂಗ್ ಸರೋವರದ ಬಳಿ ವಾಸ್ತವ ನಿಯಂತ್ರಣ ರೇಖೆ ದಾಟಿ ಭಾರತ ಗಸ್ತು ನಡೆಸುತ್ತಿದ್ದ ಪ್ರದೇಶ ಪ್ರವೇಶಿಸಿದ ಚೀನಾ ಸೇನೆ. ಸಣ್ಣ ಘರ್ಷಣೆ. ಎರಡೂ ರಾಷ್ಟ್ರಗಳಿಂದ ಎಲ್‌ಎಸಿಯಲ್ಲಿ ಸೇನೆಗಳ ನಿಯೋಜನೆ
- **ಜೂನ್ 15, 2020:** ಗಾಲ್ವಾನ್ ಕಣಿವೆಯಲ್ಲಿ ಉಭಯ ಸೇನಾ ಸಿಬ್ಬಂದಿ ನಡುವೆ ಘರ್ಷಣೆ. ಭಾರತದ 20 ಸೇನಾ ಸಿಬ್ಬಂದಿ ಹುತಾತ್ಮ. ತನ್ನ ನಾಲ್ವರು ಸೈನಿಕರು ಮೃತಪಟ್ಟಿದ್ದಾರೆ ಎಂದು ನಂತರ ಚೀನಾ ಘೋಷಣೆ
- **ಜೂನ್ 25, 2020:** ಭಾರತ ಮತ್ತು ಚೀನಾ ರಾಜತಾಂತ್ರಿಕ ಅಧಿಕಾರಿಗಳ ನಡುವೆ ಮೊದಲ ಸಭೆ
- **ಜೂನ್ 30, 2020:** ಘರ್ಷಣೆ ನಡೆದ ಸ್ಥಳದಿಂದ ಸೇನೆ ವಾಪಸ್ ಕರೆಸಿಕೊಂಡ ಎರಡೂ ರಾಷ್ಟ್ರಗಳು. ಬಫರ್ ವಲಯ ಗುರುತು
- **ಫೆಬ್ರುವರಿ 2021:** ಪ್ಯಾಂಗಾಂಗ್ ಸರೋವರದ ಪೂರ್ವ ಮತ್ತು ದಕ್ಷಿಣ ದಂಡೆಗಳಿಂದ ಸೇನಾ ಸಿಬ್ಬಂದಿಯನ್ನು ವಾಪಸ್ ಕರೆಸಿಕೊಳ್ಳಲು ಉಭಯ ದೇಶಗಳ ತೀರ್ಮಾನ
- **ಆಗಸ್ಟ್ 2021:** ಗೋಗ್ರಾ ಪೋಸ್ಟ್‌ನಿಂದ ಸೇನಾ ಪಡೆಗಳನ್ನು ವಾಪಸ್ ಕರೆಸಿಕೊಳ್ಳಲು ಒಪ್ಪಂದ
- **ಸೆ.8ರಿಂದ 12, 2021:** ಹಾಟ್‌ಸ್ಪ್ರಿಂಗ್ಸ್‌ನಿಂದ ಸೇನಾ ಪಡೆಗಳ ವಾಪಸಾತಿ
- **ಜನವರಿ–ಜುಲೈ 2022:** ಡೆಪ್ಸಾಂಗ್ ಬಯಲು ಪ್ರದೇಶ ಮತ್ತು ಡೆಮ್‌ಚೋಕ್ ಪ್ರದೇಶದಲ್ಲಿ ಮುಂದುವರಿದಿರುವ ಬಿಕ್ಕಟ್ಟಿನ ಪರಿಹಾರಕ್ಕಾಗಿ ಸೇನಾ ಕಮಾಂಡರ್‌ಗಳ ನಡುವೆ 14, 15 ಮತ್ತು 16ನೇ ಸುತ್ತಿನ ಮಾತುಕತೆ ವಿಫಲ
- **ಏಪ್ರಿಲ್–ಅಕ್ಟೋಬರ್ 2023:** ಸೇನಾ ಕಮಾಂಡರ್‌ಗಳ ನಡುವೆ 17, 18 ಮತ್ತು 19ನೇ ಸುತ್ತಿನ ಮಾತುಕತೆ. ಸ್ಪಷ್ಟ ನಿರ್ಧಾರಕ್ಕೆ ಬರಲು ವಿಫಲ
- **ಮಾರ್ಚ್ 27, 2024:** ಎರಡೂ ರಾಷ್ಟ್ರಗಳ ರಾಜತಾಂತ್ರಿಕರ ನಡುವೆ ಭಾರತ ಮತ್ತು ಚೀನಾ ಗಡಿ ವ್ಯವಹಾರಗಳಿಗೆ ಸಂಬಂಧಿಸಿದ ಸಮನ್ವಯ ಮತ್ತು ಸಹಕಾರ ವ್ಯವಸ್ಥೆಗೆ ಸಂಬಂಧಿಸಿದ 29ನೇ ಸಭೆ
- **ಜುಲೈ 4, 2024:** ಕಜಕ್‌ಸ್ತಾನದ ಆಸ್ತನದಲ್ಲಿ ವಿದೇಶಾಂಗ ವ್ಯವಹಾರಗಳ ಸಚಿವ ಜೈಶಂಕರ್ ಮತ್ತು ಚೀನಾ ವಿದೇಶಾಂಶ ಸಚಿವ ವಾಂಗ್ ಈ ನಡುವೆ ಮಾತುಕತೆ
- **ಸೆಪ್ಟೆಂಬರ್ 12, 2024:** ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ಡೊಭಾಲ್ ಮತ್ತು ಚೀನಾದ ಚೀನಾ ವಿದೇಶಾಂಶ ಸಚಿವ ವಾಂಗ್ ಈ ಚರ್ಚೆ

ಘರ್ಷಣೆಯ ಪರಿಣಾಮ ಏನಾಯಿತು?

ಗಾಲ್ವಾನ್ ಘರ್ಷಣೆಯ ಬಳಿಕ ಉಭಯ ದೇಶಗಳ ನಡುವಿನ ಸಂಬಂಧಕ್ಕೆ ತೀವ್ರ ಧಕ್ಕೆಯಾಯಿತು. ವ್ಯಾಪಾರ ವಹಿವಾಟು ಎಂದಿನಂತೆ ನಡೆದರೂ, ಚೀನಾವನ್ನು ಗುರಿಯಾಗಿಸಿಕೊಂಡು ಭಾರತ ಹಲವು ನಿರ್ಬಂಧಗಳನ್ನು ವಿಧಿಸಿತು.

- ಕೋವಿಡ್ ಸಮಯದಲ್ಲಿ ಸ್ಥಗಿತಗೊಂಡಿದ್ದ ಎರಡೂ ರಾಷ್ಟ್ರಗಳ ನಡುವೆ ವಿಮಾನ ಸೇವೆ ಮುಂದುವರಿಯಲಿಲ್ಲ. ಭಾರತ ಚೀನಾ ನಡುವೆ ಈಗ ನೇರ ವಿಮಾನ ಸಂಪರ್ಕ ಇಲ್ಲ. ಪ್ರಯಾಣಿಕರ ವಿಮಾನ ಸಂಚಾರ ನಡೆಸುವಂತೆ ಚೀನಾವು ಭಾರತದ ಮೇಲೆ ಒತ್ತಡ ಹಾಕುತ್ತಲೇ ಬಂದಿತ್ತು
- ಭಾರತಕ್ಕೆ ಭೇಟಿ ನೀಡುವ ಚೀನಾ ಪ್ರಜೆಗಳಿಗೆ ವೀಸಾ ನೀಡಿಕೆ ನಿಯಮಗಳನ್ನು ಭಾರತ ಬಿಗಿಗೊಳಿಸಿತ್ತು. ಇದರಿಂದ ಚೀನಾ ತಂತ್ರಜ್ಞರು ಇಲ್ಲಿಗೆ ಭೇಟಿ ನೀಡುವುದು ಕಷ್ಟವಾಯಿತು. ಉದ್ದಿಮೆಗಳ ಒತ್ತಾಯದ ನಂತರ ಇತ್ತೀಚೆಗಷ್ಟೆ ಭಾರತ ವೀಸಾ ನಿಯಮಗಳನ್ನು ಸಡಿಲಗೊಳಿಸಿತು

- ವಿದೇಶಿ ನೇರ ಬಂಡವಾಳ ಹೂಡಿಕೆ ಮಾಡುವ ನಿಯಮಗಳನ್ನು ಭಾರತ ಬದಲಾಯಿಸಿತು. ನೆರೆಯ ದೇಶಗಳ ಕಂಪನಿಗಳು ನೇರ ಹೂಡಿಕೆ ಮಾಡುವಂತಿಲ್ಲ. ಅದಕ್ಕೆ ಕೇಂದ್ರದ ಅನುಮತಿ ಕಡ್ಡಾಯ ಎಂಬ ನಿಯಮ ರೂಪಿಸಿತ್ತು. ಭಾರತದಲ್ಲಿ ಚೀನಾ ಕಂಪನಿಗಳ ಬಂಡವಾಳ ಹೂಡಿಕೆಗೆ ಕಡಿವಾಣ ಹಾಕುವ ಉದ್ದೇಶದಿಂದಲೇ ಈ ನಿಯಮ ಜಾರಿಗೆ ತರಲಾಗಿತ್ತು ಎಂದು ವಿಶ್ಲೇಷಿಸಲಾಗಿತ್ತು
- ಟಿಕ್‌ಟಾಕ್ ಸೇರಿದಂತೆ ಚೀನಾ ಮೂಲದ 250 ಮೊಬೈಲ್ ಆ್ಯಪ್‌ಗಳನ್ನು ನಿಷೇಧಿಸಲಾಗಿತ್ತು
- ಚೀನಾದ ಸ್ಮಾರ್ಟ್‌ಫೋನ್ ಕಂಪನಿ ವಿವೊ ಕಮ್ಯುನಿಕೇಷನ್ಸ್ ಟೆಕ್ನಾಲಜಿ ಕಂಪನಿಯು ಭಾರತದ ವೀಸಾ ನಿಯಮಗಳನ್ನು ಉಲ್ಲಂಘಿಸಿ 1,300 ಡಾಲರ್‌ಗಳಷ್ಟು ಹಣವನ್ನು (₹1.09 ಲಕ್ಷ ಕೋಟಿ) ವರ್ಗಾಯಿಸಿದೆ ಎಂದು ಕಳೆದ ವರ್ಷ ಜಾರಿ ನಿರ್ದೇಶನಾಲಯ ಆರೋಪಿಸಿತ್ತು. ವಿವೊದ ಮಾತೃಸಂಸ್ಥೆ ಶಿಓಮಿಗೆ ಸೇರಿದ 60 ಕೋಟಿ ಡಾಲರ್ (₹5,042 ಕೋಟಿ) ಮೌಲ್ಯದ ಆಸ್ತಿಯನ್ನು ಜಪ್ತಿ ಮಾಡಿತ್ತು

ಆಧಾರ:ರಾಯಿಟರ್ಸ್,ಪಿಟಿಐ

ಸಿನಿ ಬಿಟ್ಸ್

ಮೊದಲ ಹಂತ ಮುಗಿಸಿದ ದೂರ ತೀರ ಯಾನ

ಪ್ರಿಯಾಂಕ

‘19.20.21’ ಸಿನಿಮಾ ಬಳಿಕ ನಿರ್ದೇಶಕ ಮಂಸೋರೆ ಅವರು ಕೈಗೆತ್ತಿಕೊಂಡಿರುವ ‘ದೂರ ತೀರ ಯಾನ’ ಸಿನಿಮಾದ ಮೊದಲ ಹಂತದ ಚಿತ್ರೀಕರಣ ಪೂರ್ಣಗೊಂಡಿದೆ.

ಈ ಸಿನಿಮಾದಲ್ಲಿ ಪ್ರೇಮಕಥೆಯೊಂದಿಗೆ ಪ್ರೇಕ್ಷಕರೆದುರಿಗೆ ಮಂಸೋರೆ ಬರುತ್ತಿದ್ದಾರೆ. ಡಿ.ಕ್ರಿಯೇಷನ್ಸ್‌ನ ದೇವರಾಜ್ ಆರ್.ನಿರ್ಮಾಣ ಮಾಡುತ್ತಿರುವ ಈ ಸಿನಿಮಾದಲ್ಲಿ ವಿಜಯ್ ಕೃಷ್ಣ ನಾಯಕರಾಗಿ ಹಾಗೂ ಪ್ರಿಯಾಂಕ ಕುಮಾರ್ ನಾಯಕಿಯಾಗಿ ನಟಿಸುತ್ತಿದ್ದಾರೆ. ಎರಡನೇ ಹಂತದ ಚಿತ್ರೀಕರಣ ಸದ್ಯದಲ್ಲೇ ಆರಂಭವಾಗಲಿದೆ ಎಂದು ಮಂಸೋರೆ ತಿಳಿಸಿದ್ದಾರೆ. ಇದೊಂದು ಪಯಣದ ಕಥೆ. ಚಿತ್ರದ ಮೊದಲ ಹತ್ತು ನಿಮಿಷ ಮಾತ್ರ ಬೆಂಗಳೂರಿನಲ್ಲಿ ನಡೆಯುತ್ತದೆ. ಉಳಿದೆಲ್ಲಾ ಕಥೆ ದಾರಿಯಲ್ಲಿ ಸಾಗುತ್ತದೆ. ಬೆಂಗಳೂರಿನಿಂದ ಗೋವಾಕ್ಕೆ ಹೊರಟ ಹುಡುಗ-ಹುಡುಗಿ ತಮ್ಮ ಪ್ರೀತಿಯನ್ನು ಹೊಸ ರೀತಿಯಲ್ಲಿ ಕಂಡುಕೊಳ್ಳುವ ಕಥೆ ಇದಾಗಿದೆ. ಇದು ಮ್ಯೂಸಿಕಲ್ ಜರ್ನಿ ಸಿನಿಮಾ ಎಂದಿದ್ದರು ಮಂಸೋರೆ.

ಚಿತ್ರಕ್ಕೆ ಶೇಖರ್ ಚಂದ್ರು ಅವರ ಛಾಯಾಚಿತ್ರಗ್ರಹಣ, ಬಕ್ಕೇಶ್ ಮತ್ತು ಕಾರ್ತಿಕ್ ಸಂಗೀತ, ಜಯಂತ ಕಾಯ್ಕಿಣಿ, ಕವಿರಾಜ್, ಪ್ರಮೋದ್ ಮರವಂತೆ ಅವರ ಗೀತ ಸಾಹಿತ್ಯ, ನಾಗೇಂದ್ರ ಕೆ. ಉಜ್ಜನಿ ಸಂಕಲನ, ಸರವಣ ಅವರ ಕಲಾ ನಿರ್ದೇಶನ ಹಾಗೂ ವಿವಿಡ್ ಐ ನಿರ್ಮಾಣ ವಿನ್ಯಾಸವಿದೆ. ಚಿತ್ರತಂಡವು ಸದ್ಯಕ್ಕೆ ನಾಯಕ–ನಾಯಕಿಯರನ್ನಷ್ಟೇ ಪರಿಚಯಿಸಿದ್ದು, ಉಳಿದ ತಾರಾಗಣದ ಬಗ್ಗೆ ಶೀಘ್ರದಲ್ಲೇ ಮಾಹಿತಿ ನೀಡಲಾಗುವುದು ಎಂದು ತಿಳಿಸಿದೆ.

ರಾಜನ ಕಥೆ ಹೇಳುವ ಮಿಸ್ಟರ್ ರಾಣಿ!

ಪೋಸ್ಟರ್‌ನಿಂದಲೇ ಗಮನ ಸೆಳೆದಿದ್ದ ‘ಮಿಸ್ಟರ್ ರಾಣಿ’ ಚಿತ್ರದ ಟೀಸರ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಈ ಹಿಂದೆ ‘ಸೆಲ್ಫಿ ಮಮ್ಮಿ ಗೂಗಲ್ ಡ್ಯಾಡಿ’ ಚಿತ್ರ ನಿರ್ದೇಶಿಸಿದ್ದ ಮಧುಚಂದ್ರ ಈ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ.

ನಾಯಕ ಆಗಬೇಕೆಂದು ಎಂಜಿನಿಯರಿಂಗ್ ಮುಗಿಸಿ ಸಿನಿಮಾರಂಗಕ್ಕೆ ಬಂದ ಹುಡುಗ ಆಕಸ್ಮಿಕವಾಗಿ ನಾಯಕಿಯಾಗಿಬಿಡುತ್ತಾನೆ. ಮುಂದೆ ಏನೆಲ್ಲ ನಡೆಯುತ್ತದೆ ಎಂಬುದನ್ನು ಚಿತ್ರದಲ್ಲಿ ಹಾಸ್ಯಮಯವಾಗಿ ಹೇಳಲಾಗಿದೆ ಎಂಬ ಮುನ್ಸೂಚನೆ ನೀಡುತ್ತಿದೆ ಚಿತ್ರದ ಟೀಸರ್.

ಕಿರುತೆರೆ ನಟ ದೀಪಕ್ ಸುಬ್ರಹ್ಮಣ್ಯ ರಾಣಿಯಾಗಿ ಕಾಣಿಸಿಕೊಂಡಿದ್ದಾರೆ. ಪಾರ್ವತಿ ನಾಯರ್, ಶ್ರೀವತ್ಸ, ಮಧುಚಂದ್ರ, ರೂಪ ಪ್ರಭಾಕರ್ ಮುಂತಾದವರು ತಾರಾಗಣದಲ್ಲಿದ್ದಾರೆ. ಎಕ್ಸೆಲ್ ಆರ್ಬಿಟ್ ಕ್ರಿಯೇಷನ್ಸ್ ಸಂಸ್ಥೆ ಬಂಡವಾಳ ಹೂಡಿದೆ. ಜೂಡಾ ಸ್ಯಾಂಡಿ ಹಾಗೂ ರಿತ್ವಿಕ್ ಮುರಳೀಧರ್ ಸಂಗೀತ, ರವೀಂದ್ರನಾಥ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ

ನುಡಿ ಬೆಳಗು

ಕಸಿದುಕೊಳ್ಳಲಾಗದ ಸಂಪತ್ತು!

ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

51

ಸಾವು ನಮ್ಮಿಂದ ಕಸಿದುಕೊಳ್ಳಲು ಸಾಧ್ಯವಾಗದ ಸಂಪತ್ತು ಗಳಿಸಬೇಕಲ್ಲ ಮನುಷ್ಯ. ಅದು ಯಾವ ಸಂಪತ್ತು? ಅನುಭಾವಿಗಳಂತಾರ, ‘ಧನಗಳಿಸಬೇಕಾದ್ದು ಎಂತಾದ್ದು, ಜನರಿಗೆ ತಿಳಿಯದಂತಾದ್ದು, ಕೊಟ್ಟರೆ ಹೋಗದಂತಾದ್ದು, ಇಟ್ಟರೆ ತೀರದಂತಾದ್ದು, ಕಟ್ಟಿದ ಗಂಟು ಬಯಲೊಳಗಿಟ್ಟರೆ ಮುಟ್ಟಲು ಬಾರದಂತಾದ್ದು’ ಅಂತಹ ಸಂಪತ್ತು ಗಳಿಸಬೇಕು ಅಂತಾರೆ. ಹೀಗೆ ನಾವು ಹೇಳಿದರೆ ‘ಜಲ್ದಿ ಹೇಳ್ರೀ ಅಜ್ಜಾರ, ಸಿಬಿಐ, ಐಟಿ, ಲೋಕಾಯುಕ್ತಾದೋರು ಬರ್ತಾರ. ಅದೇ ಟೆನ್ಷನ್‌ನಲ್ಲಿ ನಮಗೆ ಶುಗರ್ ಬಂದಾವ, ನಾವು ಕಟ್ಟಿದ ಗಂಟು ಬಯಲೊಳಗೆ ಇಟ್ಟರೆ ಮುಟ್ಟಾಕ ಬಂದಿರಬಾರದು, ಅದನ್ನು ಮೊದಲು ಹೇಳಿ’ ಅಂತೀರಿ. ಆದರೆ ಅನುಭಾವಿಗಳು ಹೇಳಿದ್ದು ಬ್ಯಾರೆ. ಅವರಂತಾರ, ‘ನಾನಿಟ್ಟ ಸಂಪತ್ತಿಗೆ ಅಣ್ಣ ತಮ್ಮಂದಿರು ಪಾಲು ಕೇಳಲು ಬರಲ್ಲ. ಲೋಕಾಯುಕ್ತರು, ಸಿಬಿಐದವರೂ ಬರಲ್ಲ, ಇನ್ ಕಂ ಟ್ಯಾಕ್ಸ್ ನವರು ಟ್ಯಾಕ್ಸ್ ಹಾಕಕೂ ಬರಲ್ಲ. ಅಂತಾ ಸಂಪತ್ತು ಅದು.

ಒಬ್ಬ ವ್ಯಕ್ತಿ ಇದ್ದ. ಅವನಿಗೆ ನಾಲ್ಕು ಮಂದಿ ಸ್ನೇಹಿತರಿದ್ದರು. ಆ ವ್ಯಕ್ತಿಯ ವಿರುದ್ಧ ಒಂದು ಕೇಸ್ ಕೋರ್ಟ್‌ನಲ್ಲಿ ನಡೀತಿತ್ತು. ಒಂದಿನ ನ್ಯಾಯಾಧೀಶರು ‘ನಿನ್ನ ಪರವಾಗಿ ಯಾರಾದರೂ ಸಾಕ್ಷಿ ಹೇಳಿದರೆ ನೀನು ಕೇಸ್ ಗೆಲ್ಲುತ್ತಿ’ ಅಂದರು. ಇವನಿಗೆ ಖುಷಿಯಾತು. ‘ನನಗೆ ನಾಲ್ಕು ಮಂದಿ ಪ್ರಾಣಕ್ಕೆ ಪ್ರಾಣ ಕೊಡೋ ಸ್ನೇಹಿತರಿದ್ದಾರೆ. ಅವರನ್ನು ಕರಕೊಂಡು ಬಂದು ಸಾಕ್ಷಿ ಹೇಳಸ್ತೀನಿ’ ಅಂದು ಹೋದ.

ಮೊದಲನೇ ದೋಸ್ತನ ಬಳಿಗೆ ಹೋಗಿ, ‘ನೀನು ನನ್ನ ಪರವಾಗಿ ಸಾಕ್ಷಿ ಹೇಳು ಬಾ’ ಎಂದ. ಅದಕ್ಕೆ ದೋಸ್ತ ‘ನಾನು ಕೋರ್ಟ್‌ವರೆಗೆ ಬಂದು ಸಾಕ್ಷಿ ಹೇಳಲು ಆಗದು. ಇಲ್ಲೇ ಇದ್ದಲ್ಲೇ ಹೇಳಬಹುದು’ ಎಂದ. ‘ಹೀಂಗಾದ್ರೆ ಹ್ಯಾಂಗೋ’ ಎಂದು ಕೇಳಿದ ವ್ಯಕ್ತಿ. ಅದಕ್ಕೆ ಮೊದಲನೇ ದೋಸ್ತ, ‘ನನಗೆ ಹೆಜ್ಜೆ ಕಿತ್ತಿಡಲು ಆಗಲ್ಲ. ಇದ್ದಲ್ಲೆ ಸಾಕ್ಷಿ ಹೇಳುವೆ’ ಎಂದ. ಅಲ್ಲಿಂದ ಎರಡನೆಯ ದೋಸ್ತನ ಬಳಿ ಹೋಗಿ ಕೇಳಿದ. ಅವ, ‘ನಾನು ಮನೆ ಬಾಗಿಲ ಮಟ ಬರಬಹುದು ಅಷ್ಟೆ. ಕೋರ್ಟ್‌ಗೆ ಬರಲ್ಲ’ ಅಂದ. ಮೂರನೇ ದೋಸ್ತ, ‘ನಾನು ಕೋರ್ಟ್ ಬಾಗಿಲವರೆಗೆ ಬರ್ತೇನೆ. ಒಳಗೆ ಬರಲ್ಲ’ ಅಂದ. ಕೊನೆಗೆ ನಾಲ್ಕನೆ ದೋಸ್ತನ ಬಳಿಗೆ ಹೋದಾಗ ಅವ ‘ನೀ ಚಿಂತಿ ಮಾಡಬೇಡ. ನಾನು ಕೋರ್ಟ್ ನೊಳಗೆ ಬಂದು ನಿನ್ನ ಪರವಾಗಿ ಸಾಕ್ಷಿ ಹೇಳಿ ನಿನ್ನ ಗೆಲ್ಲಿಸಿಕೊಂಡು ಬರ್ತೀನಿ’ ಅಂದ.

ಅಂದರೆ ಒಂದನೇ ದೋಸ್ತ ಯಾರೆಂದರೆ ನಾವು ಕಷ್ಟಪಟ್ಟು ಗಳಿಸಿದ ಹೊಲ, ಮನಿ ಮುಂತಾದ ಆಸ್ತಿ. ಅವು ಎಲ್ಲಿಗಾದರೂ ಬರ್ತಾವೇನು? ಇದ್ದಲ್ಲೇ ಇರ್ತಾವ. ಇನ್ನು ಎರಡನೆ ದೋಸ್ತ ಯಾರೆಂದರೆ ಹೆಂಡತಿ ಅಥವಾ ಗಂಡ. ಅವರು ಬಾಗಿಲವರೆಗೆ ಮಾತ್ರ ಬರ್ತಾರ. ಇನ್ನು ಮೂರನೇ ದೋಸ್ತರು ಯಾರೆಂದರ ನಮ್ಮ ತಂದೆ, ತಾಯಿ, ಬಂಧುಗಳು, ಸ್ನೇಹಿತರು. ಅವರು ಕೋರ್ಟಿನ ಬಾಗಿಲವರೆಗೆ, ಅಂದರ ಸ್ಮಶಾನದವರೆಗೆ ಮಾತ್ರ ಬರ್ತಾರೆ. ನಾಲ್ಕನೇ ಸ್ನೇಹಿತ ಯಾರು ಅಂದರ ಜೀವನದಲ್ಲಿ ನಾವು ಮಾಡಿದ ಒಳ್ಳೆಯ ಕಾರ್ಯಗಳು (ಪುಣ್ಯ). ಅವು ಮಾತ್ರ ಸಾಕ್ಷಿ ಹೇಳಿ ನಮ್ಮನ್ನು ಗೆಲ್ಲಿಸಿಕೊಂಡು ಬರ್ತಾವ.

ಯಾವುದು ಪುಣ್ಯ? ಸಾವಿನಿಂದ ಯಾವುದನ್ನು ಕಸಿದುಕೊಳ್ಳಲು ಸಾಧ್ಯವಿಲ್ಲವೋ ಅದಕ್ಕೆ ಪುಣ್ಯ ಅಂತಾರೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಗುರುವಾರ ಅಕ್ಟೋಬರ್ 24, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಿಜ ಕೃಷ್ಣ ಅಷ್ಟಮಿ ಗಂ. 25-59 ನಕ್ಷತ್ರ: ಪುನರ್ವಸು ಗಂ. 06-16 ಯೋಗ: ಸಾಧ್ಯ ಗಂ. 29-22 ಕರಣ: ಬಾಲವ ಗಂ. 13-33 ನಂತರ ಕೌಲವ ಗಂ. 25-59, ತುಲಾ ಮಾಸದ 07 ನೇ ದಿನ, ಮಳೆನಕ್ಷತ್ರ: ಸ್ವಾತಿ 1.
ರಾಹುಕಾಲ : ಮಧ್ಯಾಹ್ನ 01-30 – 03-00
ಸೂರ್ಯೋದಯ : 06-26 ಸೂರ್ಯಾಸ್ತ : 06-03
ಮುಸ್ಲಿಂ ದಿನಾಂಕ : 20 ರಬಿಯುಸ್ಸಾನಿ
ದಿನ ವಿಶೇಷ : ಅಹೋಯಿ ಅಷ್ಟಮಿ, ಅದೃಷ್ಟ ಸಂಖ್ಯೆ : 4, 12

ಮೇಷ: ಉದಾರ ಮನೋಭಾವದಿಂದ ಸಾಕಷ್ಟು ಅನುಕೂಲ ಆಗುತ್ತದೆ. ಧ್ಯಾನ ಮಾಡುವ ಮೂಲಕ ಏಕಾಗ್ರತೆಯನ್ನು ವೃದ್ಧಿಸಿಕೊಳ್ಳುವ ಪ್ರಯತ್ನ ಮಾಡಿ. ಹಣಕಾಸಿನ ಬಗ್ಗೆ ಚಿಂತಿಸಬೇಕಾಗಿಲ್ಲ.

ವೃಷಭ: ಪರಿಸ್ಥಿತಿಯನ್ನು ಅವಲೋಕಿಸಿಕೊಂಡು ಮುಂದಿನ ಹೆಜ್ಜೆ ಇರಿಸಿ. ಗೃಹ ಬಳಕೆಯ, ಆಲಂಕಾರಿಕ ಸಾಮಗ್ರಿಗಳ ಖರೀದಿ ಮಾಡುವಿರಿ. ಕರ್ತವ್ಯನಿಷ್ಠೆಯಿಂದ ಕಾರ್ಯಸಾಧನೆಗೆ ಅನುಕೂಲವಾಗುವುದು.

ಮಿಥುನ: ಉನ್ನತ ಅಧಿಕಾರಿಗಳ ಸಂಪರ್ಕದಿಂದ ಕೆಲಸಗಳಿಗೆ ಹೆಚ್ಚಿನ ಪುಷ್ಟಿ ದೊರೆಯಲಿದೆ. ವೈಯಕ್ತಿಕ ವಿಚಾರಗಳಿಗೆ ಪ್ರಭಾವಿ ವ್ಯಕ್ತಿಗಳ ಭೇಟಿ ಮಾಡುವ ಸಂದರ್ಭ ಬರಲಿದೆ. ಸಹೋದರರಲ್ಲಿ ಅಸಮಾಧಾನ ಎದುರಾಗಬಹುದು.

ಕರ್ಕಾಟಕ: ಕುಟುಂಬಕ್ಕೆ ಸಂಬಂಧಿಸಿದಂತೆ ಶುಭ ವಾರ್ತೆ ಕೇಳಲಿದ್ದೀರಿ. ಗೃಹನಿರ್ಮಾಣ ಕಾರ್ಯವನ್ನು ಅಡೆತಡೆಯಿಲ್ಲದೆ ಸಂಪೂರ್ಣಗೊಳಿಸುವಿರಿ. ಗುರಿ ತಲುಪಲು ಆಂಜನೇಯನನ್ನು ಆರಾಧಿಸಿ.

ಸಿಂಹ: ಬಹಳ ದಿನಗಳಿಂದ ಸ್ಥಗಿತಗೊಂಡ ಕಾರ್ಯಕ್ಕೆ ಪುನಃ ಚಾಲನೆ ದೊರೆತು ಸಂತಸ ಹೊಂದುವಿರಿ. ದೇವತಾನುಗ್ರಹದಿಂದ ಮಹಿಳೆಯರಿಗೆ ಉದ್ಯೋಗದಲ್ಲಿ ಅದೃಷ್ಟ ಹುಡುಕಿಕೊಂಡು ಬರಲಿದೆ. ವ್ಯವಹಾರದ ಗೌಪ್ಯತೆ ಕಾಪಾಡಿಕೊಳ್ಳಿ.

ಕನ್ಯಾ: ಕೆಲವೊಂದು ಸಮಸ್ಯೆಯು ಇತರರಲ್ಲಿ ಹೇಳಿಕೊಳ್ಳಲೂ ಆಗದೆ, ಬಿಡಲೂ ಆಗದೆ ತೊಳಲಾಡುವ ಪರಿಸ್ಥಿತಿ ಬರುವುದು. ಮಗಳ ತಾಂತ್ರಿಕ ವಿದ್ಯಾಭ್ಯಾಸದಲ್ಲಿನ ಪ್ರಗತಿಯು ಸಂತೋಷವನ್ನು ನೀಡುವುದು.

ತುಲಾ: ಅಂತರ್ಜಾಲ ಕುರಿತಾಗಿ ಕೆಲಸವನ್ನು ಮಾಡುವವರಿಗೆ ಪದೇ ಪದೇ ತಪ್ಪುಗಳು ಸಂಭವಿಸಬಹುದು. ಮರೆವಿನ ಸಮಸ್ಯೆಯಿಂದ ಅವಘಢಗಳನ್ನು ಎದುರಿಸುವಿರಿ. ಸಂಬಂಧಗಳಲ್ಲಿ ಸಾಮರಸ್ಯವನ್ನು ಕಾಯ್ದುಕೊಳ್ಳಿರಿ.

ವೃಶ್ಚಿಕ: ಕಂದಾಯ ಅಧಿಕಾರಿಗಳಿಗೆ ಕೆಲಸದ ಹೊಣೆ ಹೆಚ್ಚುವುದು. ಹೂವು-ಹಣ್ಣಿನ ವ್ಯಾಪಾರ ಮತ್ತು ಜವಳಿ ವ್ಯಾಪಾರಗಳು ಸರಾಗವಾಗಿ ನಡೆಯಲಿವೆ. ಶತ್ರುಗಳ ವಿರುದ್ಧ ಧೈರ್ಯವಾಗಿ ಹೋರಾಡುವ ಪ್ರಯತ್ನವಿರಲಿ.

ಧನು: ವಾಹನದ ಅಥವಾ ಎಲೆಕ್ಟ್ರಿಕಲ್ ವಸ್ತುಗಳ ರಿಪೇರಿಯು ಹಣವ್ಯಯಕ್ಕೆ ಕಾರಣವಾಗುತ್ತದೆ. ವಾಹನ ಬಿಡಿಭಾಗಗಳ ಮಾರಾಟಗಾರರಿಗೆ ಲಾಭ. ಲೇವಾದೇವಿ ವ್ಯವಹಾರಗಳನ್ನು ಕಡಿಮೆ ಮಾಡಿಕೊಳ್ಳಲು ನಿರ್ಧರಿಸಿ.

ಮಕರ: ಭರವಸೆಯ ಮಾತುಗಳು ಸಹೋದ್ಯೋಗಿಯೊಬ್ಬರಿಗೆ ಆತ್ಮಸ್ಥೈರ್ಯ ತಂದುಕೊಡುವುದು. ರಾಜಕೀಯ ರಂಗದಲ್ಲಿ ಜನಪ್ರಿಯತೆ ಪಡೆಯುವಿರಿ. ಕುಲದೇವತೆಯ ಪ್ರಾರ್ಥನೆಯಿಂದ ಆರೋಗ್ಯ ಉತ್ತಮವಾಗುವುದು.

ಕುಂಭ: ಅವಕಾಶಗಳು ನಿಮ್ಮನ್ನರಸಿ ಬರಲಿವೆ. ವಿವೇಚನೆಯಿಂದ ಉಪಯೋಗಿಸಿಕೊಂಡಲ್ಲಿ ಹೆಚ್ಚಿನ ಅನುಕೂಲವಾಗಲಿದೆ. ಹಣ ಹೂಡಿಕೆಯ ವಿಷಯದಲ್ಲಿ ಅನಿಸಿಕೆಯಂತೆ ನಡೆಯುವುದು ಉತ್ತಮ. ಯಶಸ್ಸು ನಿಶ್ಚಿತವಾಗಿರುತ್ತದೆ.

ಮೀನ: ಅರ್ಧಕ್ಕೆ ನಿಂತಿದ್ದ ಗೃಹ ನಿರ್ಮಾಣ ಕೆಲಸಗಳು ಮುಂದುವರಿಯುವುದು. ದಂತ ವೈದ್ಯರಿಗೆ ಒಳ್ಳೆಯ ದಿನ. ವಿದ್ಯಾರ್ಥಿಗಳು ವಿದ್ಯಾಭ್ಯಾಸದಲ್ಲಿ ಪ್ರಯತ್ನಬಲವನ್ನು ಹೆಚ್ಚಿಸಿದರೆ ಉದ್ಯೋಗ ಪ್ರಾಪ್ತಿಗೆ ಅನುಕೂಲ.

ಪದಬಂಧ 5841

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಗಾಳಿಯಲ್ಲಿ ಸದ್ದು! (3)
4.ದಡಿ ಹಿಡಿದಿರುವ ಟೊಣಪ (3)
5.ವೀರರ ಶೌರ್ಯಸಾಹಸಗಳನ್ನು ಕುರಿತ ಹಾಡು (4)
6.ಕಂಡವರ ಮನೆಯಲ್ಲಿಹುದೇ ಚಿನ್ನ? (4)
7.ಕಂದಾಚಾರ ಮಾಡುವವನು ಹೇಳಿದ ಬೆಲೆ(2)
10.ಪ್ರತಿ ತೋರಿಸುವಾಗ ಅಡ್ಡಿ ಮಾಡುವುದು ಕಾಣುತ್ತಿದೆಯಲ್ಲಾ? (5)
12.ಮೂರರ ಗುಂಪು (2)
14.ಬೋಗುಣಿ ಹಿಡಿದು ನಗದಾಗಿ ಮೊದಲು ವ್ಯಾಪಾರ ಮಾಡು (4)
17.ನಡುವೆ ಮಾಯವಿದ್ದಾಗ ಕಪಟವರಿಯದವಳು ಕಂಡಾಳು! (4)
18.ರಥದಲ್ಲಿ ಕುಳಿತು ಯುದ್ಧ ಮಾಡುವವನು (3)
19.ಈತ ಕುರಿ ಕಾಯುವವನು (3)

ಮೇಲಿಂದ ಕೆಳಕ್ಕೆ
1.ಚಿನ್ನದಲ್ಲಿ ಹರಳನ್ನು ಕೂರಿಸುವ ಕೆಲಸ (3)
2.ಗಾಡಿಯ ಕಡೆ ನಡೆಯುತ್ತಿರುವ ಹಾಡುಗಾರ (3)
3.ಒಂದು ಸಂಖ್ಯೆಯನ್ನು ಇನ್ನೊಂದರಿಂದ ಭಾಗಿಸುವುದು (4)
5.ಈತ ಪರಾಕ್ರಮಿ ಸೈನಿಕ (4)
8.ತಾಮ್ರವೂ ತವರವೂ ಸೇರಿ ಆದ ಮಿಶ್ರ ಲೋಹ (2)
9.ಕಾರ್ಯನಿರ್ವಹಣೆ ಮಾಡುವ ಉಪಕರಣ (2)
11.ತಿರುಕಿ ಹಿಡಿದಿರುವ ಭಿಕ್ಷಾಪಾತ್ರೆ (4)
13.ಜಮಖಾನದ ಮೇಲೆ ಕುಳಿತಿರುವ ಒಡತಿ (4)
15.ನಿಸ್ಸಾರವಾದುದು ಉಲ್ಟಾ ಆಗಿಬಿಟ್ಟಿದೆ (3)
16.ದಕ್ಷಿಣ ದಿಕ್ಕಿದು (3)



5840ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಆರಂಬ 3.ಕಡಗ
5.ರತ್ನಾಕರ 7.ಜಾಗರ
10.ಅತಿಕ್ರಮಪ್ರವೇಶ
13.ಸಂತುಷ್ಟ 16.ಸ್ವಯಾರ್ಜಿತ
18.ಗಮಾರ 19.ಟಗರು

ಮೇಲಿಂದ ಕೆಳಕ್ಕೆ:
1.ಆಪದ್ಬಂಧು 2.ಬರ
3.ಕರ 4.ಗದಗ
6.ಕಪ್ಪ 7.ಜಾತವೇದ
8.ರಜ್ಜು 9.ಜಾತಿಭ್ರಷ್ಟ
11.ಕಸಂ 12.ಬೆಂಗಳೂರು
14.ತುರಗ 15.ದಿಯಾ
16.ಸ್ವರ 17.ತಟ

ಸುಡೊಕು 6226

	4					8	2	
8		9						5
	6	5				3		7
	8			1			5	
9		3	5		8	4		6
	5			3			8	
5		4		8			7	
2	9		1		7	5		4
		6		4			9	8

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6225 ಸುಡೊಕು

9	2	5	1	8	3	4	7	6
6	8	4	7	2	5	3	1	9
7	3	1	4	6	9	2	5	8
4	7	9	8	1	6	5	3	2
3	6	2	5	4	7	8	9	1
1	5	8	3	9	2	6	4	7
8	9	7	2	5	4	1	6	3
5	1	6	9	3	8	7	2	4
2	4	3	6	7	1	9	8	5

'ಬಾಂಗ್ಲಾದೇಶ ಅಧ್ಯಕ್ಷರ ಪದಚ್ಯುತಿಗೆ ಸಮಾಲೋಚನೆ'

ಢಾಕಾ (ಪಿಟಿಐ): ಬಾಂಗ್ಲಾದೇಶದ ಅಧ್ಯಕ್ಷ ಮೊಹಮ್ಮದ್ ಶಹಾಬುದ್ದೀನ್ ಅವರ ಭವಿಷ್ಯವನ್ನು ನಿರ್ಧರಿಸಲು ಎಲ್ಲ ಭಾಗೀದಾರರೊಂದಿಗೆ ಸಮಾಲೋಚನೆ ನಡೆಸಲಾಗುವುದು ಎಂದು ಬುಧವಾರ ಬಾಂಗ್ಲಾದೇಶದ ಮಧ್ಯಂತರ ಸರ್ಕಾರ ತಿಳಿಸಿದೆ.

ಪ್ರಧಾನಿ ಶೇಖ್ ಹಸೀನಾ ಅವರ ರಾಜೀನಾಮೆ ಕುರಿತು ನೀಡಿದ ಹೇಳಿಕೆ ಸಲುವಾಗಿ ಶಹಾಬುದ್ದೀನ್ ರಾಜೀನಾಮೆ ನೀಡುವಂತೆ ಪ್ರತಿಭಟನೆಗಳು ನಡೆಯುತ್ತಿದ್ದು, ಅವರ ನಿವಾಸದ ಸುತ್ತಲೂ ಭದ್ರತೆ ಹೆಚ್ಚಿಸಲಾಗಿದೆ.

ಮಂಗಳವಾರ ನೂರಾರು ಪ್ರತಿಭಟನಾಕಾರರು ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡುವಂತೆ ಮೊಹಮ್ಮದ್ ಶಹಾಬುದ್ದೀನ್ ಅವರನ್ನು ಒತ್ತಾಯಿಸಲು ಮುಂದಾಗಿದ್ದರು. ಅಧ್ಯಕ್ಷರ ಅಧಿಕೃತ ನಿವಾಸದ ಮೇಲೆ ಮುತ್ತಿಗೆ ಹಾಕಲು ಪ್ರಯತ್ನಿಸಿದ್ದರು.

'ಅಧ್ಯಕ್ಷ ಮೊಹಮ್ಮದ್ ಶಹಾಬುದ್ದೀನ್ ಅವರನ್ನು ಅಧಿಕಾರದಿಂದ ತೆಗೆದುಹಾಕುವ ಬಗ್ಗೆ ಮಧ್ಯಂತರ ಸರ್ಕಾರವು ಯಾವುದೇ ನಿರ್ಧಾರವನ್ನು ತೆಗೆದುಕೊಂಡಿಲ್ಲ' ಎಂದು ಮುಖ್ಯ ಸಲಹೆಗಾರ ಮುಹಮ್ಮದ್ ಯೂನಸ್ ಅವರ ಮಾಧ್ಯಮ ಕಾರ್ಯದರ್ಶಿ ಶಫೀಕುಲ್ ಆಲಂ ಹೇಳಿದ್ದಾರೆ ಎಂದು 'ಡೈಲಿ ಸ್ಟಾರ್' ಪತ್ರಿಕೆ ವರದಿ ಮಾಡಿದೆ.

ಮಾಧ್ಯಮಗಳ ವರದಿ ಪ್ರಕಾರ ಈ ವಾರ ಸಂಸತ್ತಿನಲ್ಲಿ ಅಧ್ಯಕ್ಷ ಮೊಹಮ್ಮದ್ ಶಹಾಬುದ್ದೀನ್ ರಾಜೀನಾಮೆ ಕುರಿತು ಚರ್ಚೆ ನಡೆಯುವ ಸಾಧ್ಯತೆಗಳಿವೆ.

ಶಹಾಬುದ್ದೀನ್ ಕಳೆದ ವಾರ ಬಾಂಗ್ಲಾ ಪತ್ರಿಕೆ 'ಮಾನವ್ ಜಮೀನ್'ಗೆ ನೀಡಿದ ಸಂದರ್ಶನ ವೊಂದರಲ್ಲಿ ಆಗಸ್ಟ್ 5ರಂದು ಪ್ರಧಾನಿ ಶೇಖ್ ಹಸೀನಾ ದೇಶ ತೊರೆಯುವ ಮೊದಲು ಪ್ರಧಾನಿ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಕುರಿತು ತಮ್ಮ ಬಳಿ ಯಾವುದೇ ಸಾಕ್ಷ್ಯಗಳಿಲ್ಲ ಎಂದು ಹೇಳಿದ್ದರು.

ಗಾಜಾ ಪಟ್ಟಿಯಲ್ಲಿ ಕದನ ವಿರಾಮಕ್ಕೆ ನಾಯಕರ ಆಗ್ರಹ

ಇಸ್ರೇಲ್ ದಾಳಿ ಖಂಡಿಸಿದ 'ಬ್ರಿಕ್ಸ್'

ಕಜಾನ್ (ಪಿಟಿಐ): ಗಾಜಾ ಪಟ್ಟಿಯಲ್ಲಿ ಶಾಶ್ವತ ಕದನ ವಿರಾಮವನ್ನು ತಕ್ಷಣವೇ ಘೋಷಿಸಬೇಕು ಎಂದು ಬ್ರಿಕ್ಸ್ ದೇಶಗಳು ಬುಧವಾರ ಕರೆನೀಡಿವೆ. ಇದಲ್ಲದೆ ಇಸ್ರೇಲ್ ನಡೆಸುತ್ತಿರುವ ಮಿಲಿಟರಿ ದಾಳಿಯು 'ನಾಗರಿಕರ ಸಾಮೂಹಿಕ ಹತ್ಯೆಗೆ ಕಾರಣವಾಗುತ್ತಿದೆ' ಎಂದು ಹೇಳಿರುವ ಬ್ರಿಕ್ಸ್, ದಾಳಿಯನ್ನು ಖಂಡಿಸಿದೆ.

'ಎರಡೂ ಕಡೆಗಳಲ್ಲಿ' ಇರುವ ಒತ್ತೆಯಾಳುಗಳನ್ನು ಬಿಡುಗಡೆ ಮಾಡಬೇಕು ಎಂದು ಕೂಡ ಬ್ರಿಕ್ಸ್ ದೇಶಗಳು ಕರೆನೀಡಿವೆ. ಬ್ರಿಕ್ಸ್ ದೇಶಗಳ ಕಜಾನ್ ಘೋಷಣೆಯಲ್ಲಿ ಪಶ್ಚಿಮ ಏಷ್ಯಾದಲ್ಲಿನ ಸಂಘರ್ಷವು ಪ್ರಮುಖವಾಗಿ ಉಲ್ಲೇಖವಾಗಿದೆ. ಬ್ರಿಕ್ಸ್ ಸದಸ್ಯ ರಾಷ್ಟ್ರಗಳ ಪೈಕಿ ಇರಾನ್ ಕೂಡ ಒಂದಾಗಿದೆ.

ಅಕ್ಟೋಬರ್ 1ರಂದು ಇಸ್ರೇಲ್ ಮೇಲೆ ಇರಾನ್ ಕ್ಷಿಪಣಿ ದಾಳಿ ನಡೆಸಿದೆ. ಇದಕ್ಕೆ ಪ್ರತಿಯಾಗಿ ಇಸ್ರೇಲ್‌ನಿಂದ ದಾಳಿ ನಡೆಯುವ ಸಾಧ್ಯತೆ ಇದೆ ಎನ್ನಲಾಗಿದೆ. ಸಿರಿಯಾದಲ್ಲಿ ಇರುವ ಇರಾನ್‌ನ ರಾಯಭಾರ ಕಚೇರಿಯ ಮೇಲೆ ಇಸ್ರೇಲ್ ಏಪ್ರಿಲ್‌ನಲ್ಲಿ ನಡೆಸಿದ ವಾಯು ದಾಳಿಯನ್ನು ಬ್ರಿಕ್ಸ್ ಘೋಷಣೆಯಲ್ಲಿ ಖಂಡಿಸಲಾಗಿದೆ. ಇರಾನ್‌ನ ಇಸ್ಲಾಮಿಕ್ ರೆವಲ್ಯೂಷನರಿ ಗಾರ್ಡ್‌ನ ಅಧಿಕಾರಿಗಳು ಈ ದಾಳಿಯಲ್ಲಿ ಹತರಾಗಿದ್ದರು.

ಮಾನವೀಯ ನೆರವಿನ ಕಾರ್ಯಾಚರಣೆ ನಡೆಸುತ್ತಿರುವವರ ಮೇಲೆ ಇಸ್ರೇಲ್ ಪಡೆಗಳು ನಡೆಸಿದ ದಾಳಿಯನ್ನು ಕೂಡ ಬ್ರಿಕ್ಸ್ ದೇಶಗಳು ಖಂಡಿಸಿವೆ.

ಭಯೋತ್ಪಾದನೆಯನ್ನು ಎಲ್ಲರೂ ಎದುರಿಸುತ್ತಿರುವ ಬೆದರಿಕೆ ಎಂದು ಹೇಳಿರುವ ಬ್ರಿಕ್ಸ್, ಭಯೋತ್ಪಾದಕ ಸಿದ್ಧಾಂತ ಪ್ರಸರಣ ತಡೆಯಲು, ಭಯೋತ್ಪಾದನೆಯ ಉದ್ದೇಶಕ್ಕೆ ಆಧುನಿಕ ತಂತ್ರಜ್ಞಾನ ಬಳಕೆ ತಡೆಗೆ, ಭಯೋತ್ಪಾದಕರು ಒಂದು ದೇಶದಿಂದ ಇನ್ನೊಂದು ದೇಶ ಪ್ರವೇಶಿಸುವುದನ್ನು ಹಾಗೂ ಭಯೋತ್ಪಾದನೆಗೆ ಹಣಕಾಸಿನ ನೆರವು ಒದಗಿಸುವುದನ್ನು ತಡೆಯಲು ನಿರ್ಣಾಯಕ ಕ್ರಮಗಳನ್ನು ಕೈಗೊಳ್ಳುವುದಾಗಿ ಹೇಳಿದೆ.

ಬ್ರಿಕ್ಸ್ ದೇಶಗಳ ಪ್ರಮುಖರು ಶೃಂಗಸಭೆಯಲ್ಲಿ ಒಟ್ಟಾಗಿ ಕ್ಯಾಮೆರಾ ಕಣ್ಣಿಗೆ ನಿಶ್ಚ ಸಂದರ್ಭ ಎಎಫ್‌ಪಿ ಚಿತ್ರ

ಜಿನ್‌ಪಿಂಗ್ ಸಲಹೆ

ನೆರೆ ದೇಶಗಳು ಸೌಹಾರ್ದದಿಂದ ಇರಲು, ಜೊತೆಜೊತೆಗೆ ಅಭಿವೃದ್ಧಿ ಹೊಂದಲು ಅನುವಾಗುವಂತಹ 'ಸರಿಯಾದ ಮತ್ತು ಉಜ್ವಲ ಮಾರ್ಗ' ಕಂಡುಕೊಳ್ಳಲು ಭಾರತ ಮತ್ತು ಚೀನಾ ಮುಂದಾಗಬೇಕು ಎಂದು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಅವರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಹೇಳಿದ್ದಾರೆ ಎಂಬುದಾಗಿ ಷಿನ್‌ಹುವಾ ಸುದ್ದಿಸಂಸ್ಥೆ ವರದಿ ಮಾಡಿದೆ.

ಸುದ್ದಿ 2 ನಿಮಿಷ

ಕೇಂದ್ರ ಸಚಿವ ಬಂಡಿ ಸಂಜಯ್‌ಗೆ ಕೆ.ಟಿ.ರಾಮರಾವ್ ನೋಟಿಸ್

ಹೈದರಾಬಾದ್: ಕೇಂದ್ರ ಸಚಿವ ಬಂಡಿ ಸಂಜಯ್ ಅವರು ತನ್ನ ವಿರುದ್ಧ ಆಧಾರರಹಿತ ಮತ್ತು ಮಾನಹಾನಿಕರ ಹೇಳಿಕೆಗಳನ್ನು ನೀಡಿದ್ದಾರೆ ಎಂದು ಆರೋಪಿಸಿರುವ ಬಿಆರ್‌ಎಸ್ ಕಾರ್ಯಾಧ್ಯಕ್ಷ ಕೆ.ಟಿ.ರಾಮರಾವ್, ಲೀಗಲ್ ನೋಟಿಸ್ ನೀಡಿದ್ದಾರೆ.

ವಾರದೊಳಗೆ ಕೇಂದ್ರ ಸಚಿವರು ಬೇಷರತ್ ಕ್ಷಮೆ ಯಾಚಿಸಬೇಕು. ಇಲ್ಲದಿದ್ದರೆ ಅವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳುವುದಾಗಿ ನೋಟಿಸ್‌ನಲ್ಲಿ ತಿಳಿಸಲಾಗಿದೆ.

'ಬಂಡಿ ಸಂಜಯ್ ಅವರು ಅಕ್ಟೋಬರ್ 19ರಂದು ಮಾಧ್ಯಮ ಸಂವಾದದಲ್ಲಿ ನನ್ನ ವಿರುದ್ಧ ಸುಳ್ಳು ಆರೋಪಗಳನ್ನು ಮಾಡಿದ್ದಾರೆ. ನಾನು ಡ್ರಗ್ ತೆಗೆದುಕೊಳ್ಳುತ್ತೇನೆ ಮತ್ತು ಬಿಆರ್‌ಎಸ್ ಅಧಿಕಾರದಲ್ಲಿದ್ದಾಗ ದೂರವಾಣಿ ಕದ್ದಾಲಿಕೆಯಲ್ಲಿ ತೊಡಗಿದ್ದೆ ಎಂದೆಲ್ಲ ಆರೋಪಿಸಿದ್ದಾರೆ' ಎಂದು ಕೆಟಿಆರ್ ತಿಳಿಸಿದ್ದಾರೆ.

'ನನ್ನ ವರ್ಚಸ್ಸನ್ನು ಕೆಡಿಸುವ ದುರುದ್ದೇಶದಿಂದಲೇ ಅವರು ಈ ರೀತಿಯ ಆರೋಪಗಳನ್ನು ಮಾಡಿದ್ದಾರೆ' ಎಂದಿರುವ ಕೆಟಿಆರ್, 'ಕೇಂದ್ರ ಸಚಿವರು ತಾವು ಮಾಡಿರುವ ಆರೋಪಗಳನ್ನು ಸಾಬೀತುಪಡಿಸಲಿ' ಎಂದು ಸವಾಲು ಹಾಕಿದ್ದಾರೆ.

ದಾಖಲೆಗಳಿಲ್ಲದೆ ಈ ರೀತಿಯ ಮಾನಹಾನಿಕರ ಹೇಳಿಕೆಗಳನ್ನು ನೀಡಿದರೆ, ಕಾನೂನಾತ್ಮಕ ಕ್ರಮಗಳನ್ನು ಎದುರಿಸಬೇಕಾಗುತ್ತದೆ ಎಂದು ಕೆಟಿಆರ್ ಎಚ್ಚರಿಸಿದ್ದಾರೆ.

'ಬಂಡಿ ಸಂಜಯ್ ಅವರ ಹೇಳಿಕೆಗಳು ವಿವಿಧ ಮಾಧ್ಯಮಗಳಲ್ಲಿ ಪ್ರಸಾರವಾಗಿದ್ದು, ಸಾಮಾಜಿಕ ಜಾಲತಾಣಗಳಲ್ಲೂ ವ್ಯಾಪಕವಾಗಿ ಹಂಚಿಕೆಯಾಗಿದೆ. ಅದರಿಂದ ನನ್ನ ವರ್ಚಸ್ಸಿಗೆ ಧಕ್ಕೆಯಾಗಿದೆ' ಎಂದು ಅವರು ತಿಳಿಸಿದ್ದಾರೆ.

ಒಡಿಶಾ: ಮಹಿಳಾ ನೌಕರರಿಗೆ ವೇತನ ಸಹಿತ ಮುಟ್ಟಿನ ರಜೆ ಜಾರಿ

ಭುವನೇಶ್ವರ (ಪಿಟಿಐ): ಒಡಿಶಾ ಸರ್ಕಾರವು ಮಹಿಳಾ ನೌಕರರಿಗೆ ಪ್ರತಿ ತಿಂಗಳು ಒಂದರಂತೆ ವಾರ್ಷಿಕವಾಗಿ 12 ದಿನ ವೇತನ ಸಹಿತ ಮುಟ್ಟಿನ ರಜೆಯನ್ನು ಘೋಷಿಸಿದೆ.

ಈಗಿರುವ 15 ದಿನ ಸಾಮಾನ್ಯ ರಜೆಗಳನ್ನು ಹೊರತುಪಡಿಸಿ ಮಹಿಳಾ ನೌಕರರು ವಾರ್ಷಿಕವಾಗಿ 12 ದಿನ ಮುಟ್ಟಿನ ರಜೆಗಳನ್ನು ಪಡೆಯಲಿದ್ದಾರೆ ಎಂದು ಮಂಗಳವಾರ ಮುಖ್ಯಮಂತ್ರಿ ಕಚೇರಿ ಅಧಿಕೃತ ಪ್ರಕಟಣೆ ಹೊರಡಿಸಿದೆ.

ಸ್ವಾತಂತ್ರ್ಯ ದಿನಾಚರಣೆಯಂದು ಸರ್ಕಾರವು ಮಹಿಳಾ ಉದ್ಯೋಗಿಗಳಿಗೆ ವೇತನ ಸಹಿತ ಮುಟ್ಟಿನ ರಜೆಯನ್ನು ಘೋಷಿಸಿತ್ತು. ಇದೀಗ ರಜೆಗಳ ಸಂಖ್ಯೆಯನ್ನು ಹೆಚ್ಚಿಸಿ ಜಾರಿಗೊಳಿಸಲಾಗಿದೆ.

ಹಿಂದಿನ ಬಿಜೆಡಿ ಸರ್ಕಾರವು ಮಹಿಳೆಯರಿಗೆ ಹೆಚ್ಚುವರಿ 10 ರಜೆಗಳನ್ನು ನೀಡಿತ್ತು. ಇದರೊಂದಿಗೆ 15 ಸಿಎಲ್ ಸೇರಿ 25 ದಿನ ರಜೆ ನೀಡಲಾಗಿತ್ತು. ಈಗ ಹೆಚ್ಚುವರಿಯಾಗಿ 2 ದಿನ ರಜೆಯನ್ನು ಸೇರಿಸಿ ಮಹಿಳಾ ನೌಕರರಿಗೆ ಒಟ್ಟು 27 ಸಾಂದರ್ಭಿಕ ರಜೆಗಳನ್ನು ನೀಡಲಾಗಿದೆ.

ವಾಯುಮಾಲಿನ್ಯ: ಕೇಂದ್ರದ ಬಗ್ಗೆ ಅತೃಪ್ತಿ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದ ರಾಜಧಾನಿಯಲ್ಲಿ ವಾಯು ಗುಣಮಟ್ಟವು ತೀವ್ರವಾಗಿ ಕುಸಿತ ಕಂಡಿರುವ ಸಂದರ್ಭದಲ್ಲಿ, ಮಾಲಿನ್ಯದಿಂದ ಮುಕ್ತವಾಗಿರುವ ವಾತಾವರಣದಲ್ಲಿ ಘನತೆಯಿಂದ ಜೀವನ ನಡೆಸುವ ಹಕ್ಕು ಪ್ರಜೆಗಳಿಗೆ ಇದೆ ಎಂಬುದನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳಿಗೆ ಸುಪ್ರೀಂ ಕೋರ್ಟ್ ಬುಧವಾರ ನೆನಪಿಸಿಕೊಟ್ಟಿದೆ.

ನೆರೆಯ ರಾಜ್ಯದಲ್ಲಿ ಕೂಳೆಯನ್ನು ಸುಡುವುದರ ಬಗ್ಗೆ ಪ್ರಸ್ತಾಪಿಸಿದ ನ್ಯಾಯಮೂರ್ತಿಗಳಾದ ಅಭಯ್ ಎಸ್. ಓಕ, ಅಹ್ಸಾನುದ್ದೀನ್ ಅಮಾನುಲ್ಲಾ ಮತ್ತು ಆಗಸ್ಟೀನ್ ಜಾರ್ಜ್ ಮಸೀಹ್ ಅವರಿದ್ದ ತ್ರಿಸದಸ್ಯ ಪೀಠವು, ತಪ್ಪು ಮಾಡಿದವರ ವಿರುದ್ಧ ಕ್ರಮ ಜರುಗಿಸಲು ಇದ್ದ ಅವಕಾಶ ಬದಲಾಯಿಸಿ, ಅವರಿಂದ ದಂಡ ವಸೂಲಿಗೆ ಮಾತ್ರ ಅವಕಾಶ ಕಲ್ಪಿಸಿ ಪರಿಸರ ಸಂರಕ್ಷಣಾ ಕಾಯ್ದೆಯ 'ಹಲ್ಲುಕಿತ್ತಿದ್ದಕ್ಕೆ' ಕೇಂದ್ರ ಸರ್ಕಾರದ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿತು.

ಆಯೋಗ ವ್ಯವಸ್ಥೆಯನ್ನು ರೂಪಿಸಿದಂತೆ 'ರಾಷ್ಟ್ರ ರಾಜಧಾನಿ ಪ್ರದೇಶ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿನ ವಾಯು ಗುಣಮಟ್ಟ ನಿರ್ವಹಣಾ ಕಾಯ್ದೆ - 2021' (ಸಿಎಕ್ಯೂಎಂ ಕಾಯ್ದೆ) ರೂಪಿಸಲಾಯಿತು ಎಂದು ಪೀಠವು ಹೇಳಿತು.

ವಾಯು ಮಾಲಿನ್ಯಕ್ಕೆ ಸಂಬಂಧಿಸಿದ ಅರ್ಜಿಗಳ ವಿಚಾರಣೆ ನಡೆಸಿದ ಪೀಠವು, 'ಇವು ಜಾರಿಯಲ್ಲಿ ಇರುವ ಕಾನೂನುಗಳ ಅನುಷ್ಠಾನಕ್ಕೆ ಮಾತ್ರ ಸಂಬಂಧಿಸಿದವು ಅಲ್ಲ; ಇವು ಸಂವಿಧಾನದ 21ನೇ ವಿಧಿಯ ಅಡಿಯಲ್ಲಿ ಖಾತರಿಪಡಿಸಲಾಗಿರುವ ಮೂಲಭೂತ ಹಕ್ಕುಗಳ ಉಲ್ಲಂಘನೆಗೆ ಸಂಬಂಧಿಸಿದವು' ಎಂದು ಹೇಳಿತು.

ಪೀಠವು ಅಕ್ಟೋಬರ್ 16ರಂದು, ಕೂಳೆ ಸುಡುವ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವಲ್ಲಿ ಪಂಜಾಬ್ ಮತ್ತು ಹರಿಯಾಣ ಸರ್ಕಾರಗಳು ಆಸಕ್ತಿ ತೋರದೆ ಇರುವುದರ ಬಗ್ಗೆ ಅಸಮಾಧಾನ ವ್ಯಕ್ತಪಡಿಸಿತ್ತು. ಕೂಳೆ ಸುಡುವುದು ದೆಹಲಿಯಲ್ಲಿ ವಾಯುಮಾಲಿನ್ಯ ಹೆಚ್ಚಾಗುವುದಕ್ಕೆ ಒಂದು ಮುಖ್ಯ ಕಾರಣ.

'ಆರ್‌ಎಸ್‌ಎಸ್ ಚಟುವಟಿಕೆ ವಿಮರ್ಶೆ'

ಮಥುರಾದಲ್ಲಿ ಸಂಘದ ಕಾರ್ಯಕಾರಿ ಮಂಡಲ ಸಭೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಥುರಾದಲ್ಲಿ ಈ ವಾರಾಂತ್ಯ ನಡೆಯಲಿರುವ ರಾಷ್ಟ್ರೀಯ ಸ್ವಯಂಸೇವಕ ಸಂಘದ (ಆರ್‌ಎಸ್‌ಎಸ್) ಅಖಿಲ ಭಾರತೀಯ ಕಾರ್ಯಕಾರಿ ಮಂಡಲದ ಸಭೆಯಲ್ಲಿ ಸಂಘದ ಕಾರ್ಯಚಟುವಟಿಕೆಗಳ ಕುರಿತು ವಿಚಾರ ವಿಮರ್ಶೆ ನಡೆಸಲು ನಿರ್ಧರಿಸಲಾಗಿದೆ.

2025ಕ್ಕೆ ಆರ್‌ಎಸ್‌ಎಸ್ ನೂರು ವರ್ಷ ಪೂರೈಸಲಿದೆ. ಈ ಹಿನ್ನೆಲೆಯಲ್ಲಿ 2025ರ ವಿಜಯದಶಮಿಯಂದು ನಡೆಯುವ ಕಾರ್ಯಕ್ರಮದ ರೂಪುರೇಷೆಯನ್ನು ಸಂಘವು ಸಭೆಯಲ್ಲಿ ನಿರ್ಧರಿಸಲಿದೆ.

ಈ ಬಗ್ಗೆ ಆರ್‌ಎಸ್‌ಎಸ್‌ನ ಮಾಧ್ಯಮ ಘಟಕದ ಮುಖ್ಯಸ್ಥ ಸುನಿಲ್ ಅಂಬೇಕರ್ ಅವರು ಪತ್ರಿಕಾಗೋಷ್ಠಿ ನಡೆಸಿ ಮಾಹಿತಿ ನೀಡಿದರು.

'ಸಭೆಯಲ್ಲಿ ಆರ್‌ಎಸ್‌ಎಸ್ ಮುಖ್ಯಸ್ಥ ಮೋಹನ್ ಭಾಗವತ್, ಸರ ಕಾರ್ಯವಾಹ ದತ್ತಾತ್ರೇಯ ಹೊಸಬಾಳೆ ಭಾಗವಹಿಸಲಿದ್ದು, ಸಂಘದ ಕಾರ್ಯಚಟುವಟಿಕೆಗಳನ್ನು ಇನ್ನಷ್ಟು ವಿಸ್ತರಿಸುವ ಕುರಿತ ಯೋಜನೆ ರೂಪಿಸಲಾಗಿದ್ದು, ಈ ಕುರಿತು ವಿಮರ್ಶೆ ನಡೆಸಲಾಗುವುದು' ಎಂದು ಸುನಿಲ್ ಮಾಹಿತಿ ನೀಡಿದರು.

'1925ರಲ್ಲಿ ಆರಂಭಗೊಂಡ ಆರ್‌ಎಸ್‌ಎಸ್, 'ವ್ಯಕ್ತಿ ನಿರ್ಮಾಣ'ದಿಂದ ಹಿಡಿದು 'ರಾಷ್ಟ್ರ ನಿರ್ಮಾಣ'ದ ವರೆಗೂ ನಿರಂತರವಾಗಿ ಕಾರ್ಯನಿರ್ವಹಿಸುತ್ತಿದೆ. ಈ ಕಾರ್ಯಕ್ಕೆ 2025ರಲ್ಲಿ ನೂರು ವರ್ಷ ತುಂಬಲಿದ್ದು, ಪ್ರಸ್ತುತ ಆರ್‌ಎಸ್‌ಎಸ್ ತನ್ನ ಕಾರ್ಯವ್ಯಾಪ್ತಿಯನ್ನು ಇಡೀ ರಾಷ್ಟ್ರಕ್ಕೇ ವಿಸ್ತರಿಸಿಕೊಂಡಿದೆ' ಎಂದು ಹೇಳಿದರು.

'ಸ್ವಾಮಿ ದಯಾನಂದ ಸರಸ್ವತಿ, ಭಗವಾನ್ ಬಿರ್ಸಾ ಮುಂಡಾ, ಅಹಿಲ್ಯಾಭಾಯಿ ಹೋಲ್ಕರ್, ರಾಣಿ ದುರ್ಗಾವತಿ ಹಾಗೂ ಸಂತ ಅನುಕುಲ್ ಚಂದ್ರ ಠಾಕೂರ್– ಈ ಐವರು ಸಂತರ ಸಂದೇಶಗಳನ್ನು ಸಮಾಜಕ್ಕೆ ತಲುಪಿಸುವುದು ಹೇಗೆ ಎನ್ನುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗುವುದು' ಎಂದು ವಿವರಿಸಿದರು.

'ಆರ್‌ಎಸ್‌ಎಸ್‌ನಲ್ಲಿ ಮೂರು ವರ್ಷ ಪೂರೈಸಿದ 40 ವರ್ಷ ಮೇಲ್ಪಟ್ಟ ಕಾರ್ಯಕರ್ತರಿಗೆ ಇದೇ ನವೆಂಬರ್ ಮತ್ತು ಡಿಸೆಂಬರ್‌ನಲ್ಲಿ ವಿಶೇಷ ಶಿಬಿರ ಆಯೋಜಿಸಲಾಗಿದೆ' ಎಂದರು.

ಗಡಿ ಒಪ್ಪಂದಕ್ಕೆ ಮೋದಿ, ಷಿ ಒಪ್ಪಿಗೆ

ಒಂದನೇ ಪುಟದಿಂದ...

'ವಿಶೇಷ ಪ್ರತಿನಿಧಿಗಳ ಮುಂದಿನ ಸಭೆಯನ್ನು ಸೂಕ್ತ ದಿನಾಂಕಕ್ಕೆ ನಿಗದಿ ಮಾಡುವ ಭರವಸೆ ಇದೆ' ಎಂದರು.

ಭಾರತ ಮತ್ತು ಚೀನಾ ನಡುವಿನ ಸಂಬಂಧವು ಸ್ಥಿರವಾಗಿದ್ದರೆ ಪ್ರಾದೇಶಿಕ ಹಾಗೂ ಜಾಗತಿಕ ಶಾಂತಿಯ ಮೇಲೆ ಪೂರಕವಾದ ಪರಿಣಾಮ ಉಂಟಾಗುತ್ತದೆ ಎಂಬ ಅಭಿಪ್ರಾಯವನ್ನು ಇಬ್ಬರೂ ನಾಯಕರು ವ್ಯಕ್ತಪಡಿಸಿದರು ಎಂದು ಮಿಸ್ರಿ ತಿಳಿಸಿದರು.

ಗಡಿ ಪ್ರದೇಶಗಳಲ್ಲಿ ಶಾಂತಿ ಮತ್ತು ಸೌಹಾರ್ದ ನೆಲಸಿದಾಗ, ಸಂಬಂಧಗಳು ಸಹಜವಾಗುವುದಕ್ಕೆ ಅನುವು ಮಾಡಿಕೊಟ್ಟಂತೆ ಆಗುತ್ತದೆ ಎಂದು ಮಿಸ್ರಿ ಹೇಳಿದರು.

ಸಂಕ್ಷಿಪ್ತ ಸುದ್ದಿ

'ರಷ್ಯಾಕ್ಕೆ 1500 ಸೈನಿಕರ ರವಾನೆ'

ಸೋಲ್ (ಎಪಿ): ಉಕ್ರೇನ್ ವಿರುದ್ಧದ ಯುದ್ಧದಲ್ಲಿ ರಷ್ಯಾ ಬೆಂಬಲಿಸಲು ಉತ್ತರ ಕೊರಿಯಾ ಸುಮಾರು 1500 ಸೈನಿಕರನ್ನು ರಷ್ಯಾಕ್ಕೆ ಕಳುಹಿಸಿದೆ ಎಂದು ದಕ್ಷಿಣ ಕೊರಿಯಾದ ಬೇಹುಗಾರಿಕೆ ಮುಖ್ಯಸ್ಥರು ತಿಳಿಸಿದರು.

ಕಳೆದ ವಾರ ರಾಷ್ಟ್ರೀಯ ಗುಪ್ತಚರ ಸೇವೆ (ಎನ್‌ಐಎಸ್) ಉತ್ತರ ಕೊರಿಯಾ ಸೈನಿಕರನ್ನು ಕಳುಹಿಸಿರುವ ಮಾಹಿತಿಯನ್ನು ನೀಡಿತ್ತು.

ಬುಧವಾರ ನಡೆದ ಸಂಸದೀಯ ಸಮಿತಿ ಸಭೆಯಲ್ಲಿ ಎನ್‌ಐಎಸ್ ನಿರ್ದೇಶಕ ಚೋ ಟೈ-ಯಂಗ್ ಅವರು ತಮಗೆ ಈ ಮಾಹಿತಿಯನ್ನು ನೀಡಿರುವುದಾಗಿ ಶಾಸಕರಾದ ಪಾರ್ಕ್ ಸನ್‌ವೋನ್ ಮತ್ತು ಲೀ ಸಿಯೊಂಗ್ ಕ್ವೆನ್ ತಿಳಿಸಿದರು.

ಖಾಲಿಸ್ತಾನಿ ಉಗ್ರರ ಸಹಚರನ ವಿರುದ್ಧ ಚಾರ್ಜ್‌ಶೀಟ್

ನವದೆಹಲಿ(ಪಿಟಿಐ): ಪಂಜಾಬ್ ಭಯೋತ್ಪಾದನೆ ಸಂಚಿನ ಪ್ರಕರಣದಲ್ಲಿ ಖಾಲಿಸ್ತಾನಿ ಉಗ್ರರಾದ ರಿಂಡಾ ಮತ್ತು ಲಾಂಡಾ ಅವರ ಪ್ರಮುಖ ಸಹಚರನ ವಿರುದ್ಧ ಆರೋಪಪಟ್ಟಿ ಸಲ್ಲಿಸಲಾಗಿದೆ ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ಮಂಗಳವಾರ ತಿಳಿಸಿದೆ.

ಪಂಜಾಬಿನ ತರನ್ ತಾರನ್‌ನ ಗುರ್‌ಪ್ರೀತ್ ಸಿಂಗ್ ಅಲಿಯಾಸ್ ಗೋಪಿ ವಿರುದ್ಧ ಮೊಹಾಲಿಯ ಎನ್‌ಐಎ ವಿಶೇಷ ನ್ಯಾಯಾಲಯಕ್ಕೆ ಸೋಮವಾರ ಚಾರ್ಜ್ ಶೀಟ್ ಸಲ್ಲಿಸಲಾಗಿದೆ ಎಂದು ತಿಳಿಸಿದೆ.

ಉಚಿತ ಕಾನೂನು ನೆರವು ಪ್ರತಿಯೊಬ್ಬರ ಹಕ್ಕು: 'ಸುಪ್ರೀಂ'

ಪ್ರಜಾವಾಣಿ ವಾರ್ತೆ

ನವದೆಹಲಿ: ಕಾನೂನು ನೆರವನ್ನು ಉಚಿತವಾಗಿ ಪಡೆಯುವುದು ಪ್ರತಿಯೊಬ್ಬರ ಮೂಲಭೂತ ಹಕ್ಕು. ಬಡವರು ಎಂಬ ಕಾರಣಕ್ಕೆ, ಅವರಿಗೆ ಒದಗಿಸುವ ಕಾನೂನು ನೆರವು ಕಡಿಮೆ ಗುಣಮಟ್ಟದ್ದಾಗಿ ಇರಕೂಡದು ಎಂದು ಸುಪ್ರೀಂ ಕೋರ್ಟ್ ಬುಧವಾರ ಹೇಳಿದೆ.

ಕೈದಿಗೂ ಕೂಡ ಕಾನೂನು ನೆರವು ಪಡೆಯುವ ಮೂಲಭೂತ ಹಕ್ಕಿದೆ. ಈ ಅಂಶವನ್ನು ಸಂವಿಧಾನದ 21ನೇ ವಿಧಿಯಡಿ ಗುರುತಿಸಬಹುದು ಎಂದು ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ ಮತ್ತು ಕೆ.ವಿ.ವಿಶ್ವನಾಥನ್ ಅವರು ಇದ್ದ ನ್ಯಾಯಪೀಠ ಹೇಳಿದೆ.

ನ್ಯಾಯಪೀಠ ಹೇಳಿದ್ದೇನು?

- ವಿವಿಧ ಹಂತಗಳಲ್ಲಿ ಕಾನೂನು ನೆರವನ್ನು ಪರಿಣಾಮಕಾರಿಯಾಗಿ ಅನುಷ್ಠಾನ ಮಾಡುವುದಕ್ಕಾಗಿ ಕಾನೂನು ಸೇವೆಗಳ ಪ್ರಾಧಿಕಾರಗಳಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಸಹಕಾರ ಮುಂದುವರಿಸಬೇಕು
- ಪೊಲೀಸ್ ಠಾಣೆಗಳು, ಅಂಚೆ ಕಚೇರಿಗಳು, ಬಸ್ ಮತ್ತು ರೈಲು ನಿಲ್ದಾಣಗಳು ಸೇರಿದಂತೆ ಪ್ರಮುಖ ಸ್ಥಳಗಳಲ್ಲಿ ಹತ್ತಿರದ ಕಾನೂನು ನೆರವು ಘಟಕ/ಕಚೇರಿಗಳ ವಿಳಾಸ, ಸಂಪರ್ಕ ಸಂಖ್ಯೆ ಪ್ರದರ್ಶಿಸಬೇಕು
- ಮಾಹಿತಿಯು ಸ್ಥಳೀಯ ಭಾಷೆ ಮತ್ತು ಇಂಗ್ಲಿಷ್‌ನಲ್ಲಿ ಇರಬೇಕು
- ಕಾನೂನು ನೆರವು ಕುರಿತ ಮಾಹಿತಿ ಒಳಗೊಂಡ ಕಿರುಪುಸ್ತಕಗಳನ್ನು ಆಯಾ ರಾಜ್ಯಗಳ ಸ್ಥಳೀಯ ಭಾಷೆಗಳಲ್ಲಿ ಮುದ್ರಿಸಿ, ವ್ಯಾಪಕ ಪ್ರಚಾರ ಮಾಡಬೇಕು
- ಕಾನೂನು ಸೇವೆಗಳ ಪ್ರಾಧಿಕಾರಗಳಿಂದ ಸಿಗುವ ಪ್ರಯೋಜನ ಕುರಿತು ದೇಶದಾದ್ಯಂತ ಪ್ರಚಾರ ಕೈಗೊಳ್ಳಬೇಕು

ಸಾಮಾಜಿಕ ಕಾರ್ಯಕರ್ತ ಸುಹಾಸ್ ಚಕ್ಮಾ ಅವರು ಸಲ್ಲಿಸಿದ್ದ ಸಾರ್ವಜನಿಕ ಹಿತಾಸಕ್ತಿ ಅರ್ಜಿ (ಪಿಐಎಲ್) ವಿಚಾರಣೆ ವೇಳೆ, ನ್ಯಾಯಪೀಠ ಈ ಮಾತು ಹೇಳಿದೆ.

ವಿಚಾರಣಾ ಕೈದಿಗಳು ಅಥವಾ ಅಪರಾಧಿಗಳು ಇರಲಿ ಎಲ್ಲ ಕೈದಿಗಳಿಗೆ ಉಚಿತ ಕಾನೂನು ನೆರವು ಸಿಗುವಂತಾಗಬೇಕು ಎಂದ ನ್ಯಾಯಪೀಠ, ಈ ಕುರಿತು ಕಾನೂನು ಸೇವೆಗಳ ಪ್ರಾಧಿಕಾರಗಳ ಕಾಯ್ದೆ–1987ರಡಿ ಹಲವು ನಿರ್ದೇಶನಗಳನ್ನು ನೀಡಿದೆ.

ಐಎಸ್‌ಐ ಏಜೆಂಟರೊಂದಿಗೆ ಸಂಚು; ಗುಜರಾತ್ ವ್ಯಕ್ತಿಗೆ ಶಿಕ್ಷೆ

ಲಖನೌ(ಪಿಟಿಐ): ದೇಶದಲ್ಲಿ ಭಯೋತ್ಪಾದಕ ಕೃತ್ಯಗಳನ್ನು ನಡೆಸಲು ಪಾಕಿಸ್ತಾನ ಬೆಂಬಲಿತ ಐಎಸ್‌ಐ ಏಜೆಂಟರೊಂದಿಗೆ ಸಂಚು ರೂಪಿಸಿದ್ದಕ್ಕಾಗಿ ಗುಜರಾತ್‌ನ ವ್ಯಕ್ತಿಗೆ ಇಲ್ಲಿನ ವಿಶೇಷ ನ್ಯಾಯಾಲಯವು ಶಿಕ್ಷೆ ವಿಧಿಸಿದೆ.

ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) 2020ರಲ್ಲಿ ದಾಖಲಿಸಿದ್ದ ಪ್ರಕರಣದಲ್ಲಿ ಶಿಕ್ಷೆಗೊಳಗಾದ ಎರಡನೇ ಆರೋಪಿ ರಜಾಕ್ ಭಾಯಿ ಕುಂಬಾರ ಎಂದು ಎನ್‌ಐಎ ಬುಧವಾರ ಹೇಳಿದೆ.

ಭಾರತೀಯ ದಂಡ ಸಂಹಿತೆ ಮತ್ತು ಕಾನೂನುಬಾಹಿರ ಚಟುವಟಿಕೆಗಳ (ತಡೆಗಟ್ಟುವಿಕೆ) ಕಾಯ್ದೆಯ ವಿವಿಧ ನಿಬಂಧನೆಗಳಡಿ ಮಂಗಳವಾರ ಎನ್‌ಐಎ ವಿಶೇಷ ನ್ಯಾಯಾಲಯವು ರಜಕ್‌ಗೆ ಕಠಿಣ ಜೈಲು ಶಿಕ್ಷೆ ವಿಧಿಸಿದ್ದು, ಗರಿಷ್ಠ ಆರು ವರ್ಷ ಶಿಕ್ಷೆ ವಿಧಿಸಿದೆ ಎಂದು ಹೇಳಿಕೆಯಲ್ಲಿ ತಿಳಿಸಿದೆ.

ಪಾಕಿಸ್ತಾನದ ಐಎಸ್‌ಐ ಏಜೆಂಟರೊಂದಿಗೆ ಸಂಪರ್ಕ ಹೊಂದಿದ್ದಾರೆ ಎಂದು ಆರೋಪಿಸಿ ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ದಾಖಲಿಸಿದ್ದ ಪ್ರಕರಣದಲ್ಲಿ, ಉತ್ತರ ಪ್ರದೇಶದ ಚಾಂದೌಲಿಯ ಆರೋಪಿ ಎಂ.ಡಿ. ರಶೀದ್‌ಗೆ ಎನ್‌ಐಎ ವಿಶೇಷ ನ್ಯಾಯಾಲಯವು ಈ ಹಿಂದೆ ಶಿಕ್ಷೆ ವಿಧಿಸಿತ್ತು.

ರಶೀದ್ ಪಾಕಿಸ್ತಾನದ ಏಜೆಂಟರಿಗೆ ಭಾರತದ ಸೂಕ್ಷ್ಮ ಯುದ್ಧತಂತ್ರದ ಮತ್ತು ಆಯಕಟ್ಟಿನ ಪ್ರಮುಖ ಸ್ಥಳಗಳ ಛಾಯಾ ಚಿತ್ರಗಳನ್ನು ಒದಗಿಸುವುದರ ಜೊತೆಗೆ ಭಾರತೀಯ ಸೇನೆಯ ಚಲನವಲನಗಳ ಮಾಹಿತಿ ಒದಗಿಸಿರುವುದಾಗಿ ಎಟಿಎಸ್ ಆರೋಪಿಸಿತ್ತು. ರಕ್ಷಣಾ ಚಿಹ್ನೆ ಸೇರಿ ಈ ಛಾಯಾಚಿತ್ರಗಳನ್ನು ಅವರ ಮೊಬೈಲ್ ಫೋನ್ ಬಳಸಿ ಕ್ಲಿಕ್ ಮಾಡಲಾಗಿದೆ ಎಂದು ಎನ್‌ಐಎ ತಿಳಿಸಿದೆ.

ಇದಕ್ಕೆ ಸಂಬಂಧಿಸಿದಂತೆ ನಡೆದಿರುವ ಹಣಕಾಸಿನ ವ್ಯವಹಾರದಲ್ಲಿ ರಶೀದ್‌ಗೆ ಕುಂಬಾರ ಸಹಕಾರ ನೀಡಿದ್ದಾನೆ ಎಂದು ಹೇಳಿದೆ.

ಕೆನಡಾ: ಬೇಕರಿಯಲ್ಲಿ ಯುವತಿಯ ಶವ ಪತ್ತೆ

ಒಟ್ಟಾವಾ (ಪಿಟಿಐ): ಕೆನಡಾದ ಹ್ಯಾಲಿಫ್ಯಾಕ್ಸ್ ನಗರದ ಬೇಕರಿಯ 'ವಾಕ್‌–ಇನ್‌–ಓವನ್'ನಲ್ಲಿ 19 ವರ್ಷದ ಯುವತಿಯ ಮೃತದೇಹ ಪತ್ತೆಯಾಗಿದೆ.

ಮಮ್‌ಫೋರ್ಡ್ ರಸ್ತೆಯಲ್ಲಿರುವ ವಾಲ್‌ಮಾರ್ಟ್‌ನ ಬೇಕರಿಯೊಂದರಲ್ಲಿ ಶನಿವಾರ ರಾತ್ರಿ 9–30ರ ಸುಮಾರಿಗೆ ಶವ ಪತ್ತೆಯಾಗಿರುವ ಮಾಹಿತಿ ದೊರೆತಿದ್ದು, ಮೃತ ಯುವತಿಯನ್ನು ಇನ್ನೂ ಗುರುತಿಸಲು ಆಗಿಲ್ಲ. ಆಕೆ ಅದೇ ಬೇಕರಿಯಲ್ಲಿ ಕೆಲಸ ಮಾಡುತ್ತಿದ್ದಳು ಎಂದು ಹ್ಯಾಲಿಫ್ಯಾಕ್ಸ್‌ನ ಸ್ಥಳೀಯ ಪೊಲೀಸರು (ಎಚ್‌ಆರ್‌ಪಿ) ತಿಳಿಸಿದ್ದಾರೆ.

ಮೃತ ಯುವತಿ ತನ್ನ ಸಮುದಾಯಕ್ಕೆ ಸೇರಿದಾಕೆ ಎಂದು ಮೆರಿಟೈಮ್ ಸಿಖ್ ಸಮಾಜವು ತಿಳಿಸಿದೆ. ಆಕೆ ಇತ್ತೀಚೆಗೆ ಭಾರತದಿಂದ ಕೆನಡಾಕ್ಕೆ ತೆರಳಿದ್ದರು ಎಂದು 'ಗ್ಲೋಬ್ ಆ್ಯಂಡ್ ಮೇಲ್' ಪತ್ರಿಕೆ ತಿಳಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಪೊಲೀಸರು ಇತರ ಸಂಸ್ಥೆಗಳ ನೆರವಿನೊಂದಿಗೆ ತನಿಖೆ ನಡೆಸುತ್ತಿದ್ದು, ಬೇಕರಿಯನ್ನು ಶನಿವಾರ ರಾತ್ರಿಯಿಂದ ಮುಚ್ಚಲಾಗಿದೆ.

'ಸಾರ್ವಜನಿಕರು ಪೊಲೀಸರ ತನಿಖೆಗೆ ಸಹಕರಿಸಬೇಕು, ಘಟನೆಯ ಕುರಿತು ಸಾಮಾಜಿಕ ಮಾಧ್ಯಮಗಳಲ್ಲಿ ಊಹಾಪೋಹಗಳನ್ನು ಹಬ್ಬಿಸುವಂತಿಲ್ಲ' ಎಂದು ಎಚ್‌ಆರ್‌ಪಿ ಕಾನ್‌ಸ್ಟೆಬಲ್ ಮಾರ್ಟಿನ್ ಕ್ರೋಮ್‌ವೇಲ್ ತಿಳಿಸಿದರು.

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ತುಮಕೂರು.

ಪೋಷಕರ ಪತ್ತೆಗಾಗಿ ಪ್ರಕಟಣೆ

ಈ ಭಾವಚಿತ್ರದಲ್ಲಿರುವ ಸುಮಾರು ಒಂದು ವಾರದ ಹೆಣ್ಣು ಮಗುವು ದಿನಾಂಕ:19–10–2024ರಂದು ತುಮಕೂರು ತಾಲ್ಲೂಕಿನ ಚನಗಪ್ಪನಪಾಳ್ಯ ಬಾರೆಯ ರಸ್ತೆ ಪಕ್ಕದಲ್ಲಿ ಮಧ್ಯಾಹ್ನ 12–00 ಗಂಟೆಗೆ ಸಾರ್ವಜನಕರಿಗೆ ದೊರೆತಿದ್ದು, ಸದರಿ ಮಗುವು ಕಂದು ಬಣ್ಣ, ದುಂಡು ಮುಖವುಳ್ಳದ್ದಾಗಿದ್ದು, ಮಗುವನ್ನು ಮಕ್ಕಳ ಕಲ್ಯಾಣ ಸಮಿತಿ ವಶಕ್ಕೆ ಪಡೆಯಲಾಗಿರುತ್ತದೆ. ಸದರಿ ಮಗುವಿನ ಪೋಷಕರು ಯಾರೆಂದು ತಿಳಿದಿರುವುದಿಲ್ಲ. ಮಗುವಿನ ಪೋಷಕರು ಯಾರಾದರು ಇದ್ದಲ್ಲಿ ಕೂಡಲೇ ಮಕ್ಕಳ ಕಲ್ಯಾಣ ಸಮಿತಿ, ತುಮಕೂರು ಅಥವಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ಮೊದಲನೇ ಮಹಡಿ, ಮಹಾತ್ಮಾ ಗಾಂಧಿ ಕ್ರೀಡಾಂಗಣ, ಕುವೆಂಪುನಗರ, ತುಮಕೂರು ದೂರವಾಣಿ ಸಂಖ್ಯೆ: 0816–2956699 ಕಛೇರಿಯನ್ನು ಸಂಪರ್ಕಿಸಲು ಕೋರಿದೆ.

ಸ್ಥಳ: ತುಮಕೂರು
ದಿನಾಂಕ: 22–10–2024

ಸಹಿ/– ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿ, ಜಿಲ್ಲಾ ಮಕ್ಕಳ ರಕ್ಷಣಾ ಘಟಕ, ತುಮಕೂರು.

DIPR/TUM/385/KSMCA/2024-25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಚೇರಿ, ಗಾಂಧಿನಗರ ವಿಭಾಗ, 2ನೇ ಮಹಡಿ, ಬೃ.ಬೆಂ.ಮ.ಪಾಲಿಕೆ ಸಂಕೀರ್ಣ, ಧನ್ವಂತ್ರಿ ರಸ್ತೆ, ಬೆಂಗಳೂರು–560 009.

ಸಂಖ್ಯೆ:ಕಾಪಾಅ/ಗಾಂಧಿನಗರ/ಟೆಂಡರ್/ಇ–ಪ್ರೊಕ್/04/2024–25 ದಿನಾಂಕ:23.10.2024

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ) (ದ್ವಿಲಕೋಟೆ ಪದ್ಧತಿ)

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)

ಈ ಕೆಳಗಿನ ಸಹಿದಾರರು ಬೃ.ಬೆಂ.ಮ.ಪಾಲಿಕೆ ಅಥವಾ ತತ್ಸಮಾನವಾಗಿ ಸಿ.ಪಿ.ಡಬ್ಲ್ಯೂ.ಡಿ/ ಕೆ.ಪಿ.ಡಬ್ಲ್ಯೂ.ಡಿ/ರೈಲ್ವೇಸ್ /ಎಂ.ಇ.ಎಸ್ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರಿಂದ ಈ ಕೆಳಕಂಡ ಕಾಮಗಾರಿಗಳಿಗಾಗಿ ಐಟಂ ದರದ ಆಧಾರದಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ ಸಂ.	ಕಾಮಗಾರಿಗಳ ಹೆಸರು/ದ್ವಿಲಕೋಟೆ ಕಾಮಗಾರಿಗಳು
1	ವಾರ್ಡ್ ಸಂಖ್ಯೆ–123 ಗಾಂಧಿನಗರ ವಾರ್ಡ್‌ನ ಹಿಮಾಲಯ ಕೊಳಗೇರಿ ಲಕ್ಷ್ಮಣಪುರಿ, ಆರ್‌ಕೆ ಪುರಂ. ವಿವಿ ಗಿರಿ ಕಾಲೋನಿಯ 120.00 ಬ್ಲಾಕ್ ಸಂ.25.1, 25.2, 26, 28, 21, 20, 24, 22.1, 27, 41.1, 25ರಲ್ಲಿ ಸಿಸಿ ರಸ್ತೆಗಳನ್ನು ಒದಗಿಸುವುದು, ಡಾಂಬರೀಕರಣ, ಚರಂಡಿಗಳಿಗೆ ಸುಧಾರಣೆ ಮತ್ತು ಇತರೆ ಸಂಬಂಧಿತ 12 ಕಾಮಗಾರಿಗಳನ್ನು ಮಾಡುವುದು. ಅಂದಾಜು ಮೊತ್ತ: ₹.120.00 ಲಕ್ಷಗಳು ಇಎಂಡಿ ಮೊತ್ತ: ₹.1,20,000/–
2	ಕಾಟನ್‌ಪೇಟೆ ಉಪ ವಿಭಾಗದ ವಾರ್ಡ್ ಸಂಖ್ಯೆ–126, 127, 128ರಲ್ಲಿ ಬೃಬೆಂಮಪಾಲಿಕೆ ಶಾಲೆಗಳು, ವಾರ್ಡ್ ಕಚೇರಿ ಕಟ್ಟಡಗಳು, ಉದ್ಯಾನವನಗಳಿಗೆ ದುರಸ್ಥಿ ಮತ್ತು ಸುಧಾರಣೆಗಳು ಹಾಗೂ ರಸ್ತೆ ಚರಂಡಿಗಳನ್ನು ಉನ್ನತೀಕರಣ ಮಾಡುವುದು (ಪ್ಯಾಕೇಜ್–2) ಅಂದಾಜು ಮೊತ್ತ: ₹.900.00 ಲಕ್ಷಗಳು ಇಎಂಡಿ ಮೊತ್ತ: ₹.1,00,000 + (8,00,000 ಬ್ಯಾಂಕ್ ಗ್ಯಾರಂಟಿ)
3	ವಾರ್ಡ್ ಸಂಖ್ಯೆ–126 ಬಿನ್ನಿಪೇಟೆಯಲ್ಲಿ ಸಮುದಾಯ ಭವನ, ವ್ಯಾಯಾಮ ಶಾಲೆ ಕಟ್ಟಡಗಳ ನಿರ್ಮಾಣ ಹಾಗೂ ವ್ಯಾಯಾಮ ಶಾಲೆ ಉಪಕರಣಗಳನ್ನು ಒದಗಿಸುವುದು. (3ನೇ ಕರೆ) (ಪರಿಶಿಷ್ಟ ಜಾತಿಯವರಿಗೆ ಮೀಸಲು) ಅಂದಾಜು ಮೊತ್ತ: ₹.100.00 ಲಕ್ಷಗಳು ಇಎಂಡಿ ಮೊತ್ತ: ₹.1,00,000/–

ಟೆಂಡರ್ ವೇಳಾಪಟ್ಟಿ: (1) ಬಿಡ್ ಪೂರ್ವಭಾವಿ ಸಭೆಯನ್ನು ದಿನಾಂಕ 19.11.2024ರ ಮಧ್ಯಾಹ್ನ 12:30 ಗಂಟೆಗೆ ನಡೆಸಲಾಗುವುದು. (2) ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ಸಮಯ 22.11.2024ರ ಸಂಜೆ 4:00 ಗಂಟೆಯವರೆಗೆ. (3) ತಾಂತ್ರಿಕ ಬಿಡ್‌ಗಳನ್ನು ದಿನಾಂಕ 25.11.2024ರ ಮಧ್ಯಾಹ್ನ 12:30 ಗಂಟೆಗೆ ತೆರೆಯಲಾಗುವುದು. (4) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ (ಕೆಪಿಪಿಪಿ ಮೂಲಕ ತಿಳಿಸಲಾಗುವುದು)

ಸಹಿ/– ಕಾರ್ಯಪಾಲಕ ಅಭಿಯಂತರರು, ಗಾಂಧಿನಗರ ವಿಭಾಗ

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್ ಲಿಮಿಟೆಡ್

(ಕರ್ನಾಟಕ ಸರ್ಕಾರದ ಉದ್ಯಮ)
ಆಡಳಿತ ಕಛೇರಿ: ಟಿ.ಟಿ.ಎಂ.ಸಿ 'ಎ' ಬ್ಲಾಕ್, 5ನೇ ಮಹಡಿ, ಬಿ.ಎಂ.ಟಿ.ಸಿ ಕಟ್ಟಡ ಕೆ.ಹೆಚ್ ರಸ್ತೆ, ಶಾಂತಿನಗರ, ಬೆಂಗಳೂರು–560 027.
ದೂರವಾಣಿ: 080–22278813/14/15/16, ವೆಬ್‌ಸೈಟ್: www. ksmc.karnataka.gov.in

ಸಂ. KSMCL/CSR/EDU/148036/2024-25/2371 ದಿನಾಂಕ : 23.10.2024

ಇ–ಟೆಂಡರ್ ಆಹ್ವಾನ

ಕರ್ನಾಟಕ ಸ್ಟೇಟ್ ಮಿನರಲ್ಸ್ ಕಾರ್ಪೋರೇಷನ್ ಲಿಮಿಟೆಡ್ ಸಂಸ್ಥೆಯು 2024–25ನೇ ಸಾಲಿನ CSR ಯೋಜನೆಯಡಿಯಲ್ಲಿ ಕಂಪ್ಯೂಟರ್, UPS, ಬ್ಯಾಟರಿ, ಕಾಪಿಯರ್ ಯಂತ್ರ/ಕ್ಯಾಮೆರಾ ಖರೀದಿಸಿ School of Mines KGF ವಿತರಿಸಲು ಇ–ಟೆಂಡರ್ ಅನ್ನು ಆಹ್ವಾನಿಸಲಾಗಿದೆ.

ವೇಳಾಪಟ್ಟಿ

ಟೆಂಡರ್ ದಸ್ತಾವೇಜನ್ನು ಸಲ್ಲಿಸಲು ಕೊನೆಯ ದಿನಾಂಕ ಮತ್ತು ಸಮಯ	05.11.2024 ಸಂಜೆ 05.00 ಗಂಟೆಯವರೆಗೆ
ಟೆಂಡರ್ ಅನ್ನು ತೆರೆಯುವ ದಿನಾಂಕ ಮತ್ತು ಸಮಯ	07.11.2024 ಬೆಳಿಗ್ಗೆ 11.00 ಗಂಟೆಗೆ
ಇ.ಎಂ.ಡಿ ಮೊತ್ತ	ರೂ.50,000/–

ಟೆಂಡರ್ ದಾಖಲೆಗಳನ್ನು ಕರ್ನಾಟಕ ಸರ್ಕಾರದ KPPP ಯ ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರ್ಮ್ ವೆಬ್ ಸೈಟ್ https://kppp.karnataka.gov.in ನಲ್ಲಿ ಪಡೆಯಬಹುದಾಗಿದೆ ಹಾಗೂ ಯಾವುದೇ ಮಾಹಿತಿ ಮತ್ತು ಸಹಾಯಕ್ಕಾಗಿ ಸಂಪರ್ಕಿಸಬಹುದಾದ ಸಹಾಯವಾಣಿ ಸಂಖ್ಯೆ: 080–46010000/68948777

ಸಹಿ/– ಕಾರ್ಯನಿರ್ವಾಹಕ ನಿರ್ದೇಶಕರು (ಪ್ರ)

DIPR/CP/KAVITA/2720/2024-25

ಲೋಕೋಪಯೋಗಿ ಇಲಾಖೆ ವಿಭಾಗ ಮಧುಗಿರಿ

ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ

ಸಂಖ್ಯೆ:ಕಾಇಂ/ಲೋಇವಿ/ಮಧು:ಕಿಇಂ–2/ಟೆಂಡರ್/2024–25/1089 ದಿ: 22.10.2024

ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ:19/2024–25 (ಕೆಪಿಪಿ ಪೋರ್ಟಲ್‌ಮೂಲಕ) ದ್ವಿ ಲಕೋಟೆ ಟೆಂಡರ್

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಐಟಂವಾರು ಟೆಂಡರ್‌ಗಳನ್ನು KW–3 (ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್) ಹಾಗೂ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ನಿಯಮಗಳು KTPP Act 1999 and KTPP Rule 2000 ರಲ್ಲಿ ಅರ್ಹ (ಸಿವಿಲ್) ಗುತ್ತಿಗೆದಾರ ರುಗಳಿಂದ ಲೋಕೋಪಯೋಗಿ ಇಲಾಖೆ, ಶಿರಾ ಉಪ ವಿಭಾಗ ವ್ಯಾಪ್ತಿಯಲ್ಲಿನ ಕಾಮಗಾರಿಗೆ ಟೆಂಡರ್‌ನ್ನು KPPP Portal ಮೂಲಕ ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ https://kppp.karnataka.gov.in ಹಾಗೂ ಕೆಳ ಸಹಿದಾರರ ಕಛೇರಿ ಕೆಲಸ ವೇಳೆಯಲ್ಲಿ ಪಡೆಯಬಹುದಾಗಿದೆ. ದೂರವಾಣಿ ಸಂ: 08137– 283336. ಟೆಂಡರ್‌ಗಿಟ್ಟ ಸರಿಸುಮಾರು ಮೊಬಲಗು ರೂ 78.91 ಲಕ್ಷ ಗಳವರೆಗೆ. ಕೆಪಿಪಿ ಪೋರ್ಟಲ್ ಮೂಲಕ ಟೆಂಡರ್ ಸ್ವೀಕರಿಸಲು ಕೊನೆಯ ದಿನಾಂಕ : 29–10–2024 ಸಂಜೆ 4.00 ಗಂಟೆಯವರೆಗೆ. ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: 30–10–2024 ರ ಸಂಜೆ 4.15 ಗಂಟೆಯ ನಂತರ. ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ : 04–11–2024 ರ ಸಂಜೆ 4.15 ಗಂಟೆಯ ನಂತರ. ವಿಚಾರಣೆ : ಸ್ಪಷ್ಟೀಕರಣಕ್ಕೆ ಕೊನೆಯ ದಿನಾಂಕ: 25–10–2024 ಸಂಜೆ 4.00 ಗಂಟೆಗೆ ವರೆಗೆ.

ಸಹಿ/– ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ವಿಭಾಗ, ಮಧುಗಿರಿ.

DIPR/TUM/387/KSMCA/2024-25

ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾಲಯ ಕಾರ್ಯಾಲಯ, ಜ್ಞಾನಸಹ್ಯಾದ್ರಿ, ಶಂಕರಘಟ್ಟ– 577 451 ಶಿವಮೊಗ್ಗ ಜಿಲ್ಲೆ, ಕರ್ನಾಟಕ.

ಸಂಖ್ಯೆ:ಕುವಿ/ಯುಸಿಸಿಎಫ್&ಐಟಿ/65/2024-25 ದಿನಾಂಕ: 18.10.2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕುವೆಂಪು ವಿಶ್ವವಿದ್ಯಾಲಯ ಜ್ಞಾನಸಹ್ಯಾದ್ರಿ ಆವರಣದಲ್ಲಿ ಕ್ಯಾಂಪಸ್ ನೆಟ್‌ವರ್ಕ್ ಮತ್ತು ಸಿಸಿಟಿವಿ ಪರಿಕರಗಳನ್ನು ಉನ್ನತೀಕರಿಸುವ ಸಲುವಾಗಿ ಸರಬರಾಜಿಗಾಗಿ KTPP ಕಾಯ್ದೆ 1999 ಅನುಸಾರ ಅಧಿಕೃತ ಸರಬರಾಜುದಾರರಿಂದ ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಿದೆ. ಅರ್ಹ ಬಿಡ್‌ದಾರರುಗಳು ನಿಗಧಿತ ವೇಳಾಪಟ್ಟಿಯಂತೆ ಬಿಡ್‌ನಲ್ಲಿ ಭಾಗವಹಿಸಬಹುದು ಮತ್ತು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ https://kppp.karnataka.gov.in ಮೂಲಕ ಬಿಡ್‌ಗಳನ್ನು ಸಲ್ಲಿಸಬಹುದು. ಬಿಡ್‌ನ ಅಂದಾಜು ಮೊತ್ತ ರೂ.30,00,000=00 ಹಾಗೂ ಭದ್ರತಾ ಠೇವಣಿ ಮೊತ್ತ ರೂ 60,000=00 ಗಳಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ನಿರ್ದೇಶಕರು, ಯುಸಿಸಿಎಫ್&ಐಟಿ ಘಟಕ, ಕುವೆಂಪು ವಿಶ್ವವಿದ್ಯಾಲಯ. ದೂರವಾಣಿ ಸಂಖ್ಯೆ:9448255683 ಇವರನ್ನು ಸಂಪರ್ಕಿಸಬಹುದು.

ವಾ.ಸಾ.ಸಂ.ಇ./ಶಿ/ನಂ.96-10/ಝೇಂಕಾರ್/2024-25 ಸಹಿ/– ಕುಲಸಚಿವರು

ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣ

1ನೇ ಗೇಟ್, 2ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು – 560 001.

ಸಂ: KAT/ACT/ACW1/1/2023-ACC(E-59886) ದಿನಾಂಕ: 23.10.2024

ಇ–ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ)

ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣ, ಬೆಂಗಳೂರು ಕಛೇರಿಯ ಅಧಿಕೃತ ಕೆಲಸಗಳಿಗಾಗಿ ಹವಾನಿಯಂತ್ರಿತ ವಾಹನಗಳನ್ನು ಬಾಹ್ಯ ಮೂಲದಿಂದ ಪಡೆಯಲು ಒಂದು ವರ್ಷದ ಅವಧಿಗಾಗಿ ಗುತ್ತಿಗೆ ಆಧಾರದ ಮೇಲೆ ವಾಹನಗಳನ್ನು ಒದಗಿಸಲು ಆಸಕ್ತಿಯುಳ್ಳ ಸ್ವಂತ ವಾಹನಗಳನ್ನು ಹೊಂದಿರುವ ಸರಬರಾಜುದಾರರ / ಟ್ರಾವೆಲ್ಸ್ ಏಜೆನ್ಸಿಗಳಿಂದ ದ್ವಿ–ಲಕೋಟೆ ಪದ್ಧತಿಯಲ್ಲಿ ಇ–ಟೆಂಡರ್ ಆಹ್ವಾನಿಸಲಾಗಿದೆ ಇ–ಟೆಂಡರ್ ಪ್ರಕಟಣೆಯ ವಿವರಗಳು ಕೆಳಕಂಡಂತಿದೆ.

E-Procurement Tender Information

1	ಟೆಂಡರ್‌ನ್ನು ಇ–ಸಂಗ್ರಹಣೆಯಲ್ಲಿ ಅಪ್ ಲೋಡ್ ಮಾಡುವ ದಿನಾಂಕ	ದಿನಾಂಕ 23.10.2024 ಮದ್ಯಾಹ್ನ 3.00 ಗಂಟೆಗೆ
2	ಪ್ರೀ ಬಿಡ್ ಮೀಟಿಂಗ್ ನಡೆಯುವ ದಿನಾಂಕ	ದಿನಾಂಕ 30.10.2024 ಮದ್ಯಾಹ್ನ 3.00 ಗಂಟೆಗೆ
3	ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ	ದಿನಾಂಕ 08.11.2024 ಸಂಜೆ 5.30 ರವರೆಗೆ
4	ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ	ದಿನಾಂಕ 14.11.2024 ಮದ್ಯಾಹ್ನ 4.00 ಗಂಟೆಗೆ
5	ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ	ದಿನಾಂಕ 19.11.2024 ಮದ್ಯಾಹ್ನ 3.00 ಗಂಟೆಗೆ
6	ಟೆಂಡರ್ ತೆರೆಯುವ ಸ್ಥಳ	ನಿಬಂಧಕರು, ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣ, 1ನೇ ಗೇಟ್, 2ನೇ ಮಹಡಿ, ಬಹುಮಹಡಿಗಳ ಕಟ್ಟಡ, ಡಾ. ಅಂಬೇಡ್ಕರ್ ವೀದಿ, ಬೆಂಗಳೂರು – 560001

ಹೆಚ್ಚಿನ ವಿವರಗಳು ಟೆಂಡರ್ ದಸ್ತಾವೇಜುಗಳಲ್ಲಿ ಲಭ್ಯವಿದ್ದು, https://eproc.karnataka.gov.in ವೆಬ್‌ಸೈಟ್‌ನಲ್ಲಿ ಪಡೆದು ಪರಿಶೀಲಿಸುವುದು ಹಾಗೂ ಹೆಚ್ಚಿನ ಮಾಹಿತಿಗಾಗಿ ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣ, ಬೆಂಗಳೂರು ಇಲ್ಲಿ ಕಛೇರಿ ವೇಳೆಯಲ್ಲಿ ಸಂಪರ್ಕಿಸುವುದು.

ಸಹಿ/– ನಿಬಂಧಕರು ಕರ್ನಾಟಕ ಮೇಲ್ಮನವಿ ನ್ಯಾಯಾಧಿಕರಣ ಬೆಂಗಳೂರು

ವಾಸಸಂಇ/ಸಿಪಿ/ಎಎಎ/2698/2024–25

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕಹಾಮ ಸಂಕೀರ್ಣ, ಡಾ. ಎಂ.ಹೆಚ್. ಮರೀಗೌಡ ರಸ್ತೆ ಬೆಂಗಳೂರು–560 029
ಫೋನ್: 26096832/26096910 ಇ–ಮೇಲ್: purchase@kmf.coop

ಅಧಿಸೂಚನೆ ಸಂಖ್ಯೆ: ಕಹಾಮ/ಖರೀದಿ/ಟೆಂಡರ್–703/2024–25 ದಿನಾಂಕ: 23.10.2024

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮುಖಾಂತರ)

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಮದರ್ ಡೇರಿ, ಬೆಂಗಳೂರು ಘಟಕದಲ್ಲಿ ಹಾಲು ರವಾನೆ ಕಾರ್ಯಕ್ಕಾಗಿ ಅವಶ್ಯವಿರುವ ಭದ್ರತಾ ರಕ್ಷಕರನ್ನು ಗುತ್ತಿಗೆ ಆಧಾರದಲ್ಲಿ ಎರಡು ವರ್ಷದ ಅವಧಿಗೆ ಒದಗಿಸಲು ಈ ಕೆಳಕಂಡ ವಿವರದಂತೆ ಆಸಕ್ತಿಯುಳ್ಳ ಸಂಸ್ಥೆದಾರರಿಂದ ಟೆಂಡರ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಆಹ್ವಾನಿಸಲಾಗಿದೆ. ಆಸಕ್ತಿಯುಳ್ಳ ಸಂಸ್ಥೆದಾರರು ವಿವರಗಳನ್ನು ಅಂತರ್‌ಜಾಲದ ಮೂಲಕ ಇ–ಪ್ರೊಕ್ಯೂರ್‌ಮೆಂಟ್ ವೆಬ್‌ಸೈಟ್ ವಿಳಾಸ http://kppp.karnataka.gov.in ಗೆ ಭೇಟಿ ನೀಡಿ ಪಡೆಯಬಹುದಾಗಿದೆ.

ಕ್ರ. ಸಂ.	ಘಟಕದ ಹೆಸರು	ಪರಿಮಾಣ	ಇ ಎಂ ಡಿ (ರೂ.)
01	ಮದರ್ ಡೇರಿ ಘಟಕದಲ್ಲಿ ಹಾಲು ಮತ್ತು ಹಾಲಿನ ಉತ್ಪನ್ನಗಳ ರವಾನೆಗೆ ಭದ್ರತಾ ರಕ್ಷಕರ ಸೇವೆ	ಟೆಂಡರ್ ದಾಖಲಾತಿಯಲ್ಲಿ ನಮೂದಿಸಿದೆ.	3,15,000/-

ಟೆಂಡರ್ ಪ್ರಾರಂಭವಾಗುವ ದಿನಾಂಕ : From 23.10.2024. ಟೆಂಡರ್ ಪೂರ್ವಭಾವಿ ಸಭೆ ದಿನಾಂಕ : 30.10.2024 at 11.00 AM. ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : on or before 06.11.2024 up to 5.00 PM. ತಾಂತ್ರಿಕ ಟೆಂಡರ್ ತೆರೆಯುವ ದಿನಾಂಕ : on 08.11.2024 at 11.00 AM. ವಾಣಿಜ್ಯ ಟೆಂಡರ್ ತೆರೆಯುವ ದಿನಾಂಕ : ತಾಂತ್ರಿಕ ದಾಖಲಾತಿಗಳ ಪರಿಶೀಲನೆಯ ನಂತರ. ಇನ್ನಿತರ ವಿವರಗಳನ್ನು ಟೆಂಡರ್ ದಾಖಲಾತಿಯಲ್ಲಿ ನೋಡಬಹುದು.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ ಸಹಿ/– ನಿರ್ದೇಶಕರು (ಖರೀದಿ)

‘ಡಾನಾ’ಗೆ ಒಡಿಶಾ, ಪಶ್ಚಿಮ ಬಂಗಾಳ ಸಜ್ಜು

ಪ್ರಜಾವಾಣಿ ವಾರ್ತೆ/ಪಿಟಿಐ

ಭುವನೇಶ್ವರ/ಕೋಲ್ಕತ್ತ: ಬಂಗಾಳ ಕೊಲ್ಲಿಯಲ್ಲಿ ಚಂಡಮಾರುತ ರೂಪುಗೊಂಡಿದೆ. ಈ ಚಂಡಮಾರುತಕ್ಕೆ ‘ಡಾನಾ’ ಎಂದು ಹೆಸರಿಡಲಾಗಿದೆ. ಬುಧವಾರದಿಂದಲೇ ಚಂಡಮಾರುತದ ಪ್ರಭಾವ ಆರಂಭವಾಗಿದ್ದು, ಒಡಿಶಾದ ಕರಾವಳಿ ಪ್ರದೇಶಗಳಲ್ಲಿ ಮಳೆಯಾಗುತ್ತಿದೆ. ಒಡಿಶಾ ಹಾಗೂ ಪಶ್ಚಿಮ ಬಂಗಾಳದ ಮೇಲೆ ಶುಕ್ರವಾರ ಬೆಳಿಗ್ಗೆ ‘ಡಾನಾ’ ಅಪ್ಪಳಿಸಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಒಡಿಶಾದ ಕರಾವಳಿ ಪ್ರದೇಶದಲ್ಲಿರುವ ‘ಭಿತರ್‌ಕನಿಕಾ ರಾಷ್ಟ್ರೀಯ ಉದ್ಯಾನ’ ಹಾಗೂ ‘ಧಮರಾ ಬಂದರು’ ಮೇಲೆ ‘ಡಾನಾ’ ಅಪ್ಪಳಿಸಲಿದೆ. ‘ಈ ಹೊತ್ತಿನಲ್ಲಿ ಸಮುದ್ರದ ಅಲೆಗಳು 2 ಮೀಟರ್‌ನಷ್ಟು ಎತ್ತರಕ್ಕೆ ಏಳಲಿವೆ. ಈ ವೇಳೆ ಗಾಳಿಯ ವೇಗವು ತಾಸಿಗೆ 120 ಕಿ.ಮೀನಷ್ಟಿರಲಿದೆ’ ಎಂದು ಭುವನೇಶ್ವರದ ಪ್ರಾದೇಶಿಕ ಹವಾಮಾನ ಇಲಾಖೆಯ ವಿಜ್ಞಾನಿ ಉಮಾಶಂಕರ್ ದಾಸ್ ಅಂದಾಜಿಸಿದ್ದಾರೆ.

‘ಚಂಡಮಾರುತಕ್ಕೆ ‘ಡಾನಾ’ ಹೆಸರನ್ನು ಕತಾರ್ ನೀಡಿದೆ ಎಂಬುದಾಗಿ ಅಂತರರಾಷ್ಟ್ರೀಯ ಹವಾಮಾನ ಸಂಸ್ಥೆ ಹೇಳಿದೆ’ ಎಂದು ಎನ್‌ಡಿಟಿವಿ ವರದಿ ಮಾಡಿದೆ. ಡಾನಾ ಎನ್ನುವುದು ಅರೇಬಿಕ್ ಪದವಾಗಿದ್ದು, ಇದರ ಅರ್ಥ ‘ಔದಾರ್ಯ’ ಎಂದಾಗಿದೆ.

ಒಡಿಶಾ: ಮುನ್ನೆಚ್ಚರಿಕಾ ಕ್ರಮಗಳು



‘ಗುರುವಾರ ಹಾಗೂ ಶುಕ್ರವಾರ (ಅ.24 ಮತ್ತು 25) ಒಡಿಶಾದ ಕೆಲವು ಜಿಲ್ಲೆಗಳಲ್ಲಿ ಸುಮಾರು 21 ಸೆಂ.ಮೀನಷ್ಟು ಮಳೆ ಸುರಿಯಬಹುದು’ ಎಂದು ಇಲಾಖೆ ಮುನ್ಸೂಚನೆ ನೀಡಿದೆ. ರಾಜ್ಯದ ಸುಮಾರು ಅರ್ಧದಷ್ಟು ಜನರು ‘ಡಾನಾ’ದ ಪರಿಣಾಮವನ್ನು ಎದುರಿಸಲಿದ್ದಾರೆ. ಈ ನಿಟ್ಟಿನಲ್ಲಿ ಒಡಿಶಾ ಸರ್ಕಾರವು ಹಲವು ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಂಡಿದ್ದು, ಜನರ ಸ್ಥಳಾಂತರ ಕಾರ್ಯವನ್ನು ಆರಂಭಿಸಿದೆ.

- ರಾಜ್ಯದ 14 ಜಿಲ್ಲೆಗಳಲ್ಲಿ ಸುಮಾರು 288 ರಕ್ಷಣಾ ತಂಡಗಳ ನಿಯೋಜನೆ
- ರಾಷ್ಟ್ರೀಯ ವಿಪತ್ತು ನಿರ್ವಹಣಾ ಪಡೆಯ (ಎನ್‌ಡಿಆರ್‌ಎಫ್) 19, ರಾಜ್ಯ ವಿಪತ್ತು ನಿರ್ವಹಣಾ ಪಡೆಯ 51, ಅಗ್ನಿ ಶಾಮಕ ಸೇವಾ ಸಿಬ್ಬಂದಿಯ 178 ಸೇರಿ ವಿವಿಧ 40 ತಂಡಗಳ ನಿಯೋಜನೆ
- ವಾಯುಸೇನೆಯ ವಿಮಾನಗಳ ಮೂಲಕ ಭುವನೇಶ್ವರ ತಲುಪಿದ ಪರಿಹಾರ ಸಾಮಗ್ರಿ
- ಮಂಗಳವಾರ ಸಂಜೆಯ ವೇಳೆಗೆ ದಡಕ್ಕೆ ಮರಳಿದ ಎಲ್ಲ ಮೀನುಗಾರರು. 23ರಿಂದ 25ರವರೆಗೆ ಸಮುದ್ರಕ್ಕೆ ಇಳಿಯದಂತೆ ಮೀನುಗಾರರಿಗೆ ಸೂಚನೆ
- ನಿರಾಶ್ರಿತ ಶಿಬಿರಗಳಲ್ಲಿ ಆಹಾರ, ಕುಡಿಯುವ ನೀರು, ಶಿಶು ಆಹಾರದ ವ್ಯವಸ್ಥೆ. ಜೊತೆಗೆ, ಮಹಿಳಾ ಪೊಲೀಸ್ ನಿಯೋಜನೆ

ಒಡಿಶಾ

3,000 ಚಂಡಮಾರುತದಿಂದ ಪರಿಣಾಮ ಎದುರಿಸಲಿರುವ ಗ್ರಾಮಗಳ ಸಂಖ್ಯೆ

14 ಚಂಡಮಾರುತದಿಂದ ಬಾಧಿತವಾಗುವ ಜಿಲ್ಲೆಗಳ ಸಂಖ್ಯೆ

10.6 ಲಕ್ಷ ಸ್ಥಳಾಂತರವಾಗಲಿರುವ ಜನರ ಸಂಖ್ಯೆ

6,000 ನಿರಾಶ್ರಿತ ಶಿಬಿರಗಳು

‘ಆಡಳಿತಕ್ಕೆ ಸಂಪೂರ್ಣ ಸಹಕಾರ ನೀಡಿ’

‘ಡಾನಾ’ ಕುರಿತು ಭಯಭೀತರಾಗಬೇಡಿ. ಒಡಿಶಾವು ಇಂಥ ಹಲವು ಚಂಡಮಾರುತಗಳನ್ನು ಈ ಹಿಂದೆ ಎದುರಿಸಿದೆ. ಈ ಚಂಡಮಾರುತಗಳನ್ನು ಜನರು ಧೈರ್ಯದಿಂದ ಎದುರಿಸಿದ್ದಾರೆ. ಈ ಬಾರಿಯೂ ನಾವೆಲ್ಲರೂ ಎಲ್ಲ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳೋಣ. ನಮ್ಮನ್ನು ನಾವು ಸುರಕ್ಷಿತವಾಗಿ ಇರಿಸಿಕೊಳ್ಳುವುದರ ಜೊತೆಯಲ್ಲಿ ನಮ್ಮ ಪ್ರೀತಿಪಾತ್ರರ ರಕ್ಷಣೆಯನ್ನೂ ಮಾಡೋಣ. ಪರಿಹಾರ ಕಾರ್ಯಗಳಲ್ಲಿ ನಿರತವಾಗಿರುವ ಆಡಳಿತಕ್ಕೆ ಸಂಪೂರ್ಣ ಸಹಕಾರ ನೀಡಿ. ಹೆಚ್ಚಿನ ಅವಘಡಗಳಾಗದಂತೆ, ಹಾನಿಯಾಗದಂತೆ ನಾವೆಲ್ಲರೂ ಒಟ್ಟುಗೂಡಿ ‘ಡಾನಾ’ವನ್ನು ಎದುರಿಸೋಣ. ನಾವೆಲ್ಲರೂ ಹೀಗೆ ಒಗ್ಗೂಡಿ ಕೆಲಸ ಮಾಡಿದರೆ, ಇದು ಸಾಧ್ಯವಾಗಲಿದೆ ಎಂಬ ನಂಬಿಕೆ ನನಗಿದೆ.

ನವೀನ್ ಪಟ್ನಾಯಕ್, ಒಡಿಶಾ ವಿಧಾನಸಭೆ ವಿರೋಧ ಪಕ್ಷದ ನಾಯಕ

‘ಕಾಂಡ್ಲಾ ಕಾಡು: ತಗ್ಗಲಿದೆ ಪರಿಣಾಮ’

‘ಡಾನಾ’ವು ಒಡಿಶಾದ ‘ಭಿತರ್‌ಕನಿಕಾ ರಾಷ್ಟ್ರೀಯ ಉದ್ಯಾನ’ಕ್ಕೆ ಅಪ್ಪಳಿಸಲಿದೆ ಎಂದು ಹವಾಮಾನ ಇಲಾಖೆ ಹೇಳಿದೆ. ಆದರೆ, ಈ ಉದ್ಯಾನದಲ್ಲಿ ಇರುವ ಕಾಂಡ್ಲಾ ಕಾಡುಗಳು ರಾಜ್ಯದ ಮೇಲಾಗುವ ಚಂಡಮಾರುತದ ಪರಿಣಾಮವನ್ನು ತಗ್ಗಿಸಲಿವೆ’ ಎಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಸುಸಂತಾ ನಂದ ಹೇಳಿದರು.

‘ಉದ್ಯಾನದ 200 ಚದರ ಕಿ.ಮೀ ವ್ಯಾಪ್ತಿಯಲ್ಲಿ ಈ ಕಾಡು ಇದೆ. ಇವು ಸಮುದ್ರದ ಉಬ್ಬರವಿಳಿತ ಹಾಗೂ ಗಾಳಿಯ ವೇಗವನ್ನು ತಗ್ಗಿಸಲಿವೆ’ ಎಂದರು. ‘ಈ ಉದ್ಯಾನದಲ್ಲಿರುವ ಪ್ರಾಣಿಗಳು ಚಂಡಮಾರುತಗಳಿಗೆ ಒಗ್ಗಿಕೊಂಡಿವೆ. ಜಿಂಕೆಗಳು ಕಾಡಿನ ಒಳಗೆ ಸುರಕ್ಷಿತ ಪ್ರದೇಶಗಳಿಗೆ ತೆರಳಲಿವೆ ಹಾಗೂ ಹಕ್ಕಿಗಳು ಬೇರೆಡೆ ಹೋಗಲಿವೆ. ಇಲ್ಲಿರುವ ಮೊಸಳೆಗಳು ತುಸು ಪರಿಣಾಮಗಳನ್ನು ಎದುರಿಸಲಿವೆ. ಸಮುದ್ರದ ಉಬ್ಬರವು ಏರಿಕೆಯಾದರೆ, ಇವುಗಳನ್ನು ಬೇರೆ ವಾಸಸ್ಥಾನಗಳಿಗೆ ಸ್ಥಳಾಂತರಿಸಲಾಗುವುದು’ ಎಂದರು.

ಪಶ್ಚಿಮ ಬಂಗಾಳ 150 ರೈಲುಗಳು ರದ್ದು

ಚಂಡಮಾರುತವು ಪಶ್ಚಿಮ ಬಂಗಾಳಕ್ಕೂ ಅಪ್ಪಳಿಸಲಿದ್ದು, ರಾಜ್ಯದ ದಕ್ಷಿಣ ಭಾಗದ ಜಿಲ್ಲೆಗಳಲ್ಲಿ ಭಾರಿ ಮಳೆಯಾಗಲಿದೆ. ‘ಡಾನಾ’ ಕಾರಣದಿಂದಾಗಿ ಆಗ್ನೇಯ ರೈಲ್ವೆ ವ್ಯಾಪ್ತಿಯಲ್ಲಿ ಸಂಚರಿಸುವ ಸುಮಾರು 150 ಎಕ್ಸ್‌ಪ್ರೆಸ್ ಹಾಗೂ ಪ್ರಯಾಣಿಕ ರೈಲುಗಳನ್ನು ರದ್ದು ಮಾಡಲಾಗಿದೆ.

‘ಅ.23ರಿಂದ ಅ.25ರವರೆಗೆ ಹೊರಡಬೇಕಿದ್ದ ಎಲ್ಲ ರೈಲುಗಳನ್ನು ರದ್ದು ಮಾಡಲಾಗಿದೆ. ಪರಿಸ್ಥಿತಿ ಹದಗೆಟ್ಟರೆ, ಇನ್ನಷ್ಟು ರೈಲುಗಳ ಸಂಚಾರವನ್ನು ರದ್ದು ಮಾಡಲಾಗುವುದು’ ಎಂದು ಆಗ್ನೇಯ ರೈಲ್ವೆ ಬುಧವಾರ ತಿಳಿಸಿದೆ. ಈ ರೈಲ್ವೆ ವ್ಯಾಪ್ತಿಯು ಪಶ್ಚಿಮ ಬಂಗಾಳ, ಒಡಿಶಾ ಹಾಗೂ ಜಾರ್ಖಂಡ್‌ಗೆ ವಿಸ್ತರಿಸಿದೆ. ಈ ರೈಲ್ವೆಯ ಕೇಂದ್ರ ಕಚೇರಿಯು ಕೋಲ್ಕತ್ತದಲ್ಲಿದೆ.

ರಾಜ್ಯದಲ್ಲಿರುವ ಪೂರ್ವ ರೈಲ್ವೆಯ ಸಿಯಲ್‌ದಹ್ ವಿಭಾಗದಿಂದ ಹೊರಡುವ ಎಲ್ಲ ರೈಲುಗಳನ್ನೂ ಇಲಾಖೆ ರದ್ದು ಮಾಡಿದೆ. ಅ.24 ಹಾಗೂ 25ರಂದು ಯಾವುದೇ ರೈಲು ಸಂಚರಿಸುವುದಿಲ್ಲ. ಈ ವಿಭಾಗದ ಅಡಿಯಲ್ಲಿ ರಾಜ್ಯದ ಒಟ್ಟು 6 ಜಿಲ್ಲೆಗಳು ಬರಲಿವೆ. ಈ ಜಿಲ್ಲೆಗಳು ‘ಡಾನಾ’ದಿಂದ ತೀವ್ರ ಪರಿಣಾಮ ಎದುರಿಸಲಿವೆ.

‘ಗುರುವಾರ ಮತ್ತು ಶುಕ್ರವಾರ ಕೋಲ್ಕತ್ತದಿಂದ ಹೊರಡುವ ಎಲ್ಲ ವಿಮಾನಗಳ ಸಂಚಾರವನ್ನು ರದ್ದು ಮಾಡಲಾಗಿದೆ’ ಎಂದು ಭಾರತೀಯ ವಿಮಾನಯಾನ ಪ್ರಾಧಿಕಾರವು ತಿಳಿಸಿದೆ.

‘ಅ.23ರಿಂದ 26ರವರೆಗೆ ಶಾಲಾ–ಕಾಲೇಜುಗಳಿಗೆ ರಜೆ ಘೋಷಣೆ ಮಾಡಲಾಗಿದೆ. ಚಂಡಮಾರುತದ ಪರಿಣಾಮ ಎದುರಿಸುವ ಜಿಲ್ಲೆಗಳಲ್ಲಿ ವಾಸಿಸುವ ತಗ್ಗು ಪ್ರದೇಶಗಳ ಜನರನ್ನು ಸ್ಥಳಾಂತರಿಸುವ ಕಾರ್ಯ ನಡೆಯುತ್ತಿದೆ. ಈ ಪ್ರದೇಶಗಳಲ್ಲಿ ಎನ್‌ಡಿಆರ್‌ಎಫ್ ಹಾಗೂ ಎಸ್‌ಡಿಆರ್‌ಎಫ್ ತಂಡಗಳನ್ನು ನಿಯೋಜಿಸಲಾಗಿದೆ. ಜಿಲ್ಲೆಗಳಲ್ಲಿ ನಿಯಂತ್ರಣ ಕೊಠಡಿಗಳನ್ನು ತೆರೆಯಲಾಗಿದ್ದು, 24/7 ಕಾರ್ಯನಿರ್ವಹಿಸಲಿವೆ’ ಎಂದು ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಮಾಹಿತಿ ನೀಡಿದರು.

ಸಂಕ್ಷಿಪ್ತ ಸುದ್ದಿ

ಬಾಬಾ ಸಿದ್ದೀಕಿ ಹತ್ಯೆ ಮತ್ತೆ ನಾಲ್ವರ ಬಂಧನ

ಮುಂಬೈ (ಪಿಟಿಐ): ಎನ್‌ಸಿಪಿ ಮುಖಂಡ ಬಾಬಾ ಸಿದ್ದೀಕಿ ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಮತ್ತೆ ನಾಲ್ವರು ಆರೋಪಿಗಳನ್ನು ಬಂಧಿಸಿದ್ದಾಗಿ ಮುಂಬೈ ಪೊಲೀಸರು ಬುಧವಾರ ಹೇಳಿದ್ದಾರೆ.

ಪ್ರಮುಖ ಆರೋಪಿ ಅಮಿತ್ ಹಿಸಾಮ್‌ಸಿಂಗ್ ಕುಮಾರ್ (29) ಎಂಬಾತನನ್ನು ಹರಿಯಾಣದಲ್ಲಿ ಮಂಗಳವಾರ ಸಂಜೆ ಬಂಧಿಸಲಾಗಿದೆ.

ರೂಪೇಶ್ ಮೊಹೋಲ್(22), ಕರಣ್ ರಾಹುಲ್ ಸಾಳ್ವೆ(19) ಹಾಗೂ ಶಿವಂ ಅರವಿಂದ ಕೋಹಾಡ್(20) ಎಂಬುವವರನ್ನು ಪುಣೆಯಲ್ಲಿ ಬುಧವಾರ ಬಂಧಿಸಲಾಗಿದ್ದು, ಸಿದ್ದೀಕಿ ಕೊಲೆ ಪ್ರಕರಣದಲ್ಲಿ ಬಂಧಿತರ ಸಂಖ್ಯೆ 14ಕ್ಕೆ ಏರಿಕೆದಂತಾಗಿದೆ.

ಪೊಲೀಸ್ ಕಸ್ಟಡಿಯಲ್ಲಿರುವ ಶೂಟರ್ ಗುರ್ಮೇಲ್ ಸಿಂಗ್ ಹಾಗೂ ನಾಪತ್ತೆಯಾಗಿರುವ ಪ್ರಕರಣದ ಸೂತ್ರಧಾರಿ ಮೊಹಮ್ಮದ್ ಜೀಶನ್ ಅಖ್ತರ್ ನಡುವೆ ಅಮಿತ್ ಪ್ರಮುಖ ಕೊಂಡಿಯಾಗಿದ್ದ ಎಂದು ಪೊಲೀಸರು ತಿಳಿಸಿದ್ದಾರೆ.

ಪೂರ್ವ ಇಂಫಾಲ್ ಆರು ಉಗ್ರರ ಸೆರೆ

ಇಂಫಾಲ್ (ಪಿಟಿಐ): ಪೂರ್ವ ಇಂಫಾಲ್ ಜಿಲ್ಲೆಯಲ್ಲಿ ಪೀಪಲ್ಸ್ ವಾರ್ ಗ್ರೂಪ್‌ನ ಆರು ಉಗ್ರರನ್ನು ಮಣಿಪುರ ಪೊಲೀಸರು ಬುಧವಾರ ಬಂಧಿಸಿದ್ದಾರೆ.

ಅಕ್ರಮ ಶಸ್ತ್ರಾಸ್ತ್ರ ವಹಿವಾಟು ಸೇರಿದಂತೆ, ಖಾಸಗಿ ಸಂಸ್ಥೆಗಳು ಹಾಗೂ ಸರ್ಕಾರಿ ಕಚೇರಿಗಳಲ್ಲಿ ಇವರು ಸುಲಿಗೆ ಮಾಡುತ್ತಿದ್ದರು ಎಂದು ಮಾಹಿತಿ ನೀಡಿದ್ದಾರೆ.

ಬಂಧಿತರಿಂದ ನಾಲ್ಕು ವಾಹನ, ಎರಡು ಬೈಕ್, ಆರು ಮೊಬೈಲ್ ಫೋನ್ ಸೇರಿದಂತೆ ₹3,88,950 ನಗದನ್ನು ವಶಪಡಿಸಿಕೊಂಡಿದ್ದಾರೆ.

ಶಸ್ತ್ರಾಸ್ತ್ರ ವಶ: ಭದ್ರತಾ ಪಡೆಗಳು ಚುರಾಚಾಂದಪುರ ಜಿಲ್ಲೆಯಲ್ಲಿ ನಡೆಸಿದ ಪ್ರತ್ಯೇಕ ಕಾರ್ಯಾಚರಣೆಯಲ್ಲಿ ಬಂದೂಕುಗಳು, ಎಲೆಕ್ಟ್ರಾನಿಕ್ ಸ್ಫೋಟಕ ಮತ್ತು ಕಾಡತೂಸುಗಳ ಜೊತೆಗೆ 9 ಎಂಎಂ ಪಿಸ್ತೂಲ್ ಹಾಗೂ ಮೂರು ಗ್ರೆನೇಡ್ (ಕೈ ಬಾಂಬ್) ಪತ್ತೆ ಹಚ್ಚಿ ವಶಪಡಿಸಿಕೊಂಡಿವೆ.

ಬೊಂಗ್ಬಾಲ್ ಗ್ರಾಮ ಸಮೀಪದ ಲಮ್‌ಜಾಂಗ್ ಅರಣ್ಯ ವಲಯದಲ್ಲಿ ನಡೆಸಿದ ಮತ್ತೊಂದು ಶೋಧ ಕಾರ್ಯಾಚರಣೆಯಲ್ಲಿ 303 ರೈಫಲ್, ಸಿಂಗಲ್ ಬ್ಯಾರೆಲ್ ಬಂದೂಕು ಹಾಗೂ ಮದ್ದುಗುಂಡುಗಳನ್ನು ವಶಪಡಿಸಿಕೊಂಡಿವೆ.

‘ಹೊಣೆಗಾರಿಕೆ ನಿಗದಿಯಾಗಲಿ’

ನವದೆಹಲಿ: ಸಿಖ್ ಪ್ರತ್ಯೇಕತಾವಾದಿ ನಾಯಕ ಗುರುಪತ್ವಂತ್ ಸಿಂಗ್ ಪನ್ನು ಹತ್ಯೆ ಸಂಚು ಕುರಿತು ಭಾರತ ಕೈಗೊಂಡಿರುವ ತನಿಖೆಯಿಂದ ‘ಸ್ಪಷ್ಟವಾದ ಉತ್ತರದಾಯಿತ್ವ’ ನಿಗದಿಯಾಗುವಂತಾಗಬೇಕು ಎಂದು ಅಮೆರಿಕ ಹೇಳಿದೆ.

ಈ ಸಂಚಿನ ಕುರಿತು ತನಿಖೆ ನಡೆಸಲು ಭಾರತ ರಚಿಸಿರುವ ತನಿಖಾ ಸಮಿತಿಯೊಂದಿಗೆ ಕಳೆದ ವಾರ ವಾಷಿಂಗ್ಟನ್‌ನಲ್ಲಿ ನಡೆದ ಸಭೆಯಲ್ಲಿ ಅಮೆರಿಕ ಅಧಿಕಾರಿಗಳು ಈ ಮಾತು ಹೇಳಿದ್ದಾರೆ.

‘ತನಿಖೆಗೆ ಸಂಬಂಧಿಸಿ, ಎರಡೂ ದೇಶಗಳು ತಮ್ಮಲ್ಲಿನ ಮಾಹಿತಿಗಳನ್ನು ಈ ಸಭೆಯಲ್ಲಿ ವಿನಿಮಯ ಮಾಡಿಕೊಂಡಿವೆ’ ಎಂದು ಅಮೆರಿಕ ವಿದೇಶಾಂಗ ಇಲಾಖೆ ವಕ್ತಾರ ವೇದಾಂತ್ ಪಟೇಲ್ ಹೇಳಿದ್ದಾರೆ.

‘ಭಾರತದ ಸಮಿತಿಯೊಂದಿಗೆ ಕಳೆದ ವಾರ ನಡೆದ ಮಾತುಕತೆ ಆಧಾರದಲ್ಲಿ ಈ ಪ್ರಕರಣದ ತನಿಖೆ ಮುಂದುವರಿಯಲಿದೆ ಎಂಬುದು ನಮ್ಮ ನಿರೀಕ್ಷೆ. ತನಿಖೆ ಪೂರ್ಣಗೊಂಡು ಹೊಣೆಗಾರಿಕೆ ನಿಗದಿಯಾದಾಗ ಮಾತ್ರ ಅಮೆರಿಕ ಈ ವಿಚಾರವಾಗಿ ತೃಪ್ತಿ ವ್ಯಕ್ತಪಡಿಸಲಿದೆ’ ಎಂದು ಪಟೇಲ್ ಹೇಳಿದ್ದಾರೆ.

ಇನ್ನೊಂದೆಡೆ, ‘ಪನ್ನು ಹತ್ಯೆಗೆ ಸಂಚು ರೂಪಿಸಿದ ಪ್ರಕರಣದಲ್ಲಿ ಅಮೆರಿಕ ಆರೋಪ ಹೊರಿಸಿರುವ ವಿಕಾಸ್ ಯಾದವ್ ಭಾರತ ಸರ್ಕಾರ ನೌಕರನಲ್ಲ ಎಂಬುದನ್ನು ಅಮೆರಿಕಕ್ಕೆ ತಿಳಿಸಲಾಗಿದೆ’ ಎಂದು ಭಾರತದ ಅಧಿಕಾರಿಗಳು ಹೇಳಿದ್ದಾರೆ.

ವೈತಿಯಲಿಂಗಂ ವಿರುದ್ಧ ಇ.ಡಿ ಶೋಧ

ಚೆನ್ನೈ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣದ ತನಿಖೆಯ ಭಾಗವಾಗಿ ಜಾರಿ ನಿರ್ದೇಶನಾಲಯವು (ಇ.ಡಿ) ಬುಧವಾರ ತಮಿಳುನಾಡಿನ ಮಾಜಿ ಸಚಿವ ವೈತಿಯಲಿಂಗಂ ಅವರಿಗೆ ಸೇರಿದ ಸ್ಥಳಗಳಲ್ಲಿ ಶೋಧ ನಡೆಸಿದೆ.

ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ (ಪಿಎಂಎಲ್‌ಎ) ಚೆನ್ನೈ ಸೇರಿದಂತೆ ತಮಿಳುನಾಡಿನ ನಾಲ್ಕು ನಗರಗಳಲ್ಲಿ ಇ.ಡಿ ಶೋಧ ನಡೆಸಿತು.

ಎಐಎಡಿಎಂಕೆ ನೇತೃತ್ವದ ಸರ್ಕಾರದಲ್ಲಿ ವಸತಿ ಸಚಿವರಾಗಿದ್ದ ವೈತಿಯಲಿಂಗಂ ಅವರು ಚೆನ್ನೈ ಮಹಾನಗರ ಅಭಿವೃದ್ಧಿ ಪ್ರಾಧಿಕಾರದ ಕಾಮಗಾರಿಗಳಿಗೆ ಅನುಮತಿ ನೀಡಿದ್ದಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯವು ತನಿಖೆ ನಡೆಸುತ್ತಿದೆ.

ಮಾಜಿ ಸಚಿವರು ಕೆಲವು ಕಂಪನಿಗಳಿಂದ ಹಣವನ್ನು ಸಾಲವಾಗಿ ಸ್ವೀಕರಿಸಿದ್ದು, ಹಣದ ಅಕ್ರಮ ವರ್ಗಾವಣೆ ನಡೆದಿದೆ ಎಂದು ಆರೋಪಿಸಲಾಗಿದೆ.

ಕಲಾಪದ ವಿವರ ತಿಳಿಸಿಲ್ಲ: ಸಮಿತಿ ಅಧ್ಯಕ್ಷ ಸ್ಪಷ್ಟನೆ

ನವದೆಹಲಿ (ಪಿಟಿಐ): ‘ಸಭೆಯ ಚರ್ಚೆಯ ವಿವರಗಳನ್ನು ನಾನು ಬಹಿರಂಗಪಡಿಸಿಲ್ಲ, ಸಭೆಯಲ್ಲಾದ ಅನುಚಿತ ಘಟನೆ ಕುರಿತಂತೆ ಮಾತ್ರ ಮಾತನಾಡಿದ್ದೆನೆ’ ಎಂದು ವಕ್ಫ್ ಮಸೂದೆ ಕುರಿತು ಜಂಟಿ ಸದನ ಸಮಿತಿ ಅಧ್ಯಕ್ಷ ಜಗದಾಂಬಿಕ ಪಾಲ್ ಹೇಳಿದ್ದಾರೆ.

ಟಿಎಂಸಿ ಸದಸ್ಯ ಕಲ್ಯಾಣ್ ಬ್ಯಾನರ್ಜಿ ಅವರು ಸಭೆಯಲ್ಲಿ ಗಾಜಿನ ಲೋಟ ಒಡೆದುಹಾಕಿದ ಘಟನೆ ಕುರಿತು ಮಾಧ್ಯಮಗಳಿಗೆ ಹೇಳಿಕೆ ನೀಡುವ ಮೂಲಕ ಅಧ್ಯಕ್ಷರು ನಿಯಮ ಉಲ್ಲಂಘಿಸಿದ್ದಾರೆ ಎಂಬ ಪ್ರತಿಪಕ್ಷಗಳ ಆರೋಪಗಳಿಗೆ ಈ ಸ್ಪಷ್ಟನೆ ನೀಡಿದ್ದಾರೆ.

ಡಿಎಂಕೆ ಸದಸ್ಯ ಎ.ರಾಜಾ, ಎಎಪಿ ಸದಸ್ಯ ಸಂಜಯ್ ಸಿಂಗ್ ಅವರು ಮಾಧ್ಯಮಗಳಿಗೆ ಹೇಳಿಕೆ ನೀಡುವ ಮೂಲಕ ಪಾಲ್ ನಿಯಮ ಉಲ್ಲಂಘಿಸಿದ್ದಾರೆ ಎಂದು ಆರೋಪಿಸಿದ್ದರು.

‘ಕೇಂದ್ರದಿಂದ ಹೊಸ ಪ್ರಸಾರ ನೀತಿ’

ಚೆನ್ನೈ (ಪಿಟಿಐ): ದೇಶದಲ್ಲಿ ‘ಓವರ್ ದಿ ಟಾಪ್ ಪ್ಲಾಟ್‌ಫಾರ್ಮ್’ಗಳು (ಒಟಿಟಿ ವೇದಿಕೆ) ಸ್ವಯಂ ನಿಯಂತ್ರಣ ಅಭ್ಯಾಸಗಳಿಗೆ ಬದ್ಧವಾಗಿಲ್ಲ ಎಂಬ ದೂರುಗಳು ಬಂದಿರುವ ಕಾರಣ, ಕೇಂದ್ರ ಸರ್ಕಾರ ಹೊಸ ಪ್ರಸಾರ ನೀತಿಯನ್ನು ರೂಪಿಸುತ್ತಿದೆ ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಹಾಗೂ ಸಂಸದೀಯ ವ್ಯವಹಾರಗಳ ರಾಜ್ಯ ಖಾತೆ ಸಚಿವ ಎಲ್. ಮುರುಗನ್ ಬುಧವಾರ ತಿಳಿಸಿದರು.

ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ಎಫ್‌ಎಂ ರೇಡಿಯೊ ಚಾನೆಲ್‌ಗಳು ಸುದ್ದಿ ಬುಲೆಟಿನ್‌ಗಳನ್ನು ಪ್ರಸಾರ ಮಾಡುವುದರ ಕುರಿತು, ಸಂಬಂಧಿಸಿದವರ ಜತೆ ವಿಸ್ತೃತ ಚರ್ಚೆ ನಡೆಸಲಾಗುತ್ತಿದೆ ಎಂದರು ಹೇಳಿದರು.

ಛೋಟಾ ರಾಜನ್‌ಗೆ ವಿಧಿಸಿದ್ದ ಜೀವಾವಧಿ ಶಿಕ್ಷೆ ಅಮಾನತು

ಮುಂಬೈ (ಪಿಟಿಐ): ನಗರದ ಹೋಟೆಲ್ ಉದ್ಯಮಿ ಜಯಾ ಶೆಟ್ಟಿ ಹತ್ಯೆಗೆ ಸಂಬಂಧಿಸಿದಂತೆ ಪಾತಕಿ ಛೋಟಾ ರಾಜನ್‌ಗೆ ವಿಧಿಸಿದ್ದ ಜೀವಾವಧಿ ಶಿಕ್ಷೆಯನ್ನು ಅಮಾನತುಗೊಳಿಸಿರುವ ಬಾಂಬೆ ಹೈಕೋರ್ಟ್, ಬುಧವಾರ ಜಾಮೀನು ಮಂಜೂರು ಮಾಡಿದೆ.

ನ್ಯಾಯಮೂರ್ತಿಗಳಾದ ರೇವತಿ ಮೊಹಿತೆ ದೇರೆ ಹಾಗೂ ಪೃಥ್ವಿರಾಜ್ ಚವಾಣ್ ಅವರಿದ್ದ ವಿಭಾಗೀಯ ಪೀಠವು, ಜಾಮೀನಿಗಾಗಿ ₹1 ಲಕ್ಷ ಮೊತ್ತದ ಬಾಂಡ್ ನೀಡುವಂತೆ ಛೋಟಾ ರಾಜನ್‌ಗೆ ಸೂಚಿಸಿದೆ.

ಜಾಮೀನು ದೊರೆತಿದ್ದರೂ ಛೋಟಾ ರಾಜನ್ ವಿರುದ್ಧ ವಿವಿಧ ಅಪರಾಧ ಪ್ರಕರಣಗಳಿರುವುದರಿಂದ ಜೈಲಿನಲ್ಲಿಯೇ ಇರಬೇಕಿದೆ. ವಿಶೇಷ ನ್ಯಾಯಾಲಯವು ಕಳೆದ ಮೇ ತಿಂಗಳಿನಲ್ಲಿ, 2001ರಲ್ಲಿ ನಡೆದಿದ್ದ ಹೋಟೆಲ್ ಉದ್ಯಮಿಯ ಹತ್ಯೆ ಪ್ರಕರಣದಲ್ಲಿ ಛೋಟಾ ರಾಜನ್‌ಗೆ ಜೀವಾವಧಿ ಶಿಕ್ಷೆ ವಿಧಿಸಿತ್ತು.

ಇದನ್ನು ಪ್ರಶ್ನಿಸಿ ಛೋಟಾ ರಾಜನ್ ಬಾಂಬೆ ಹೈಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದ. ಅಲ್ಲದೆ ಜಾಮೀನು ಸಹ ಕೋರಿದ್ದ.

ಪ್ರಕರಣವೇನು?: ಕೇಂದ್ರ ಮುಂಬೈನ ಗಾಮ್ದೇವಿಯಲ್ಲಿ ಗೋಲ್ಡನ್ ಕ್ರೌನ್ ಹೋಟೆಲ್ ಹೊಂದಿದ್ದ ಜಯಾ ಶೆಟ್ಟಿ ಅವರನ್ನು 2001ರ ಮೇ 4ರಂದು ಛೋಟಾ ರಾಜನ್ ಗ್ಯಾಂಗ್‌ನ ಇಬ್ಬರು ಗುಂಡಿಕ್ಕಿ ಕೊಂದಿದ್ದರು.

ಜಯಾ ಶೆಟ್ಟಿಗೆ, ಛೋಟಾ ರಾಜನ್ ಗ್ಯಾಂಗ್‌ನ ಹೇಮಂತ್ ಪೂಜಾರಿ ಸುಲಿಗೆ, ಜೀವ ಬೆದರಿಕೆಯ ಕರೆ ಮಾಡಿದ್ದ. ಕೇಳಿದಷ್ಟು ಹಣ ನೀಡದಿದ್ದರಿಂದ ಗುಂಡಿಕ್ಕಿ ಕೊಂದಿದ್ದರು ಎಂಬುದು ತನಿಖೆಯಲ್ಲಿ ದೃಢಪಟ್ಟಿತ್ತು.

ಪತ್ರಕರ್ತ ಜೆ ಡೇ ಹತ್ಯೆಗೆ ಸಂಬಂಧಿಸಿದಂತೆ ಜೀವಾವಧಿ ಶಿಕ್ಷೆಗೆ ಗುರಿಯಾಗಿರುವ ಛೋಟಾ ರಾಜನ್, ದೆಹಲಿಯ ತಿಹಾರ್ ಜೈಲಿನಲ್ಲಿದ್ದಾನೆ.

ಆಕ್ಷೇಪಾರ್ಹ ಹೇಳಿಕೆ: ಕಾಂಗ್ರೆಸ್ ಸಂಸದ ಮಸೂದ್ ಮೇಲೆ ಆರೋಪ ನಿಗದಿ

ಸಹರಾನ್‌ಪುರ (ಉತ್ತರಪ್ರದೇಶ) (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಬಗ್ಗೆ ಹತ್ತು ವರ್ಷಗಳ ಹಿಂದೆ ಆಕ್ಷೇಪಾರ್ಹ ಹೇಳಿಕೆ ನೀಡಿದ್ದ ಪ್ರಕರಣದಲ್ಲಿ ಸಹರಾನ್‌ಪುರ ಕ್ಷೇತ್ರದ ಕಾಂಗ್ರೆಸ್ ಸಂಸದ ಇಮ್ರಾನ್ ಮಸೂದ್ ವಿರುದ್ಧ ಇಲ್ಲಿನ ವಿಶೇಷ ನ್ಯಾಯಾಲಯದಲ್ಲಿ ಆರೋಪ ಹೊರಿಸಲಾಗಿದೆ.

2014ರಲ್ಲಿ ದೇವಬಂದ್ ಠಾಣಾ ವ್ಯಾಪ್ತಿಯ ಲಬಕಾರಿ ಗ್ರಾಮದಲ್ಲಿ ನಡೆದ ಚುನಾವಣಾ ಸಭೆಯಲ್ಲಿ ಭಾಷಣ ಮಾಡುವಾಗ ಮಸೂದ್ ಅವರು ಮೋದಿ ಅವರನ್ನು ತುಂಡು ತುಂಡು ಮಾಡುವುದಾಗಿ ಬೆದರಿಕೆ ಹಾಕಿ, ಹೇಳಿಕೆ ನೀಡಿದ್ದಾರೆ ಎಂದು ಆರೋಪಿಸಲಾಗಿತ್ತು. ಈ ಪ್ರಕರಣ ಸಂಬಂಧ, ಸಂಸದ-ಶಾಸಕರ (ಎಂಪಿ–ಎಂಎಲ್‌ಎ) ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಮೋಹಿತ್ ಶರ್ಮಾ ಅವರ ಎದುರು ಮಂಗಳವಾರ ಆರೋಪಗಳನ್ನು ನಿಗದಿಪಡಿಸಲಾಗಿದೆ ಎಂದು ಸರ್ಕಾರಿ ವಕೀಲ ಗುಲಾಬ್ ಸಿಂಗ್ ಬುಧವಾರ ತಿಳಿಸಿದರು.

ಈ ಪ್ರಕರಣದಲ್ಲಿ 19 ಮಂದಿಯ ಹೇಳಿಕೆಯನ್ನು ವಿಶೇಷ ನ್ಯಾಯಾಲಯದಲ್ಲಿ ದಾಖಲಿಸಲಾಗಿದೆ ಎಂದು ಅವರು ಹೇಳಿದರು.

ಮಸೂದ್ ಹೇಳಿಕೆ ತೀವ್ರ ವಿವಾದ ಹುಟ್ಟುಹಾಕಿದ್ದು, ಹೇಳಿಕೆಯ ವಿಡಿಯೊ ಕೂಡ ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡಿತ್ತು.

ಅಲ್ಲದೆ, ಮಸೂದ್ ಅವರು ಬಹುಜನ ಸಮಾಜ ಪಕ್ಷದ ಇಬ್ಬರು ನಾಯಕರ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿದ ಆರೋಪ ಎದುರಿಸುತ್ತಿದ್ದಾರೆ.

‘ಎಕ್ಸ್’ ವಿರುದ್ಧ ಕೇಂದ್ರ ಸರ್ಕಾರ ಚಾಟಿ

ಪ್ರಜಾವಾಣಿ ವಾರ್ತೆ

ನವದೆಹಲಿ: ದೇಶದ ಹಲವು ವಿಮಾನಯಾನ ಸಂಸ್ಥೆಗಳಿಗೆ ಇತ್ತೀಚಿನ ಕೆಲ ದಿನಗಳಲ್ಲಿ ಬಾಂಬ್ ಬೆದರಿಕೆ ಸಂದೇಶಗಳು ಬಂದಿರುವುದಕ್ಕೆ ಸಂಬಂಧಿಸಿ, ಸಾಮಾಜಿಕ ಜಾಲತಾಣ ‘ಎಕ್ಸ್’ ಕಾರ್ಯವೈಖರಿ ಕುರಿತು ಕೇಂದ್ರ ಸರ್ಕಾರ ಬುಧವಾರ ಅಸಮಾಧಾನ ವ್ಯಕ್ತಪಡಿಸಿದೆ.

‘ಎಕ್ಸ್’ ಮೂಲಕ ಹಂಚಿಕೆಯಾಗಿರುವ ಬೆದರಿಕೆ ಸಂದೇಶಗಳು ಹುಸಿ ಎಂದು ಸಾಬೀತಾಗಿವೆ. ಈ ಹುಸಿ ಸಂದೇಶಗಳು ವ್ಯಾಪಕವಾಗಿ ಹಂಚಿಕೆಯಾಗಿದ್ದಕ್ಕೆ ಸಂಬಂಧಿಸಿ ಎಲೆಕ್ಟ್ರಾನಿಕ್ಸ್ ಮತ್ತು ಐಟಿ ಸಚಿವಾಲಯದ ಜಂಟಿ ಕಾರ್ಯದರ್ಶಿ ಸಂಕೇತ್ ಎಸ್.ಭೋಂಡ್ವೆ ಅವರು ಸಾಮಾಜಿಕ ಮಾಧ್ಯಮಗಳ ವಿರುದ್ಧ ಚಾಟಿ ಬೀಸಿದ್ದಾರೆ.

ಸಂಕೇತ್ ಅವರು ವಿಮಾನಯಾನ ಸಂಸ್ಥೆಗಳು ಹಾಗೂ ಎಕ್ಸ್, ಮೆಟಾ ಸೇರಿದಂತೆ ವಿವಿಧ ಸಾಮಾಜಿಕ ಮಾಧ್ಯಮಗಳ ವೇದಿಕೆಗಳ ಪ್ರತಿನಿಧಿಗಳೊಂದಿಗೆ ವರ್ಚುವಲ್ ಆಗಿ ಸಭೆ ನಡೆಸಿದರು.

‘ಎಕ್ಸ್’ ಕಾರ್ಯವೈಖರಿ ಕುರಿತು ಅಸಮಾಧಾನ ಹೊರಹಾಕಿದ ಸಂಕೇತ್ ಅವರು, ಸುಳ್ಳು ಸಂದೇಶಗಳನ್ನು ತನ್ನ ವೇದಿಕೆ ಮೂಲಕ ಹಂಚಿಕೊಳ್ಳಲಾಗಿದ್ದು, ಈ ಕುರಿತು ಕೈಗೊಂಡ ಕ್ರಮಗಳೇನು ಎಂದು ‘ಎಕ್ಸ್’ ಪ್ರತಿನಿಧಿಗಳನ್ನು ಪ್ರಶ್ನಿಸಿದರು ಎಂದು ಮೂಲಗಳು ಹೇಳಿವೆ.

‘ಹುಸಿ ಸಂದೇಶಗಳ ಹಂಚಿಕೆಗೆ ಅನುವು ಮಾಡಿಕೊಡುವುದು ಅಂದರೆ, ಅಪರಾಧ ಕೃತ್ಯಕ್ಕೆ ‘ಎಕ್ಸ್’ ಕುಮ್ಮಕ್ಕು ನೀಡಿದಂತೆ ಆಗುತ್ತದೆ’ ಎಂದು ಸಚಿವಾಲಯದ ಅಧಿಕಾರಿಗಳು ಕಟು ಮಾತುಗಳಲ್ಲಿ ಹೇಳಿದ್ದಾರೆ. ಹುಸಿ ಸಂದೇಶಗಳ ಪ್ರಸರಣ ಪರಿಶೀಲಿಸುವ ವ್ಯವಸ್ಥೆಯನ್ನು ಅಳವಡಿಸಿಕೊಳ್ಳಬೇಕು ಹಾಗೂ ಇಂತಹ ಸಂದೇಶಗಳು ಹಂಚಿಕೆ ಯಾಗುವುದನ್ನು ತಕ್ಷಣವೇ ತಡೆಗಟ್ಟಬೇಕು ಎಂಬುದಾಗಿ ಸಾಮಾಜಿಕ ಮಾಧ್ಯಮ ವೇದಿಕೆಗಳಿಗೆ ಸಚಿವಾಲಯ ಸೂಚಿಸಿದೆ ಎಂದು ಮೂಲಗಳು ಹೇಳಿವೆ.

ಈ ಕುರಿತು ಕ್ರಮ ಕೈಗೊಳ್ಳುವ ಭರವಸೆ ಯನ್ನು ಸಾಮಾಜಿಕ ಮಾಧ್ಯಮಗಳು ನೀಡಿದವು. ಹಲವು ಖಾತೆಗಳನ್ನು ಸ್ಥಗಿತಗೊಳಿಸಿದ್ದಾಗಿಯೂ ತಿಳಿಸಿದವು ಎಂದು ಮೂಲಗಳು ಹೇಳಿವೆ.

1990ರ ತೀರ್ಪು ಅನೂರ್ಜಿತ • ಬಹುಮತದ ತೀರ್ಪು ಪ್ರಕಟಿಸಿದ ಕೋರ್ಟ್

ಕೈಗಾರಿಕಾ ಮದ್ಯಸಾರ: ರಾಜ್ಯಗಳಿಗೆ ಅಧಿಕಾರ

ನವದೆಹಲಿ (ಪಿಟಿಐ): ಕೈಗಾರಿಕಾ ಮದ್ಯಸಾರದ ಉತ್ಪಾದನೆ, ತಯಾರಿಕೆ ಮತ್ತು ಪೂರೈಕೆ ಮೇಲಿನ ನಿಯಂತ್ರಣ ಅಧಿಕಾರವು ರಾಜ್ಯಗಳಿಗೆ ಇದೆ ಎಂದು ಸುಪ್ರೀಂ ಕೋರ್ಟ್ ಬುಧವಾರ ತೀರ್ಪು ನೀಡಿದೆ.

ಸಂವಿಧಾನದ ಏಳನೆಯ ಪರಿಚ್ಛೇದದ ಅಡಿಯಲ್ಲಿ ಬರುವ ರಾಜ್ಯಗಳ ಪಟ್ಟಿಯಲ್ಲಿನ ಎಂಟನೆಯ ಅಂಶದಲ್ಲಿ ಉಲ್ಲೇಖವಾಗಿರುವ ‘ಮತ್ತುಬರಿಸುವ ಮದ್ಯ’ ಎಂಬ ಪದಗಳು ಕೈಗಾರಿಕಾ ಮದ್ಯ ಸಾರವನ್ನೂ ಒಳಗೊಳ್ಳುತ್ತವೆ ಎಂದು ಸುಪ್ರೀಂ ಕೋರ್ಟ್‌ನ ಒಂಬತ್ತು ನ್ಯಾಯಮೂರ್ತಿಗಳ ಪೀಠವು ಬಹುಮತದ ತೀರ್ಪಿನಲ್ಲಿ ಸ್ಪಷ್ಟಪಡಿಸಿದೆ.

ನಿಯಂತ್ರಣ ಅಧಿಕಾರವು ರಾಜ್ಯಗಳಿಗೆ ಇದೆ ಎಂಬ ತೀರ್ಪನ್ನು ಎಂಟು ನ್ಯಾಯಮೂರ್ತಿಗಳು ನೀಡಿದ್ದಾರೆ. ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ಅವರು ಬಹುಮತದ ತೀರ್ಪು ಬರೆದಿದ್ದಾರೆ. ನ್ಯಾಯಮೂರ್ತಿ ಬಿ.ವಿ. ನಾಗರತ್ನ ಅವರು ಭಿನ್ನ ತೀರ್ಪು ನೀಡಿದ್ದಾರೆ. ಕೈಗಾರಿಕಾ ಮದ್ಯಸಾರವನ್ನು ಕಾನೂನಿನ ಮೂಲಕ ನಿಯಂತ್ರಣಕ್ಕೆ ಒಳಪಡಿಸುವ ಅಧಿಕಾರವು ರಾಜ್ಯಗಳಿಗೆ ಇಲ್ಲ ಎಂದು ನ್ಯಾಯಮೂರ್ತಿ ನಾಗರತ್ನ ಹೇಳಿದ್ದಾರೆ.

ಮುಖ್ಯಾಂಶಗಳು

- ನ್ಯಾಯಮೂರ್ತಿ ನಾಗರತ್ನ ಭಿನ್ನ ತೀರ್ಪು
- ಕೇಂದ್ರದ ನಿಲುವು ಪ್ರಶ್ನಿಸಿದ್ದ ರಾಜ್ಯಗಳು
- ರಾಜ್ಯಗಳ ನಿಲುವಿಗೆ ‘ಸುಪ್ರೀಂ’ ಮನ್ನಣೆ

ಸಿಂಥೆಟಿಕ್ಸ್ ಆ್ಯಂಡ್ ಕೆಮಿಕಲ್ಸ್ ಲಿಮಿಟೆಡ್ ಮತ್ತು ಉತ್ತರ ಪ್ರದೇಶ ಸರ್ಕಾರದ ನಡುವಿನ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್‌ನ ಏಳು ಮಂದಿ ನ್ಯಾಯಮೂರ್ತಿಗಳ ಪೀಠವು, ಕೈಗಾರಿಕಾ ಮದ್ಯಸಾರದ ಉತ್ಪಾದನೆಯ ವಿಚಾರದಲ್ಲಿ ನಿಯಂತ್ರಣ ಕ್ರಮಗಳನ್ನು ಜಾರಿಗೆ ತರುವ ಅಧಿಕಾರವು ಕೇಂದ್ರ ಸರ್ಕಾರಕ್ಕೆ ಇದೆ ಎಂದು ಹೇಳಿತ್ತು. ಈಗ ಒಂಬತ್ತು ನ್ಯಾಯಮೂರ್ತಿಗಳ ಪೀಠವು 1990ರ ತೀರ್ಪನ್ನು ಅನೂರ್ಜಿತಗೊಳಿಸಿದೆ.

ಕೈಗಾರಿಕಾ ಮದ್ಯಸಾರವು ಮನುಷ್ಯರು ಸೇವಿಸಲು ಯೋಗ್ಯವಲ್ಲ. ಮತ್ತು ಬರಿಸುವ ಮದ್ಯ ಉದ್ಯಮದ ಮೇಲೆ ನಿಯಂತ್ರಣ ಸಾಧಿಸುವ ಕಾನೂನನ್ನು ರಚಿಸುವ ಅಧಿಕಾರವು ಸಂಸತ್ತಿಗೆ ಇಲ್ಲ ಎಂದು ಬಹುಮತದ ತೀರ್ಪಿನಲ್ಲಿ ಹೇಳಲಾಗಿದೆ.

1990ರಲ್ಲಿ ಏಳು ನ್ಯಾಯಮೂರ್ತಿಗಳ ಪೀಠ ನೀಡಿದ್ದ ತೀರ್ಪನ್ನು ಉತ್ತರ ಪ್ರದೇಶ ಸೇರಿದಂತೆ ಹಲವು ರಾಜ್ಯಗಳು ಪ್ರಶ್ನಿಸಿದ್ದವು. ಅಲ್ಲದೆ, ಕೈಗಾರಿಕಾ ಮದ್ಯಸಾರದ ಮೇಲೆ ತನಗೆ ಮಾತ್ರ ನಿಯಂತ್ರಣ ಅಧಿಕಾರ ಇದೆ ಎಂದು ಕೇಂದ್ರ ಸರ್ಕಾರ ತಾಳಿದ್ದ ನಿಲುವನ್ನು ಕೂಡ ಹಲವು ರಾಜ್ಯಗಳು ಪ್ರಶ್ನಿಸಿದ್ದವು.

ಕೈಗಾರಿಕಾ ಮದ್ಯಸಾರವನ್ನು ನಿಯಂತ್ರಣಕ್ಕೆ ಒಳಪಡಿಸಲು ತನಗೆ ಅಧಿಕಾರ ಇದೆ ಎಂದು ಪ್ರತಿಪಾದಿಸಿದ್ದ ಕೇಂದ್ರ ಸರ್ಕಾರವು, ಯಾವುದೇ ಕೈಗಾರಿಕೆಯ ಮೇಲೆ ತನಗೆ ಸಂಪೂರ್ಣ ನಿಯಂತ್ರಣ ನೀಡಲು ಸಂವಿಧಾನ ರೂಪಿಸಿದವರು ಉದ್ದೇಶಿಸಿದ್ದರು ಎಂದು ಹೇಳಿತ್ತು. ಕೈಗಾರಿಕಾ (ಅಭಿವೃದ್ಧಿ ಮತ್ತು ನಿಯಂತ್ರಣ) ಕಾಯ್ದೆ–1951ನ್ನು ಈ ಕಾರಣಕ್ಕಾಗಿ ‘ಸಾರ್ವಜನಿಕ ಹಿತದ ಉದ್ದೇಶದಿಂದ’ ರೂಪಿಸಲಾಗಿತ್ತು ಎಂದು ಅದು ವಾದಿಸಿತ್ತು.

ವೈವಾಹಿಕ ಅತ್ಯಾಚಾರ: ವಿಚಾರಣೆ ಮುಂದಕ್ಕೆ

ನವದೆಹಲಿ (ಪಿಟಿಐ): ವೈವಾಹಿಕ ಅತ್ಯಾಚಾರ ಪ್ರಕರಣಗಳಲ್ಲಿ ಕಾನೂನಿನ ಕ್ರಮದಿಂದ ಪತಿಗೆ ರಕ್ಷಣೆ ನೀಡಿರುವುದನ್ನು ಪ್ರಶ್ನಿಸಿ ಸಲ್ಲಿಸಲಾಗಿರುವ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ಅವರು ನಾಲ್ಕು ವಾರ ಮುಂದೂಡಿದ್ದಾರೆ. ಚಂದ್ರಚೂಡ್ ಅವರು ನವೆಂಬರ್ 10ರಂದು ನಿವೃತ್ತರಾಗಲಿದ್ದಾರೆ. ದೀಪಾವಳಿ ರಜೆ ಶುರುವಾಗುವುದರ ಒಳಗೆ ಈ ಅರ್ಜಿಗಳ ವಿಚಾರಣೆ ಪೂರ್ಣಗೊಳ್ಳದೆ ಇದ್ದರೆ ತೀರ್ಪು ನೀಡಲು ತಮ್ಮಿಂದ ಆಗುವುದಿಲ್ಲ ಎಂದು ಚಂದ್ರಚೂಡ್ ಅವರು ಹೇಳಿದರು.

ಅರ್ಜಿಗಳ ವಿಚಾರಣೆಯನ್ನು ಚಂದ್ರಚೂಡ್ ನೇತೃತ್ವದ ಪೀಠವು ಅಕ್ಟೋಬರ್ 17ರಂದು ಆರಂಭಿಸಿತ್ತು.

ಸರ್ದಾರ್ ಪಟೇಲ್ 150ನೇ ಜನ್ಮದಿನ: 2 ವರ್ಷ ಕಾರ್ಯಕ್ರಮ

ನವದೆಹಲಿ (ಪಿಟಿಐ): ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ 150ನೇ ಜನ್ಮದಿನಾಚರಣೆ ಅಂಗವಾಗಿ ಅವರ ಕೊಡುಗೆಗಳನ್ನು ಸ್ಮರಿಸಿ, ಗೌರವಿಸಲು 2024ರಿಂದ 2026ರವರೆಗೆ 2 ವರ್ಷ ದೇಶದಾದ್ಯಂತ ವಿವಿಧ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಬುಧವಾರ ಘೋಷಿಸಿದರು.

‘ಪ್ರಪಂಚದ ಅತ್ಯಂತ ದೃಢವಾದ ಪ್ರಜಾಪ್ರಭುತ್ವ ರಾಷ್ಟ್ರ ನಿರ್ಮಾಣದ ಹಿಂದಿನ ದೂರದೃಷ್ಟಿಯುಳ್ಳ ಚಿಂತಕ ಸರ್ದಾರ್ ಪಟೇಲ್ ಅವರ ಕೊಡುಗೆ ಮತ್ತು ಲಕ್ಷದ್ವೀಪದಿಂದ ಕಾಶ್ಮೀರದವರೆಗೆ ಭಾರತದ ಏಕೀಕರಣದಲ್ಲಿ ಅವರು ವಹಿಸಿದ ಪಾತ್ರ ಅಮರವಾಗಿದೆ’ ಎಂದು ಅಮಿತ್ ಶಾ ಸಾಮಾಜಿಕ ಜಾಲತಾಣ ‘ಎಕ್ಸ್’ ಖಾತೆಯಲ್ಲಿ ಬರೆದುಕೊಂಡಿದ್ದಾರೆ.

ಜಾಗೃತಿ ‘ಡಾನಾ’ ಚಂಡಮಾರುತದ ಕಾರಣ ‘ಭಯ ಬೇಡ, ಸುರಕ್ಷಿತವಾಗಿರಿ’ ಎಂದು ಜಾಗೃತಿ ಮೂಡಿಸಲು ಕಲಾವಿದ ಸುದರ್ಶನ್ ಪಟ್ನಾಯಕ್ ಒಡಿಶಾದ ಪುರಿ ಕಡಲತೀರದಲ್ಲಿ ರಚಿಸಿದ್ದ ಮರಳು ಶಿಲ್ಪ ಗಮನಸೆಳೆಯಿತು ಪಿಟಿಐ ಚಿತ್ರ

ಚೀನಾ–ಭಾರತ ಒಪ್ಪಂದ: ಕೇಂದ್ರಕ್ಕೆ 6 ಪ್ರಶ್ನೆ ಕೇಳಿದ ವಿರೋಧಪಕ್ಷ

ಹಲವು ಪ್ರಶ್ನೆಗಳು ಉಳಿದಿವೆ– ಕಾಂಗ್ರೆಸ್

ಪ್ರಜಾವಾಣಿ ವಾರ್ತೆ



ಜೈರಾಮ್ ರಮೇಶ್

ನವದೆಹಲಿ: ಪೂರ್ವ ಲಡಾಖ್‌ನಲ್ಲಿ ವಾಸ್ತವ ಗಡಿ ರೇಖೆ ಉದ್ದಕ್ಕೂ ಗಸ್ತು ಆರಂಭಕ್ಕೆ ಸಂಬಂಧಿಸಿ ಚೀನಾ, ಭಾರತ ನಡುವೆ ಒಪ್ಪಂದ ಆಗಿದ್ದರೂ, ‘ಹಲವು ಪ್ರಶ್ನೆಗಳು ಉಳಿದಿವೆ’ ಎಂದು ಕಾಂಗ್ರೆಸ್ ಬುಧವಾರ ಪ್ರತಿಕ್ರಿಯಿಸಿದೆ.

ಅಲ್ಲದೆ, ‘ಕಳೆದ ದಶಕದಲ್ಲಿನ ಕೆಟ್ಟ ವಿದೇಶಾಂಗ ನೀತಿಯಿಂದಾಗಿ ದೇಶಕ್ಕೆ ಆದ ಹಿನ್ನಡೆಗೆ ಈಗ ಗೌರವಯುತ ಪರಿಹಾರ ಸಿಗಬಹುದು’ ಎಂಬ ವಿಶ್ವಾಸವನ್ನೂ ಕಾಂಗ್ರೆಸ್ ಪಕ್ಷ ವ್ಯಕ್ತಪಡಿಸಿದೆ.

ಚೀನಾದ ಜೊತೆಗಿನ ಒಪ್ಪಂದ ಕುರಿತು ಮೋದಿ ಸರ್ಕಾರ ಹೆಚ್ಚಿನ ವಿವರಗಳನ್ನು ಬಹಿರಂಗ ಪಡಿಸಬೇಕು ಎಂದು ಪಕ್ಷ ಆಗ್ರಹಪಡಿಸಿದ್ದು, ಆರು ಪ್ರಶ್ನೆಗಳನ್ನು ಸರ್ಕಾರದ ಮುಂದಿಟ್ಟಿದೆ.

ಕಾಂಗ್ರೆಸ್ ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಅವರು, ಚೀನಾ ಜೊತೆಗಿನ ಅನಿಶ್ಚಿತತೆಯನ್ನು ‘ದುರಂತ ಕಥೆ’ ಎಂದು ಬಣ್ಣಿಸಿದ್ದು, ಪ್ರಧಾನಿ ವಿರುದ್ಧ ಹರಿಹಾಯ್ದರು.

ಗಾಲ್ವಾನ್ ಸಂಘರ್ಷದ ಬಳಿಕ 2020ರ ಜೂ.19ರಂದು ಪ್ರಧಾನಿ ಚೀನಾಗೆ ‘ಕ್ಲೀನ್ ಚಿಟ್’ ನೀಡಿದ್ದರಿಂದ ಭಾರತದ ನಿಲುವು ಸಡಿಲವಾಯಿತು ಎಂದು ಆರೋಪಿಸಿದರು. ಆಗ ಪ್ರಧಾನಿ, ‘ನಮ್ಮ ಗಡಿಗೆ ಯಾರೂ ನುಗ್ಗಿ ಬಂದಿಲ್ಲ, ಗಡಿಯೊಳಗೆ ಯಾರೊಬ್ಬರೂ ಇಲ್ಲ’ ಎಂದು ಹೇಳಿದ್ದರು.

‘ಪ್ರಧಾನಿ ಹೇಳಿಕೆ ಚೀನಾಕ್ಕೆ ತಾನು ಅತಿಕ್ರಮಿಸಿದ್ದ ಭಾರತದ ಭೂಮಿ ಮೇಲೆ ಹಕ್ಕು ಸ್ಥಾಪಿಸಲು ಅವಕಾಶ ನೀಡಿತು. ಬಿಕ್ಕಟ್ಟನ್ನು ಮೋದಿ ಸರ್ಕಾರ ನಿಭಾಯಿಸಿದ್ದನ್ನು ಡಿಡಿಎಲ್‌ಜೆಯಂತಿದೆ (ನಿರಾಕರಿಸು, ಗೊಂದಲ ಮೂಡಿಸು, ಸುಳ್ಳು ಹೇಳು, ಸಮರ್ಥಿಸಿಕೊ)’ ಎಂದು ಟೀಕಿಸಿದರು.

ಗಡಿಯಲ್ಲಿ ಎದುರಾಗಿರುವ ಸವಾಲುಗಳನ್ನು ಒಟ್ಟಾಗಿ ಎದುರಿಸಲು ಅನುವಾಗುವಂತೆ ಸಂಸತ್ತಿನಲ್ಲಿ ಚರ್ಚೆಗೆ ಅವಕಾಶ ಕೇಳಲಾಯಿತು. ಆದರೆ, ನಾಲ್ಕು ವರ್ಷಗಳಲ್ಲಿ ಇದಕ್ಕೆ ಅವಕಾಶವನ್ನೇ ನೀಡಲಿಲ್ಲ ಎಂದು ಟೀಕಿಸಿದರು.

ಕಾಂಗ್ರೆಸ್ ಎತ್ತಿರುವ ಪ್ರಶ್ನೆಗಳು

- ಸೇನಾಪಡೆಗಳು ಡೆಪ್ಸಾಂಗ್‌ನಿಂದ ಈ ಹಿಂದಿನಂತೆ ಐದು ಗಸ್ತು ಪಾಯಿಂಟ್‌ವರೆಗೂ ಗಸ್ತು ನಡೆಸಲಿವೆಯೇ?
- ಕಳೆದ ನಾಲ್ಕು ವರ್ಷಗಳಿಂದ ಗಸ್ತು ನಡೆಯದ ಡೆಮ್‌ಚೋಕ್‌ನ ಮೂರು ಪಾಯಿಂಟ್‌ವರೆಗೂ ಇನ್ನು ಮುಂದೆ ಗಸ್ತು ಮುಂದುವರಿಯಲಿದೆಯೇ?
- ಭಾರತೀಯ ಯೋಧರಿಗೆ ಪ್ಯಾಂಗಾಂಗ್ ಸರೋವರದ ಫಿಂಗರ್ 3 ಗಸ್ತು ಠಾಣೆ ಬಳಿಯೇ ತಡೆಒಡ್ಡಲಾಗುವುದೇ? ಫಿಂಗರ್ 8 ಠಾಣೆವರೆಗೆ ಹೋಗಬಹುದೇ? ಗೋಗ್ರಾಹಾಟ್ ಸ್ಪ್ರಿಂಗ್ಸ್‌ನ 3 ಗಸ್ತು ಠಾಣೆವರೆಗೆ ಹೋಗಲು ಅವಕಾಶ ಇದೆಯೇ ?
- ಚುಶೂಲ್ ವಲಯದ ಹೆಲ್ಮೆಟ್ ಟಾಪ್, ಮುಕ್ಪಾ ರೇ, ರೆಜಾಂಗ್ ಲಾ, ರಿಂಚೆನ್ ಲಾ, ಟೇಬಲ್ ಟಾಪ್, ಗುರುಂಗ್ ಪರ್ವತ ಭಾಗದಲ್ಲಿ ಸಾಂಪ್ರದಾಯಿಕ ಬಯಲು ಪ್ರವೇಶಿಸುವ ಅವಕಾಶ ಸೈನಿಕರಿಗೆ ಇದೆಯೇ?
- ಸರ್ಕಾರ ಚೀನಾಕ್ಕೆ ಬಿಟ್ಟುಕೊಟ್ಟಿರುವ, ಮೇಜರ್ ಶೈತಾನ್ ಸಿಂಗ್ ಅವರ ಸ್ಮಾರಕವುಳ್ಳ ರೆಜಾಂಗ್ ಲಾದಲ್ಲಿನ ‘ಬಫರ್ ವಲಯ’ವು ಇನ್ನು ಇತಿಹಾಸವೇ?

ಗ್ರಾಹಕನಿಗೆ 50 ಪೈಸೆ ಚಿಲ್ಲರೆ ನೀಡದ ಅಂಚೆ ಇಲಾಖೆ: 15 ಸಾವಿರ ದಂಡ

ಚೆನ್ನೈ (ಪಿಟಿಐ): ಗ್ರಾಹಕರೊಬ್ಬರಿಗೆ 50 ಪೈಸೆ ಬಾಕಿ ನೀಡದ ಕ್ರಮವು ಅಂಚೆ ಇಲಾಖೆಗೆ ಈಗ ದುಬಾರಿಯಾಗಿ ಪರಿಣಮಿಸಿದೆ. ಈ ಕುರಿತ ದೂರಿನ ವಿಚಾರಣೆ ನಡೆಸಿದ ಕಾಂಚೀಪುರ ಗ್ರಾಹಕರ ವ್ಯಾಜ್ಯ ಪರಿಹಾರ ಆಯೋಗ, ಪರಿಹಾರ ಸೇರಿ ಗ್ರಾಹಕರಿಗೆ ಒಟ್ಟು ₹15 ಸಾವಿರ ಪಾವತಿಸುವಂತೆ ಆದೇಶಿಸಿದೆ.

50 ಪೈಸೆ ಚಿಲ್ಲರೆ ಮರಳಿಸದೇ ಗ್ರಾಹಕರಿಗೆ ಉಂಟು ಮಾಡಿದ್ದ ಮಾನಸಿಕ ನೋವು ಹಾಗೂ ನ್ಯಾಯಸಮ್ಮತವಲ್ಲದ ವಹಿವಾಟು ಕ್ರಮ, ಸೇವಾ ನ್ಯೂನತೆಗಾಗಿ ₹10 ಸಾವಿರ ಪರಿಹಾರ ನೀಡಬೇಕು ಹಾಗೂ ಮೊಕದ್ದಮೆ ವೆಚ್ಚವಾಗಿ ₹ 5 ಸಾವಿರ ಪಾವತಿಸಬೇಕು ಎಂದು ಆಯೋಗವು ಆದೇಶಿಸಿದೆ.

ದೂರಿನ ಪ್ರಕಾರ, ಅರ್ಜಿದಾರರಾದ ಎ.ಮಾನಶಾ ಅವರು 2023ರ ಡಿಸೆಂಬರ್‌ನಲ್ಲಿ ರಿಜಿಸ್ಟ್ರರ್ ಅಂಚೆ ವೆಚ್ಚವಾಗಿ ₹ 30 ಪಾವತಿಸಿದ್ದರು. ₹29.50 ಪೈಸೆಗೆ ರಸೀದಿ ನೀಡಿದ್ದು, 50 ಪೈಸೆ ಚಿಲ್ಲರೆ ನೀಡಿರಲಿಲ್ಲ.

ಯುಪಿಐ ಮೂಲಕ ನಿಖರ ಮೊತ್ತ ಪಾವತಿಸುತ್ತೇನೆ ಎಂದು ಅರ್ಜಿದಾರ ಹೇಳಿದ್ದರೂ, ತಾಂತ್ರಿಕ ಕಾರಣ ನೀಡಿದ್ದ ಪೊಳಿಚಾಲೂರ್ ಅಂಚೆ ಕಚೇರಿಯ ಸಿಬ್ಬಂದಿ ಅದಕ್ಕೆ ಅವಕಾಶವನ್ನು ನಿರಾಕರಿಸಿದ್ದರು.

ಅಂಚೆ ಇಲಾಖೆಯಲ್ಲಿ ನಿತ್ಯ ಲಕ್ಷಾಂತರ ರೂಪಾಯಿ ವಹಿವಾಟು ನಡೆಯುತ್ತದೆ. ಪೂರಕವಾಗಿ ದಾಖಲೆಗಳ ನಿರ್ವಹಣೆ ಆಗುತ್ತಿಲ್ಲ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ನಷ್ಟವಾಗುತ್ತಿದೆ. ಇದರಿಂದಾಗಿ ನನಗೆ ಮಾನಸಿಕವಾಗಿ ತೀವ್ರ ನೋವಾಗಿದೆ ಎಂದು ಅರ್ಜಿದಾರರು ದೂರಿದ್ದರು.

ಅಂಚೆ ಇಲಾಖೆಯು ಇದಕ್ಕೆ ಪ್ರತಿಕ್ರಿಯಿಸಿ, ತಾಂತ್ರಿಕ ಕಾರಣದಿಂದ ಯುಪಿಐ ಪಾವತಿಗೆ ಅವಕಾಶ ದೊರೆತಿಲ್ಲ. ಆದರೆ, ಇಲಾಖೆಯಲ್ಲಿ ಅಳವಡಿಸಿಕೊಂಡಿರುವ ಸಾಫ್ಟ್‌ವೇರ್‌ನಲ್ಲಿ ಚಿಲ್ಲರೆಯು ಮುಂದಿನ ಮೊತ್ತಕ್ಕೆ ಸ್ವಯಂಚಾಲಿತವಾಗಿ ಸೇರ್ಪಡೆಯಾಗುತ್ತದೆ. ಇದಕ್ಕೆ ದಾಖಲೆಗಳಿವೆ ಎಂದಿತ್ತು.

ಉಭಯ ವಾದಗಳನ್ನು ಆಲಿಸಿದ ಆಯೋಗವು, ಸಾಫ್ಟ್‌ವೇರ್ ಕಾರಣ ನೀಡಿ ಅಂಚೆ ಇಲಾಖೆಯು ಹೆಚ್ಚುವರಿಯಾಗಿ 50 ಪೈಸೆ ವಸೂಲಿ ಮಾಡಿರುವುದು ಗ್ರಾಹಕರ ಸಂರಕ್ಷಣಾ ಕಾಯ್ದೆಯ ಪ್ರಕಾರ ನ್ಯಾಯಯುತ ಕ್ರಮವಲ್ಲ ಎಂದು ಅಭಿಪ್ರಾಯಪಟ್ಟಿತು.

50 ಪೈಸೆ ವಾಪಸು ಕೊಡಿಸಬೇಕು ಮತ್ತು ಆಗಿರುವ ಮಾನಸಿಕ ನೋವಿಗೆ ₹ 2.5 ಲಕ್ಷ ಪರಿಹಾರ, ಮೊಕದ್ದಮೆ ವೆಚ್ಚವಾಗಿ ₹ 10 ಸಾವಿರ ಕೊಡಿಸಬೇಕು ಎಂದು ಅರ್ಜಿದಾರರು ಕೋರಿದ್ದರು.

ಷೇರುಪೇಟೆ ವಹಿವಾಟು 138



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,472
ಇಂದಿನ ಅಂತ್ಯ	24,435
▼	36
ದಿನದ ಕನಿಷ್ಠ	24,378

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹570
12 ಕ್ಕೆ	₹75
ಮೈಸೂರು	
100ಕ್ಕೆ	₹575

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹266-467
ದ್ವಿತಳಿ (ಬಿ.ವಿ)	₹220-646

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹177
ಆರ್‌ಎಸ್‌ಎಸ್-5	₹172
ಗುಡ್ ಲಾಟ್ (ಪ್ರತಿ ಕೆ.ಜಿಗೆ)	₹168

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1520 (1500)
ಸೋಯಾ (ರಿಫೈನ್ಡ್)	₹1275 (1250)
ಸೂರ್ಯಕಾಂತಿ (ರಿಫೈನ್ಡ್)	₹1295 (1290)
ಪಾಮೋಲಿನ್	₹1290 (1265)

ಅಡಿಕೆ ಧಾರಣೆ (₹ಗಳಲ್ಲಿ)

ಬಂಟ್ವಾಳ	
ಕೋಕ	19000-27000
ಹಳತು	40000-49000
ಕಾರ್ಕಳ	
ಹೊಸತು	25000-32500
ಹಳತು	30000-41000
ಕುಮಟ	
ಚಿಪ್ಪು	23019-26569
ಕೋಕ	6019-22089
ಫ್ಯಾಕ್ಟರಿ	3019-16929
ಹಳೆಚಾಲಿ	36699-40299
ಹೊಸಚಾಲಿ	31019-34099
ಸಾಗರ	
ಸಿಪ್ಪೆಗೋಟು	15005-15005
ಶಿವಮೊಗ್ಗ	
ಬೆಟ್ಟೆ	47119-55700
ಗೊರಬಲು	17009-34590
ಹೊಸತು	46609-48699
ರಾಶಿ	32359-50709
ಸರಕು	61410-90380
ಸಿದ್ದಾಪುರ	
ಬಿಳಿಗೋಟು	17689-28800
ಚಾಲಿ	31099-34440
ಕೋಕ	11099-24689
ಕೆಂಪುಗೋಟು	11300-21800
ರಾಶಿ	40099-46399
ತಟ್ಟಿಬೆಟ್ಟೆ	26600-31882
ಶಿರಸಿ	
ಬೆಟ್ಟೆ	26130-38699
ಬಿಳಿಗೋಟು	20909-30629
ಚಾಲಿ	32408-35308
ಕೆಂಪುಗೋಟು	17199-26799
ರಾಶಿ	40609-43699

ಈರುಳ್ಳಿ (ಕ್ವಿಂಟಲ್‌ಗೆ)



ದಪ್ಪ	₹3500-4500
ಮಧ್ಯಮ	₹2500-3500
ಸಣ್ಣ	₹1000-2500

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹11500-14000
ಕೆ.ಆರ್.ಪೇಟೆ	₹11800-11800
ತಿಪಟೂರು	₹12000-13032
ತುರುವೇಕೆರೆ	₹12500-13000

ವಿನಿಮಯ ದರ

$ ಡಾಲರ್	84.07
£ ಪೌಂಡ್	109.09
€ ಯುರೊ	90.64
¥ ಯೆನ್ (100ಕ್ಕೆ)	56

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಭಾರತ್ ಬ್ರ್ಯಾಂಡ್ ಅಡಿ ಕಡಲೆಕಾಳು, ಚೆನ್ನಂಗಿಬೇಳೆ ಮಾರಾಟಕ್ಕೆ ಚಾಲನೆ

ರಿಯಾಯಿತಿ ದರದಲ್ಲಿ ಬೇಳೆ–ಕಾಳು

ನವದೆಹಲಿ (ಪಿಟಿಐ): ಭಾರತ್ ಬ್ರ್ಯಾಂಡ್‌ನಡಿ ರಿಯಾಯಿತಿ ದರದಲ್ಲಿ ಕಡಲೆಕಾಳು ಮತ್ತು ಚೆನ್ನಂಗಿಬೇಳೆ (ಮಸೂರ್ ದಾಲ್) ಮಾರಾಟಕ್ಕೆ ಕೇಂದ್ರ ಸರ್ಕಾರ, ಬುಧವಾರ ಚಾಲನೆ ನೀಡಿದೆ.

ಪ್ರತಿ ಕೆ.ಜಿ ಕಡಲೆಕಾಳಿಗೆ ₹58 ಹಾಗೂ ಚೆನ್ನಂಗಿಬೇಳೆಗೆ ₹89 ದರ ನಿಗದಿಪಡಿಸಿದೆ. ಚಿಲ್ಲರೆ ಮಾರುಕಟ್ಟೆಯಲ್ಲಿ ಇವುಗಳ ಬೆಲೆ ಏರಿಕೆಯಾಗಿದೆ. ಗ್ರಾಹಕರಿಗೆ ಅನುಕೂಲ ಕಲ್ಪಿಸುವ ಉದ್ದೇಶದಿಂದ ಮಾರಾಟಕ್ಕೆ ಕ್ರಮವಹಿಸಲಾಗಿದೆ ಎಂದು ಕೇಂದ್ರ ತಿಳಿಸಿದೆ.

ರಾಷ್ಟ್ರೀಯ ಸಹಕಾರ ಗ್ರಾಹಕರ ಮಹಾಮಂಡಳ (ಎನ್‌ಸಿಸಿಎಫ್), ರಾಷ್ಟ್ರೀಯ ಕೃಷಿ ಸಹಕಾರ ಮಾರುಕಟ್ಟೆ ಮಹಾಮಂಡಳ (ನಾಫೆಡ್) ಹಾಗೂ ಕೇಂದ್ರೀಯ ಭಂಡಾರಗಳ ಮೂಲಕ ಮಾರಾಟ ಮಾಡಲಿದೆ.

ಮಾರಾಟಕ್ಕೆ ಚಾಲನೆ ನೀಡಿದ ಕೇಂದ್ರ ಆಹಾರ ಸಚಿವ ಪ್ರಲ್ಹಾದ ಜೋಶಿ, 'ಬೆಲೆ ಸ್ಥಿರತೆ ನಿಧಿಯಡಿ (ಪಿಎಸ್‌ಎಫ್) ಕಡಲೆಕಾಳು ಮತ್ತು ಚೆನ್ನಂಗಿಬೇಳೆಯನ್ನು ಕಾಪು ದಾಸ್ತಾನು ಮಾಡಲಾಗಿದೆ. ಮಾರುಕಟ್ಟೆಯಲ್ಲಿ ಬೆಲೆ ನಿಯಂತ್ರಿಸಲು ಈ ಉತ್ಪನ್ನಗಳ ಮಾರಾಟಕ್ಕೆ ಕ್ರಮ ಕೈಗೊಳ್ಳಲಾಗಿದೆ' ಎಂದು ತಿಳಿಸಿದರು.

'ದೇಶದಲ್ಲಿ ಪ್ರಸಕ್ತ ವರ್ಷದಲ್ಲಿ ಬೇಳೆಕಾಳುಗಳ ಉತ್ಪಾದನೆ ಹೆಚ್ಚಳವಾಗುವ ನಿರೀಕ್ಷೆಯಿದೆ. ಸರ್ಕಾರವು ಬೆಂಬಲ ಬೆಲೆಯನ್ನು ಗಣನೀಯವಾಗಿ ಹೆಚ್ಚಿಸಿದೆ' ಎಂದರು.

ಕಳೆದ ವರ್ಷದ ಅಕ್ಟೋಬರ್‌ನಲ್ಲಿ ಕೇಂದ್ರ ಸರ್ಕಾರವು ಭಾರತ್ ಬ್ರ್ಯಾಂಡ್‌ನಡಿ ಮೊದಲ ಹಂತದಲ್ಲಿ ಅಕ್ಕಿ, ಗೋಧಿ ಹಿಟ್ಟು, ಕಡಲೆಬೇಳೆ, ಹೆಸರುಬೇಳೆ ಮತ್ತು ಹೆಸರು ಕಾಳು ಮಾರಾಟಕ್ಕೆ ಚಾಲನೆ ನೀಡಿತ್ತು.

ನೋಡಲ್ ಏಜೆನ್ಸಿಗಳಿಗೆ ಕೇಂದ್ರ ಸರ್ಕಾರವು 3 ಲಕ್ಷ ಟನ್ ಕಡಲೆಬೇಳೆ ಮತ್ತು 68 ಸಾವಿರ ಟನ್ ಹೆಸರು ಕಾಳನ್ನು ಹಂಚಿಕೆ ಮಾಡಿದೆ.

ಚಿಲ್ಲರೆ ಮಾರುಕಟ್ಟೆಯಲ್ಲಿ ಟೊಮೆಟೊ ಮತ್ತು ಈರುಳ್ಳಿ ದರ ಏರಿಕೆಯಾಗಿದ್ದು, ಕೇಂದ್ರ ಮಧ್ಯ ಪ್ರವೇಶಿಸಿದೆ. ರಿಯಾಯಿತಿ ದರದಡಿ ಕೆ.ಜಿ ಈರುಳ್ಳಿಗೆ ₹35 ಹಾಗೂ ಟೊಮೆಟೊಗೆ ₹65 ನಿಗದಿಪಡಿಸಿ ಮಾರಾಟ ಮಾಡುತ್ತಿದೆ.

ಪದಾರ್ಥಗಳ ದರ (ಕೆ.ಜಿಗೆ ₹ಗಳಲ್ಲಿ)

ಗೋಧಿ ಹಿಟ್ಟು	30
ಅಕ್ಕಿ	34
ಕಡಲೆಕಾಳು	58
ಕಡಲೆಬೇಳೆ	70
ಚೆನ್ನಂಗಿಬೇಳೆ	89
ಹೆಸರು ಕಾಳು	93
ಹೆಸರುಬೇಳೆ	107

ಶೀಘ್ರ ದೇಶದಾದ್ಯಂತ ವಿಸ್ತರಣೆ

ಎನ್‌ಸಿಸಿಎಫ್‌ನ ವ್ಯವಸ್ಥಾಪಕ ನಿರ್ದೇಶಕಿ ಅನಿಸ್ ಚಂದ್ರ ಜೋಸೆಫ್ ಮಾತನಾಡಿ, 'ಆರಂಭಿಕ ಹಂತದಲ್ಲಿ ದೆಹಲಿ, ರಾಜಸ್ಥಾನ, ಗುಜರಾತ್ ಮತ್ತು ಮಹಾರಾಷ್ಟ್ರದಲ್ಲಿ ಕಡಲೆಕಾಳು ಮತ್ತು ಚೆನ್ನಂಗಿಬೇಳೆ ಮಾರಾಟಕ್ಕೆ ಚಾಲನೆ ನೀಡಲಾಗಿದೆ. ಇನ್ನು 10 ದಿನದಲ್ಲಿ ದೇಶದಾದ್ಯಂತ ಮಾರಾಟಕ್ಕೆ ಚಾಲನೆ ದೊರೆಯಲಿದೆ' ಎಂದು ವಿವರಿಸಿದರು.

'ಕಡಲೆಕಾಳಿಗೆ ಉತ್ತಮ ಬೇಡಿಕೆ ಇದೆ. ಹಾಗಾಗಿ, ರಿಯಾಯಿತಿ ದರದಡಿ ಮಾರಾಟಕ್ಕೆ ಚಾಲನೆ ನೀಡಲಾಗಿದೆ. ಇ-ಕಾಮರ್ಸ್ ಮತ್ತು ಚಿಲ್ಲರೆ ಮಾರಾಟ ಮಳಿಗೆಗಳಲ್ಲಿ ಈ ಪದಾರ್ಥಗಳನ್ನು ಮಾರಾಟ ಮಾಡುವ ಉದ್ದೇಶ ಹೊಂದಲಾಗಿದೆ. ಈ ಸಂಬಂಧ ಮಾತುಕತೆ ನಡೆದಿದೆ' ಎಂದು ಹೇಳಿದರು.

ಸುದ್ದಿ 2 ನಿಮಿಷ

ಎಚ್‌ಎಎಲ್ ಹಣಕಾಸು ವಿಭಾಗದ ನಿರ್ದೇಶಕರಾಗಿ ಸೇನಾಪತಿ ನೇಮಕ

ಬೆಂಗಳೂರು: ಹಿಂದುಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್‌ನ (ಎಚ್‌ಎಎಲ್) ಹಣಕಾಸು ವಿಭಾಗದ ನಿರ್ದೇಶಕರಾಗಿ ಬರೇಣ್ಯ ಸೇನಾಪತಿ ಅವರು ನೇಮಕವಾಗಿದ್ದಾರೆ.

1995ರಲ್ಲಿ ಎಚ್‌ಎಎಲ್‌ಗೆ ಸೇರಿದ ಅವರು 29 ವರ್ಷದ ಸೇವಾನುಭವ ಹೊಂದಿದ್ದಾರೆ. ವಿಭಾಗೀಯ ಮಟ್ಟ ಮತ್ತು ಕಾರ್ಪೊರೇಟ್ ಫೈನಾನ್ಸ್ ಸೇರಿ ವಿವಿಧ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ ಎಂದು ಕಂಪನಿ ತಿಳಿಸಿದೆ.

ಪ್ರಸ್ತುತ ನಿರ್ದೇಶಕ ಹುದ್ದೆಗೆ ನೇಮಕಗೊಳ್ಳುವ ಮೊದಲು ಅವರು, ಕಾರ್ಪೊರೇಟ್ ಕಚೇರಿಯ ಹಣಕಾಸು ವಿಭಾಗದ ಕಾರ್ಯ ನಿರ್ವಾಹಕ ನಿರ್ದೇಶಕ ಮತ್ತು ಎಚ್‌ಎಎಲ್‌ನ ಹಣಕಾಸು ಮತ್ತು ಲೆಕ್ಕಪತ್ರ ಸಂಬಂಧಿತ ಕಾರ್ಯಗಳನ್ನು ನಿರ್ವಹಿಸುತ್ತಿದ್ದರು. ಎಚ್‌ಎಎಲ್‌ಗೆ 'ಮಹಾರತ್ನ' ಸ್ಥಾನ ದೊರೆಯುವಲ್ಲಿ ಸಕ್ರಿಯ ಪಾತ್ರ ವಹಿಸಿದ್ದಾರೆ ಎಂದು ತಿಳಿಸಿದೆ.

ಆರ್ಥಿಕ ಕ್ಷೇತ್ರದಲ್ಲಿ 31 ವರ್ಷ ಅನುಭವ ಹೊಂದಿರುವ ಸೇನಾಪತಿ ಅವರು, ಭಾರತೀಯ ಲೆಕ್ಕ ಪರಿಶೋಧಕ ಸಂಸ್ಥೆಯ (ಐಸಿಎಐ) ಸದಸ್ಯ ಕೂಡ ಆಗಿದ್ದಾರೆ.

ಕರ್ಣಾಟಕ ಬ್ಯಾಂಕ್ ಲಾಭ ಏರಿಕೆ

ಮಂಗಳೂರು: 2024–25ನೇ ಆರ್ಥಿಕ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಕರ್ಣಾಟಕ ಬ್ಯಾಂಕ್ ₹336.07 ಕೋಟಿ ನಿವ್ವಳ ಲಾಭ ದಾಖಲಿಸಿದೆ.

ಕಳೆದ ವರ್ಷದ ಇದೇ ಅವಧಿಯಲ್ಲಿ ₹330.26 ಕೋಟಿ ಲಾಭ ಗಳಿಸಿತ್ತು.

ಪ್ರಸಕ್ತ ಆರ್ಥಿಕ ವರ್ಷದ ಮೊದಲಾರ್ಧದಲ್ಲಿ ₹736.40 ಕೋಟಿ ನಿವ್ವಳ ಲಾಭ ದಾಖಲಿಸಿದಂತಾಗಿದೆ. ಕಳೆದ ವರ್ಷದ ಇದೇ ಅವಧಿಗೆ ಹೋಲಿಸಿದರೆ ಈ ಬಾರಿ ಶೇ 5.06ರಷ್ಟು ಏರಿಕೆ ಆಗಿದೆ.

ಬುಧವಾರ ಇಲ್ಲಿ ನಡೆದ ನಿರ್ದೇಶಕರ ಮಂಡಳಿ ಸಭೆಯಲ್ಲಿ ಎರಡನೇ ತ್ರೈಮಾಸಿಕ ಹಾಗೂ ಅರ್ಧ ವಾರ್ಷಿಕ ಆರ್ಥಿಕ ಫಲಿತಾಂಶಗಳಿಗೆ ಅನುಮೋದನೆ ನೀಡಲಾಯಿತು.

ಬ್ಯಾಂಕ್‌ನ ನಿವ್ವಳ ಅನುತ್ಪಾದಕ ಆಸ್ತಿ ಪ್ರಮಾಣವು ಶೇ 1.46ಕ್ಕೆ ಇಳಿಕೆಯಾಗಿದೆ. ಎರಡನೇ ತ್ರೈಮಾಸಿಕದಲ್ಲಿ ಬ್ಯಾಂಕ್‌ನ ಒಟ್ಟಾರೆ ವಹಿವಾಟು ಪ್ರಮಾಣವು ಶೇ 12.03ರಷ್ಟು ವೃದ್ಧಿಯಾಗಿದ್ದು, ₹1.75 ಲಕ್ಷ ಕೋಟಿಗೆ ತಲುಪಿದೆ. ಠೇವಣಿ ಪ್ರಮಾಣವು ಶೇ 11.66ರಷ್ಟು ಏರಿಕೆ ಕಂಡಿದ್ದು, ₹99,967 ಕೋಟಿಗೆ ತಲುಪಿದೆ. ಮುಂಗಡ ನೀಡಿಕೆ ಪ್ರಮಾಣದಲ್ಲೂ ಶೇ 12.52ರಷ್ಟು ಏರಿಕೆಯಾಗಿದ್ದು, ₹75,316 ಕೋಟಿ ಆಗಿದೆ.

'ಎರಡನೇ ತ್ರೈಮಾಸಿಕದಲ್ಲಿ ನಾವು ಸುಸ್ಥಿರ ಅಭಿವೃದ್ಧಿ ದಾಖಲಿಸಿದ್ದೇವೆ. ಹೊಸ ಹಾದಿಯ ನಮ್ಮ ಪ್ರಯಾಣವು ಉತ್ತಮ ಫಲಿತಾಂಶ ನೀಡುತ್ತಿದ್ದು, ಪ್ರಸಕ್ತ ಆರ್ಥಿಕ ವರ್ಷಕ್ಕೆ ನಿಗದಿಪಡಿಸಿರುವ ಗುರಿಯನ್ನು ತಲುಪುವ ವಿಶ್ವಾಸ ಮೂಡಿದೆ' ಎಂದು ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಶ್ರೀಕೃಷ್ಣನ್ ಎಚ್. ತಿಳಿಸಿದ್ದಾರೆ.

ಚಿರಸ್ಮರಣೆ

ಶ್ರೀ ಕೆ. ಕೃಷ್ಣಮೂರ್ತಿ
ನಿಧನ: 24.10.2023
(ಕೀರ್ತಿ ಶೇಷ ಜಿ. ಎನ್. ಕೃಷ್ಣಮೂರ್ತಿ (ಮೂರ್ತಪ್ಪ) ನವರು ಗವಿಪುರ, ಬೆಂಗಳೂರು, ಇವರ ಕಿರಿಯ ಪುತ್ರ)
"ನಿಮ್ಮ ಮಾರ್ಗದರ್ಶನ ನಮಗೆ ಸದಾ ಪ್ರೇರಣೆ, ನೀವು ನಮ್ಮನ್ನಗಲಿದರೂ ನಿಮ್ಮ ನೆನಪು ಸದಾ ಚಿರನೂತನ".
ಇಂತಿ: ಪತ್ನಿ ಶ್ರೀಮತಿ ಮಂಗಳ ಕೃಷ್ಣಮೂರ್ತಿ ಮತ್ತು ಮಕ್ಕಳು ಹಾಗೂ ಕುಟುಂಬವರ್ಗದವರು

ಚಿನ್ನದ ಧಾರಣೆ ₹500 ಬೆಳ್ಳಿ ₹1 ಸಾವಿರ ಏರಿಕೆ

ನವದೆಹಲಿ (ಪಿಟಿಐ): ಮದುವೆ ಹಾಗೂ ಹಬ್ಬದ ಋತುವಿನಿಂದಾಗಿ ಬುಧವಾರದ ವಹಿವಾಟಿನಲ್ಲೂ ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ದರದಲ್ಲಿ ಏರಿಕೆಯಾಗಿದೆ.

10 ಗ್ರಾಂ ಚಿನ್ನದ ದರವು ₹500 ಹೆಚ್ಚಳವಾಗಿ ₹81,500ರಂತೆ ಮಾರಾಟವಾಗಿದೆ. ಬೆಳ್ಳಿ ಧಾರಣೆಯು ಕೆ.ಜಿಗೆ ₹1 ಸಾವಿರ ಏರಿಕೆಯಾಗಿ, ₹1.02 ಲಕ್ಷಕ್ಕೆ ಮುಟ್ಟಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಕಳೆದ 6 ದಿನದ ವಹಿವಾಟಿನಲ್ಲಿ ಬೆಳ್ಳಿ ದರವು ಕೆ.ಜಿಗೆ ₹10 ಸಾವಿರ ಏರಿಕೆಯಾಗಿದ್ದರೆ, 10 ಗ್ರಾಂ ಚಿನ್ನದ ದರದಲ್ಲಿ ₹2,850 ಹೆಚ್ಚಳವಾಗಿದೆ.

ಕುಚ್ಚಲಕ್ಕಿ ಮೇಲಿನ ರಫ್ತು ಸುಂಕ ರದ್ದು

ನವದೆಹಲಿ (ಪಿಟಿಐ): ಕುಚ್ಚಲಕ್ಕಿ ಮೇಲೆ ವಿಧಿಸಿದ್ದ ರಫ್ತು ಸುಂಕವನ್ನು ಕೇಂದ್ರ ಸರ್ಕಾರ ಹಿಂಪಡೆದಿದೆ.

ಸುಂಕವನ್ನು ಶೇ 10ರಿಂದ ಶೂನ್ಯಕ್ಕೆ ಇಳಿಸಲಾಗಿದ್ದು, ಈ ಆದೇಶವು ಮಂಗಳವಾರ ದಿಂದಲೇ ಜಾರಿಗೆ ಬಂದಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯ ತಿಳಿಸಿದೆ.

ಸುಂಕ ಕಡಿತಕ್ಕೆ ಚುನಾವಣಾ ಆಯೋಗ ಅನುಮತಿ ನೀಡಿದೆ ಎಂದು ಮೂಲಗಳು ತಿಳಿಸಿವೆ.

ಕಳೆದ ತಿಂಗಳು ಕುಚ್ಚಲಕ್ಕಿ ಮತ್ತು ಭತ್ತದ ಮೇಲೆ ವಿಧಿಸುತ್ತಿದ್ದ ಸುಂಕವನ್ನು ಶೇ 20ರಿಂದ ಶೇ 10ಕ್ಕೆ ಇಳಿಸಿತ್ತು. ಈಗ ಕುಚ್ಚಲಕ್ಕಿ ಮೇಲಿನ ಸುಂಕವನ್ನು ರದ್ದುಪಡಿಸಿದೆ.

ಬಾಸ್ಮತಿಯೇತರ ಅಕ್ಕಿ ಕನಿಷ್ಠ ರಫ್ತು ದರ ರದ್ದತಿ

ಬಾಸ್ಮತಿಯೇತರ ಅಕ್ಕಿ ಮೇಲೆ ವಿಧಿಸಿದ್ದ ಕನಿಷ್ಠ ರಫ್ತು ದರವನ್ನು (ಎಂಇಪಿ) ಕೇಂದ್ರ ಸರ್ಕಾರವು ಬುಧವಾರ ರದ್ದುಪಡಿಸಿದೆ.

ಪ್ರತಿ ಟನ್‌ಗೆ 490 ಡಾಲರ್ (₹41,197) ಎಂಇಪಿ ನಿಗದಿಪಡಿಸಲಾಗಿತ್ತು. ಬಾಸ್ಮತಿಯೇತರ ಅಕ್ಕಿ ಮೇಲಿನ ರಫ್ತು ನಿಷೇಧವನ್ನು ಕಳೆದ ತಿಂಗಳು ವಾಪಸ್ ಪಡೆದಿದೆ. ಎಂಇಪಿ ರದ್ದತಿ ಆದೇಶವು ತಕ್ಷಣದಿಂದಲೇ ಜಾರಿಗೆ ಬಂದಿದೆ ಎಂದು ವಿದೇಶಿ ವ್ಯಾಪಾರದ ಮಹಾ ನಿರ್ದೇಶನಾಲಯ (ಡಿಜಿಎಫ್‌ಟಿ) ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ
23-10-2024

ಜಾವಾ 70/80(ಹೊಸ)	10900-11000
ಜಾವಾ 80/90(ಹೊಸ)	10400-10500
ದಪ್ಪ ಮಧ್ಯಪ್ರದೇಶ(ಹೊಸ)	9000-9100
ದಪ್ಪ ಗುಜರಾತ್(ಹೊಸ)	9800-9900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1530 (1510)
ಒಂದು ವಾರದ ಡೆಲಿವರಿ	1525 (1505)
ಪಾಮ್ ವಾರದ ಡೆಲಿವರಿ	1288 (1263)
ಸೂರ್ಯಕಾಂತಿ ಎಣ್ಣೆ ಕಚ್ಚಾ	1240 (1230)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
₹78,000 (78,050)
ಬೆಳ್ಳಿ ಕೆ.ಜಿ ₹98,000 (98,400)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಪೈರಸಿ ಹಾವಳಿ: ₹22,400 ಕೋಟಿ ನಷ್ಟ

ನವದೆಹಲಿ (ಪಿಟಿಐ): ಪೈರಸಿ ಹಾವಳಿಯಿಂದಾಗಿ 2023ರಲ್ಲಿ ಭಾರತೀಯ ಮನರಂಜನಾ ಉದ್ಯಮವು ₹22,400 ಕೋಟಿ ನಷ್ಟ ಅನುಭವಿಸಿದೆ ಎಂದು ಇವೈ- ಇಂಟರ್‌ನೆಟ್ ಆ್ಯಂಡ್ ಮೊಬೈಲ್ ಅಸೋಸಿಯೇಷನ್ ಆಫ್ ಇಂಡಿಯಾ (ಇವೈ- ಐಎಎಂಎಐ) ವರದಿ ತಿಳಿಸಿದೆ.

ದೇಶದಲ್ಲಿ ಪೈರಸಿ ಹಾವಳಿ ಮಿತಿಮೀರಿದೆ. ಇದರ ನಿಯಂತ್ರಣಕ್ಕೆ ಕಠಿಣ ನಿಯಮಾವಳಿಗಳನ್ನು ರೂಪಿಸುವ ಅಗತ್ಯವಿದೆ. ಇದರಿಂದ ಎದುರಾಗುವ ಅಪಾಯವನ್ನು ಪರಿಣಾಮಕಾರಿಯಾಗಿ ತಡೆಗಟ್ಟುವ ನಿಟ್ಟಿನಲ್ಲಿ ಎಲ್ಲಾ ವಲಯಗಳ ಸಹಭಾಗಿತ್ವದ ಅಗತ್ಯವಿದೆ ಎಂದು ಬುಧವಾರ ಬಿಡುಗಡೆಯಾಗಿರುವ ವರದಿ ಹೇಳಿದೆ.

ದೇಶದ ಮನರಂಜನಾ ವಲಯದ ಶೇ 51ರಷ್ಟು ಗ್ರಾಹಕರಿಗೆ ಪೈರಸಿ ಮಾಡುವವರಿಂದ ಸುಲಭವಾಗಿ ಕಂಟೆಂಟ್ ಲಭಿಸುತ್ತದೆ ಎಂದು ತಿಳಿಸಿದೆ.

ಚಿತ್ರಮಂದಿರಗಳ ಪೈರಸಿ ಕಂಟೆಂಟ್‌ನಿಂದ ₹13,700 ಕೋಟಿ ಹಾಗೂ ಒಟಿಟಿ ವೇದಿಕೆಗಳ ಕಂಟೆಂಟ್‌ನಿಂದ ₹8,700 ಕೋಟಿ ನಷ್ಟವಾಗಿದೆ. ಇದರಿಂದ ಸರ್ಕಾರದ ಬೊಕ್ಕಸಕ್ಕೆ ₹4,300 ಕೋಟಿ ಜಿಎಸ್‌ಟಿ ವರಮಾನ ನಷ್ಟವಾಗಿದೆ ಎಂದು ವಿವರಿಸಿದೆ.

ಅನಧಿಕೃತವಾಗಿ ಸಿನಿಮಾಗಳನ್ನು ನಕಲು ಮಾಡಿ ವಿತರಣೆ ಮಾಡುವುದು ಅಥವಾ ಸಂಗೀತ, ಸಿನಿಮಾ, ತಂತ್ರಾಂಶ ಸೇರಿ ಬೌದ್ಧಿಕ ಹಕ್ಕುಗಳನ್ನು ಉಲ್ಲಂಘಿಸುವುದು ಪೈರಸಿಯಾಗಲಿದೆ. ಇದು ಕಳ್ಳತನದ ಮತ್ತೊಂದು ರೂಪವಾಗಿದೆ. ಮೂಲ ಸೃಷ್ಟಿಕರ್ತರ ಹಕ್ಕುಗಳನ್ನು ಕಸಿಯುವುದರಿಂದ ಚಿತ್ರ ನಿರ್ಮಾಪಕರಿಗೆ ಭಾರಿ ಆರ್ಥಿಕ ನಷ್ಟವಾಗಲಿದೆ ಎಂದು ತಿಳಿಸಿದೆ.

'ದೇಶದಲ್ಲಿ ಡಿಜಿಟಲ್ ಮನರಂಜನಾ ವಲಯವು ಕ್ಷಿಪ್ರಗತಿಯಲ್ಲಿ ಬೆಳೆಯುತ್ತಿದೆ. 2026ರ ವೇಳೆಗೆ ಈ ವಲಯದ ಮಾರುಕಟ್ಟೆ ಮೌಲ್ಯವು ₹14,600 ಕೋಟಿ ಮುಟ್ಟಲಿದೆ. ಆದರೆ, ಪೈರಸಿ ಹಾವಳಿ ಅತಿರೇಕಕ್ಕೆ ಮುಟ್ಟಿದೆ. ಸರ್ಕಾರ, ಚಿತ್ರರಂಗದ ಪ್ರಮುಖರು ಮತ್ತು ಗ್ರಾಹಕರು ಒಟ್ಟಾಗಿ ಇದರ ವಿರುದ್ಧ ಸಮರ ಸಾರಬೇಕಿದೆ' ಎಂದು ಐಎಎಂಎಐನ ಡಿಜಿಟಲ್ ಮನರಂಜನಾ ಸಮಿತಿ ಅಧ್ಯಕ್ಷ ರೋಹಿತ್ ಜೈನ್ ಹೇಳಿದ್ದಾರೆ.

ಅಮೆರಿಕ: 2.1 ಕೋಟಿ ಜನರಿಂದ ಮತದಾನ

ವಾಷಿಂಗ್ಟನ್ (ಪಿಟಿಐ/ಎಪಿ): ಅಮೆರಿಕ ಅಧ್ಯಕ್ಷೀಯ ಚುನಾವಣೆಗೆ ಎರಡು ವಾರಗಳು ಬಾಕಿ ಇರುವಾಗಲೇ ಸುಮಾರು 2.1 ಕೋಟಿ ಅಮೆರಿಕನ್ನರು ಮತ ಚಲಾಯಿಸಿದ್ದಾರೆ.

ಫ್ಲಾರಿಡಾ ವಿಶ್ವವಿದ್ಯಾಲಯದ 'ಎಲೆಕ್ಷನ್ ಲ್ಯಾಬ್' ನೀಡಿರುವ ಅಂಕಿಅಂಶಗಳ ಪ್ರಕಾರ, 78 ಲಕ್ಷ ಮಂದಿ ಪ್ರಾರಂಭಿಕ ಹಂತದಲ್ಲೇ ಖುದ್ದು ಮತದಾನ ಮಾಡುವ (ಅರ್ಲಿ ಇನ್–ಪರ್ಸನ್ ವೋಟಿಂಗ್) ಮೂಲಕ ಮತ್ತು ಉಳಿದ 1.3 ಕೋಟಿ ಮಂದಿ ಅಂಚೆ ಮುಖಾಂತರ ತಮ್ಮ ಹಕ್ಕು ಚಲಾಯಿಸಿದ್ದಾರೆ.

ಅಮೆರಿಕದಲ್ಲಿ ಚುನಾವಣೆ ಆರಂಭಕ್ಕೂ 36 ಗಂಟೆಗಳ ಮುನ್ನ ಪ್ರಚಾರವು ಅಂತ್ಯಗೊಳ್ಳುತ್ತದೆ.

ನವೆಂಬರ್ 5ರಂದು ಅಧ್ಯಕ್ಷೀಯ ಚುನಾವಣೆ ನಡೆಯಲಿದೆ. ಡೆಮಾಕ್ರಟಿಕ್ ಪಕ್ಷದ ಅಭ್ಯರ್ಥಿಯಾಗಿ ಭಾರತ ಮೂಲದ ಕಮಲಾ ಹ್ಯಾರಿಸ್ ಮತ್ತು ರಿಪಬ್ಲಿಕನ್ ಪಕ್ಷದ ಅಭ್ಯರ್ಥಿಯಾಗಿ ಡೊನಾಲ್ಡ್ ಟ್ರಂಪ್ ಸ್ಪರ್ಧಿಸಿದ್ದಾರೆ.

ಅರಿಜೋನಾ, ಮಿಚಿಗನ್, ನೇವಾಡ, ಉತ್ತರ ಕೆರೊಲಿನಾ, ಜಾರ್ಜಿಯಾ ಹಾಗೂ ಪೆನ್ಸಿಲ್ವೇನಿಯಾ ರಾಜ್ಯಗಳು ಫಲಿತಾಂಶದ ಮೇಲೆ ನಿರ್ಣಾಯಕ ಪರಿಣಾಮ ಬೀರಲಿವೆ ಎಂದು ರಾಜಕೀಯ ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

ಎಮಿನೆಮ್ ಪ್ರಚಾರ: ರ‍್ಯಾಪರ್ ಎಮಿನೆಮ್ ಅವರು ಕಮಲಾ ಹ್ಯಾರಿಸ್ ಪರ ಮಂಗಳವಾರ ಮತಯಾಚಿಸಿದರು.

> **ಡೊನಾಲ್ಡ್ ಟ್ರಂಪ್ ಮತ್ತೆ ಅಧಿಕಾರಕ್ಕೆ ಬಂದರೆ ಏನು ಗತಿ ಎಂದು ಜಾಗತಿಕ ನಾಯಕರು ಭಯಭೀತರಾಗಿದ್ದಾರೆ. ಅವರನ್ನು ಪರಾಭವಗೊಳಿಸಿ ಹೊರದಬ್ಬಬೇಕು**
> **ಜೋ ಬೈಡನ್,** ಅಧ್ಯಕ್ಷ, ಅಮೆರಿಕ

> **ಟ್ರಂಪ್ ಅವರು ಚುನಾವಣೆ ಪ್ರಕ್ರಿಯೆ ಪೂರ್ಣಗೊಳ್ಳುವ ಮುನ್ನವೇ ವಿಜಯ ಘೋಷಣೆ ಮಾಡಲು ಪ್ರಯತ್ನಿಸಿದಲ್ಲಿ ಅದನ್ನು ಪ್ರಶ್ನಿಸಲು ನಮ್ಮ ತಂಡ ಸಿದ್ಧವಿದೆ**
> **ಕಮಲಾ ಹ್ಯಾರಿಸ್,** ಡೆಮಾಕ್ರಟಿಕ್ ಪಕ್ಷದ ಅಭ್ಯರ್ಥಿ

ಬೆಲೆ ಏರಿಕೆ ಸುಳಿವು ನೀಡಿದ ಟಾಟಾ ಟೀ

ಮುಂಬೈ (ಪಿಟಿಐ): ಉತ್ಪಾದನಾ ವೆಚ್ಚವನ್ನು ಸರಿದೂಗಿಸುವುದಕ್ಕಾಗಿ ತನ್ನ ಎಲ್ಲಾ ಬ್ರ್ಯಾಂಡ್‌ಗಳ ಬೆಲೆಯನ್ನು ಮುಂಬರುವ ಎರಡು–ಮೂರು ತಿಂಗಳಿನಲ್ಲಿ ಏರಿಕೆ ಮಾಡಲಾಗುವುದು ಎಂದು ಟಾಟಾ ಟೀ ಬುಧವಾರ ತಿಳಿಸಿದೆ.

'ಲಾಭ ಹೆಚ್ಚಳದ ಗುರಿ ಹೊಂದಲಾಗಿದೆ. ಹಾಗಾಗಿ, ಬೆಲೆ ಏರಿಕೆಯು ಅನಿವಾರ್ಯವಾಗಿದೆ' ಎಂದು ಟಾಟಾ ಟೀಯ ಮಾತೃಸಂಸ್ಥೆಯಾದ ಟಾಟಾ ಕನ್ಸ್ಯೂಮರ್ ಪ್ರಾಡಕ್ಟ್ಸ್ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಸುನಿಲ್ ಎ. ಡಿಸೋಜಾ ತಿಳಿಸಿದ್ದಾರೆ.

'ದೇಶದಲ್ಲಿ ಚಹಾ ಉತ್ಪಾದನೆಯಲ್ಲಿ ಶೇ 20ರಷ್ಟು ಕುಸಿತವಾಗಿದೆ. ಆದರೆ, ರಫ್ತು ಪ್ರಮಾಣದಲ್ಲಿ ಏರಿಕೆಯಾಗಿದೆ' ಎಂದು ಸುನೀಲ್ ಮಾಹಿತಿ ನೀಡಿದ್ದಾರೆ.

2024–25ನೇ ಆರ್ಥಿಕ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ಕಂಪನಿಯು ಶೇ 1ರಷ್ಟು ನಿವ್ವಳ ಲಾಭಗಳಿಸಿದೆ. ಆದರೆ, ಚಹ ಪೂರೈಕೆಯಲ್ಲಿನ ವ್ಯತ್ಯಯದಿಂದಾಗಿ ಈ ವರ್ಷ ಚಹ ಬೆಲೆಯಲ್ಲಿ ಶೇ 25ರಷ್ಟು ಏರಿಕೆಯಾಗಿದೆ.

ದೇಶದ ಚಿಲ್ಲರೆ ಮಾರುಕಟ್ಟೆಯಲ್ಲಿ ಟಾಟಾ ಟೀ ಪಾಲು ಶೇ 28ರಷ್ಟಿದೆ.

ಎನ್‌ಸಿಎಲ್‌ಎಟಿ ಆದೇಶ ರದ್ದುಪಡಿಸಿದ 'ಸುಪ್ರೀಂ'

ಬೈಜುಸ್ ವಿರುದ್ಧ ದಿವಾಳಿ ಪ್ರಕ್ರಿಯೆ ಊರ್ಜಿತ

ನವದೆಹಲಿ (ಪಿಟಿಐ): ಬೈಜುಸ್ ಕಂಪನಿ ವಿರುದ್ಧ ದಿವಾಳಿ ಪ್ರಕ್ರಿಯೆಗೆ ತಡೆ ನೀಡಿದ್ದ ರಾಷ್ಟ್ರೀಯ ಕಂಪನಿ ಕಾನೂನು ಮೇಲ್ಮನವಿ ನ್ಯಾಯಮಂಡಳಿಯ (ಎನ್‌ಸಿಎಲ್‌ಎಟಿ) ಆದೇಶವನ್ನು ಸುಪ್ರೀಂ ಕೋರ್ಟ್ ಬುಧವಾರ ರದ್ದುಪಡಿಸಿದೆ.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್, ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಹಾಗೂ ಮನೋಜ್ ಮಿಶ್ರಾ ಅವರಿದ್ದ ತ್ರಿಸದಸ್ಯ ನ್ಯಾಯಪೀಠವು ಈ ಆದೇಶ ನೀಡಿದೆ.

ಪ್ರಕರಣ ಏನು?: ಭಾರತೀಯ ಕ್ರಿಕೆಟ್ ತಂಡದ ಪ್ರಾಯೋಜಕತ್ವಕ್ಕೆ ಸಂಬಂಧಿಸಿದಂತೆ ಬೈಜುಸ್ ಕಂಪನಿಯು ₹158 ಕೋಟಿಯನ್ನು ಬಿಸಿಸಿಐಗೆ ಪಾವತಿಸದೆ ಬಾಕಿ ಉಳಿಸಿಕೊಂಡಿತ್ತು. ಇದನ್ನು ಪ್ರಶ್ನಿಸಿ ಬಿಸಿಸಿಐ, ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಯ (ಎನ್‌ಸಿಎಲ್‌ಟಿ) ಬೆಂಗಳೂರು ಶಾಖೆಗೆ ಆಗಸ್ಟ್‌ನಲ್ಲಿ ಅರ್ಜಿ ಸಲ್ಲಿಸಿತ್ತು.

ಈ ಅರ್ಜಿ ಪುರಸ್ಕರಿಸಿದ್ದ ಕಾನೂನು ನ್ಯಾಯಮಂಡಳಿಯು ಕಂಪನಿಯ ಆಸ್ತಿಯನ್ನು ವಶಕ್ಕೆ ಪಡೆದಿತ್ತು. ಇದನ್ನು ಪ್ರಶ್ನಿಸಿ ಬೈಜುಸ್, ಎನ್‌ಸಿಎಲ್ಎಟಿಯ ಮೊರೆ ಹೋಗಿತ್ತು. ವಿಚಾರಣೆ ನಡೆಸಿದ್ದ ಮೇಲ್ಮನವಿ ನ್ಯಾಯಮಂಡಳಿಯು, ಎನ್‌ಸಿಎಲ್‌ಟಿ ಆದೇಶಕ್ಕೆ ತಡೆ ನೀಡಿತ್ತು.

ಅಮೆರಿಕ ಮೂಲದ ಸಾಲದಾತ ಸಂಸ್ಥೆ ಗ್ಲಾಸ್ ಟ್ರಸ್ಟ್ ಕಂಪನಿಯು, ಎನ್‌ಸಿಎಲ್‌ಎಟಿ ಆದೇಶವನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿತ್ತು.

'ಹಣಕಾಸಿನ ಇತ್ಯರ್ಥಕ್ಕೆ ಸಂಬಂಧಿಸಿದಂತೆ ಬೈಜುಸ್ ಮತ್ತು ಬಿಸಿಸಿಐ ಸಲ್ಲಿಸಿರುವ ಪ್ರಮಾಣ ಪತ್ರಕ್ಕೆ ಒಪ್ಪಿಗೆ ನೀಡುವುದಕ್ಕೂ ಮೊದಲು ನಿಯಮಾವಳಿಗಳನ್ನು ಪಾಲಿಸಿಲ್ಲ. ವೃತ್ತಿಪರರೊಬ್ಬರು (ಐಆರ್‌ಪಿ) ಅರ್ಜಿ ಹಿಂಪಡೆಯುವ ಬಗ್ಗೆ ನ್ಯಾಯಮಂಡಳಿಯ ಮುಂದೆ ಕೋರಿಕೆ ಸಲ್ಲಿಸಿದ್ದಾರೆ. ಕಾರ್ಪೊರೇಟ್ ಸಾಲಗಾರರು ಅಥವಾ ಇತರೆ ಸಾಲಗಾರರು ಈ ಅರ್ಜಿ ಸಲ್ಲಿಸಿಲ್ಲ' ಎಂದು ನ್ಯಾಯಪೀಠ ಹೇಳಿದೆ. ಎನ್‌ಸಿಎಲ್‌ಎಟಿಯು ವಿವೇಚನಾತ್ಮಕವಾಗಿ ತನ್ನ ಅಧಿಕಾರ ಬಳಸಿಲ್ಲ ಎಂದು ಹೇಳಿದೆ.

ಕಾರ್ಪೊರೇಟ್ ದಿವಾಳಿ ಗೊತ್ತುವಳಿ ಪ್ರಕ್ರಿಯೆ (ಸಿಐಆರ್‌ಪಿ) ಸಲ್ಲಿಕೆಯಾದ ವೇಳೆ ಕಂಪನಿಗೆ ಸಾಲ ನೀಡಿದ ಎಲ್ಲರೂ ಮಧ್ಯಸ್ಥಗಾರರಾಗುತ್ತಾರೆ. ಎನ್‌ಸಿಎಲ್‌ಎಟಿ ನಿಯಮ 11ರ ಅನ್ವಯ ಅರ್ಜಿ ಹಿಂಪಡೆಯಲು ಒಪ್ಪಿಗೆ ನೀಡುವಾಗಲು ಸಂಬಂಧಪಟ್ಟವರ ಅಭಿಪ್ರಾಯವನ್ನು ಆಲಿಸಬೇಕಿದೆ ಎಂದು ಹೇಳಿದೆ.

ಸಾಲಗಾರರ ಸಮಿತಿಯಲ್ಲಿ ಹಣವನ್ನು ಠೇವಣಿ ಇಡುವಂತೆ ಬಿಸಿಸಿಐಗೆ ಸೂಚಿಸಿದೆ.

ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಸಲಹೆ

'ಕದನವಿರಾಮಕ್ಕಿದು ಸಕಾಲ'

ಟೆಲ್ ಅವೀವ್ (ಎ.ಪಿ): 'ಹಮಾಸ್ ವಿರುದ್ಧದ ಕೌಶಲಯುಕ್ತ ಗೆಲುವನ್ನು ಇಸ್ರೇಲ್ ಕಾರ್ಯತಂತ್ರದ ಯಶಸ್ಸನ್ನಾಗಿ ಪರಿವರ್ತಿಸುವ ಅಗತ್ಯವಿದೆ. ಇದಕ್ಕಾಗಿ ಗಾಜಾದಲ್ಲಿ ಯುದ್ಧ ಕೊನೆಗಾಣಿಸುವ ಒಪ್ಪಂದಕ್ಕೆ ಬರಬೇಕು' ಎಂದು ಅಮೆರಿಕ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕನ್ ಹೇಳಿದ್ದಾರೆ.

ಗಾಜಾಪಟ್ಟಿಯಲ್ಲಿ ಯುದ್ಧ ಆರಂಭವಾದ ಬಳಿಕ ಈ ವಲಯಕ್ಕೆ 11ನೇ ಬಾರಿಗೆ ಭೇಟಿ ನೀಡಿದ ಅವರು ಇಸ್ರೇಲ್‌ನಿಂದ ಸೌದಿ ಅರೇಬಿಯಾಕ್ಕೆ ಬುಧವಾರ ತೆರಳುವ ಮುನ್ನ ಇಲ್ಲಿ ಸುದ್ದಿಗಾರರ ಜೊತೆಗೆ ಮಾತನಾಡಿದರು.

ಬ್ಲಿಂಕನ್ ನಿರ್ಗಮನದ ಹಿಂದೆಯೇ ವಾಯುದಾಳಿಯ ಎಚ್ಚರಿಕೆಯ ಸೈರನ್ ಮೊಳಗಿತು. ಹಿಂದೆಯೇ ಇಸ್ರೇಲ್ ಸೇನೆಯು ಲೆಬನಾನ್ ಅನ್ನು ಗುರಿಯಾಗಿಸಿ ವಾಯುದಾಳಿಯನ್ನು ಆರಂಭಿಸಿತು. ದಾಳಿಯ ಸೂಚನೆಯಾಗಿ ದಟ್ಟ ಹೊಗೆಯು ವಾತಾವರಣವನ್ನು ಆವರಿಸಿತು.

ಕಾಣದ ಕದನವಿರಾಮ ಸಾಧ್ಯತೆ: ಹಮಾಸ್ ನಾಯಕ ಯಹ್ಯಾ ಸಿನ್ವರ್ ಹತ್ಯೆಯ ನಂತರವೂ ಗಾಜಾದಲ್ಲಿ ಕದನವಿರಾಮ ಘೋಷಣೆಯಾಗುವ ಸಾಧ್ಯತೆಗಳು ಕಾಣುತ್ತಿಲ್ಲ. ಬ್ಲಿಂಕನ್ ಅವರು ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು, ಇತರೆ ಅಧಿಕಾರಿಗಳನ್ನು ಭೇಟಿಯಾದ ಬಳಿಕವೂ ಸಕಾರಾತ್ಮಕ ಬೆಳವಣಿಗೆಗಳಾಗಿಲ್ಲ.

ಸಿನ್ವರ್ ಹೊಂದಿದ್ದ ಕಠಿಣ ನಿಲುವು ಮಾತುಕತೆ ವಿಫಲವಾಗಲು ಕಾರಣ ಎಂಬುದು ಇಸ್ರೇಲ್ ಆರೋಪ. ಆದರೆ, ಹಮಾಸ್ ಪ್ರಕಾರ ಇಸ್ರೇಲ್ ಸೇನೆಯ ಪೂರ್ಣ ವಾಪಸಾತಿ, ದೊಡ್ಡ ಸಂಖ್ಯೆಯಲ್ಲಿರುವ ಪ್ಯಾಲೆಸ್ಟೀನ್ ಕೈದಿಗಳ ಬಿಡುಗಡೆ ಬೇಡಿಕೆಗೆ ಸ್ಪಂದನ ದೊರೆತಿಲ್ಲ.

ಲೆಬನಾನ್‌ನ ಪ್ರಮುಖ ನಗರ ಟೈರ್ ಅನ್ನು ಗುರಿಯಾಗಿಸಿ ಇಸ್ರೇಲ್ ಸೇನೆ ಮಂಗಳವಾರ ವಾಯುದಾಳಿ ನಡೆಸಿದ್ದು, ದಟ್ಟ ಹೊಗೆ ವಾತಾವರಣವನ್ನು ಆವರಿಸಿತ್ತು —ಎಎಫ್‌ಪಿ ಚಿತ್ರ

ನಸ್ರಲ್ಲಾ ಉತ್ತರಾಧಿಕಾರಿ ಹತ್ಯೆ

ಬೈರೂತ್ (ಎ.ಪಿ): 'ಹಿಜ್ಬುಲ್ಲಾ ಸಂಘಟನೆಯ ಮುಂದಿನ ನಾಯಕ ಎಂದು ಭಾವಿಸಲಾಗಿದ್ದ ಅಧಿಕಾರಿ ಹಶೇಮ್ ಸಫೀದ್ದೀನ್‌ನನ್ನು ಈ ತಿಂಗಳಾರಂಭದಲ್ಲೇ ಹತ್ಯೆ ಮಾಡಲಾಗಿದೆ' ಎಂದು ಇಸ್ರೇಲ್ ಸೇನೆ ಮಂಗಳವಾರ ಇಲ್ಲಿ ಹೇಳಿದ್ದು, ಹಿಜ್ಬುಲ್ಲಾ ಬುಧವಾರ ಇದನ್ನು ಅನುಮೋದಿಸಿದೆ.

ಹಸನ್ ನಸ್ರಲ್ಲಾ ಉತ್ತರಾಧಿಕಾರಿಯಾಗಿ ಈತ ಹಿಜ್ಬುಲ್ಲಾ ಸಂಘಟನೆ ಮುನ್ನಡೆಸುವರು ಎಂದು ಹೇಳಲಾಗಿತ್ತು.

ಅಕ್ಟೋಬರ್ ಆರಂಭದಲ್ಲಿ ದಕ್ಷಿಣ ಲೆಬನಾನ್‌ನಲ್ಲಿ ನಡೆಸಿದ್ದ ದಾಳಿಯಲ್ಲಿ ಸಫೀದ್ದೀನ್ ಹಾಗೂ ಹಿಜ್ಬುಲ್ಲಾದ ಇತರೆ 25 ನಾಯಕರು ಸತ್ತಿದ್ದರು ಎಂದು ಇಸ್ರೇಲ್ ಸೇನೆಯು ಹೇಳಿದೆ.

ಆಸ್ಪತ್ರೆ ಮೇಲೆ ದಾಳಿ: 18 ಬಲಿ

ಮಂಗಳವಾರ ಇಸ್ರೇಲ್ ಸೇನೆಯು ಬೈರೂತ್ ನಗರದಲ್ಲಿನ ಅತಿದೊಡ್ಡ ಸಾರ್ವಜನಿಕ ಆಸ್ಪತ್ರೆ ಗುರಿಯಾಗಿಸಿ ವಾಯುದಾಳಿ ನಡೆಸಿದ್ದು, 18 ಜನರು ಸತ್ತಿದ್ದರೆ, 60 ಜನರು ಗಾಯಗೊಂಡಿದ್ದಾರೆ. ದಾಳಿಯಲ್ಲಿ ಹಲವು ಕಟ್ಟಡಗಳು ಜಖಂಗೊಂಡಿವೆ.

ಹಿಜ್ಬುಲ್ಲಾ ಗುರಿಯಾಗಿಸಿ ದಾಳಿ ನಡೆಸಿದ್ದು, ಆಸ್ಪತ್ರೆ ಮೇಲೆ ದಾಳಿ ನಡೆಸಿಲ್ಲ ಎಂದು ಇಸ್ರೇಲ್ ಸೇನೆ ಹೇಳಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಾನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರಜಾವಾಣಿ
ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ವಾಹನ
Four Wheelers Selling
TATA

ಸಾರ್ವಜನಿಕ ಪ್ರಕಟಣೆ

ಅಪರ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಮಾಗಡಿ.
ಒ.ಎಸ್.ನಂ. 572/2021
ವಾದಿ: ಶ್ರೀ ಕಿಶೋರ್‌ಕುಮಾರ್ ಹೆಚ್.ಎಂ
ವಿರುದ್ಧ
ಪ್ರತಿವಾದಿಗಳು: ಶ್ರೀಮತಿ ಲಕ್ಷ್ಮಮ್ಮ ಮತ್ತೊಬ್ಬರು.
ಮೇಲ್ಕಂಡ ವಾದಿ ಈ ದಾವೆಯನ್ನು ಪ್ರತಿವಾದಿಗಳ ವಿರುದ್ಧ ಮಾಲೀಕತ್ವ ಘೋಷಣೆ ಮತ್ತು ಇತರೆ ಪರಿಹಾರಗಳನ್ನು ಕೋರಿ ರಾಮನಗರ ಜಿಲ್ಲೆ, ಮಾಗಡಿ ತಾಲ್ಲೂಕು, ಕಸಬಾ ಹೋಬಳಿ, ಸಿಡಿಗನಹಳ್ಳಿ ಗ್ರಾಮದ ಸರ್ವೆ ನಂ.12/4 ರಲ್ಲಿ ವಿಸ್ತೀರ್ಣ 0–38 ಗುಂಟೆ ಮತ್ತು 0–02 ಗುಂಟೆ ಖರಾಬು ಇದರಲ್ಲಿರುವ 25 ಮಾವಿನ ಮರಗಳು ಇದರ ಚಕ್ಕುಬಂದಿ ಪೂರ್ವಕ್ಕೆ: ವಾದಿಯ ಕುಟುಂಬದ ಸ್ವತ್ತು, ಪಶ್ಚಿಮಕ್ಕೆ: ವಾದಿಯ ಕುಟುಂಬದ ಸ್ವತ್ತು, ಉತ್ತರಕ್ಕೆ: ರೇವಣ್ಣ ಮತ್ತು ನಾರಾಯಣಪ್ಪನವರ ಸ್ವತ್ತು, ದಕ್ಷಿಣಕ್ಕೆ: ಅರಸಯ್ಯನವರ ಸ್ವತ್ತು. ಸದರಿ ಸ್ವತ್ತಿಗೆ ಸಂಬಂಧಿಸಿದಂತೆ ವಾದಿಯು ಮಾಗಡಿ ಅಪರ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಸಲ್ಲಿಸಿದ್ದು, ಸದರಿ ಪ್ರಕರಣದಲ್ಲಿ 3 ಮತ್ತು 4ನೇ ಉದ್ದೇಶಿತ ಪ್ರತಿವಾದಿಗಳನ್ನಾಗಿ ಶ್ರೀ ಹನುಮಂತಯ್ಯ ಬಿನ್ ಸಿದ್ದಪ್ಪ, ಸುಮಾರು 42 ವರ್ಷ ಮತ್ತು ಶ್ರೀ ಮಂಜುನಾಥ ಬಿನ್ ಸಿದ್ದಪ್ಪ, ಸುಮಾರು 40 ವರ್ಷ ಇಬ್ಬರ ವಾಸ ಹರಿನಗರ, ಕೊತ್ತನೂರು ತಿರುವು, 2ನೇ ತಿರಿದು, ರಾಮಮಂದಿರ ಹತ್ತಿರ, ಅಂಜನಾಪುರ ಅಂಚೆ, ಕೋಣನ ಕುಂಟೆ, ಬೆಂಗಳೂರು–560078, ರವರನ್ನು ಅಸಲು ದಾವಾ ನಂ.572/2021ರ ದಾವೆಯಲ್ಲಿ ಪ್ರತಿವಾದಿ ಸಂಖ್ಯೆ:3 ಮತ್ತು 4 ಎಂದು ಪಕ್ಷಗಾರರನ್ನಾಗಿ ಮಾಡಲು ಮಧ್ಯಂತರ ಅರ್ಜಿ ಸಲ್ಲಿಸಿದ್ದು ಸದರಿ ಪ್ರಕರಣವು ದಿನಾಂಕ: 30.11.2024 ರಂದು ಮುದ್ದತ್ತು ಇರುತ್ತದೆ. ಸದರಿ ಪ್ರಕರಣದಲ್ಲಿ ಮೇಲ್ಕಂಡ ಉದ್ದೇಶಿತ 3 ಮತ್ತು 4ನೇ ಪ್ರತಿವಾದಿಗಳು ತಕರಾರು ಸಲ್ಲಿಸುವ ಇಚ್ಛೆಯಿದ್ದಲ್ಲಿ ಸದರಿ ದಿನಾಂಕದಂದು ಬೆಳಿಗ್ಗೆ 11–00 ಗಂಟೆಗೆ ಮಾಗಡಿ ಅಪರ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯದಲ್ಲಿ ಹಾಜರಾಗತಕ್ಕದ್ದು, ತಪ್ಪಿದ್ದಲ್ಲಿ ವಾದಿಯು ಸಲ್ಲಿಸಿರುವ ಮಧ್ಯಂತರ ಅರ್ಜಿ ಕಾನೂನಿನ ಅಡಿಯಲ್ಲಿ ಪರಿಗಣಿಸಲಾಗುವುದು ಮತ್ತು ಏಕಪಕ್ಷೀಯವಾಗಿ ಆದೇಶವಾಗುತ್ತದೆ. ನ್ಯಾಯಾಲಯದ ಮೊಹರು ಮತ್ತು ಸಹಿಯೊಂದಿಗೆ ದಿನಾಂಕ:21.10.24 ರಂದು ನೀಡಲಾಗಿದೆ.
ನ್ಯಾಯಾಲಯದ ಅಪ್ಪಣೆ ಮೇರೆಗೆ
ಶಿರಸ್ತೇದಾರರು
ಅಪರ ಹಿರಿಯ ಶ್ರೇಣಿಯ ಸಿವಿಲ್ ಜಡ್ಜ್ ನ್ಯಾಯಾಲಯ, ಮಾಗಡಿ
ವಾದಿ ಪರ ವಕೀಲರು
ಎಂ. ಗುಡ್ಡಪ್ಪ

ಉದ್ಯೋಗಾವಕಾಶ
General
ಉದ್ಯೋಗಾವಕಾಶಗಳು TVS ಬ್ರಿಟಾನಿಯಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಿಗೆ 7th,PUC, ITI, Degree. ಸಂಬಳ 16,000- 86,000. (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿರುತ್ತದೆ. 9035710381

Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

Drivers
ಯಲಹಂಕದ ವಿಶೇಷ ಮಕ್ಕಳ ಶಾಲೆಗೆ ಡ್ರೈವರ್ಸ್ ಬೇಕಾಗಿದ್ದಾರೆ. ಆಸಕ್ತರು ಸಂಪರ್ಕಿಸಿ. +91 9606272996

ಭವಿಷ್ಯ
Astrology
ಕೆಲಸಆದ ನಂತರ ಕಾಣಿಕೆ ನೀವು ಇಷ್ಟಪಟ್ಟವರು ನಿಮ್ಮಂತಾಗಲು, ಧನವಶ, ಜನವಶ, ಭೂಮಿ ವಶ, ಶತ್ರುನಾಶ, ಇನ್ನೂ ನಿಮ್ಮ ಸಮಸ್ಯೆ ಏನೇಯಿದ್ದರೂ ಕಾಮಾಕ್ಯಕ್ಷೇತ್ರದ ಅಥರ್ವಣ ಆಳಂದಿಬ್ಭೈರವಿ ತಾಂತ್ರಿಕವಿದ್ಯೆಯಿಂದ ಕೇವಲ 11ಗಂಟೆಯಲ್ಲಿ ಫೋನಿನ ಮೂಲಕ 100%ಶಾಶ್ವತ ಪರಿಹಾರ. ಕರೆಮಾಡಿ: 9686168466.

ಪ್ರವಾಸ
Travel
★ಶ್ರೇಯಸ್ ಟೂರ್ಸ್★ 20.11.2024 12/15/21ದಿನಗಳು ಈಶಾನ್ಯ ಭಾರತ ರಾಜ್ಯಗಳ(ಸೆವೆನ್ ಸಿಸ್ಟರ್ಸ್)ಅಸ್ಸಾಂ,ಅರುಣಾಚಲ ಮೇಘಾಲಯ,ನಾಗಲ್ಯಾಂಡ್ ಮಣಿಪುರ,ತ್ರಿಪುರ,ಮಿಜೋರಾಂ 08.11.2024 7ದಿನಗಳು ಭೂತಾನ್ ರಾಷ್ಟ್ರದ ತಿಂಪೂ ಪಾರೋ,ಪುನಕಾ,ಫೂಚಲಿಂಗ್. 01.12.2024 13ದಿನಗಳು ಅಖಂಡ ಮಧ್ಯಪ್ರದೇಶ ರಾಜ್ಯ ಪ್ರವಾಸ (ಅಮರಕಂಟಕ ಮಯ್ಯಾರ್ ಸಹಿತ). 20.12.2024 9ದಿನಗಳು ವಿಜಯವಾಡ,ಮಂಗಳಗಿರಿ ಪಂಚರಾಮ,ಪೀಠಾಪುರಂ ಅನ್ನಾವರಂ,ವಿಶಾಖಪಟ್ಟಣ ಅರಕು,ಶ್ರೀಕೂರ್ಮಂ 20.10.2024,21.11.2024, 20.12.2024 7ದಿನಗಳು ಕಾಶಿ ನೈಮಿಷ್ಯಾರಣ್ಯ,ಪ್ರಯಾಗ್ ಗಯಾ,ದೇವ್‌ಘರ್,ನಳಂದ 01.12.2024 10ದಿನಗಳು ಅಖಂಡ ರಾಜಸ್ಥಾನ ಪ್ರವಾಸ. 21.11.2024,20.12.2024 12ದಿನಗಳು ಅಖಂಡ ಗುಜರಾತ್ ರಾಜ್ಯ ಪ್ರವಾಸ (ಬುಜ್‌ಕಚ್ ಸಹಿತ)(ಉಜ್ಜೈನಿ ಓಂಕಾರ್ ಸಹಿತ).9743351212/ 9206979202

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
ರಿಯಲ್ ಎಸ್ಟೇಟ್
ಪ್ರತಿ ಶನಿವಾರ + ಭಾನುವಾರ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
@ 2244/-* FOR 15 WORDS
*Conditions apply
www.dhclassifieds.com ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 9845114560 | +91 9901641752 | 080-45557163/164

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಎರಡನೇ ಟೆಸ್ಟ್ ಕ್ರಿಕೆಟ್ ಇಂದಿನಿಂದ • ಕಿವೀಸ್ ಬಳಗಕ್ಕೆ ಸರಣಿ ಜಯದ ಕನಸು • ರಾಹುಲ್ ಆಯ್ಕೆಯ ಕುತೂಹಲ

ಪುಣೆಯಲ್ಲಿ ಪುಟಿದೇಳುವುದೇ ಶರ್ಮಾ ಪಡೆ?

ಪ್ರಜಾವಾಣಿ ವಾರ್ತೆ

ಪುಣೆಯಲ್ಲಿ ಬುಧವಾರ ಅಭ್ಯಾಸ ನಡೆಸಿದ ಭಾರತ ತಂಡದ ರವೀಂದ್ರ ಜಡೇಜ ಮತ್ತು ವಿರಾಟ್ ಕೊಹ್ಲಿ (ಬಲಬದಿ) ಅವರು ಮುಖ್ಯ ಕೋಚ್ ಗೌತಮ್ ಗಂಭೀರ್ —ಎಎಫ್‌ಪಿ ಚಿತ್ರ

ಪುಣೆ: ಭಾರತದಲ್ಲಿ ಕ್ರಿಕೆಟ್ ಅಚ್ಚುಮೆಚ್ಚಿನ ಅಟ. ಇದರ ಸುತ್ತ ನಡೆಯುವ ಚರ್ಚೆಗಳು ಹಲವಾರು. ಅದರಲ್ಲಿ ಆಟಗಾರರ ಆಯ್ಕೆ, ಸಂಯೋಜನೆ ಮತ್ತು ಸೂಕ್ಷ್ಮವಾದ ಸಂಗತಿಗಳ ಕುರಿತ ಮಾತುಕತೆಗಳ ಪ್ರವೃತ್ತಿ ಇದೆ. ಆದ್ದರಿಂದಲೇ ತಂಡವು ಸೋತಾಗ ಅತ್ಯಂತ ಸೂಕ್ಷ್ಮಾತಿಸೂಕ್ಷ್ಮ ಸಂಗತಿಗಳು ಮುನ್ನೆಲೆಗೆ ಬರುತ್ತದೆ.

ಬೆಂಗಳೂರಿನಲ್ಲಿ ಈಚೆಗೆ ಮುಗಿದ ಟೆಸ್ಟ್ ಪಂದ್ಯದಲ್ಲಿ ಭಾರತ ತಂಡವು ನ್ಯೂಜಿಲೆಂಡ್ ಎದುರು ಪರಾಭವಗೊಂಡ ನಂತರ ಇಂತಹ ಚರ್ಚೆಗಳು ನಡೆದಿವೆ. ತವರು ನೆಲದಲ್ಲಿ ಭಾರತ ತಂಡವು 36 ವರ್ಷಗಳ ನಂತರ ಕಿವೀಸ್ ಎದುರು ಸೋತಿತು. ಆದರೆ, ಸಾಮಾಜಿಕ ಜಾಲತಾಣ ಮತ್ತಿತರ ಮಾಧ್ಯಮಗಳಲ್ಲಿ ಬಂದ ಇಂತಹ ಅಭಿಪ್ರಾಯಗಳನ್ನು ಭಾರತ ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ಒಪ್ಪುವುದಿಲ್ಲ.

ಅವರು ಒಪ್ಪಲಿ, ಬಿಡಲಿ, ಆತಿಥೇಯ ಆಟಗಾರರು ಈ ಎಲ್ಲ ಚರ್ಚೆಗಳ ಸುಳಿಯಿಂದ ಹೊರಬರಲು ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ನಡೆಯಲಿರುವ ಎರಡನೇ ಟೆಸ್ಟ್‌ನಲ್ಲಿ ಜಯಿಸುವತ್ತ ಚಿತ್ತ ನೆಟ್ಟಿದ್ದಾರೆ. ಗುರುವಾರ ಇಲ್ಲಿ ಆರಂಭವಾಗಲಿರುವ ಪಂದ್ಯದಲ್ಲಿ ಕಣಕ್ಕಿಳಿಸುವ 11ರ ಬಳಗದ ಕುರಿತು ಲೆಕ್ಕಾಚಾರ ನಡೆಯುತ್ತಿದೆ.

ಕನ್ನಡಿಗ ಕೆ.ಎಲ್. ರಾಹುಲ್ ಅವರು ಮತ್ತೊಂದು ಅವಕಾಶ ಗಿಟ್ಟಿಸುವರೇ ಎಂಬ ಬಗ್ಗೆ ಈಗ ಕುತೂಹಲ ಗರಿಗೆದರಿದೆ. ಯುವ ಆಟಗಾರರು ತಮ್ಮ ಸಾಮರ್ಥ್ಯ ಮೆರೆದು ಭರವಸೆ ಮೂಡಿಸಿದ್ದಾರೆ. ಆದರಿಂದಾಗಿ ಫಾರ್ಮ್ ಕೊರತೆ ಅನುಭವಿಸುತ್ತಿರುವ ರಾಹುಲ್ ಸ್ಥಾನ ಪಡೆಯದಿರುವ ಸಾಧ್ಯತೆ ಹೆಚ್ಚು. ಪಂದ್ಯಪೂರ್ವ ಪತ್ರಿಕಾಗೋಷ್ಠಿಯಲ್ಲಿ ಗೌತಮ್ ಗಂಭೀರ್ ಅವರು ರಾಹುಲ್ ಅವರನ್ನು ಸಮರ್ಥಿಸಿಕೊಂಡಿದ್ದಾರೆ. ಅದೇ ರೀತಿ ತಂಡದ ಮ್ಯಾನೇಜ್‌ಮೆಂಟ್ ಕೂಡ ಅವರನ್ನು ಸಮರ್ಥಿಸುವುದೇ ಎಂಬ ಪ್ರಶ್ನೆಗೆ ಶೀಘ್ರ ಉತ್ತರ ಸಿಗಲಿದೆ.

ಸಂಪೂರ್ಣ ಫಿಟ್ ಆಗಿರುವ ಶುಭಮನ್ ಗಿಲ್ ಅವರು ಕಣಕ್ಕಿಳಿಯಲು ಸಿದ್ಧರಾಗಿದ್ದಾರೆ. ಇದರಿಂದಾಗಿ ರಾಹುಲ್ ಮತ್ತು ಸರ್ಫರಾಜ್ ಖಾನ್ ಅವರು ಆಯ್ಕೆಯಾಗುವ ಕುರಿತು ಗುರುವಾರ ಬೆಳಿಗ್ಗೆ ಸ್ಪಷ್ಟವಾಗಲಿದೆ.

ಭಾರತದ ಸರ್ಫರಾಜ್ ಖಾನ್ ಬ್ಯಾಟಿಂಗ್ ಅಭ್ಯಾಸ ನಡೆಸಿದರು —ಎಎಫ್‌ಪಿ ಚಿತ್ರ

ಬೌಲಿಂಗ್ ವಿಭಾಗದಲ್ಲಿಯೂ ಇದೇ ರೀತಿಯಾದ ಆಯ್ಕೆ ಗೊಂದಲವಿದೆ. ಮೊಹಮ್ಮದ್ ಸಿರಾಜ್ ಕಳೆದ ಪಂದ್ಯದಲ್ಲಿ ಅಷ್ಟೇನೂ ಲಯದಲ್ಲಿ ಇರಲಿಲ್ಲ. ಅದರಿಂದಾಗಿ ಆಕಾಶ್ ದೀಪ್ ತಮ್ಮ ಹೆಜ್ಜೆಗುರುತು ಮೂಡಿಸಲು ಕಾತುರದಿಂದ ಕಾಯುತ್ತಿದ್ದಾರೆ.

ಭಾರತವು ಮೂರನೇ ಸ್ಪಿನ್ನರ್ ಆಡಿಸಲು ಯೋಚಿಸುತ್ತಿದೆ. ಆದರೆ ಬೆಂಗಳೂರಿನಲ್ಲಿ ಮೂವರು ಸ್ಪಿನ್ನರ್‌ಗಳ ಸಂಯೋಜನೆಯು ವಿಫಲವಾಗಿತ್ತು. ಅದರಿಂದಾಗಿ ಕುಲದೀಪ್ ಯಾದವ್ ಅವರಿಗೆ ಇನ್ನೊಂದು ಅವಕಾಶ ಕೊಡುವರೇ ಕಾದು ನೋಡಬೇಕು. ಒಂದೊಮ್ಮೆ ಅವರಲ್ಲದಿದ್ದರೆ, ಸ್ಪಿನ್-ಆಲ್‌ರೌಂಡರ್ ವಾಷಿಂಗ್ಟನ್ ಸುಂದರ್ ಕಣಕ್ಕಿಳಿಯಬಹುದು. ಕಿವೀಸ್ ಬೌಲರ್‌ಗಳು ಈ ಹಿಂದೆ ಭಾರತದ ಎಡಗೈ ಬ್ಯಾಟರ್‌ಗಳ ಎದುರು ಹೆಚ್ಚು ಸಫಲರಾಗಿರಲಿಲ್ಲ. ಆದ್ದರಿಂದ ವಾಷಿಂಗ್ಟನ್ ಉಪಯುಕ್ತ ಆಟಗಾರನಾಗಬಹುದು.

ನ್ಯೂಜಿಲೆಂಡ್ ತಂಡದ ನಾಯಕ ಟಾಮ್ ಲೇಥಮ್

ಆತಿಥೇಯ ತಂಡದ ಸಂಯೋಜನೆ ಏನೇ ಇರಲಿ. ಭಾರತದಲ್ಲಿ ಸರಣಿ ಜಯದ ಇತಿಹಾಸ ರಚಿಸುವ ಅವಕಾಶವಂತೂ ನ್ಯೂಜಿಲೆಂಡ್ ತಂಡಕ್ಕೆ ಇದೆ. 3 ಪಂದ್ಯಗಳ ಸರಣಿಯಲ್ಲಿ 1–0 ಮುಂದಿರುವ ಕಿವೀಸ್ ಬಳಗವು ಪುಣೆಯಲ್ಲಿಯೂ ತನ್ನ ಛಾಪು ಮೂಡಿಸುವ ಛಲದಲ್ಲಿದೆ. ತಂಡದ ವೇಗಿಗಳಾದ ಟಿಮ್ ಸೌಥಿ, ಮ್ಯಾಟ್ ಹೆನ್ರಿ ಮತ್ತು ವಿಲಿಯಮ್ ಓ ರೂರ್ಕಿ ಅವರು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಒಟ್ಟು 17 ವಿಕೆಟ್‌ಗಳನ್ನು ಹಂಚಿಕೊಂಡಿದ್ದರು. ಆದರೆ ಪುಣೆಯ ಪಿಚ್ ವೇಗಿಗಳಿಗೆ ನೆರವಾಗುವಂತಿಲ್ಲ. ಆದ್ದರಿಂದ ಅನುಭವಿ ಸ್ಪಿನ್ನರ್ ಮಿಚೆಲ್ ಸ್ಯಾಂಟನರ್ ಮುಂಚೂಣಿಗೆ ಬರುವ ಸಾಧ್ಯತೆ ಇದೆ. ಅವರಿಗಾಗಿ ಸ್ಥಾನ ಬಿಟ್ಟುಕೊಡುವ ಬೌಲರ್ ಯಾರೆಂಬುದು ಇನ್ನಷ್ಟೇ ತಿಳಿಯಬೇಕಿದೆ.

ಡೆವೊನ್ ಕಾನ್ವೆ, ಡ್ಯಾರಿಲ್ ಮಿಚೆಲ್, ರಚಿನ್ ರವೀಂದ್ರ ಮತ್ತು ನಾಯಕ ಟಾಮ್ ಲೇಥಮ್ ಅವರು ಬ್ಯಾಟಿಂಗ್ ವಿಭಾಗದ ಶಕ್ತಿಯಾಗಿದ್ದಾರೆ.

ಪಂದ್ಯ ಆರಂಭ: ಬೆಳಿಗ್ಗೆ 9.30
ನೇರಪ್ರಸಾರ: ಸ್ಪೋರ್ಟ್ಸ್ 18, ಜಿಯೊ ಸಿನಿಮಾ

ಕೀಪಿಂಗ್ ಮಾಡಲು ರಿಷಭ್ ಸಿದ್ಧ: ಗಂಭೀರ್

ಪುಣೆ (ಪಿಟಿಐ): ರಿಷಭ್ ಪಂತ್ ಅವರಿಗೆ ಗಾಯದ ಸಮಸ್ಯೆ ಇಲ್ಲ. ಅವರು ವಿಕೆಟ್‌ಕೀಪಿಂಗ್ ಮಾಡಲು ಸಿದ್ಧರಾಗಿದ್ದಾರೆ. ವೇಗದ ಬೌಲರ್ ಜಸ್‌ಪ್ರೀತ್ ಬೂಮ್ರಾ ಅವರ ಕೆಲಸದ ಒತ್ತಡ ನಿರ್ವಹಣೆಯ ಕುರಿತು ಪುಣೆ ಟೆಸ್ಟ್ ನಂತರ ಯೋಚಿಸಲಾಗುವುದು ಎಂದು ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್ ಗೌತಮ್ ಗಂಭೀರ್ ಹೇಳಿದರು.

ಬುಧವಾರ ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ನನಗೆ ಗೊತ್ತಿರುವ ಪ್ರಕಾರ ನಾಳೆ (ಗುರುವಾರ) ರಿಷಭ್ ಕೀಪಿಂಗ್ ಮಾಡಲಿದ್ದಾರೆ. ಅವರ ಫಿಟ್‌ನೆಸ್‌ಗೆ ಸಂಬಂಧಿಸಿದಂತೆ ಯಾವುದೇ ದೂರುಗಳಿಲ್ಲ' ಎಂದರು.

ಬೆಂಗಳೂರು ಟೆಸ್ಟ್ ಪಂದ್ಯದ ಮೊದಲ ಇನಿಂಗ್ಸ್‌ನಲ್ಲಿ ಕೀಪಿಂಗ್ ಮಾಡುವಾಗ ರಿಷಭ್ ಅವರ ಮೊಣಕಾಲಿಗೆ ಚೆಂಡು ಬಡಿದಿತ್ತು. ಈ ಹಿಂದೆ ಅಪಘಾತದಲ್ಲಿ ಗಾಯವಾಗಿದ್ದ ಜಾಗದಲ್ಲಿಯೇ ಪೆಟ್ಟು ಬಿದ್ದ ಕಾರಣ ಅವರ ಓಟದ ವೇಗವು ಕಡಿಮೆಯಾಗಿತ್ತು. ಅದರಿಂದಾಗಿ ಅವರು ಕೀಪಿಂಗ್ ಮಾಡಲಿಲ್ಲ. ಆದರೆ ಎರಡನೇ ಇನಿಂಗ್ಸ್‌ನಲ್ಲಿ ಬ್ಯಾಟಿಂಗ್ ಮಾಡಿದ್ದರು. 99 ರನ್ ಗಳಿಸಿ ತಂಡಕ್ಕೆ ಆಸರೆಯಾಗಿದ್ದರು. ರಿಷಭ್ ಬದಲಿಗೆ ಧ್ರುವ ಜುರೇಲ್ ಕೀಪಿಂಗ್ ನಿಭಾಯಿಸಿದ್ದರು.

'ಬೂಮ್ರಾ ಅವರಷ್ಟೇ ಅಲ್ಲ ಉಳಿದೆಲ್ಲ ಆಟಗಾರರ ಕಾರ್ಯೋತ್ತಡದ ವಿಶ್ಲೇಷಣೆಯು ನಡೆಯಲಿದೆ. ಅದರೆ ಸರಣಿ ಮುಗಿಯಬೇಕಷ್ಟೇ. ಈ ಟೆಸ್ಟ್ ನಂತರ ಬೂಮ್ರಾ ಅವರ ಕುರಿತು ಯೋಚಿಸಲಾಗುವುದು' ಎಂದು ಸ್ಪಷ್ಟಪಡಿಸಿದರು.

ಪುಣೇರಿ ಪಲ್ಟನ್ ಎದುರಿನ ಪಂದ್ಯದಲ್ಲಿ ತಮಿಳ್ ತಲೈವಾಸ್ ತಂಡದ ಸಚಿನ್ ರೇಡಿಂಗ್ ನಡೆಸಿದ ಪರಿ.

ತಲೈವಾಸ್‌ಗೆ ತಲೆಬಾಗಿದ ಪುಣೇರಿ

ಹೈದರಾಬಾದ್: ರೇಡಿಂಗ್ ಮತ್ತು ಟ್ಯಾಕಲ್ ಎರಡೂ ವಿಭಾಗಗಳಲ್ಲಿ ಮಿಂಚಿದ ತಮಿಳ್ ತಲೈವಾಸ್ ತಂಡ ಪ್ರೊ ಕಬಡ್ಡಿ ಲೀಗ್ 11ನೇ ಆವೃತ್ತಿಯ ತನ್ನ ಎರಡನೇ ಪಂದ್ಯದಲ್ಲಿ ಕಳೆದ ಬಾರಿಯ ಚಾಂಪಿಯನ್ ಪುಣೇರಿ ಪಲ್ಟನ್ ತಂಡಕ್ಕೆ ಆಘಾತ ನೀಡಿತು. ತಲೈವಾಸ್‌ಗೆ ಇದು ಎರಡನೇ ಗೆಲುವಾಗಿದೆ.

ಗಚ್ಚಿಬೌಲಿ ಒಳಾಂಗಣ ಕ್ರೀಡಾಂಗಣದಲ್ಲಿ ಬುಧವಾರದ ಮೊದಲ ಪಂದ್ಯದಲ್ಲಿ ತಲೈವಾಸ್ ತಂಡ 35–30 ರಲ್ಲಿ ಐದು ಪಾಯಿಂಟ್‌ಗಳಿಂದ ಹ್ಯಾಟ್ರಿಕ್ ಜಯದ ನಿರೀಕ್ಷೆಯಲ್ಲಿದ್ದ ಪುಣೇರಿ ಪಲ್ಟನ್ ತಂಡದ ಕನಸನ್ನು ಭಗ್ನಗೊಳಿಸಿತು.

ತಲೈವಾಸ್ ತಂಡದ ಪರ ರೇಡರ್‌ಗಳಾದ ನರೇಂದರ್ ಖಂಡೋಲಾ (9 ಅಂಕ), ಸಚಿನ್ (8 ಅಂಕ) ಮತ್ತು ಡಿಫೆಂಡರ್ ನಿತೇಶ್ ಕುಮಾರ್ (5 ಅಂಕ) ಮಿಂಚಿದರು.

ತನ್ನ ಮೊದಲ ಎರಡು ಪಂದ್ಯಗಳಲ್ಲಿ ಹರಿಯಾಣ ಸ್ಟೀಲರ್ಸ್ ಮತ್ತು ಪಟ್ನಾ ಪೈರೇಟ್ಸ್ ವಿರುದ್ಧ ಗೆದ್ದು ಭರ್ಜರಿಯಾಗಿ ಅಭಿಯಾನ ಆರಂಭಿಸಿದ್ದ ಪುಣೇರಿ ಪಲ್ಟನ್ ತಂಡದ ಪರ ಮೋಹಿತ್ ಗೋಯೆತ್ (13 ಅಂಕ) ಮತ್ತು ನಾಯಕ ಅಸ್ಲಾಮ್ ಇನಾಮದಾರ್ (4 ಅಂಕ) ಮಾತ್ರ ಗಮನ ಸೆಳೆದರು.

ಲೀಗ್‌ನಲ್ಲೇ ಅತ್ಯಧಿಕ ಮೊತ್ತ (₹2.15 ಕೋಟಿ) ಪಡೆದಿರುವ ಸಚಿನ್ ಹಾಗೂ ನರೇಂದರ್ ಆರಂಭದಿಂದಲೇ ಎದುರಾಳಿಯ ಮೇಲೆ ಒತ್ತಡ ಹೇರಿದರು. ಉಭಯ ತಂಡಗಳು ಎರಡೂ ಅವಧಿಗಳಲ್ಲಿ ಬಹುತೇಕ ಸಮಬಲದ ಹೋರಾಟ ನೀಡಿದವು. ವಿರಾಮದ ವೇಳೆ ತಮಿಳ್ ತಲೈವಾಸ್ ತಂಡ 19–15ರಲ್ಲಿ ಮುಂದಿತ್ತು. ಆದರೆ ತಲೈವಾಸ್ ಎರಡು ಬಾರಿ ಎದುರಾಳಿ ತಂಡವನ್ನು ಆಲೌಟ್ ಮಾಡಿದ್ದು ಮುನ್ನಡೆ ಸಾಧಿಸಲು ನೆರವಾಯಿತು.

ದಿನದ ಮತ್ತೊಂದು ಪಂದ್ಯದಲ್ಲಿ ಯು ಮುಂಬಾ ತಂಡವು 33–27 ಅಂತರದಿಂದ ಗುಜರಾತ್ ಜೈಂಟ್ಸ್ ತಂಡವನ್ನು ಮಣಿಸಿತು.

ಗುರುವಾರದ ಪಂದ್ಯಗಳು
ಬೆಂಗಾಲ್ ವಾರಿಯರ್ಸ್– ಯು.ಪಿ. ಯೋಧಾಸ್ (ರಾತ್ರಿ 8); ಹರಿಯಾಣ ಸ್ಟೀಲರ್ಸ್– ಜೈಪುರ ಪಿಂಕ್ ಪ್ಯಾಂಥರ್ಸ್ (ರಾತ್ರಿ 9)

THE PRINTERS (MYSORE) PRIVATE LIMITED
Publishers: DECCAN HERALD, PRAJAVANI, SUDHA & MAYURA

We are a leading newspaper and magazine publishing group in Karnataka. We invite applications for the following position in our organisation.

Executive-Maintenance/Production

Department : Production
Qualification : BE or Diploma (Electrical, Mechanical or Mechatronics)
Experience : 4 years and above
Job Location : Kumbalgodu (Bangalore), Mangalore

Requirement:
- Should have hands on experience in maintenance and service of High-speed web offset press, Mail room, utility equipment
- Should be thorough in breakdown maintenance, predictive maintenance, preventive and autonomous maintenance.
- Should be willing to work in shifts including night shift.
- Should be able to communicate both in English and Kannada.

Assistant Manager-Talent Acquisition
The Printers (Mysore) Private Limited
75, Mahatma Gandhi Road, Bengaluru – 560 001
E-mail: neesha.srinivas@printersmysore.co.in

ಎಸಿಸಿ ಎಮರ್ಜಿಂಗ್ ಏಷ್ಯಾ ಕಪ್ ಟಿ20 ಕ್ರಿಕೆಟ್

ಅಜೇಯವಾಗಿ ಸೆಮಿಗೆ ಭಾರತ ಎ

ಮಸ್ಕತ್ (ಪಿಟಿಐ): ಭಾರತ 'ಎ' ತಂಡವು ಎಸಿಸಿ ಎಮರ್ಜಿಂಗ್ ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ಅಜೇಯವಾಗಿ ಸೆಮಿಫೈನಲ್‌ಗೆ ಲಗ್ಗೆ ಹಾಕಿದೆ.

ಬುಧವಾರ ನಡೆದ 'ಬಿ' ಗುಂಪಿನ ಕೊನೆಯ ಪಂದ್ಯದಲ್ಲಿ ತಿಲಕ್ ವರ್ಮಾ ನೇತೃತ್ವದ ಭಾರತ ತಂಡವು 6 ವಿಕೆಟ್‌ಗಳಿಂದ ಒಮನ್ ತಂಡವನ್ನು ಮಣಿಸಿತು. ಶುಕ್ರವಾರ ನಡೆಯುವ ಸೆಮಿಫೈನಲ್‌ನಲ್ಲಿ ಭಾರತ ಅಫ್ಗಾನಿಸ್ತಾನ ತಂಡವನ್ನು ಎದುರಿಸಲಿದೆ.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ಕೆ ಮಾಡಿಕೊಂಡ ಒಮನ್ 20 ಓವರ್‌ಗಳಲ್ಲಿ 5 ವಿಕೆಟ್‌ಗೆ 140 ರನ್ ಗಳಿಸಿತು. ಈ ಗುರಿಯನ್ನು ಭಾರತ ತಂಡವು ಆಯುಷ್ ಬದೋನಿ (51 ರನ್, 27ಎ) ಅರ್ಧಶತಕದ ನೆರವಿನಿಂದ 15.2 ಓವರ್ ಗಳಲ್ಲಿ 4 ವಿಕೆಟ್ ನಷ್ಟಕ್ಕೆ ತಲುಪಿ ಜಯಭೇರಿ ಬಾರಿಸಿತು.

ಆಡಿರುವ ಮೂರೂ ಪಂದ್ಯ ಗೆದ್ದಿರುವ ಭಾರತ ತಂಡವು 'ಬಿ' ಗುಂಪಿನಲ್ಲಿ ಅಗ್ರಸ್ಥಾನ ಪಡೆದಿದೆ. ಮೂರು ಪಂದ್ಯಗಳ ಪೈಕಿ ಎರಡನ್ನು ಗೆದ್ದಿರುವ ಪಾಕಿಸ್ತಾನ ಶಾಹೀನ್ಸ್ ತಂಡ ನಾಲ್ಕು ಅಂಕ ಗಳಿಸಿ, ಎರಡನೇ ಸ್ಥಾನದೊಂದಿಗೆ ನಾಲ್ಕರ ಘಟ್ಟಕ್ಕೆ ಮುನ್ನಡೆಯಿತು. ಪಾಕ್ ತಂಡವು ಮತ್ತೊಂದು ಸೆಮಿಫೈನಲ್‌ನಲ್ಲಿ ಶ್ರೀಲಂಕಾ ಎ ತಂಡವನ್ನು ಎದುರಿಸಲಿದೆ.

ಸಂಕ್ಷಿಪ್ತ ಸ್ಕೋರ್: ಒಮನ್: 20 ಓವರ್‌ಗಳಲ್ಲಿ 5ಕ್ಕೆ 140 (ಮೊಹಮ್ಮದ್ ನದೀಮ್ 41, ಹಮ್ಮದ್ ಮಿರ್ಜಾ ಔಟಾಗದೆ 28; ಆರ್. ಸಾಯಿ ಕಿಶೋರ್ 21ಕ್ಕೆ 1). ಭಾರತ ಎ: 15.2 ಓವರ್‌ಗಳಲ್ಲಿ 4ಕ್ಕೆ 146 (ಆಯುಷ್ ಬದೋನಿ 51, ತಿಲಕ್ ವರ್ಮಾ ಔಟಾಗದೆ 36, ಅಭಿಷೇಕ್ ಶರ್ಮಾ 34). ಫಲಿತಾಂಶ: ಭಾರತ ಎ ತಂಡಕ್ಕೆ 6 ವಿಕೆಟ್ ಜಯ. ಪಂದ್ಯದ ಆಟಗಾರ: ಆಯುಷ್ ಬದೋನಿ

ಆಯುಷ್ ಬದೋನಿ —ಎಕ್ಸ್ ಚಿತ್ರ

ರಝಾ ಶತಕ: ಜಿಂಬಾಬ್ವೆ ದಾಖಲೆ ರನ್

ಪ್ಯಾರಿಸ್ (ಎಎಫ್‌ಪಿ): ಸಿಕಂದರ್ ರಝಾ (ಔಟಾಗದೇ 133; 43 ಎ) ಅವರ ಸಿಡಿಲಬ್ಬರದ ಬ್ಯಾಟಿಂಗ್ ನೆರವಿನಿಂದ ಜಿಂಬಾಬ್ವೆ ತಂಡವು ಟಿ20 ಪಂದ್ಯದಲ್ಲಿ ಗ್ಯಾಂಬಿಯಾ ವಿರುದ್ಧ ನಾಲ್ಕು ವಿಕೆಟ್‌ಗೆ ದಾಖಲೆಯ 344 ರನ್ ಗಳಿಸಿತು. ಇದು ಅಂತರರಾಷ್ಟ್ರೀಯ ಟಿ20 ಕ್ರಿಕೆಟ್ ಮಾದರಿಯಲ್ಲಿ ತಂಡವೊಂದರ ಗರಿಷ್ಠ ಮೊತ್ತವಾಗಿದೆ.

ಟಿ20 ವಿಶ್ವಕಪ್‌ನ ಆಫ್ರಿಕಾದ ಉಪ ವಿಭಾಗದ ಕ್ವಾಲಿಫೈಯರ್ ಪಂದ್ಯದಲ್ಲಿ ಜಿಂಬಾಬ್ವೆ ತಂಡವು ದಾಖಲೆಯ ರನ್ ಸೇರಿಸಿದ್ದು, ಈ ಮೂಲಕ ಕಳೆದ ವರ್ಷ ಹಾಂಗ್‌ಝೌನಲ್ಲಿ ಮಂಗೋಲಿಯಾ ವಿರುದ್ಧ ನೇಪಾಳ ತಂಡ (3ಕ್ಕೆ 314) ನಿರ್ಮಿಸಿದ್ದ ದಾಖಲೆಯನ್ನು ಮುರಿಯಿತು.

ಸಿಕಂದರ್ ರಝಾ —ಎಕ್ಸ್ ಚಿತ್ರ

ಏಳನೇ ಓವರ್‌ನಲ್ಲಿ ಎರಡನೇ ವಿಕೆಟ್ ಪತನದ ನಂತರ ಕ್ರೀಸ್‌ಗೆ ಬಂದ ರಝಾ, ಏಳು ಬೌಂಡರಿ ಮತ್ತು 15 ಭರ್ಜರಿ ಸಿಕ್ಸರ್ ಸಿಡಿಸಿ ಎದುರಾಳಿ ಬೌಲರ್‌ಗಳನ್ನು ಮನಬಂದಂತೆ ದಂಡಿಸಿದರು. ಕೇವಲ 33 ಎಸೆತಗಳಲ್ಲಿ ಶತಕ ಪೂರೈಸಿದ ಅವರು, ಟಿ20 ಮಾದರಿಯಲ್ಲಿ ಎರಡನೇ ಅತಿ ವೇಗದ ಶತಕ ಗಳಿಸಿದ ದಾಖಲೆಯನ್ನು ಹಂಚಿಕೊಂಡರು. ನಮೀಬಿಯಾದ ನಿಕೋಲ್ ಲೋಫ್ಟಿ ಈಟನ್ ಇಷ್ಟೇ ಎಸೆತಗಳಲ್ಲಿ ಶತಕ ದಾಖಲಿಸಿದ್ದರು. ಎಸ್ಟೋನಿಯಾದ ಜಾನ್ ನಿಕೋಲ್ (27ಎಸೆತ) ಅತಿವೇಗದ ಶತಕದ ದಾಖಲೆ ಹೊಂದಿದ್ದಾರೆ.

ಗುರಿಯನ್ನು ಬೆನ್ನತ್ತಿದ ಗ್ಯಾಂಬಿಯಾ 14.4 ಓವರ್‌ಗಳಲ್ಲಿ 54 ರನ್‌ಗೆ ಕುಸಿಯಿತು. ಈ ಮೂಲಕ ಜಿಂಬಾಬ್ವೆ ತಂಡವು ದಾಖಲೆಯ 290 ರನ್‌ಗಳಿಂದ ಗೆದ್ದಿತು. ಇದು ಕೂಡ ರನ್ ಆಧಾರದಲ್ಲಿ ಅತಿ ದೊಡ್ಡ ಅಂತರದ ಜಯವಾಗಿದೆ.

ನಾಳಿನ ಐಒಎ ವಿಶೇಷ ಮಹಾಸಭೆ ಮುಂದೂಡಿಕೆ

ನವದೆಹಲಿ (ಪಿಟಿಐ): ಒಲಿಂಪಿಕ್ ಭವನದಲ್ಲಿ ಇದೇ 25ರಂದು ನಿಗದಿಯಾಗಿದ್ದ ಭಾರತ ಒಲಿಂಪಿಕ್ ಸಂಸ್ಥೆಯ ವಿಶೇಷ ಮಹಾಸಭೆಯನ್ನು ಬುಧವಾರ ಅನಿರ್ದಿಷ್ಟಾವಧಿಗೆ ಮುಂದೂಡಲಾಗಿದೆ.

ಸಂಸ್ಥೆಯ ಅಧ್ಯಕ್ಷೆ ಪಿ.ಟಿ.ಉಷಾ ಅವರ ನಿರ್ದೇಶನದ ಮೇರೆಗೆ ಮುಂದೂಡಲಾಗಿದೆ ಎಂದು ಸಂಸ್ಥೆಯ ಕಾರ್ಯಕಾರಿ ಮಂಡಳಿ ಮತ್ತು ಇತರ ಭಾಗಿದಾರರಿಗೆ ಐಒಎ ನಿರ್ದೇಶಕ ಜಾರ್ಜ್ ಮ್ಯಾಥ್ಯೂ ಅವರು ಇ–ಮೇಲ್ ಮೂಲಕ ತಿಳಿಸಿದ್ದಾರೆ.

ಸಭೆಯ ಹೊಸ ದಿನಾಂಕವನ್ನು ಶೀಘ್ರದಲ್ಲೇ ತಿಳಿಸಲಾಗುವುದು. ಅನಾನುಕೂಲಕ್ಕೆ ಕ್ಷಮೆ ಯಾಚಿಸುತ್ತೇವೆ ಎಂದು ಮೇಲ್‌ನಲ್ಲಿ ತಿಳಿಸಲಾಗಿದೆ. ಉಷಾ ಮತ್ತು ಕಾರ್ಯಕಾರಿ ಸಮಿತಿ ಸದಸ್ಯರ ನಡುವೆ ಅಂತಃಕಲಹ ನಡೆಯುತ್ತಿದ್ದು, ಇದು ತೀವ್ರಗೊಳ್ಳುತ್ತ ಸಾಗಿದೆ.

ಗೋಲು ಗಳಿಸಿದ ಸಂಭ್ರಮದಲ್ಲಿ ಜರ್ಮನಿ ತಂಡದ ಆಟಗಾರರು —ಪಿಟಿಐ ಚಿತ್ರ

ಹಾಕಿ: ಜರ್ಮನಿಗೆ ಮಣಿದ ಭಾರತ

ನವದೆಹಲಿ (ಪಿಟಿಐ): ಕೆಲವು ಉತ್ತಮ ಗೋಲು ಅವಕಾಶಗಳನ್ನು ವ್ಯರ್ಥಪಡಿಸಿಕೊಂಡ ಭಾರತ ತಂಡ, ಎರಡು ಟೆಸ್ಟ್‌ಗಳ ಹಾಕಿ ಸರಣಿಯ ಮೊದಲ ಪಂದ್ಯದಲ್ಲಿ ಜರ್ಮನಿ ಎದುರು 0–2 ಗೋಲುಗಳಿಂದ ಬುಧವಾರ ಪರಾಜಯ ಅನುಭವಿಸಿತು.

ಪ್ಯಾರಿಸ್ ಒಲಿಂಪಿಕ್ಸ್ ಬೆಳ್ಳಿ ವಿಜೇತ ಜರ್ಮನಿ, ಈ ಸರಣಿಗೆ ಯುವ ತಂಡವನ್ನು ಕಣಕ್ಕಿಳಿಸಿತ್ತು. ಅವರು ಮೊದಲ ಪಂದ್ಯದಲ್ಲೇ ನಿರೀಕ್ಷೆಗೆ ತಕ್ಕಂತೆ ಆಡಿದರು. ಹೆನ್ರಿಕ್ ಮೆರ್ಟ್‌ಜೆನ್ಸ್ (4ನೇ ನಿಮಿಷ) ಮತ್ತು ನಾಯಕ ಲ್ಯುಕಾಸ್ ಮಿಡ್‌ಫೆಡರ್ (30ನೇ ನಿ) ಗೋಲುಗಳನ್ನು ಗಳಿಸಿದರು.

ರಾಷ್ಟ್ರ ರಾಜಧಾನಿಯಲ್ಲಿ ಹತ್ತು ವರ್ಷಗಳ ನಂತರ ಅಂತರರಾಷ್ಟ್ರೀಯ ಪಂದ್ಯ ನಡೆಯುತ್ತಿರುವ ಕಾರಣ ಕುತೂಹಲ ಮೂಡಿತ್ತು. ಮೇಜರ್ ಧ್ಯಾನ್‌ಚಂದ್ ಕ್ರೀಡಾಂಗಣದಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಪ್ರೇಕ್ಷಕರೂ ಸೇರಿದ್ದರು. ಆದರೆ ಕೊನೆಯಲ್ಲಿ ನಿರಾಶೆ ಅನುಭವಿಸಬೇಕಾಯಿತು. ಕಳೆದ ಒಂದು ವರ್ಷದಿಂದ ಉತ್ತಮ ಲಯದಲ್ಲಿದ್ದ ನಾಯಕ ಹರ್ಮನ್‌ಪ್ರೀತ್ ಸಿಂಗ್ ಕೂಡ ಸ್ವಲ್ಪ ಮಸುಕಾದಂತೆ ಕಂಡರು.

ಸರಣಿಯ ಎರಡನೇ ಪಂದ್ಯ ಗುರುವಾರ ನಡೆಯಲಿದೆ.

ಹರ್ಮನ್ ಬಳಗಕ್ಕೆ ಜಯದ ತವಕ

ಅಹಮದಾಬಾದ್: ಮುಂದಿನ ವರ್ಷ ನಡೆಯಲಿರುವ ಮಹಿಳೆಯರ ಏಕದಿನ ಕ್ರಿಕೆಟ್ ವಿಶ್ವಕಪ್ ಟೂರ್ನಿಯಲ್ಲಿ ಆಡಲು ಭಾರತದ ವನಿತೆಯರ ತಂಡವು ಸಿದ್ಧತೆ ಆರಂಭಿಸಲಿದೆ. ನ್ಯೂಜಿಲೆಂಡ್ ವಿರುದ್ಧ ಆಯೋಜನೆಗೊಂಡಿರುವ ಮೂರು ಪಂದ್ಯಗಳ ಏಕದಿನ ಸರಣಿಯ ಮೊದಲ ಹಣಾಹಣಿಯು ಗುರುವಾರ ನಡೆಯಲಿದೆ.

ಹರ್ಮನ್‌ಪ್ರೀತ್ ಕೌರ್ ಅವರ ನೇತೃತ್ವದ ತಂಡವು ಈಚೆಗೆ ಟಿ20 ವಿಶ್ವಕಪ್ ಟೂರ್ನಿಯ ಲೀಗ್ ಹಂತದಲ್ಲಿಯೇ ನಿರ್ಗಮಿಸಿತ್ತು. ಸೋಫಿ ಡಿವೈನ್ ನಾಯಕತ್ವದ ನ್ಯೂಜಿಲೆಂಡ್ ತಂಡವು ಚಾಂಪಿಯನ್ ಆಗಿತ್ತು. ಆ ಟೂರ್ನಿಯ ಮೊದಲ ಲೀಗ್ ಪಂದ್ಯದಲ್ಲಿ ಇದೇ ನ್ಯೂಜಿಲೆಂಡ್ ತಂಡವು ಹರ್ಮನ್ ಬಳಗಕ್ಕೆ ಸೋಲುಣಿಸಿತ್ತು.

ಇದೀಗ ಹರ್ಮನ್ ಅವರಿಗೆ ತಮ್ಮ ನಾಯಕತ್ವ ಉಳಿಸಿಕೊಳ್ಳಲು ಕೂಡ ಈ ಟೂರ್ನಿಯು ಮಹತ್ವದ್ದಾಗಲಿದೆ. ಅಲ್ಲದೇ ತಂಡದ ಕೆಲವು ಆಟಗಾರ್ತಿಯರಿಗೆ ತಮ್ಮ ಲಯ ಕಂಡುಕೊಳ್ಳಲು ಕೂಡ ಇಲ್ಲಿ ಉತ್ತಮವಾಗಿ ಆಡಬೇಕಾದ ಅವಶ್ಯಕತೆ ಇದೆ.

ಅದರಲ್ಲೂ ಆರಂಭಿಕ ಜೋಡಿ ಸ್ಮೃತಿ ಮಂದಾನ, ಶಫಾಲಿ ವರ್ಮಾ ಅವರ ಮೇಲೆ ಎಲ್ಲರ ಕಣ್ಣಿದೆ. ಹೇಮಲತಾ ದಯಾಳನ್, ಯಷ್ಟಿಕಾ ಭಾಟಿಯಾ, ಜೆಮಿಮಾ ರಾಡ್ರಿಗಸ್ ಅವರೂ ಲಯಕ್ಕೆ ಮರಳಬೇಕಿದೆ. ಮಧ್ಯಮವೇಗಿ ರೇಣುಕಾ ಸಿಂಗ್ ಠಾಕೂರ್, ದೀಪ್ತಿ ಶರ್ಮಾ, ಕನ್ನಡತಿ ಶ್ರೇಯಾಂಕಾ ಪಾಟೀಲ ಅವರು ಬೌಲಿಂಗ್ ವಿಭಾಗದ ಪ್ರಮುಖರಾಗಿದ್ದಾರೆ. ನ್ಯೂಜಿಲೆಂಡ್ ಬ್ಯಾಟರ್‌ಗಳನ್ನು ಕಟ್ಟಿಹಾಕುವ ಸವಾಲು ಇವರ ಮುಂದಿದೆ.

ಪಂದ್ಯ ಆರಂಭ: ಮಧ್ಯಾಹ್ನ 1.30, **ನೇರಪ್ರಸಾರ:** ಸ್ಪೋರ್ಟ್ಸ್ 18, ಜಿಯೊ ಸಿನಿಮಾ

ಸಂಕ್ಷಿಪ್ತ ಸುದ್ದಿ

ಪಂತ್‌ಗೆ ಬಡ್ತಿ: 8ನೇ ಸ್ಥಾನಕ್ಕೆ ಕೊಹ್ಲಿ

ದುಬೈ (ಪಿಟಿಐ): ಭಾರತದ ವಿಕೆಟ್ ಕೀಪರ್– ಬ್ಯಾಟರ್ ರಿಷಭ್ ಪಂತ್ ಅವರು, ಐಸಿಸಿ ಟೆಸ್ಟ್ ರ‍್ಯಾಂಕಿಂಗ್‌ನ ಬ್ಯಾಟರ್‌ಗಳ ಪಟ್ಟಿಯಲ್ಲಿ ಸ್ಟಾರ್ ಆಟಗಾರ ವಿರಾಟ್ ಕೊಹ್ಲಿ ಅವರನ್ನು ಹಿಂದೆ ಹಾಕಿ ಆರನೇ ಸ್ಥಾನಕ್ಕೆ ಏರಿದ್ದಾರೆ.

ಬೆಂಗಳೂರಿನಲ್ಲಿ ನಡೆದ ಮೊದಲ ಕ್ರಿಕೆಟ್ ಟೆಸ್ಟ್‌ನಲ್ಲಿ ಪಂತ್, ಎರಡನೇ ಇನಿಂಗ್ಸ್‌ನಲ್ಲಿ ಆಕ್ರಮಣಕಾರಿ ಆಟವಾಡಿ 99 ರನ್ ಹೊಡೆದಿದ್ದರು. ಅವರು ಬುಧವಾರ ಪ್ರಕಟವಾದ ಪಟ್ಟಿಯಲ್ಲಿ ಮೂರು ಸ್ಥಾನ ಬಡ್ತಿ ಪಡೆದಿದ್ದಾರೆ. ಆ ಪಂದ್ಯದಲ್ಲಿ 70 ರನ್ ಗಳಿಸಿದ್ದ ವಿರಾಟ್ ಕೊಹ್ಲಿ ಒಂದು ಸ್ಥಾನ ಹಿಂಬಡ್ತಿ ಪಡೆದು ಎಂಟನೇ ಸ್ಥಾನದಲ್ಲಿದ್ದಾರೆ. ನಾಲ್ಕನೇ ಸ್ಥಾನ ಕಾಯ್ದುಕೊಂಡಿರುವ ಯಶಸ್ವಿ ಜೈಸ್ವಾಲ್ ಭಾರತದ ಆಟಗಾರರಲ್ಲಿ ಮುಂಚೂಣಿಯಲ್ಲಿದ್ದಾರೆ. ಇಂಗ್ಲೆಂಡ್‌ನ ಪ್ರಮುಖ ಬ್ಯಾಟರ್ ಜೊ ರೂಟ್ ಅವರು ಅಗ್ರಸ್ಥಾನದಲ್ಲಿದ್ದಾರೆ.

ಚಾಡ್ ಬೌವ್ಸ್ ಶರವೇಗದ ದ್ವಿಶತಕ

ವೆಲಿಂಗ್ಟನ್ (ಪಿಟಿಐ): ನ್ಯೂಜಿಲೆಂಡ್ ಆಟಗಾರ ಚಾಡ್ ಬೌವ್ಸ್ ಲಿಸ್ಟ್ ಎ ಕ್ರಿಕೆಟ್‌ನಲ್ಲಿ ಶರವೇಗದ ದ್ವಿಶತಕ ಗಳಿಸಿದರು.

ಬುಧವಾರ ಇಲ್ಲಿ ನಡೆದ ಫೋರ್ಡ್ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಕ್ಯಾಂಟರ್‌ಬರಿ ತಂಡವನ್ನು ಪ್ರತಿನಿಧಿಸಿದ ಚಾಡ್ ಅವರು ಒಟಾಗೊ ವಿರುದ್ಧ ನಡೆದ ಪಂದ್ಯದಲ್ಲಿ 103 ಎಸೆತಗಳಲ್ಲಿ ದ್ವಿಶತಕ ಗಳಿಸಿದರು. ಇದರೊಂದಿಗೆ ಭಾರತದ ಎನ್. ಜಗದೀಶನ್ ಮತ್ತು ಆಸ್ಟ್ರೇಲಿಯಾದ ಟ್ರಾವಿಸ್ ಹೆಡ್ ಅವರ ದಾಖಲೆಗಳನ್ನು ಮೀರಿ ನಿಂತರು. ಜಗದೀಶನ್ ಮತ್ತು ಟ್ರಾವಿಸ್ ಅವರು 114 ಎಸೆತಗಳಲ್ಲಿ ದ್ವಿಶತಕ ಗಳಿಸಿದ್ದರು.

ದಕ್ಷಿಣ ಆಫ್ರಿಕಾದಲ್ಲಿ ಜನಿಸಿ ನ್ಯೂಜಿಲೆಂಡ್ ತಂಡವನ್ನು ಪ್ರತಿನಿಧಿಸುವ ಚಾಡ್ ಈ ಏಕದಿನ ಪಂದ್ಯದಲ್ಲಿ ಒಟ್ಟು 110 ಎಸೆತಗಳಲ್ಲಿ 205 ರನ್ ಗಳಿಸಿ ಔಟಾದರು. 53 ಎಸೆತಗಳಲ್ಲಿ ಶತಕದ ಗಡಿ ದಾಟಿದರು. ಇದು ಅವರ 100ನೇ ಲಿಸ್ಟ್ ಎ ಪಂದ್ಯ. 27 ಬೌಂಡರಿ ಮತ್ತು ಏಳು ಸಿಕ್ಸರ್ ಗಳಿಸಿದರು.

ಅಪ್ಪ–ಮಗನ ಆಟ: ಇತಿಹಾಸ ಬರೆದ ಲೆಬ್ರಾನ್, ಬ್ರೋನಿ

ಲಾಸ್ ಏಂಜಲೀಸ್, ಅಮೆರಿಕ (ಎಎಫ್‌ಪಿ): ಬ್ಯಾಸ್ಕೆಟ್‌ಬಾಲ್ ದಂತಕತೆ ಲೆಬ್ರಾನ್ ಜೇಮ್ಸ್ ಮತ್ತು ಅವರ ಮಗ ಬ್ರೋನಿ ಜೇಮ್ಸ್ ಅವರು ಮಂಗಳವಾರ ಕಣಕ್ಕಿಳಿಯುವ ಮೂಲಕ ಚಾರಿತ್ರಿಕ ಸಾಧನೆ ಮಾಡಿದರು. ಎನ್‌ಬಿಎ ಇತಿಹಾಸದಲ್ಲಿ ಆಡಿದ ಮೊದಲ ಅಪ್ಪ, ಮಗನ ಜೋಡಿ ಇದಾಯಿತು. ಅಪ್ಪ, ಮಗ ಇಬ್ಬರೂ ಲಾಸ್ ಏಂಜಲೀಸ್ ಲೇಕರ್ಸ್ ತಂಡದಲ್ಲಿ ಸ್ಥಾನ ಪಡೆದಿದ್ದಾರೆ. ಎನ್‌ಬಿಎ ಪಂದ್ಯದಲ್ಲಿ ಲೇಕರ್ಸ್ ತಂಡವು 110–103 ರಿಂದ ಮಿನೆಸೊಟಾ ಟಿಂಬರ್‌ವೋಲ್ವ್ಸ್ ವಿರುದ್ಧ ಜಯ ಗಳಿಸಿತು.

ಲೆಬ್ರಾನ್ ಜೇಮ್ಸ್ ಮತ್ತು ಅವರ ಮಗ ಬ್ರೋನಿ ಜೇಮ್ಸ್

ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ ತಂಡದ ಅಂಕಿತ್ ಸಿಂಗ್ (ಎಡ), ಖರಿಬಂ ಆಕಾಶ್ (ಬಲ) ಮತ್ತು ರೆಬೆಲ್ಸ್ ಎಫ್‌ಸಿ ತಂಡದ ಸಪಂ ಕೆನೆಡಿ ಸಿಂಗ್ (ಮಧ್ಯ) ಚೆಂಡಿಗಾಗಿ ಸೆಣಸಾಟ ನಡೆಸಿದರು —ಪ್ರಜಾವಾಣಿ ಚಿತ್ರ: ಎಸ್‌.ಕೆ. ದಿನೇಶ್

ಸ್ಟೂಡೆಂಟ್ಸ್ ಯೂನಿಯನ್‌ಗೆ ಜಯ

ಬೆಂಗಳೂರು: ಕೊನೆಯ ಕ್ಷಣದಲ್ಲಿ ಅಂಕಿತ್ ಸಿಂಗ್ (90 + 3ನೇ ನಿಮಿಷ) ಗಳಿಸಿದ ಗೋಲಿನ ನೆರವಿನಿಂದ ಬಿಡಿಎಫ್‌ಎ ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಎಂಎಫ್‌ಎಆರ್ ಸ್ಟೂಡೆಂಟ್ಸ್ ಯೂನಿಯನ್ ಎಫ್‌ಸಿ ತಂಡವು 1–0ಯಿಂದ ರೆಬೆಲ್ಸ್ ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ದಿನದ ಇತರ ಪಂದ್ಯದಲ್ಲಿ ಎಫ್‌ಸಿ ಅಗ್ನಿಪುತ್ರ 2–1 ಗೋಲುಗಳಿಂದ ಪರಿಕ್ರಮ ಎಫ್‌ಸಿ ತಂಡವನ್ನು ಸೋಲಿಸಿತು. ಅಗ್ನಿಪುತ್ರ ಪರ ಧನುಷ್ ಆರ್ (44ನೇ ನಿ) ಮತ್ತು ಅಜ್ಫರ್ ನೂರಾನಿ (68ನೇ) ಗೋಲು ಗಳಿಸಿದರು. ಪರಿಕ್ರಮ ಪರ ತೊಬೊಮ್ ಲಂಕಾಮ್ (39ನೇ) ಚೆಂಡನ್ನು ಗುರಿ ಸೇರಿಸಿದರು.

ಭಾರತ ಓಟಕ್ಕೆ ಆಸ್ಟ್ರೇಲಿಯಾ ತಡೆ

ಜೋಹೊರ್ ಬಾರು, ಮಲೇಷ್ಯಾ (ಪಿಟಿಐ): ಆಸ್ಟ್ರೇಲಿಯಾ ತಂಡವು ಸುಲ್ತಾನ್ ಆಫ್ ಜೊಹೊರ್ ಕಪ್ ಜೂನಿಯರ್ ಹಾಕಿ ಟೂರ್ನಿಯಲ್ಲಿ ಭಾರತದ ಗೆಲುವಿನ ಓಟಕ್ಕೆ ತಡೆಯೊಡ್ಡಿತು.

ಬುಧವಾರ ನಡೆದ ಪಂದ್ಯದಲ್ಲಿ ಆಸ್ಟ್ರೇಲಿಯಾ ತಂಡವು 4–0ಯಿಂದ ಭಾರತ ತಂಡವನ್ನು ಮಣಿಸಿತು.

ಭಾರತ ತಂಡದ ಫಾರ್ವರ್ಡ್ ಆಟಗಾರರು ಆಸ್ಟ್ರೇಲಿಯಾದ ರಕ್ಷಣಾ ಕೋಟೆಯನ್ನು ದಾಟಲು ವಿಫಲರಾದರು. ಡೇಕಿನ್ ಸ್ಟೇಂಜರ್ (33ನಿ, 39ನಿ ಮತ್ತು 53ನಿ) ಗೋಲುಗಳ ಹ್ಯಾಟ್ರಿಕ್ ಸಾಧನೆ ಮಾಡಿದರು. ಪ್ಯಾಟ್ರಿಕ್ ಆ್ಯಂಡ್ರ್ಯೂ (29ನೇ ನಿ) ಒಂದು ಗೋಲು ಗಳಿಸಿದರು.

ಈ ಸೋಲಿನ ನಂತರವೂ ಭಾರತ ತಂಡವು (9 ಅಂಕ) ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿ ಮುಂದುವರಿಯಿತು. ಆಸ್ಟ್ರೇಲಿಯಾ (7 ಅಂಕ) ತಂಡವು 3ನೇ ಸ್ಥಾನದಲ್ಲಿದೆ. ನ್ಯೂಜಿಲೆಂಡ್ (8) ಎರಡನೇ ಸ್ಥಾನದಲ್ಲಿದೆ.

@SudhaWeekly

ಸುಧಾ

ದೀಪಾವಳಿಯೊಂದಿಗೆ ತಳುಕು ಹಾಕಿಕೊಂಡಿರುವ ಬೆಳಕು ಹಾಗೂ ಶಬ್ದಗಳ ಪ್ರಮೇಯವನ್ನು ಬಿಡಿಸುತ್ತಾ ಹೋದರೆ, ಇಡೀ ಪ್ರಕೃತಿಯೇ ಹಬ್ಬ ಆಚರಿಸುತ್ತಿರುವಂತೆ ಕಾಣಿಸುತ್ತದೆ. ಬೆಳಕು ಹಾಗೂ ಶಬ್ದಗಳ ಜಾಡಿನಲ್ಲಿ ಶತಮಾನಗಳಿಂದ ಸಾಗುತ್ತಿರುವ ವಿಜ್ಞಾನ, ಹೊಸ ಕಾಣ್ಕೆಗಳನ್ನು ಕಂಡುಕೊಳ್ಳುತ್ತಲೇ ಇದೆ. ವಿಜ್ಞಾನಿಯೊಬ್ಬರ ಕಣ್ಣೋಟದ ಈ ಸಂಚಿಕೆಯ 'ಸುಧಾ ವಿಶೇಷ' ಬರಹ, ದೀಪಗಳ ಹಬ್ಬದ ಸಂಭ್ರಮವನ್ನು ಕಟ್ಟಿಕೊಡುವುದರ ಜೊತೆಗೆ, ಬುವಿ-ನಭಗಳ ಕುತೂಹಲಕಾರಿ ಸಂಗತಿಗಳನ್ನು ಸಹೃದಯರ ಮುಂದಿಡುತ್ತಿದೆ; ಪರಿಸರ ಕಾಳಜಿಯ ಹೊಣೆಗಾರಿಕೆಯನ್ನು ನೆನಪಿಸುತ್ತಿದೆ.
ಡಾ. ಬಿ.ಆರ್. ಗುರುಪ್ರಸಾದ್ ಅವರ ವಿಶೇಷ ಬರಹ

ನಿಮ್ಮ ಸಮೀಪದ ಅಂಗಡಿಗಳಲ್ಲಿ ಲಭ್ಯ



ಮೋಡಗಳನ್ನು ಚುಂಬಿಸುವ ನಗರ



ಗಾಳಿಬೇರುಗಳ ಕಾಂಡ್ಲಾ ಕಾಡು

ಹಿತಮಿತವಿರಲಿ ಸಕ್ಕರೆ, ಬೆಲ್ಲ



ಪರಿಸರಸ್ನೇಹಿ ಬೀಜಾಭರಣ

ದೈವತ್ವಕ್ಕೆ ತೇರ್ಗಡೆಯಾದ ಮಾನವ

ಹಾಂವು ಬಂತಲೇ ಹಾಂವು

ದೀಪಾವಳಿಗೆ ಬಗೆಬಗೆ ಹೋಳಿಗೆ

ಕಿರುತೆರೆ ನಟ ನಿರಂಜನ್ ಬಿ.ಎಸ್. ಸಂದರ್ಶನ

ಟಿ.ಎಸ್. ಶ್ರವಣ ಕುಮಾರಿ ಕಥೆ

support@deccanherald.co.in
ಯೋಗಾಯೋಗ

ಡಬ್ಲ್ಯುಟಿಟಿ: ಮಣಿಕಾ ಪ್ರಿಕ್ವಾರ್ಟರ್‌ಗೆ

ಮಾಂಟ್‌ಪೆಲೀರ್, ಫ್ರಾನ್ಸ್ (ಪಿಟಿಐ): ಭಾರತದ ಮಣಿಕಾ ಬಾತ್ರಾ ಅವರು ಡಬ್ಲ್ಯುಟಿಟಿ ಚಾಂಪಿಯನ್ಸ್ ಮಹಿಳೆಯರ ಸಿಂಗಲ್ಸ್‌ನಲ್ಲಿ ಪ್ರಿ ಕ್ವಾರ್ಟರ್‌ಫೈನಲ್ ಪ್ರವೇಶಿಸಿದರು.

ಬುಧವಾರ ನಡೆದ ಪಂದ್ಯದಲ್ಲಿ ಮಣಿಕಾ 3-0ಯಿಂದ ಅಮೆರಿಕದ ಲಿಲಿ ಝಾಂಗ್ ವಿರುದ್ಧ ಗೆದ್ದರು. ಮಣಿಕಾ ಅವರು ಈಚೆಗೆ ಪ್ಯಾರಿಸ್ ಒಲಿಂಪಿಕ್ಸ್‌ನಲ್ಲಿ ಮಹಿಳೆಯರ ಸಿಂಗಲ್ಸ್‌ನಲ್ಲಿ ಪ್ರಿಕ್ವಾರ್ಟರ್ ಫೈನಲ್ ಪ್ರವೇಶಿಸಿದ್ದರು. ಆ ಸಾಧನೆ ಮಾಡಿದ ಭಾರತದ ಮೊದಲ ಆಟಗಾರ್ತಿ ಎನಿಸಿಕೊಂಡಿದ್ದರು.

ಮಣಿಕಾ ಬಾತ್ರಾ

ಇಲ್ಲಿ ನಡೆದ ಅರ್ಹತಾ ಸುತ್ತಿನ ಪಂದ್ಯದಲ್ಲಿ ಮಣಿಕಾ ಅವರು 22 ನಿಮಿಷಗಳಲ್ಲಿ ಗೆದ್ದರು. ಅವರು 11-4, 11-8, 12-10ರಿಂದ ಅಮೆರಿಕದ ಆಟಗಾರ್ತಿಯನ್ನು ಸೋಲಿಸಿದರು. ನಾಲ್ಕು ಒಲಿಂಪಿಕ್ ಕೂಟಗಳಲ್ಲಿ ಆಡಿರುವ ಅನುಭವಿ ಝಾಂಗ್ ಅವರು ಕೂಡ ಪ್ಯಾರಿಸ್ ಕೂಟದಲ್ಲಿ ಪ್ರಿಕ್ವಾರ್ಟರ್ ತಲುಪಿದ್ದರು.

ಸ್ಯಾಫ್: ಬಾಂಗ್ಲಾಕ್ಕೆ ಮಣಿದ ಭಾರತ

ಕಠ್ಮಂಡು (ಪಿಟಿಐ): ಮಿಡ್‌ಫೀಲ್ಡ್‌ನಲ್ಲಿ ಪ್ರಾಬಲ್ಯ ಮೆರೆದ ಬಾಂಗ್ಲಾದೇಶ ತಂಡ ಸ್ಯಾಫ್ ಮಹಿಳಾ ಫುಟ್‌ಬಾಲ್ ಚಾಂಪಿಯನ್ ಷಿಪ್‌ನ 'ಎ' ಗುಂಪಿನ ಕೊನೆಯ ಪಂದ್ಯದಲ್ಲಿ ಬುಧವಾರ ಭಾರತ ತಂಡವನ್ನು 3-1 ಗೋಲುಗಳಿಂದ ಸೋಲಿಸಿತು.

ಭಾರತ ಈ ಪಂದ್ಯದಲ್ಲಿ ಕೆಲವು ಅವಕಾಶಗಳನ್ನೂ ವ್ಯರ್ಥಪಡಿಸಿಕೊಂಡಿತು. ಈ ಮೊದಲೇ ಮೂರು ಪಾಯಿಂಟ್ಸ್ ಕಲೆಹಾಕಿ ಸೆಮಿಫೈನಲ್ ಅವಕಾಶ ಖಚಿತಪಡಿಸಿಕೊಂಡಿದ್ದ ಭಾರತ ವನಿತೆಯರು ಗುಂಪಿನಲ್ಲಿ ಎರಡನೇ ಸ್ಥಾನ ಪಡೆದರು. ಬಾಂಗ್ಲಾದೇಶ (4 ಪಾಯಿಂಟ್ಸ್) ಅಗ್ರಸ್ಥಾನ ಪಡೆಯಿತು.

ಅಫೀದಾ ಖಾಂಡಕರ್ (18ನೇ ನಿಮಿಷ) ಮತ್ತು ತೊಹುರಾ ಖಾತುನ್ (29 ಮತ್ತು 42ನೇ ನಿಮಿಷ) ಬಾಂಗ್ಲಾ ಪರ ಗೋಲು ಗಳಿಸಿದರು. ಭಾರತ ತಂಡದ ಪರ ನಾಯಕಿ ಬಾಲಾ ದೇವಿ 44ನೇ ನಿಮಿಷ ಹೆಡರ್ ಮೂಲಕ ಗೋಲು ಗಳಿಸಿ ಸೋಲಿನ ಅಂತರ ಕಡಿಮೆ ಮಾಡಿದರು. 27ನೇ ನಿಮಿಷ ಅಂಜು ತಮಾಂಗ್ ಗಾಯಗೊಂಡು ನಿರ್ಗಮಿಸಿದ್ದು, ಭಾರತದ ದಾಳಿಯ ಬಲ ಕಡಿಮೆ ಮಾಡಿತು.

ಸಂಕ್ಷಿಪ್ತ ಸುದ್ದಿ

ಭಾರತಕ್ಕೆ ಬ್ರೂನಿ ವಿರುದ್ಧ ಗೆಲುವು

ಚೊನ್ಬುರಿ (ಥಾಯ್ಲೆಂಡ್), (ಪಿಟಿಐ): ಭಾರತ ತಂಡ, 17 ವರ್ಷದೊಳಗಿನವರ ಏಷ್ಯನ್ ಕಪ್ ಕ್ವಾಲಿಫೈಯರ್ಸ್ ಫುಟ್‌ಬಾಲ್ ಟೂರ್ನಿಯ 'ಡಿ' ಗುಂಪಿನ ಪಂದ್ಯದಲ್ಲಿ ಬ್ರೂನಿ ತಂಡವನ್ನು ಬುಧವಾರ 13-0 ಗೋಲುಗಳಿಂದ ಸದೆಬಡಿಯಿತು. ಭಾರತ ತಂಡ ತನ್ನ ಮುಂದಿನ ಪಂದ್ಯವನ್ನು ತುರ್ಕಮೆನಿಸ್ತಾನ ವಿರುದ್ಧ ಶುಕ್ರವಾರ ಆಡಲಿದೆ. ಭಾನುವಾರ ಥಾಯ್ಲೆಂಡ್ ತಂಡವನ್ನು ಎದುರಿಸಲಿದೆ.

ಪಶ್ಚಿಮ ಬಂಗಾಳಕ್ಕೆ ಮಣಿದ ಕರ್ನಾಟಕ

ಬೆಂಗಳೂರು: ಕರ್ನಾಟಕ ತಂಡವು ಪಶ್ಚಿಮ ಬಂಗಾಳದ ನಾಡಿಯಾದಲ್ಲಿ ನಡೆಯುತ್ತಿರುವ 29ನೇ ಮಹಿಳೆಯರ ರಾಷ್ಟ್ರೀಯ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ 0-3 ಗೋಲುಗಳಿಂದ ಆತಿಥೇಯ ಪಶ್ಚಿಮ ಬಂಗಾಳಕ್ಕೆ ಮಣಿಯಿತು.

ನೆಟ್‌ಬಾಲ್: ಶ್ರೀಲಂಕಾಕ್ಕೆ ಜಯ

ಬೆಂಗಳೂರು: ಶ್ರೀಲಂಕಾ ತಂಡವು ಇಲ್ಲಿನ ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಏಷ್ಯನ್ ಮಹಿಳಾ ನೆಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಬುಧವಾರ 72-40ರಿಂದ ಮಲೇಷ್ಯಾ ತಂಡವನ್ನು ಮಣಿಸಿತು.

ಇತರ ಫಲಿತಾಂಶ: ಬ್ರೂನಿ 88-28ರಿಂದ ಬಹರೇನ್ ತಂಡವನ್ನು; ಮಾಲ್ಡೀವ್ಸ್ 64-24ರಿಂದ ಜಪಾನ್ ತಂಡವನ್ನು; ಥಾಯ್ಲೆಂಡ್ 70-24ರಿಂದ ಚೀನಾ ತೈಪೆ ತಂಡವನ್ನು; ಫಿಲಿಪೀನ್ಸ್ 83-10ರಿಂದ ಸೌದಿ ಅರೇಬಿಯಾ ತಂಡವನ್ನು ಮತ್ತು ಸಿಂಗಪುರ 67-42ರಿಂದ ಹಾಂಗ್‌ಕಾಂಗ್ ತಂಡವನ್ನು ಸೋಲಿಸಿತು.